UNIVERSITY OF MYSORE

ವಚನ ಚಿಂತನ ಮಾಲೆ

ಉರಿಲಿಂಗಪೆದ್ದಿ



ಡಾ. ಆರ್. ಲಕ್ಷ್ಮೀನಾರಾಯಣ

ವಚನ ಚಿಂತನ ಮಾಲೆ

ಪ್ರಧಾನ ಸಂಪಾದಕ: ಪ್ರೊ. ಬರಗೂರು ರಾಮಚಂದ್ರಪ್ಪ

ಉರಿಲಿಂಗಪೆದ್ದಿ

ಡಾ. ಆರ್. ಲಕ್ಷ್ಮೀನಾರಾಯಣ

ಶ್ರೀ ಬಸವ ಅಧ್ಯಯನ ಪೀಠ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮೈಸೂರು ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ, ಮೈಸೂರು - ೫೭೦ ೦೦೬

URILINGAPEDDI: A book written by Dr. R. Lakshminarayana and Published by Sri Basava Adhyayana Peeta, Kuvempu Institute of Kannada Studies, Mysore University, Manasa Gangotri, Mysore - 570 006

Pages : 160

First Edition : 2015

Price : Rs. 80

ಪ್ರಥಮ ಮುದ್ರಣ : 2015

ಪುಟಗಳು : 160

ಬೆಲೆ : ರೂ. 80

ಮುಖಪುಟ : ಅಪಾರ

ಅಕ್ಷರಜೋಡಣೆ: ಶ್ರೀಧರ್ ಆರ್. ಎಸ್.

ಪ್ರಕಾಶಕರು :
ಶ್ರೀ ಬಸವ ಅಧ್ಯಯನ ಪೀಠ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮೈಸೂರು ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ
ಮೈಸೂರು – ೫೭೦ ೦೦೬

ಅಧಿಕೃತ ಮಾರಾಟಗಾರರು
ನಿರ್ದೇಶಕರು
ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು – ೫೭೦ ೦೦೬
ದೂರವಾಣಿ: 0821–2419387

ಸ್ವಾನ್ ಪ್ರಿಂಟರ್ಸ್
svanprint@gmail.com
☎ 080-26742233

ವಚನ ಚಿಂತನ ಮಾಲೆ
ಸಂಪಾದಕ ಸಮಿತಿ

ವಚನ ಚಿಂತನ ಮಾಲೆಯ ಪುಸ್ತಕಗಳು

೧.	ಬಸವಣ್ಣ	– ಪ್ರೊ. ಮಲೆಯೂರು ಗುರುಸ್ವಾಮಿ
೨.	ಅಲ್ಲಮಪ್ರಭು	– ಡಾ. ರಂಗಾರೆಡ್ಡಿ ಕೋಡಿರಾಂಪುರ
೩.	ಅಕ್ಕಮ್ಮ	– ಡಾ. ಎಚ್. ಎಲ್. ಪುಷ್ಪ
೪.	ಅಕ್ಕಮಹಾದೇವಿ	– ಡಾ. ವತ್ಸಲಾ ಮೋಹನ್
೫.	ಹಡಪದ ಲಿಂಗಮ್ಮ	– ಡಾ. ಲೋಲಾಕ್ಷಿ ಎನ್.ಕೆ.
೬.	ನೀಲಾಂಬಿಕೆ	– ಬಿ. ಸಿ. ಶೈಲಾ ನಾಗರಾಜ್
೭.	ಘಟ್ಟಿವಾಳಯ್ಯ	– ಡಾ. ಜಿ. ಪ್ರಶಾಂತ ನಾಯಕ
೮.	ಅರಿವಿನ ಮಾರಿತಂದೆ	– ಡಾ. ಸರ್ಫ್ರಾಜ್ ಚಂದ್ರಗುತ್ತಿ
೯.	ಕೋಲ ಶಾಂತಯ್ಯ	– ಡಾ. ಜಿ. ಆರ್. ತಿಪ್ಪೇಸ್ವಾಮಿ
೧೦.	ಬಹುರೂಪಿ ಚೌಡಯ್ಯ	– ಡಾ. ಚಿಕ್ಕಣ್ಣ ಯಣ್ಣೆಕಟ್ಟೆ
೧೧.	ಸಿದ್ಧರಾಮೇಶ್ವರ	– ಡಾ. ಕೆ. ಆರ್. ಸಿದ್ದಗಂಗಮ್ಮ
೧೨.	ಡಕ್ಕೆಯ ಬೊಮ್ಮಣ್ಣ	– ಡಾ. ಎಂ. ನಂಜಯ್ಯ ಹೊಂಗನೂರು
೧೩.	ಚೆನ್ನಬಸವಣ್ಣ	– ಡಾ. ಪಿ. ನಾಗರಾಜ
೧೪.	ಮೋಳಿಗೆ ಮಾರಯ್ಯ	– ಡಾ. ಜೆ. ಕರಿಯಪ್ಪ ಮಾಳಿಗೆ
೧೫.	ಉರಿಲಿಂಗಪೆದ್ದಿ	– ಡಾ. ಆರ್. ಲಕ್ಷ್ಮೀನಾರಾಯಣ
೧೬.	ಮಡಿವಾಳ ಮಾಚಿದೇವ	– ಪ್ರೊ. ಟಿ. ಯಲ್ಲಪ್ಪ
೧೭.	ಆದಯ್ಯ	– ಡಾ. ದಸ್ತಗೀರಸಾಬ್ ದಿನ್ನಿ
೧೮.	ಸಕಲೇಶ ಮಾದರಸ	– ಸಿದ್ಧರಾಮ ಹೊಸ್ಕಲ್
೧೯.	ನುಲಿಯ ಚಂದಯ್ಯ	– ಡಾ. ಯಲ್ಲಪ್ಪ ಹಿಮ್ಮಡಿ
೨೦.	ಮುಕ್ತಾಯಕ್ಕ ಮತ್ತು ಸತ್ಯಕ್ಕ	– ಡಾ. ವಿನಯಾ
೨೧.	ಮಾದಾರ ಚನ್ನಯ್ಯ, ಧೂಳಯ್ಯ	– ಪ್ರೊ. ಎ. ಕೆ. ಹಂಪಣ್ಣ
೨೨.	ಏಲೇಶ್ವರ ಕೇತಯ್ಯ	– ಡಾ. ಜಿ. ಎನ್. ಉಪಾಧ್ಯ
೨೩.	ಸೂಳೆ ಸಂಕವ್ವೆ, ಕಾಳವ್ವೆ ಮತ್ತು ಇತರರು	– ಪ್ರೊ. ಹೊನ್ನಗಾನಹಳ್ಳಿ ಕರಿಯಣ್ಣ
೨೪.	ಅಂಬಿಗರ ಚೌಡಯ್ಯ	– ಡಾ. ಎ.ವಿ. ಲಕ್ಷ್ಮೀನಾರಾಯಣ
೨೫.	ಅಮುಗೆ ರಾಯಮ್ಮ–ದೇವಯ್ಯ ರಾಯಸದ ಮಂಚಣ್ಣ–ರಾಯಮ್ಮ	– ಬಾ. ಹ. ರಮಾಕುಮಾರಿ
೨೬.	ದೇವರ ದಾಸಿಮಯ್ಯ	– ಡಾ. ಎ.ಬಿ. ರಾಮಚಂದ್ರಪ್ಪ
೨೭.	ಹಡಪದ ಅಪ್ಪಣ್ಣ	– ಡಾ. ಬೈರಮಂಗಲ ರಾಮೇಗೌಡ
೨೮.	ಹಾವಿನಹಾಳ ಕಲ್ಲಯ್ಯ	– ಡಾ. ಶಿವಾನಂದ ಕೆಳಗಿನಮನಿ
೨೯.	ಕಡಕೋಳ ಮಡಿವಾಳಪ್ಪ	– ನಾಗಭೂಷಣ ಬಗ್ಗನಡು
೩೦.	ಆಯ್ದಕ್ಕಿ ಮಾರಯ್ಯ ಮತ್ತು ಲಕ್ಕಮ್ಮ	– ಪುಟ್ಟಪ್ಪ
೩೧.	ಸೊಡ್ಡಳ ಬಾಚರಸ	– ಡಾ. ಪ್ರೀತಿ ಶುಭಚಂದ್ರ

ಕುಲಪತಿಗಳ ಮಾತು

ನಮ್ಮ ನಾಡಿನ ಪ್ರಸಿದ್ಧ ವಿದ್ವಾಂಸರೂ, ವಿಚಾರವಾದಿಗಳೂ ಆಗಿರುವ ನಾಡೋಜ ಪ್ರೊ. ಬರಗೂರು ರಾಮಚಂದ್ರಪ್ಪ ಅವರು ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿನ ಶ್ರೀ ಬಸವ ಅಧ್ಯಯನ ಪೀಠದ ಸಂದರ್ಶನ ಪ್ರಾಧ್ಯಾಪಕರಾಗಿ ಜವಾಬ್ದಾರಿಯನ್ನು ವಹಿಸಿಕೊಂಡ ದಿನದಿಂದಲೂ ನಿರಂತರವಾಗಿ ವೈವಿಧ್ಯಮಯ ಕಾರ್ಯಕ್ರಮ ಗಳನ್ನು ರೂಪಿಸುತ್ತ ಜನಮನದಲ್ಲಿ ವಚನ ಸಾಹಿತ್ಯದ ಬಗೆಗೆ ಆಸಕ್ತಿ ಬೆಳೆಯುವಂತೆ ಮಾಡುತ್ತ ಬಂದಿರುವುದು ಸರ್ವರಿಗೂ ತಿಳಿದ ಸಂಗತಿಯೇ ಆಗಿದೆ. ಪ್ರೊ. ಬರಗೂರರು ವೈಯಕ್ತಿಕವಾಗಿ ಉಪನ್ಯಾಸಗಳನ್ನು ನೀಡಿ ಹೊಸಚಿಂತನೆ ಮೂಡಲು ಕಾರಣರಾದದ್ದಲ್ಲದೆ, ಇತರ ಸಂಘ ಸಂಸ್ಥೆಗಳ ಸಹಭಾಗಿತ್ವದಲ್ಲೂ ವಿಚಾರಸಂಕಿರಣಗಳನ್ನು ಏರ್ಪಡಿಸುವುದರ ಮೂಲಕವೂ ಸಾಹಿತ್ಯಿಕ, ಸಾಂಸ್ಕೃತಿಕ ವಾತಾವರಣದಲ್ಲಿ ಹೊಸ ಸಂಚಲನಕ್ಕೆ ಕಾರಣರಾದದ್ದು ಗಮನಾರ್ಹ ಸಂಗತಿ.

ಶ್ರೀ ಬಸವ ಅಧ್ಯಯನ ಪೀಠದ ವತಿಯಿಂದ ಇದೀಗ ಹೊರಬರುತ್ತಿರುವ ವಿವಿಧ ವಚನಕಾರರನ್ನು ಕುರಿತ ಈ ೩೧ ಪುಸ್ತಕಗಳು ಬರಗೂರರ ಸಾಧನೆಯ ಮತ್ತೊಂದು ಮೈಲಿಗಲ್ಲು. ಈ ಪುಸ್ತಕಗಳು ನಮ್ಮ ನಾಡಿನ ವಿವಿಧ ಭಾಗಗಳ ಬರಹಗಾರರು, ವಿದ್ವಾಂಸರು ನಡೆಸಿದ ಚಿಂತನೆಯ ಫಲವಾಗಿವೆ. ಏಕಕಾಲದಲ್ಲಿ ಇಷ್ಟೊಂದು ಪ್ರಮಾಣದಲ್ಲಿ ಉಪಯುಕ್ತ ಪುಸ್ತಕಗಳನ್ನು ಪ್ರಕಟಿಸಿ ಹೊರತರುವುದು ಅಷ್ಟು ಸುಲಭದ ಮಾತಲ್ಲ. ಇಂಥ ಜವಾಬ್ದಾರಿಯನ್ನು ಪ್ರೊ. ಬರಗೂರು ರಾಮಚಂದ್ರಪ್ಪ ಅವರು ಅತ್ಯಂತ ಸಮರ್ಥವಾಗಿ ನೆರವೇರಿಸಿದ್ದಾರೆ. ಕೇವಲ ವಿದ್ವಾಂಸರಿಗಷ್ಟೇ ಅಲ್ಲದೆ ಸಾಮಾನ್ಯ ಓದುಗರನ್ನು ಗಮನದಲ್ಲಿಟ್ಟುಕೊಂಡು

ಪ್ರಸ್ತುತ ಯೋಜನೆಯನ್ನು ರೂಪಿಸಿದ ಆತ್ಮೀಯರಾದ ಪ್ರೊ. ಬರಗೂರು ರಾಮಚಂದ್ರಪ್ಪ ಅವರಿಗೆ ಮೈಸೂರು ವಿಶ್ವವಿದ್ಯಾನಿಲಯದ ವತಿಯಿಂದ ನನ್ನ ಶುಭಹಾರೈಕೆಗಳು.

ಆಗಸ್ಟ್ ೨೦೧೫

ಪ್ರೊ. ಕೆ. ಎಸ್. ರಂಗಪ್ಪ
ಕುಲಪತಿಗಳು
ಮೈಸೂರು ವಿಶ್ವವಿದ್ಯಾನಿಲಯ

ನಿರ್ದೇಶಕರ ನುಡಿ

ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿನ ಹಲವು ಪೀಠಗಳ ಪೈಕಿ ಶ್ರೀ ಬಸವ ಅಧ್ಯಯನ ಪೀಠವೂ ಒಂದು. ಇದರ ಸಂದರ್ಶನ ಪ್ರಾಧ್ಯಾಪಕರಾಗಿ ಕನ್ನಡ ಸಾಹಿತ್ಯ ಲೋಕದ ಹಲವು ಮನ್ನಣೆಗಳಿಗೆ ಪಾತ್ರರಾಗಿರುವ ಪ್ರಸಿದ್ಧ ಬರಹಗಾರರೂ ಸಂಸ್ಕೃತಿ ಚಿಂತಕರೂ ಆಗಿರುವ ನಾಡೋಜ ಪ್ರೊ. ಬರಗೂರು ರಾಮಚಂದ್ರಪ್ಪ ಅವರು ಸೇವೆಸಲ್ಲಿಸುತ್ತಿದ್ದಾರೆ. ಇವರ ಸೇವಾವಧಿಯಲ್ಲಿ ಹಮ್ಮಿಕೊಂಡು ಯಶಸ್ವಿಗೊಳಿಸಿದ ಕಾರ್ಯಕ್ರಮಗಳು ವೈವಿಧ್ಯಮಯವಾದುವು. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ವಚನ ಸಾಹಿತ್ಯವನ್ನು ಕುರಿತಂತೆ ತಾವೇ ಹಲವಾರು ಉಪನ್ಯಾಸಗಳನ್ನು ನೀಡಿದ್ದಾರೆ. ಸ್ವತಂತ್ರವಾಗಿ ಮತ್ತು ಇತರೆ ಸಂಘ ಸಂಸ್ಥೆಗಳ ಜೊತೆಗೂಡಿ ವಿಚಾರಸಂಕಿರಣ ಗಳನ್ನು ಏರ್ಪಡಿಸಿದ್ದಾರೆ. ಕನ್ನಡ ವಚನಕಾರ ರನ್ನು ಜಗತ್ತಿನ ಇತರ ದಾರ್ಶನಿಕ ಚಿಂತಕರೊಂದಿಗೆ ಹೋಲಿಸಿ ಮುಖಾಮುಖಿ ಯಾಗಿಸುವ ಕಾರ್ಯಕ್ರಮಗಳನ್ನೂ ರೂಪಿಸಿದ್ದಾರೆ. ಈ ಎಲ್ಲದರ ಮೂಲಕ ಇಲ್ಲಿಯ ಸಾಹಿತ್ಯಿಕ ಸಾಂಸ್ಕೃತಿಕ ವಾತಾವರಣದಲ್ಲಿ ಹೊಸ ಸಂಚಲನವನ್ನು ಉಂಟು ಮಾಡಿದ್ದಾರೆಂಬುದು ಮಹತ್ವದ ಸಂಗತಿ.

ಇದರ ಜೊತೆಗೆ ಶ್ರೀ ಬಸವ ಅಧ್ಯಯನ ಪೀಠಕ್ಕೆ ಮತ್ತು ಸಾಹಿತ್ಯ ಲೋಕಕ್ಕೆ ಘನತೆ ಮತ್ತು ಗೌರವವನ್ನು ತಂದುಕೊಟ್ಟ ಸಂಗತಿಯೆಂದರೆ ಕಡಿಮೆ ಕಾಲಾವಧಿಯಲ್ಲಿ ವಚನಕಾರರನ್ನು ಕುರಿತ ೩೧ ಪುಸ್ತಕಗಳನ್ನು ಹೊರತರುತ್ತಿರು ವುದು. ೧೨ನೆಯ ಶತಮಾನದ ಬಸವಣ್ಣ, ಅಲ್ಲಮ, ದಾಸಿಮಯ್ಯ, ಅಕ್ಕಮಹಾದೇವಿ ಮುಂತಾದವರ ಜೊತೆಗೆ ಕನ್ನಡ ಸಾಹಿತ್ಯದಲ್ಲಿ ಹೆಚ್ಚು ಚರ್ಚೆಗೆ ಒಳಪಡದ ಹಾಗೂ ಗಣನೆಗೆ ಬಾರದಿರುವ ವಚನಕಾರರನ್ನು ಕುರಿತ ಪ್ರಬುದ್ಧ

ಚಿಂತನೆಗಳಿವು. ವಿವಿಧ ವಿದ್ವಾಂಸರಿಂದ ಬರೆಸಿ ಹೊರತರುವ ಜವಾಬ್ದಾರಿಯನ್ನು ಪ್ರೊ. ಬರಗೂರು ರಾಮಚಂದ್ರಪ್ಪ ಅವರು ಅತ್ಯಂತ ಯಶಸ್ವಿಯಾಗಿ ನಿರ್ವಹಿಸಿದ್ದಾರೆ. ಕನ್ನಡ ಸಾಹಿತ್ಯ ಚರಿತ್ರೆಗೆ ಹೊಸ ಆಯಾಮ ಬರುವಂತೆ ಮಾಡಿದ್ದಾರೆ. ಇಂತಹ ಮಹತ್ವದ ಜವಾಬ್ದಾರಿಯನ್ನು ನಿಗದಿತ ಅವಧಿಯಲ್ಲಿ ಯಶಸ್ವಿಯಾಗಿ ನಿರ್ವಹಿಸಿದ ಪ್ರೊ. ಬರಗೂರು ರಾಮಚಂದ್ರಪ್ಪ ಅವರಿಗೆ ಮೈಸೂರು ವಿಶ್ವವಿದ್ಯಾನಿಲಯ ಮತ್ತು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಆಗಸ್ಟ್ ೨೦೧೫

ಪ್ರೊ. ಆರ್. ರಾಮಕೃಷ್ಣ
ನಿರ್ದೇಶಕರು
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ

ಪ್ರಧಾನ ಸಂಪಾದಕರ ಪ್ರಸ್ತಾವನೆ

ಬಸವಣ್ಣನವರ ನಾಯಕತ್ವದಲ್ಲಿ ಸಂಘಟಿತವಾದ 'ವಚನ ಚಳವಳಿ'ಯು ನಮ್ಮ ನೆಲದ ಒಂದು ಚಾರಿತ್ರಿಕ ಸಂಭವ. ಅದು ಜಾತಿ ಕಟ್ಟಳೆಗಳನ್ನು ಕಳಚಿದ ಧಾರ್ಮಿಕ ಆಂದೋಲನವೂ ಹೌದು, ಸೃಜನಶೀಲ ಸಾಹಿತ್ಯ ಸಂಚಲನವೂ ಹೌದು. ಮೇಲ್ನೋಟಕ್ಕೆ ಧಾರ್ಮಿಕ ಸ್ವಾತಂತ್ರ್ಯ ಚಳವಳಿಯ ಸ್ವರೂಪವನ್ನು ಪಡೆದಿದ್ದರೂ ಈ ಚಳವಳಿಗೆ ಸಾಮಾಜಿಕ ಮತ್ತು ಸಾಂಸ್ಕೃತಿಕ ಆಯಾಮವಿದೆ. ಈ ಕಾರಣದಿಂದಲೇ ಇದಕ್ಕೆ ಅಸಾಧಾರಣ ಮಹತ್ವವಿದೆ. ಸಾಮಾಜಿಕ ನಿಷೇಧಗಳ ಜಡಸಂಕೋಲೆಯಿಂದ ತಳ ಸಮುದಾಯಗಳನ್ನು ದೂರವಿಟ್ಟ ಜಡ ಧಾರ್ಮಿಕ ಸನ್ನಿವೇಶವನ್ನು ಪಲ್ಲಟಗೊಳಿಸಿ, ಶಿವನನ್ನು ನಂಬಿ ಬಂದವರನ್ನೆಲ್ಲ ಒಂದೇ ಎಂದು ಭಾವಿಸಿ, ಹೊಸ ಸಂಸ್ಕೃತಿಯ ವಿನ್ಯಾಸವನ್ನು ರೂಪಿಸಿದ ವಚನ ಚಳವಳಿಯು ತಂತಾನೇ ಒಂದು ಜೀವನ ವಿಧಾನವೂ ಆಯಿತು. ಆದ್ದರಿಂದಲೇ ಅದಕ್ಕೊಂದು ಸಮಾಜೋ-ಸಾಂಸ್ಕೃತಿಕ ಸ್ವರೂಪವೂ ಲಭ್ಯವಾಯಿತು. ಹರ್ಸ್‌ಕೊವಿಟ್ಸ್ ಎಂಬ ಮಾನವ ವಿಜ್ಞಾನಿ ಹೇಳಿದ 'ಜನರ ಜೀವನ ವಿಧಾನವೇ ಸಂಸ್ಕೃತಿ' ಎಂಬ ವ್ಯಾಖ್ಯೆಯನ್ನು ಅನ್ವಯಿಸಿ ನೋಡಿದಾಗ, ವಚನ ಚಳವಳಿಯೇ ಒಂದು ಸಂಸ್ಕೃತಿಯಾಗುತ್ತದೆ. ಸಾಮಾಜಿಕವಾಗಿ ತುಳಿತಕ್ಕೊಳಗಾದ ಜಾತಿ ಸಮುದಾಯಗಳನ್ನು ಧಾರ್ಮಿಕ ಪರಿಧಿಗೆ ತಂದು ಹೊಸ ಜೀವನವನ್ನು ನೀಡಿದ್ದು, ಕಾಯಕಕ್ಕೆ ಸಾಮಾಜಿಕ ಘನತೆ ತಂದದ್ದು, ಕುಲ ಮೂಲ ಕಸುಬುಗಳ ಆರ್ಥಿಕತೆಯನ್ನು ತಂತಾನೇ ಒಳಗೊಂಡದ್ದು, ತನ್ನೆಲ್ಲ ತಾತ್ವಿಕತೆಗೆ ಕೇಂದ್ರಶಕ್ತಿಯಾಗಿ ಶಿವದೈವವನ್ನು ಪ್ರತಿಷ್ಠಾಪಿಸಿದ್ದು – ಈ ಎಲ್ಲ ಅಂಶಗಳ ಆಧಾರದಲ್ಲಿ ವಚನ ಚಳವಳಿಯು ಹೊಸ ಜೀವನ ವಿಧಾನವನ್ನೇ ರೂಪಿಸಿತು; ಸಂಸ್ಕೃತಿಯ ಸ್ವರೂಪವನ್ನು ಪಡೆಯಿತು. ತನ್ನ ಸಮಸ್ತ ಪರಿಕಲ್ಪನೆಗಳ ಕೇಂದ್ರವಾಗಿ

ಶಿವದೈವವನ್ನು ಸ್ಥಾಪಿಸಿಕೊಂಡದ್ದರಿಂದ ಮತ್ತು ಶಿವಶಕ್ತಿಯೇ ಸಂಘಟನೆ ಮತ್ತು ಸಂರಚನೆಯ ಮೂಲಧಾತುವಾದ್ದರಿಂದ, ನಾನು ವಚನ ಚಳವಳಿಯನ್ನು 'ಶಿವ ಸಂಸ್ಕೃತಿ ಚಳವಳಿ' ಎಂದೂ ಕರೆಯಬಯಸುತ್ತೇನೆ. ಸಂಸ್ಕೃತಿಯ ಪರಿಕಲ್ಪನೆಯು ಧರ್ಮದ ಪರಿಕಲ್ಪನೆಗಿಂತ ವಿಸ್ತಾರವಾದದ್ದು ಎಂಬುದು ನನ್ನ ತಿಳುವಳಿಕೆ. ಈ ಅರ್ಥದಲ್ಲಿ ಬಸವಣ್ಣ –ಶಿವಸಂಸ್ಕೃತಿಯ ನೇತಾರ.

'ಶಿವಸಂಸ್ಕೃತಿ ನೇತಾರ' ಬಸವಣ್ಣನವರ ಆಶಯದಲ್ಲಿ ಸಂಭವಿಸಿದ ವಚನ ಚಳವಳಿಯಲ್ಲಿ ಕೆಲವು ಪ್ರಮುಖ ಪರಿಕಲ್ಪನೆಗಳು ಕಾಲದ ಪರೀಕ್ಷೆಯಲ್ಲಿ ಗೆಲ್ಲುತ್ತ, ಪ್ರಸ್ತುತವಾಗುತ್ತ, ಚಿಂತನೆಗೆ ಹಚ್ಚುತ್ತ, ಜೀವಶಕ್ತಿಯನ್ನು ಪಡೆದುಕೊಂಡಿವೆ. ಅವುಗಳಲ್ಲಿ ಆಯ್ದ ಮೂರು ಮುಖ್ಯ ಪರಿಕಲ್ಪನೆಗಳನ್ನು ಪ್ರಸ್ತಾಪಿಸಬಯಸುತ್ತೇನೆ:

ಬಸವಣ್ಣನವರ 'ದೇಹವೇ ದೇಗುಲ' ಎಂಬ ಪರಿಕಲ್ಪನೆಯು ದೇಗುಲ ಕಲ್ಪನೆಯನ್ನೇ ಪಲ್ಲಟಗೊಳಿಸಿದ ಪ್ರಖರ ಚಿಂತನೆ. ಧಾರ್ಮಿಕ ಪ್ರಪಂಚದ ಪ್ರಥಮ ಚಿಂತನೆಯೆಂಬ ಹೆಗ್ಗಳಿಕೆಗೆ ಅರ್ಹವಾದ ಅದ್ಭುತ ಪರಿಕಲ್ಪನೆ; ಅಪೂರ್ವ ಪ್ರತಿಪಾದನೆ. ನನ್ನ ಈ ಮಾತನ್ನು ಹೀಗೆ ವಿಸ್ತರಿಸಬಹುದು: ಪ್ರಪಂಚದಾದ್ಯಂತ ಮುಖ್ಯ ವಾಹಿನಿಯೆನ್ನಿಸಿಕೊಂಡಿರುವ ಧರ್ಮಗಳು ದೇಹವನ್ನು ಪವಿತ್ರವೆಂದು ಭಾವಿಸಿದ್ದು ಕಡಿಮೆ ಅಥವಾ ಇಲ್ಲ ಎಂದರೂ ನಡೆದೀತು. ದೇಹಕ್ಕಿಂತ ಆತ್ಮಕ್ಕೆ ಪ್ರಾಶಸ್ತ್ಯ ಕೊಟ್ಟ ಧರ್ಮಗಳೇ ಹೆಚ್ಚು. ಇದು ತಪ್ಪು ಎಂದು ನಾನು ಹೇಳುವುದಿಲ್ಲ. ಆತ್ಮದಂತಹ ನಿರಾಕಾರಗಳೇ ನಮ್ಮ ಸಂವೇದನೆಗಳ ಅನುಭವ ಕೇಂದ್ರ ಹಾಗೂ ಪ್ರೇರಕವಾಗಿರುವುದೇ ಒಂದು ಪರಂಪರೆ. ಆತ್ಮ, ಮನಸ್ಸು, ಪ್ರಾಣ – ಇತ್ಯಾದಿ ಯಾವುದಕ್ಕೂ ಆಕಾರವಿಲ್ಲ. ಜೀವಶಾಸ್ತ್ರದ ಪ್ರಕಾರ ಆಕಾರವಿರುವ ಹೃದಯ ಮತ್ತು ಕರುಳುಗಳಿಗೆ ಸಾಹಿತ್ಯ ಸಂವೇದನಾ ವಲಯದಲ್ಲಿ ಆಕಾರವಿಲ್ಲ. ಹೃದಯಸ್ಪರ್ಶಿ ಎಂದಾಗ, ಕರುಳು ಚುರ್ ಎಂದಿತು ಎಂದಾಗ, ಅದೊಂದು ನಿರಾಕಾರ ಅನುಭವವೇ ಹೊರತು ಆಕಾರದ ಅರಿವಲ್ಲ. ಈ ಹಿನ್ನೆಲೆಯಲ್ಲಿ ಆತ್ಮ, ಆತ್ಮಸಾಕ್ಷಿ, ಆತ್ಮಶೋಧ, ಇತ್ಯಾದಿ ಪರಿಕಲ್ಪನೆಗಳಿಗೆ ಖಂಡಿತ ತನ್ನದೇ ಆದ ಮಹತ್ವವಿದೆ. ಆದರೆ 'ದೇಹ'ವನ್ನು ಅನೇಕ ಧರ್ಮಗಳು ಮತ್ತು ಧಾರ್ಮಿಕ ಗುರುಗಳು ಮಾಯೆ ಎಂದರು; ಕಾಮನೆಗಳ ಆವಾಸಸ್ಥಾನವೆಂದು ಭಾವಿಸಿದರು. ಅದೇ ರೀತಿ ಪ್ರತಿಪಾದಿಸಿದರು. ಹೀಗಾಗಿ,

ದೇಹವೆಂಬುದು ಆಕಾರ–ವಿಕಾರಳ ಒಂದು ವಿನ್ಯಾಸವಾಗಿಯೇ ಗ್ರಹಿಸಲ್ಪಟ್ಟಿತು. ಹೀಗೆ ಆಕಾರ–ವಿಕಾರ ವಿನ್ಯಾಸದಲ್ಲಿ ಕಾಮನೆಗಳ ಮಾಯೆಯಾಗಿ 'ಮೆರೆಯುವ' ದೇಹವನ್ನು 'ದೇಗುಲ' ಎಂದು ಪ್ರತಿಪಾದಿಸಿದ್ದು, ಈ ಮೂಲಕ ದೈವ ಮತ್ತು ದೇವಾಲಯವನ್ನು ದೇಹಕ್ಕೆ ಸ್ಥಳಾಂತರಿಸಿದ್ದು ಒಂದು ಹೊಸ ವೈಚಾರಿಕ ವಿಪ್ಲವ. ಈ ವಿಪ್ಲವವಿಚಾರಿ, ಭಕ್ತಿಭಂಡಾರಿ– ನಮ್ಮ ಬಸವಣ್ಣ; ವಚನ ಚಳವಳಿಯ ಸಂವೇದನಾಶೀಲ ಹಿರಿಯಣ್ಣ.

ಬಸವಣ್ಣನವರು ಮೂಲತಃ ಭಕ್ತಿಭಾವದ ಸಂಘಟಕ. ಸಂಘಟಕರಿಗೆ ಭಾವನೆ–ಚಿಂತನೆ ಒಟ್ಟಿಗೇ ಇರದಿದ್ದರೆ ಸಮುದಾಯಕ್ಕೆ ಸಮೀಪವಾಗುವುದು ಮತ್ತು ಸಮುದಾಯವು ಸಂಘಟನೆಗೆ ಸಮೀಪವಾಗುವುದು ಕಷ್ಟ ಬಸವಣ್ಣನವರು ಭಕ್ತಿ ಪ್ರಧಾನ ಚಿಂತಕರಾಗಿದ್ದರಿಂದ ಸಂಘಟನೆಯ ಸ್ಪಂದನ ಸಾಧ್ಯವಾಯಿತು. ಈ ಘಟ್ಟದಲ್ಲಿ ಅಲ್ಲಮಪ್ರಭುವಿನ ವೈಚಾರಿಕ ದಿಟ್ಟತೆಯನ್ನು ಪ್ರಸ್ತಾಪಿಸಲೇ ಬೇಕು. ಅಲ್ಲಮ ಮಹಾನ್ ಜ್ಞಾನಿ. ಒರೆಗಲ್ಲಿಗೆ ಹಚ್ಚದೆ ಏನನ್ನೂ ಒಪ್ಪದ ವಿಚಾರಿ. ಯಾವುದೇ ಸಂಘಟನೆಗೆ, ಚಳವಳಿಗೆ, ಒಳ ವಿಮರ್ಶೆಯ ಎಚ್ಚರವಿಲ್ಲದಿದ್ದರೆ ಅದು ಹಾದಿ ತಪ್ಪುವ ಸಂಭವವಿರುತ್ತದೆ. ಆದ್ದರಿಂದ ಆತ್ಮವಿಮರ್ಶಕರ ಅಗತ್ಯ ಇದ್ದೇ ಇರುತ್ತದೆ. ಈ ಕೆಲಸವನ್ನು ಆಗು ಮಾಡಿದ್ದು ಅಲ್ಲಮ ಪ್ರಭುವಿನ ಅನನ್ಯ ಕ್ರಿಯೆ. ತಾತ್ವಿಕತೆಯನ್ನು ತನ್ನೊಳಗೆ ಕರಗಿಸಿಕೊಂಡು, ಜ್ಞಾನವನ್ನು ಆತ್ಮಕ್ಕೆ ತಂದು, ನಿರಾಕಾರ ಅರಿವು ಮತ್ತು ಅನುಭವಕ್ಕೆ ನುಡಿರೂಪ ಕೊಟ್ಟ 'ಆತ್ಮಜ್ಞಾನಿ' ಅಲ್ಲಮಪ್ರಭು. ಬಸವಣ್ಣನವರ ಭಕ್ತಿಜ್ಞಾನ ಮತ್ತು ಅಲ್ಲಮನ ಆತ್ಮಜ್ಞಾನಗಳೊಂದಾಗಿಯೇ ವಚನ ಚಳವಳಿಗೆ ಪ್ರಜಾಸತ್ತಾತ್ಮಕ ಸ್ವರೂಪ ಲಭ್ಯವಾಯಿತು. ಇದಕ್ಕೆ ಅನುಭವ ಮಂಟಪವು ಸೂಕ್ತ ವೇದಿಕೆಯಾಯಿತು.

'ಶರಣಸತಿ–ಲಿಂಗಪತಿ' ಎಂಬ ಇನ್ನೊಂದು ಪ್ರಮುಖ ಪರಿಕಲ್ಪನೆಗೆ ಸಂಬಂಧಿಸಿದ ವಿಭಿನ್ನ ಚಿಂತನೆಗಳು ವಚನ ಚಳವಳಿಯ ಪ್ರಜಾಸತ್ತಾತ್ಮಕ ಸ್ವರೂಪಕ್ಕೆ ಸಾಕ್ಷಿಯಾಗಿವೆ. ನನಗನ್ನಿಸಿದಂತೆ 'ಶರಣಸತಿ–ಲಿಂಗಪತಿ' ಪರಿಕಲ್ಪನೆಯು 'ದೇಹವೇ ದೇಗುಲ'ವೆಂಬ ಪರಿಕಲ್ಪನೆಯ ಮುಂದುವರೆದ ಚಿಂತನೆಯಾಗಿದೆ. ದೇವಾಲಯವೇ ದೇಹಕ್ಕೆ ಸ್ಥಳಾಂತರಗೊಂಡ ಮೇಲೆ ಭಕ್ತಿಯ ಪ್ರಕ್ರಿಯೆಯು ಸಹಜವಾಗಿಯೇ ಖಾಸಗಿಯಾಗುತ್ತದೆ; ಅಂತರಂಗಕ್ಕೆ ಸಂಬಂಧಿಸಿದ

ಅನುಭವವಾಗುತ್ತದೆ. ಏಕಾಂತದ ಅನುಸಂಧಾನವಾಗುತ್ತದೆ. ಆದ್ದರಿಂದ ಸತಿ-ಪತಿಯರ ಸಂಬಂಧದಂತೆ ಶಿವ ಮತ್ತು ಶರಣರ ನಡುವಿನ ಭಕ್ತಿಯಿರಬೇಕೆಂದು ಪ್ರತಿಪಾದಿಸಲಾಗಿದೆ; ತನ್ಮೂಲಕ ಬಹಿರಾಡಂಬರವನ್ನು ಪ್ರತಿರೋಧಿಸಲಾಗಿದೆ. ದೈವಭಕ್ತಿಯು ಖಾಸಗಿಯಾಗಿದ್ದರೆ ಎಷ್ಟೋ ಧಾರ್ಮಿಕ ಸಮಸ್ಯೆಗಳು ತಂತಾನೆ ಹಿಂದೆ ಸರಿಯುತ್ತವೆ. ಹೀಗೆ ಬಸವಣ್ಣಾದಿಗಳು ಭಕ್ತಿಯ ಖಾಸಗಿತನವನ್ನು ಸತಿ-ಪತಿ ಭಾವದ ಸಂಕೇತವಾಕ್ಯದಲ್ಲಿ ಸಾದರಪಡಿಸಿದ ಮೇಲೆ ಭಿನ್ನದನಿಗಳೂ ಕೇಳಿಬಂದಿವೆ. ಅಂಬಿಗರ ಚೌಡಯ್ಯ ಮತ್ತು ಕೆಲವು ವಚನಕಾರ್ತಿಯರ ಪ್ರತಿರೋಧ ವಿಚಾರಧಾರೆಯನ್ನು ಇಲ್ಲಿ ನೆನೆಯಬಹುದು. 'ಶರಣ ಸತಿ-ಲಿಂಗಪತಿ' ಎಂಬ ಪರಿಕಲ್ಪನೆಯ ಬಗ್ಗೆ ತಕರಾರು ತೆಗೆದವರ ಕಣ್ಣೆದುರು ಬಹುಶಃ ಕೆಲವು ಡಾಂಭಿಕ ಭಕ್ತರ ನಿದರ್ಶನಗಳಿದ್ದಿರಬೇಕು. ಅದೇನೇ ಇರಲಿ, ವಚನ ಚಳವಳಿಯಲ್ಲಿ ಭಿನ್ನದನಿ ಮಾಡಿದವರು 'ಭಿನ್ನಮತೀಯ'ರಾಗಲಿಲ್ಲ. ಬಸವಣ್ಣನವರ ನಾಯಕತ್ವ ಭಿನ್ನದನಿಗಳನ್ನು ಹತ್ತಿಕ್ಕಲಿಲ್ಲ. ಸಂಘರ್ಷದ ಬದಲಾಗಿ ಸಂವಾದ ನಡೆಸಲಾಯಿತು. ಇದು ವಚನ ಚಳವಳಿಯ ಪ್ರಜಾಸತ್ತಾತ್ಮಕ ಸ್ವರೂಪಕ್ಕೆ ಸಾಕ್ಷಿಯಾಯಿತು.

'ಕಾಯಕವೇ ಕೈಲಾಸ' ಎಂಬುದು ವಚನ ಚಳವಳಿಯ ಮತ್ತೊಂದು ವಿಶೇಷ ಪರಿಕಲ್ಪನೆ. ಆಯ್ದಕ್ಕಿ ಮಾರಯ್ಯ ಮೊಟ್ಟಮೊದಲು ಪ್ರಯೋಗಿಸಿದ 'ಕಾಯಕವೇ ಕೈಲಾಸ'ವೆಂಬ ಪರಿಕಲ್ಪನೆಯು ವಚನ ಚಳವಳಿಯ ಒಂದು ಜೀವನದಿಯೇ ಆಗಿಬಿಟ್ಟಿತು. ತಂತಮ್ಮ ಕುಲಮೂಲ ಕಾಯಕಗಳಿಗೆ ಆದ್ಯತೆ ನೀಡಿ ನಿಷ್ಠೆಯಿಂದ ಪರಿಪಾಲಿಸುವ ಆರ್ಥಿಕ ಪದ್ಧತಿಗೆ ಧಾರ್ಮಿಕ ಪರಿವೇಷ ಲಭ್ಯವಾಯಿತು. ತನ್ಮೂಲಕ ಯಾವುದೇ ಕುಲಕಸುಬು ಕೀಳಲ್ಲ ಎಂದು ಭಾವಿಸುವಂತಾಯಿತು. ವಿಶೇಷವಾಗಿ ದಲಿತ ಮತ್ತು ಹಿಂದುಳಿದ ವರ್ಗಗಳ ಸಾಮಾಜಿಕ ಸಮುದಾಯಗಳಿಗೆ ಆತ್ಮವಿಶ್ವಾಸ ಬಂದಿತು. ಕುಲಮೂಲ ಕೀಳರಿಮೆ ಕಿತ್ತು ಹೋಯಿತು. ಎಲ್ಲ ಕುಲಕಸುಬುಗಳಿಗೂ ಸಾಮಾಜಿಕ ಗೌರವ ಸಿಗುವಂತಾಯಿತು. ಇದು ವಚನ ಚಳವಳಿಯ ಒಂದು ದೊಡ್ಡ ಸಾಧನೆ.

ಆದರೆ ವಚನ ಚಳವಳಿಯ ಕಾಯಕ ಸಂಸ್ಕೃತಿ ಮತ್ತು ಇವತ್ತಿನ ಕಾರ್ಮಿಕ ಸಂಸ್ಕೃತಿಗಳು ಒಂದೇ ಅಲ್ಲ. ಕಾಯಕ ಸಂಸ್ಕೃತಿಯಲ್ಲಿ ಕುಲಮೂಲ ಕಸುಬುಗಳ

ಉತ್ಪಾದನಾ ಪದ್ಧತಿಯಿದ್ದರೆ, ಕಾರ್ಮಿಕ ಸಂಸ್ಕೃತಿಯಲ್ಲಿ ಕುಲಮೂಲ ಉತ್ಪಾದನಾ ಪದ್ಧತಿಯನ್ನು ಮೀರಿದ ಸಾಮೂಹಿಕ ಉತ್ಪಾದನಾ ಪದ್ಧತಿಯಿದೆ. ಅದು ಆ ಕಾಲ; ಇದು ಈ ಕಾಲ. ಅಂತೆಯೇ ವಚನ ಚಳವಳಿಯು ಪ್ರತಿಪಾದಿಸಿದ 'ಏಕದೇವೋಪಾಸನೆ'ಯು ಅಂದಿನ ಅನಿವಾರ್ಯತೆಯಲ್ಲಿ ಹುಟ್ಟಿದ ಒಂದು ಧಾರ್ಮಿಕ ತತ್ವ. ಆದರೆ ಇಂದು ಒಂದೇ ಧರ್ಮ, ಒಂದೇ ದೈವದ ಶ್ರೇಷ್ಠತೆಯನ್ನು ಪ್ರತಿಪಾದಿಸುವುದು ಆದರ್ಶವಲ್ಲ. ಬಹುಸಂಸ್ಕೃತಿ, ಬಹುಧರ್ಮ ಸಾಮರಸ್ಯಗಳು ಆದರ್ಶವಾಗಿರುವ ಕಾಲವಿದು. ಧಾರ್ಮಿಕ ಮನ್ನಣೆಯೇ ಇಲ್ಲದವರನ್ನು ಕೇಂದ್ರಸ್ಥಾನಕ್ಕೆ ತರುವುದಕ್ಕಾಗಿ ರೂಪುಗೊಂಡ ಏಕದೇವೋಪಾಸನೆಯ ಕಾಲವದು.

ಅದೇನೇ ಇದ್ದರೂ ೧೨ನೇ ಶತಮಾನದ ವಚನ ಚಳವಳಿಯ ಚಾರಿತ್ರಿಕ ಮಹತ್ವಕ್ಕೆ ಸಾಟಿಯಿಲ್ಲ. ಸಾಮಾಜಿಕ ಮತ್ತು ಸಾಂಸ್ಕೃತಿಕ ಚಲನಶೀಲತೆಗೆ ಕಾರಣವಾದ ವಚನ ಚಳವಳಿಯು ಕರ್ನಾಟಕವು ಹೆಮ್ಮೆಪಡುವಂತೆ ಮಾಡಿದೆ. ವಿಶೇಷವಾಗಿ ದಲಿತರು, ಹಿಂದುಳಿದವರು, ಮಹಿಳೆಯರು ಪಾಲ್ಗೊಳ್ಳುವಂತೆ ಮಾಡಿದ ಪ್ರಜಾಸತ್ತಾತ್ಮಕ ಸಾಧನೆಯನ್ನು ವಚನ ಚಳವಳಿ ಮಾಡಿತೋರಿಸಿದೆ. ಉಪೇಕ್ಷೆಗೊಳಗಾದ ಸಾಮಾಜಿಕ ವಲಯಗಳು ತಂತಾನೆ ಅಭಿವ್ಯಕ್ತಿಗೊಳ್ಳುವ ಅವಕಾಶವನ್ನು ಕಲ್ಪಿಸಿದೆ. ಇದರ ಫಲವಾಗಿ ವಿಭಿನ್ನ ವಚನಕಾರರು ಬೆಳಕಿಗೆ ಬಂದಿದ್ದಾರೆ. ಇವರೆಲ್ಲರ ವಚನಗಳನ್ನು ಡಾ. ಎಂ.ಎಂ. ಕಲಬುರ್ಗಿಯವರ ಪ್ರಧಾನ ಸಂಪಾದಕತ್ವದಲ್ಲಿ ಬಂದ 'ಸಮಗ್ರ ವಚನ ಸಂಪುಟ'ಗಳಲ್ಲಿ ನೀಡಲಾಗಿದೆ. ಕನ್ನಡ ಪುಸ್ತಕ ಪ್ರಾಧಿಕಾರವು ಈ ಸಂಪುಟಗಳನ್ನು ಪ್ರಕಟಿಸಿದೆ. ಡಾ. ಎಂ.ಎಂ. ಕಲಬುರ್ಗಿಯವರು ಮತ್ತು ಅವರ ತಂಡದ ಈ ಕೆಲಸವನ್ನು ನಾವು ಕೃತಜ್ಞತೆ ಯಿಂದ ನೆನೆಯಬೇಕು. ಯಾಕೆಂದರೆ ಯಾವುದೇ ವಚನಕಾರರ ಬಗ್ಗೆ ಚರ್ಚಿಸಲು, ವಿಶ್ಲೇಷಿಸಲು ಬೇಕಾದ ಮೂಲ ಆಕರವಾಗುವಂತಹ ಸಂಪುಟಗಳನ್ನು ಇವರು ಕೊಟ್ಟಿದ್ದಾರೆ.

ಪ್ರಸ್ತುತ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿರುವ ಶ್ರೀ ಬಸವ ಅಧ್ಯಯನ ಪೀಠವು ನನ್ನ ಪ್ರಧಾನ ಸಂಪಾದಕತ್ವದಲ್ಲಿ ಪ್ರಕಟಿಸುತ್ತಿರುವ 'ವಚನ ಚಿಂತನ ಮಾಲೆ'ಯಲ್ಲಿ ಬಸವಣ್ಣನವರಾದಿಯಾಗಿ ಸುಮಾರು ನಲವತ್ತಕ್ಕೂ

ಹೆಚ್ಚು ವಚನಕಾರರ ಅಭಿವ್ಯಕ್ತಿಯನ್ನು ವಿಶ್ಲೇಷಿಸಲಾಗಿದೆ. ದಲಿತರು, ಮಹಿಳೆಯರು ಮತ್ತು ಹಿಂದುಳಿದ ವರ್ಗ ಮೂಲದಿಂದ ಬಂದ ವಚನಕಾರರಿಗೆ ಆದ್ಯತೆ ನೀಡಲಾಗಿದೆ. ಈ ಆದ್ಯತೆಗೆ ತಾತ್ವಿಕ ಆಧಾರವೂ ಇದೆ.

ಬಸವಣ್ಣನವರ ನಾಯಕತ್ವದಲ್ಲಿ ನಡೆದ ವಚನ ಚಳವಳಿಯ ಸಹಜ ಶಕ್ತಿಯೆಂದರೆ ದಲಿತರು, ಮಹಿಳೆಯರು ಮತ್ತು ಹಿಂದುಳಿದ ವರ್ಗದವರೆಂಬುದು ನನ್ನ ಗ್ರಹಿಕೆ. ಈ ಸಾಮಾಜಿಕ ಸಮುದಾಯಗಳಿಂದಲೇ ವಚನ ಚಳವಳಿಗೆ ಇನ್ನಿಲ್ಲದ ಅನನ್ಯತೆ ಮತ್ತು ಸೋಪಜ್ಞತೆ ಲಭ್ಯವಾಯಿತು. ಆದರೆ, ಬೆರಳೆಣಿಕೆಯ ವಚನಕಾರರನ್ನು ಹೊರತು ಪಡಿಸಿ ಉಳಿದವರ ವಚನಾಭಿವ್ಯಕ್ತಿ ಕುರಿತಂತೆ ವಿಶೇಷ ವಿಶ್ಲೇಷಣೆ ನಡೆದಿಲ್ಲ. ಇವರ ಜೀವನ ವೃತ್ತಾಂತದ ಬಗ್ಗೆ ನಡೆದಿರುವ ಸಂಶೋಧನೆಗಳು ಇಲ್ಲವೆನ್ನುವಷ್ಟು ಕಡಿಮೆ. ಯಾರು ವಚನ ಚಳವಳಿಗೆ ಸಾಮಾಜಿಕ ಶಕ್ತಿಯನ್ನು ತುಂಬಿ ಸಾಂಸ್ಕೃತಿಕ ಅನನ್ಯತೆಗೆ ಕಾರಣರಾದರೊ ಅವರ ಅಭಿವ್ಯಕ್ತಿಯನ್ನು ಕುರಿತು ಆದ್ಯತೆಯ ಮೇಲೆ ಚರ್ಚಿಸದೇ ಇರುವುದು ಬಸವಣ್ಣನವರ ಆಶಯ ಮತ್ತು ಆದರ್ಶಕ್ಕೆ ಅನುಗುಣವಾದ ಅಂಶವಲ್ಲ ಎನ್ನುವುದು ನನ್ನ ನಮ್ರ ತಿಳುವಳಿಕೆ. ಈ ಹಿನ್ನೆಲೆಯಲ್ಲಿ, ಬಸವಣ್ಣ, ಅಕ್ಕ, ಅಲ್ಲಮರಾದಿಯಾಗಿ ವಿವಿಧ ಸಾಮಾಜಿಕ ಮೂಲದ ವಚನಕಾರರ ಲಭ್ಯಜೀವನ ಮಾಹಿತಿ ಮತ್ತು ವಚನಗಳ ವಿಸ್ತೃತ ವಿಶ್ಲೇಷಣೆ ಮಾಡಿಸುವುದು ವಚನ ಚಳವಳಿಯ ಪ್ರಜಾಸತ್ತಾತ್ಮಕ ಮೌಲ್ಯಕ್ಕೆ ಮರ್ಯಾದೆ ತರುವ ಕೆಲಸವೆಂದು ಭಾವಿಸಿ ಈ ಪುಸ್ತಕ ಮಾಲೆಯನ್ನು ಸಾಕಾರಗೊಳಿಸಲಾಗಿದೆ. ವಚನ ಚಳವಳಿಯ ಸಾಮಾಜಿಕ ಸ್ವರೂಪವನ್ನೇ ಆದರ್ಶವಾಗಿಟ್ಟುಕೊಂಡು ವಿವಿಧ ಸಾಮಾಜಿಕ ಮೂಲದ ಬರಹಗಾರರಿಗೆ ಪುಸ್ತಕ ರಚನೆಯ ಕೆಲಸವನ್ನು ವಹಿಸಲಾಗಿದೆ. ಈ ಎಲ್ಲ ಸಹಕಾರವನ್ನು ಮನಸಾರೆ ನೆನೆಯುವುದು ನನ್ನ ಜವಾಬ್ದಾರಿ. ಸಾಕಷ್ಟು ಅಧ್ಯಯನಮಾಡಿ, ಪುಸ್ತಕಗಳನ್ನು ಬರೆದುಕೊಟ್ಟಿರುವ ಸಮಸ್ತ ಲೇಖಕ–ಲೇಖಕಿಯರಿಗೂ ನನ್ನ ವಿಶ್ವಾಸಪೂರ್ವಕ ವಂದನೆಗಳು.

ಇದೇ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬೇಕು : ಲೇಖಕರಿಗೆ ಕೆಲವು ಸ್ಥೂಲ ಸೂಚನೆಗಳನ್ನು ನೀಡಲಾಗಿತ್ತೇ ಹೊರತು ಅವರ ಸ್ವಾತಂತ್ರ್ಯವನ್ನು ನಿಯಂತ್ರಿಸಲು ಹೋಗಿಲ್ಲ. ಆದ್ದರಿಂದ ಆಯಾ ಪುಸ್ತಕಗಳಲ್ಲಿರುವ ಅಭಿಪ್ರಾಯ

ಗಳು ಆಯಾ ಲೇಖಕರವೇ ಆಗಿರುತ್ತವೆ. ಒಂದು ಸಂತೋಷದ ಸಂಗತಿಯೆಂದರೆ, 'ವಚನ ಚಿಂತನ ಮಾಲೆ'ಯ ಬಹುಪಾಲು ಪುಸ್ತಕಗಳು ಪರಿಚಯಾತ್ಮಕವಷ್ಟೇ ಆಗದೆ, ವಿಶ್ಲೇಷಣಾತ್ಮಕ ಮತ್ತು ತೌಲನಿಕ ಅಧ್ಯಯನದ ಸ್ವರೂಪವನ್ನು ಪಡೆದಿವೆ. ಕೆಲವು ಮಾತ್ರ ವಿವರಣಾತ್ಮಕವಾಗಿ ಇವೆ. ಈ ಮೂಲಕ ವಚನ ಚಳವಳಿಯ ಮುಖ್ಯ ಮಜಲುಗಳ ಚರ್ಚೆಗೆ ಸಕಾರಾತ್ಮಕ ನೆಲೆಯೊಂದು ಲಭ್ಯವಾಗುತ್ತದೆ ಯೆಂದು ನಿರೀಕ್ಷಿಸುತ್ತೇನೆ. ಜೊತೆಗೆ ವಚನ ಚಳವಳಿಯನ್ನು ಕುರಿತ ಚಿಂತನೆಗೆ ಒಂದಿಷ್ಟು ಹೊಸ ವಿಷಯಗಳು ಸೇರ್ಪಡೆಯಾಗುತ್ತವೆಯೆಂದು ನಂಬಿದ್ದೇನೆ.

'ವಚನ ಚಿಂತನ ಮಾಲೆ'ಯ ಪುಸ್ತಕಗಳು ಪ್ರಕಟವಾಗುತ್ತಿರುವ ಈ ಸಂದರ್ಭದಲ್ಲಿ, ವಿಶೇಷವಾಗಿ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ. ಕೆ.ಎಸ್. ರಂಗಪ್ಪನವರ ಸಹಕಾರವನ್ನು ಕೃತಜ್ಞತೆಯಿಂದ ಸ್ಮರಿಸುತ್ತೇನೆ. ಅವರಿಂದ ದೊರೆತ ಆರ್ಥಿಕ ಮತ್ತು ನೈತಿಕ ಬೆಂಬಲ ಅಪರೂಪದ್ದು.

ನಾನು ಈ 'ವಚನ ಚಿಂತನ ಮಾಲೆ'ಯ ಕೆಲಸವನ್ನು ಆರಂಭಿಸಿದಾಗ ಡಾ. ಎನ್. ಎಂ. ತಳವಾರ್ ಅವರು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿದ್ದರು. ಈ ಕೆಲಸ ಮುಗಿದು ಪುಸ್ತಕಗಳು ಬಿಡುಗಡೆಯಾಗುವಾಗ ಪ್ರೊ. ಆರ್. ರಾಮಕೃಷ್ಣ ಅವರು ನಿರ್ದೇಶಕರಾಗಿದ್ದಾರೆ. ಇಬ್ಬರ ಸಹಕಾರಕ್ಕೆ ಸ್ನೇಹಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇನೆ. ಸಂಪಾದಕ ಸಮಿತಿಯಲ್ಲಿದ್ದು ನನ್ನ ಕೆಲಸಗಳನ್ನು ಹಗುರ ಮಾಡಿದ ಆತ್ಮೀಯ ಡಾ. ಜಿ. ಆರ್. ತಿಪ್ಪೇಸ್ವಾಮಿ, ಡಾ. ಎಂ. ನಂಜಯ್ಯ ಹೊಂಗನೂರು ಮತ್ತು ಡಾ. ಲೋಲಾಕ್ಷಿ ಎನ್.ಕೆ. – ಇವರಿಗೆ ಪ್ರೀತಿಪೂರ್ವಕ ಧನ್ಯವಾದಗಳನ್ನು ಹೇಳುತ್ತೇನೆ. ಅಂತೆಯೇ ಸಿಬ್ಬಂದಿ ವರ್ಗದ ಶ್ರೀಮತಿ ಉಷಾ ಮತ್ತು ಇತರರ ಸಹಕಾರ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಾಪಕರ ಸ್ನೇಹ, ವಿದ್ಯಾರ್ಥಿಗಳು ಮತ್ತು ಸಂಶೋಧನಾ ವಿದ್ಯಾರ್ಥಿಗಳು ತೋರಿದ ವಿಶೇಷ ಅಭಿಮಾನ, ಮಾಧ್ಯಮ ಮಿತ್ರರ ಸದಾಶಯ– ಎಲ್ಲವನ್ನೂ ಇಲ್ಲಿ ನೆನೆಯುತ್ತೇನೆ.

ಕಾಲಕ್ಕೆ ಸರಿಯಾಗಿ ವಿಶೇಷ ಆಸ್ಥೆಯಿಂದ ಪುಸ್ತಕಗಳನ್ನು ಮುದ್ರಿಸಿದ ಸ್ವಾನ್ ಪ್ರಿಂಟರ್ಸ್‌ನ ಶ್ರೀ ಎಂ. ಕೃಷ್ಣಮೂರ್ತಿಯವರು ಮತ್ತು ಸಿಬ್ಬಂದಿಯ ಸಹಕಾರ ಯಾವತ್ತೂ ನೆನೆಯುವಂಥದ್ದು. ಡಿ.ಟಿ.ಪಿ. ಮಾಡಿಕೊಟ್ಟ ಶ್ರೀಧರ್

ಅವರಿಗೂ ಆಸ್ಥೆಯಿಂದ ಕರಡನ್ನು ತಿದ್ದಿಕೊಟ್ಟ ಡಾ. ಚಂದ್ರೇಗೌಡ, ಶ್ರೀ ಹರೀಶ್ ಮತ್ತು ಶ್ರೀಮತಿ ವೈ. ಎಸ್. ವಿಜಯಲಕ್ಷ್ಮಿಯವರಿಗೂ ವಂದನೆಗಳು. ಒಟ್ಟಿನಲ್ಲಿ ಸಹಕರಿಸಿದ ಸರ್ವರನ್ನೂ ನೆನೆಯುತ್ತ 'ವಚನ ಚಿಂತನ ಮಾಲೆ'ಯ ಪುಸ್ತಕಗಳನ್ನು ಓದುಗರಿಗೆ ಸಲ್ಲಿಸುತ್ತಿದ್ದೇನೆ. ಓದಿ, ಚರ್ಚಿಸಿ, ಚಿಂತನೆಯನ್ನು ವಿಸ್ತರಿಸಿ ಎಂದು ಓದುಗರಲ್ಲಿ ಕೇಳಿಕೊಳ್ಳುತ್ತೇನೆ.

ಆಗಸ್ಟ್ ೨೦೧೫

–ಪ್ರೊ. ಬರಗೂರು ರಾಮಚಂದ್ರಪ್ಪ
ಪ್ರಧಾನ ಸಂಪಾದಕ

ಲೇಖಕನ ಅರಿಕೆ

ದಶಕಗಳ ಹಿಂದೆಯೇ ವಚನ ಸಾಹಿತ್ಯವನ್ನು ನನ್ನ ಎಂ.ಎ. ತರಗತಿಯಲ್ಲಿ ವಿಶೇಷ ವಿಷಯವಾಗಿ ಅಧ್ಯಯನ ಮಾಡಿದ್ದರೂ, ಕಳೆದ ನಾಲ್ಕು ದಶಕಗಳಿಂದ ಕಾಲೇಜಿನಲ್ಲಿ ವಿವಿಧ ತರಗತಿಗಳಿಗೆ ನಿರಂತರವಾಗಿ ಬೋಧಿಸುತ್ತ ಬಂದಿದ್ದರೂ ಆಗೀಗ ಬರೆದು ಪ್ರಕಟಿಸಿದ ಒಂದೆರಡು ಲೇಖನಗಳನ್ನು ಬಿಟ್ಟರೆ ಆ ಬಗ್ಗೆ ಹೆಚ್ಚಿನ ಬರವಣಿಗೆಯನ್ನೇನೂ ನಾನು ಮಾಡಿರಲಿಲ್ಲ. ಇದೀಗ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ಬಸವ ಆಧ್ಯಯನಪೀಠದ ಸಂದರ್ಶಕ ಪ್ರಾಧ್ಯಾಪಕರಾದ ಡಾ. ಬರಗೂರರ ಪ್ರೀತಿಪೂರ್ವಕವಾದ ಒತ್ತಾಯದ ಕಾರಣವಾಗಿಯೇ, ಎಂದೋ ಆಗೀಗ ಒಂದಿಷ್ಟು ಕಣ್ಣು ಹಾಯಿಸಿದ್ದ ಉರಿಲಿಂಗಪೆದ್ದಿಯ ವಚನಗಳನ್ನು ಇನ್ನಷ್ಟು ಆಳವಾಗಿ ಅಧ್ಯಯನಮಾಡಿ ಈ ಪುಟ್ಟ ಬರಹವನ್ನು ಮಾಡುವ ಸಂದರ್ಭ ಒದಗಿಬಂದಿದೆ. ಡಾ. ಬರಗೂರರು ಮೊದಲಿನಿಂದಲೂ ನನ್ನ ಬರವಣಿಗೆಗೆ ಒಂದು ರೀತಿಯಲ್ಲಿ ಚೋದಕಶಕ್ತಿಯಂತಿರುವವರು. ಹಿಂದೆಯೂ ಅವರ ಒತ್ತಾಯ ಮತ್ತು ಒತ್ತಾಸೆಯ ಕಾರಣವಾಗಿ ನಾನು ಬರವಣಿಗೆ ಮಾಡಿದ್ದಿದೆ. ಸದ್ಯ ಉರಿಲಿಂಗಪೆದ್ದಿ ಕುರಿತ ಈ ಬರಹದ ಒತ್ತಾಸೆಗಾಗಿ ನಾನು ಅವರಿಗೆ ಅತ್ಯಂತ ಋಣಿಯಾಗಿದ್ದೇನೆ. ಉರಿಲಿಂಗಪೆದ್ದಿ ಕುರಿತಾದ ಈ ಬರಹದ ಕೊನೆಗೆ ಅನುಬಂಧವಾಗಿ ಅವನ ಬರಹಗಳಲ್ಲಿ ವಿಪುಲವಾಗಿ ಬರುವ ಮುಖ್ಯವಾದ ಸಂಸ್ಕೃತಶ್ಲೋಕಗಳ ಕನ್ನಡ ಅನುವಾದವನ್ನು ನೀಡಿದ್ದೇನೆ. ಇದರಲ್ಲಿಯ ಕೆಲವೊಂದು ಶ್ಲೋಕಗಳನ್ನು ಅನುವಾದಿಸುವಲ್ಲಿ ನನಗೆ ನೆರವು ನೀಡಿದ ಸಂಸ್ಕೃತ ವಿದ್ವಾಂಸರಾದ ಡಾ. ಜೆ. ಶ್ರೀನಿವಾಸಮೂರ್ತಿಯವರಿಗೆ ನಾನು ಕೃತಜ್ಞ. ಈ ಬರಹ ಸಿದ್ಧಪಡಿಸುವಲ್ಲಿ ನನಗೆ ಅಗತ್ಯವಿದ್ದ ಕೆಲವು ಪುಸ್ತಕಗಳನ್ನು ನೀಡಿದ ಡಾ. ಸಿ. ಯು. ಮಂಜುನಾಥ್, ಡಾ. ಪಿ. ವಿ. ನಾರಾಯಣ ಹಾಗೂ ಶ್ರೀ ಟಿ. ಎಸ್. ದಕ್ಷಿಣಾಮೂರ್ತಿಯವರಿಗೆ ನಾನು ಆಭಾರಿಯಾಗಿದ್ದೇನೆ. ಈ

ಬರಹದ ಕೆಲವು ಭಾಗವನ್ನು ಡಿ.ಟಿ.ಪಿ. ಮಾಡಿಕೊಟ್ಟ ಬೆಂಗಳೂರಿನ ಗಣಕಪರಿಷತ್ತಿನ ಶ್ರೀ ಜಿ. ಎನ್. ನರಸಿಂಹಮೂರ್ತಿ ಮತ್ತು ಅವರ ಸಿಬ್ಬಂದಿಯವರಿಗೂ ನನ್ನ ಕೃತಜ್ಞತೆಗಳು ಸಲ್ಲುತ್ತವೆ, ಇನ್ನು ಇದನ್ನು ಪ್ರಕಟಿಸುತ್ತಿರುವ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ಶ್ರೀ ಬಸವ ಅಧ್ಯಯನ ಪೀಠಕ್ಕೆ ನನ್ನ ವಂದನೆಗಳು.

ಆರ್. ಲಕ್ಷ್ಮೀನಾರಾಯಣ

ಪರಿವಿಡಿ

೧.	ವಚನ ಚಳವಳಿ: ಅದು ತೆರೆದ ಬಿಡುಗಡೆಯ ಹಾದಿ	೨೧
೨.	ಪೆದ್ದಣ್ಣ ಉರಿಲಿಂಗಪೆದ್ದಿಯಾದ ಮಹಾಪವಾಡ	૩೦
૩.	ಉರಿಲಿಂಗಪೆದ್ದಿಯ ವಚನಗಳ ಸಾಮಾನ್ಯ ಸ್ವರೂಪ	೪೦
೪.	ಉರಿಲಿಂಗಪೆದ್ದಿಯ ವಚನಗಳ ಅಂತರಂಗ	೪೫
೫.	ಉರಿಲಿಂಗಪೆದ್ದಿಯ ವಚನಗಳ ಸಾಹಿತ್ಯಗುಣ	೯೬
೬.	ಕಾಳವ್ವೆ	೧೦೪
೭.	ಉರಿಲಿಂಗಪೆದ್ದಿ ಮಠಪರಂಪರೆ	೧೦೮
೮.	ಉಪಸಂಹಾರ	೧೧೦
೯.	ಅನುಬಂಧ–೧ (ಆಯ್ದ ಕೆಲವು ವಚನಗಳ ಅನುಸಂಧಾನ)	೧೧೨
೧೦.	ಅನುಬಂಧ–೨ (ಉರಿಲಿಂಗಪೆದ್ದಿಯ ವಚನಗಳಲ್ಲಿ ಬರುವ ಸಂಸ್ಕೃತ ಶ್ಲೋಕಗಳು ಮತ್ತು ಉಲ್ಲೇಖಗಳ ಕನ್ನಡರೂಪ) ಮತ್ತು ಅಭ್ಯಾಸ ಸೂಚಿ	೧೨೫

೧. ವಚನಚಳವಳಿ: ಅದು ತೆರೆದ ಬಿಡುಗಡೆಯ ಹಾದಿ

ಕನ್ನಡನಾಡಿನಲ್ಲಿ ಹನ್ನೆರಡನೇ ಶತಮಾನದಲ್ಲಿ ತಲೆದೋರಿದ ಸಮಾಜೋ–ಧಾರ್ಮಿಕ ಆಂದೋಲನ ಒಂದು ಅತ್ಯಪೂರ್ವ ಘಟನೆ. ಸಾಮಾಜಿಕವಾಗಿ, ಧಾರ್ಮಿಕವಾಗಿ ರಾಜಕೀಯವಾಗಿ, ಸಾಂಸ್ಕೃತಿಕವಾಗಿ ಸಾಹಿತ್ಯಕವಾಗಿ; ಹೀಗೆ ಯಾವ ದೃಷ್ಟಿಯಿಂದ ನೋಡಿದರೂ ಕನ್ನಡಿಗರು ರೋಮಾಂಚನ ತಾಳಬಹುದಾದ ವಿದ್ಯಮಾನದ ಕಾಲಘಟ್ಟ ಅದು. ವೀರಶೈವಧರ್ಮದ ಉದಯದ ಫಲಸ್ವರೂಪವಾಗಿ ಕಾಣಿಸಿಕೊಂಡ ವಚನಚಳವಳಿ ನಮ್ಮ ದೇಶದ ಮೊತ್ತಮೊದಲ ಜನತಾಚಳವಳಿ ಎಂಬ ಮಾತು ಯಥಾರ್ಥವಾದ್ದು. ಇಂಥದೊಂದು ಜನತಾ ಆಂದೋಲನ ಆವಿರ್ಭವಿಸಿದ್ದಕ್ಕೆ ಕಾರಣೀಭೂತವಾದ್ದು ಅದಕ್ಕೆ ಹಿನ್ನೆಲೆಯಾದ ಅಂದಿನ ಸಾಮಾಜಿಕ ಪರಿಸ್ಥಿತಿ. ದೇಶದ ಪ್ರಧಾನಧಾರೆಯೆನಿಸಿದ ವೈದಿಕ ಧರ್ಮದಲ್ಲಿ ತಾಂಡವವಾಡುತ್ತಿದ್ದ ಸಾಂಪ್ರದಾಯಿಕ ಅಂಧಾನುಕರಣೆಗಳು, ಮತಮೌಢ್ಯಗಳು, ಹುಟ್ಟೇ ಕಾರಣವಾದ ವರ್ಣಾಶ್ರಮವಿಂಗಡಣೆಯ ಫಲಿತವಾದ ಜಾತಿಪದ್ಧತಿಯಿಂದಾಗಿ ಬೇರೂರಿದ್ದ ಅಸಮಾನತೆಯ ಭಾವನೆಗಳು, ಯಜ್ಞಯಾಗಾದಿಗಳ ಆಚರಣೆಯ ಅಂಗವಾಗಿ ಮಾಡಲಾಗುತ್ತಿದ್ದ ಪ್ರಾಣಿಬಲಿ, ಊಳಿಗಮಾನ್ಯ ನಿರಂಕುಶ ಪ್ರಭುತ್ವವು ಅಧಿಕಾರ ಮತ್ತು ಸುಖಲೋಲುಪತೆಯಿಂದ ಜನರ ಮೇಲೆ ಹೇರುತ್ತಿದ್ದ ನಾನಾಬಗೆಯ ತೆರಿಗೆಗಳು, ಇವೆಲ್ಲವೂ ಹೊಸ ಸಮಾಜೋಧಾಮಿಕ ವ್ಯವಸ್ಥೆಯೊಂದಕ್ಕೆ ನೆಲವನ್ನು ಹದಮಾಡಿದ್ದುವು. ಅದರ ಪರಿಣಾಮವೇ ಆಗ ತಲೆದೋರಿದ ವೀರಶೈವಧರ್ಮ.

ಮುಖ್ಯವಾಗಿ ಶಿವನ ಬಗೆಗಿನ ನೈಷ್ಠಿಕ ಭಕ್ತಿಯನ್ನು ತಳಹದಿಯಾಗಿ ಇಟ್ಟುಕೊಂಡು ಒಡಮೂಡಿದ ಈ ಧರ್ಮ ಒಂದೇ ಧರ್ಮವನ್ನು ಆಚರಿಸುವ ಭಕ್ತರಲ್ಲಿ ತಾರತಮ್ಯವಿರುವುದನ್ನು ವಿರೋಧಿಸುವುದರ ಜೊತೆಗೆ ವೈದಿಕಧರ್ಮದ ಯಜ್ಞಯಾಗಾದಿಗಳು, ಬಹುದೇವತಾರಾಧನೆ, ಪ್ರಾಣಿಬಲಿ, ಬ್ರಾಹ್ಮಣರ ಮಡಿವಂತಿಕೆಗಳನ್ನು ವಿರೋಧಿಸುವುದನ್ನು ಒಳಗೊಂಡಿತ್ತು. ವೀರಶೈವಧರ್ಮದ

ಮುಖ್ಯಪ್ರವರ್ತಕರಾದ ಬಸವಣ್ಣನವರಿಗಿಂತ ಮುಂಚೆಯೇ ಆ ಧರ್ಮ ಮತ್ತು ವಚನಕಾರರು ಇದ್ದರೂ ಅದು ಒಂದು ಪ್ರಬಲ ಆಂದೋಲನದ ಸ್ವರೂಪವನ್ನು ಪಡೆದುಕೊಂಡದ್ದು ಬಸವಣ್ಣನವರಿಂದಲೇ ಎಂಬುದನ್ನು ಈಗಾಗಲೇ ಎಲ್ಲ ವಿದ್ವಾಂಸರೂ ಒಪ್ಪಿದ್ದಾರೆ. ಅಷ್ಟು ಬೇಗನೆ ಆ ಕಾಲದ ಎಲ್ಲ ವರ್ಗದ ಜನಸಾಮಾನ್ಯರನ್ನೂ ಒಳಗೊಂಡ ಒಂದು ಜನತಾ ಆಂದೋಲನದ ಸ್ವರೂಪವನ್ನು ಪಡೆದುಕೊಂಡದ್ದು ಅತ್ಯಂತ ವಿಸ್ಮಯದ ಸಂಗತಿಯೇ ಸರಿ. ಅದಕ್ಕೆ ಬಹುಮುಖ್ಯ ಕಾರಣವೆಂದರೆ ವೀರಶೈವಕ್ಕಿಂತ ಹಿಂದಿದ್ದ ಧಾರ್ಮಿಕ ಸಾಮಾಜಿಕ ಕಟ್ಟುಪಾಡುಗಳು ಮತ್ತು ಶೋಷಣೆಯಿಂದ ಜನತೆಗೆ ಉಸಿರು ಕಟ್ಟಿದಂತಾಗಿದ್ದು. ವೀರಶೈವವು ತಲೆದೋರುವುದಕ್ಕಿಂತ ಮೊದಲೇ ಕರ್ನಾಟಕದಲ್ಲಿ ಪ್ರಬಲವಾಗಿದ್ದ ಹಾಗೂ ಅದಕ್ಕಿಂತ ಮುಂಚೆ ಇದ್ದಿರಬಹುದಾಗಿದ್ದ ಜೈನ ಮತು ಬೌದ್ಧ ಧರ್ಮಗಳು ವೈದಿಕಧರ್ಮಕ್ಕೆ ಸವಾಲಾಗಿಯೇ ಪ್ರತಿಭಟನೆಯ ರೂಪದಲ್ಲೇ ಪ್ರಾರಂಭವಾಗಿದ್ದರೂ ಅವುಗಳು ನಿವೃತ್ತಿಪರ ಧರ್ಮಗಳಾಗಿದ್ದ ಕಾರಣ ಜನರನ್ನು ಸೆಳೆಯುವಲ್ಲಿ ಅಷ್ಟು ಯಶಸ್ಸು ಕಂಡಿರಲಿಲ್ಲ. ಅಲ್ಲದೆ ಜೈನಕ್ಕೆ ಅದುವರೆಗೆ ಇದ್ದ ರಾಜಾಶ್ರಯ ತಪ್ಪಿ ಅದು ಇಳಿಮುಖವಾದದ್ದೂ ಕಾರಣವಿರಬೇಕು. ಬ್ರಹ್ಮವೊಂದೇ ಸತ್ಯ, ಜಗತ್ತೆಲ್ಲ ಮಿಥ್ಯೆ ಎಂಬ ಶಂಕರರ ಅದ್ವೈತವಾಗಲಿ, 'ವೀತರಾಗಯ ನಮಃ' ಎನ್ನುತ್ತ ವಿರಕ್ತಿಪರವಾಗಿದ್ದ ಜೈನವಾಗಲಿ ಬೌದ್ಧರ ಶೂನ್ಯವಾದವಾಗಲಿ ತಾತ್ವಿಕವಾಗಿ ಎಷ್ಟೇ ಸಮರ್ಥನೀಯವು ಗಳಾದರೂ ಒಂದಲ್ಲ ಒಂದು ರೀತಿಯಲ್ಲಿ ಆಚರಣೆಗೆ ಅಷ್ಟು ಸುಲಭವಲ್ಲದ ವಾಗಿದ್ದುವು. ಸಾಮಾನ್ಯ ಮನುಷ್ಯನಿಗೆ ಕಣ್ಣಿಗೆ ಕಾಣದ ಅಮೂರ್ತ ಕಲ್ಪನೆಗಳಿಗಿಂತ ಕಣ್ಣೆದುರಿನ ಬದುಕಿನ ಸುಖ ಸಂತೋಷಗಳು ಹೆಚ್ಚೆನಿಸಿದ್ದರೆ ಅದೇನೂ ಆಶ್ಚರ್ಯವಲ್ಲ. "ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟ" ಎಂದು ಹೇಳುತ್ತ ಇಲ್ಲಿ ಸಲ್ಲುವುದಕ್ಕೆ ಬೇಕಾದ್ದನ್ನು ಹೇಳುತ್ತ ಜೀವನಪ್ರೀತಿ ಮೂಡಿಸಿದ್ದೇ ಅಲ್ಲದೆ ಧಾರ್ಮಿಕ ವಿಚಾರಗಳನ್ನು ಅವರುಗಳಿಗೆ ಅರ್ಥವಾಗುವ ಅವರದೇ ಭಾಷೆಯಾದ ಕನ್ನಡದಲ್ಲಿ ಹೇಳಿದಾಗ ಸಹಜವಾಗಿಯೇ ಸಾಮಾನ್ಯರು ವಚನಧರ್ಮದತ್ತ ಆಸಕ್ತಿ ತಾಳಿ ಅದರತ್ತ ಆಸೆಗಣ್ಣಾದದ್ದರಲ್ಲಿ ಆಶ್ಚರ್ಯವೇನೂ ಇಲ್ಲ.

ಎಲ್ಲಕ್ಕಿಂತ ಹೆಚ್ಚಾಗಿ ವಚನಧರ್ಮ/ವೀರಶೈವಧರ್ಮ ಜನಸಮಾನ್ಯರನ್ನು ತನ್ನತ್ತ ಸೆಳೆದದ್ದು ಅಸಮಾನತೆಯನ್ನೇ ತಳಹದಿಯಾಗಿ ಹೊಂದಿದ್ದ ಧರ್ಮಕ್ಕೆ ವಿರುದ್ಧವಾಗಿ ಶಿವನನ್ನು ನಂಬಿದವರೆಲ್ಲ ಒಂದೇ ಕುಲ ಎಂದು ಘಂಟಾಘೋಷವಾಗಿ

ಸಾರಿ ಅದರಂತೆ ಅನುಷ್ಠಾನಕ್ಕೆ ತಂದದ್ದು. "ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಶಿವಭಕ್ತರನೆಲ್ಲ ಒಂದೇ ಎಂಬೆ" ಎಂಬ ಮಾತು ಜಾತೀಯ ಅಸಮಾನತೆ ಹಾಗೂ ತಿರಸ್ಕಾರಗಳಿಂದ ಸ್ವಾಭಿಮಾನಕ್ಕೆ ಎರವಾಗಿ ಅಪಮಾನಕ್ಕೆ ಗುರಿಯಾಗಿದ್ದ ಬಹುಸಂಖ್ಯಾತ ಜನವರ್ಗದವರಿಗೆ ಒಮ್ಮೆಲೇ ಬಿಡುಗಡೆಯ ಮುಕ್ತದ್ವಾರವನ್ನು ತೆರೆದ ಮಂತ್ರವಾಗಿ ವೀರಶೈವಧರ್ಮ ಅಂಥವರ ಪಾಲಿಗೆ ಒಂದು ಗೌರವಪೂರ್ಣ-ವಾದ ಅಸ್ಮಿತೆಯನ್ನು ತಂದುಕೊಟ್ಟ ಧರ್ಮವಾಯಿತು. ಜಾತಿಬೆಂತರದಿಂದ ಜೈನವೂ ಪೂರ್ತಿ ಮುಕ್ತವಾಗಿಲ್ಲದ್ದರಿಂದ ಜೈನ ಧರ್ಮಕ್ಕೆ ಧರ್ಮಾಂತರಗೊಂಡವರನ್ನೂ ಜಾತಿ ಬೆಂಬಿಡದ ಭೂತವಾಗಿ ಕಾಡುತಿದ್ದು ಅಲ್ಲೂ ಇದೇ ವರ್ಣಾಶ್ರಮ ವ್ಯವಸ್ಥೆಯ ಕಟ್ಟುಪಾಡುಗಳೇ ಮುಂದುವರಿದಿದ್ದುವು. ಇಂಥ ಪರಿಸ್ಥಿತಿಯಲ್ಲಿ ಎಲ್ಲ ಜಾತಿಜನವರ್ಗಗಳಿಗೆ ವೀರಶೈವಧರ್ಮದ್ದು ಸದಾ ತೆರೆದ ಬಾಗಿಲಾಯಿತು. ಹದಿನೆಂಟು ಜಾತಿ ಕುಲವರ್ಗಗಳು ತೊಲಗಿ ಶಿವನನ್ನು ನಂಬಿದವರೆಲ್ಲ ಒಂದೇ ಕುಲ ಎಂದಾಯಿತು. ಎಸ್. ವಿ. ಪರಮೇಶ್ವರಭಟ್ಟರ ಮಾತಿನಲ್ಲಿ ಹೇಳುವುದಾದರೆ 'ಬಸವಣ್ಣನವರು ಕುಲಗಳನ್ನು ಅಳಿಸಿ ಕುಲವನ್ನು ಕೊಟ್ಟರು.' ಸಾವಿರಾರು ವರ್ಷಗಳಿಂದ ಶ್ರೇಣೀಕೃತ ಸಮಾಜದ ಅಸಮಾನತೆಯ ಬಲಿಪಶುಗಳಾಗಿ ಕಂಗೆಟ್ಟಿದ್ದ ಜನರಲ್ಲಿ ಶಿವನನ್ನು ನಂಬಿದವರೆಲ್ಲ ಒಂದೇ ಕುಲ ಎಂಬ ಮಾತು ಸಂಜೀವಿನಿಯಂತೆ ಕೆಲಸ ಮಾಡಿತು. ಉಚ್ಚ ವರ್ಗದಿಂದ ಬಂದಿದ್ದ ಬಸವಣ್ಣನವರ–

೧. ಸೆಟ್ಟಿಯೆಂಬೆನೆ ಸಿರಿಯಾಳನ? ಮಡಿವಾಳನೆಂಬೆನೆ ಮಾಚಯ್ಯನ?
   ಡೋಹಾರನೆಂಬೆನೆ ಕಕ್ಕಯ್ಯನ? ಮಾದರನೆಂಬೆನೆ ಚನ್ನಯ್ಯನ?
   ಆನು ಹಾರುವನೆಂದಡೆ ಕೂಡಲಸಂಗಯ್ಯ ನಗುವನಯ್ಯಾ – ಹಾಗೂ

೨. ಚೆನ್ನಯ್ಯನ ಮನೆಯ ದಾಸನ ಮಗನು
   ಕಕ್ಕಯ್ಯನ ಮನೆಯ ದಾಸಿಯ ಮಗಳು
   ಇವರಿಬ್ಬರು ಹೊಲದಲು ಬೆರಣಿಗೆ ಹೋಗಿ ಸಂಗವ ಮಾಡಿದರು.
   ಇವರಿಬ್ಬರಿಗೆ ಹುಟ್ಟಿದ ಮಗ ನಾನು
   ಕೂಡಲಸಂಗಮದೇವ ಸಾಕ್ಷಿಯಾಗಿ

ಎಂಬ ಅಪವರ್ಗೀಕರಣದ ವಚನಗಳು ಎಲ್ಲ ಕೆಳವರ್ಗದ ಜನತೆಯಲ್ಲಿ ಅದರಲ್ಲೂ ಮುಖ್ಯವಾಗಿ ದಲಿತ ಜನವರ್ಗದವರಲ್ಲಿ ಅಪಾರ ಭರವಸೆಯನ್ನು ಹುಟ್ಟಿಸಿದವು.

ಎಲ್ಲರ ಜೊತೆ ಹೆಗಲಿಗೆ ಹೆಗಲುಹಾಕಿ "ನಾವು ಸಮ ನಿಮಗೆಂದು" ಹೆಜ್ಜೆ ಹಾಕುತ್ತ ಸಮಾನತೆಯ ತತ್ವದಡಿಯಲ್ಲಿ ಒಂದಾಗುತ್ತೇವೆಂಬುದೇ ಒಂದು ರೋಮಾಂಚನವನ್ನು ಉಂಟುಮಾಡುವಂಥದಾಗಿತ್ತು. ಹಾಗಾಗಿ ಸಮಾಜದಲ್ಲಿ ಅತ್ಯಂತ ಕೀಳೆಂದು ಕಡೆಗಣಿಸಲ್ಪಟ್ಟವರೂ ಅತ್ಯಂತ ಉನ್ನತ ಸ್ತರದವರೊಂದಿಗೆ ಬೆರೆಯಲು, ತಮ್ಮ ಕೀಳ್ತನದ ಪೊರೆಯನ್ನು ಕಳಚಲು ಮುಕ್ತ ಅವಕಾಶ ನೀಡಿದ್ದು ಅತ್ಯಂತ ಅಸಾಮಾನ್ಯ ಸಂಗತಿಯೆನಿಸಿತು. ಹೀಗಾಗಿ ಜಾತೀಯ ಅಸಮಾನತೆ, ಮಡಿವಂತಿಕೆ, ಶೋಷಣೆ, ಕೀಳರಿಮೆಗಳಿಂದ ಜಡ್ಡುಗಟ್ಟಿದ್ದ ಸಮಾಜದಲ್ಲಿ ಈ ಬದಲಾವಣೆ ತಂದ ಚಲನಶೀಲತೆ ಅಂಥಿಂಥದಲ್ಲ. ಒಂದು ಲೆಕ್ಕಕ್ಕೆ ಬಸವಣ್ಣವರ ಈ ಸುಧಾರಣೆ ಆಮೂಲಾಗ್ರವಾಗಿ ಇಡೀ ಸಮಾಜದ ಸುಧಾರಣೆಯಲ್ಲ. ಲಿಂಗದೀಕ್ಷೆ ಹೊಂದಿ ಶಿವಭಕ್ತರಾಗಿ ಬಂದವರಲ್ಲಿ ಜಾತಿಯನ್ನೆಣಿಸುವುದಿಲ್ಲ ಎಂಬಷ್ಟರಮಟ್ಟಿಗೆ ಅದು ಮಿತಿ ಉಳ್ಳದ್ದು. ಅದು ಶಿವಸಂಸ್ಕೃತಿಯ ರೂಪದಲ್ಲಿ ಬಂದಿತು.* ಭಕ್ತರಲ್ಲದ ಭವಿಗಳ ವಿಷಯಕ್ಕೆ ವಚನಕಾರರದು ದಿವ್ಯನಿರ್ಲಕ್ಷ್ಯ. ಅವರ ಗೊಡವೆ ಇವರಿಗಿಲ್ಲ. ಇದು ಅಷ್ಟಕ್ಕೇ ನಿಲ್ಲದೆ ಭವಿಗಳಾದವರನ್ನು ಕುರಿತ ನಿಂದೆ, ತಿರಸ್ಕಾರ, ಅವರ ದೈವಗಳ ಬಗೆಗಿನ ನಿಂದೆಗೂ ಹೋದದ್ದು ವೀರಶೈವದ ಒಂದು ಋಣಾತ್ಮಕವಾದ ಅಂಶವೇ ಆದರೂ ವೀರಶೈವಕ್ಕೆ ಬಂದ ಎಲ್ಲ ಜಾತಿ ಜನವರ್ಗಗಳ ನಡುವೆ ಸಮಾನತೆ ಸಾಧಿಸುವ ನಿಟ್ಟಿನಲ್ಲಿ ಅವರ ಹಿಂದಿನ ಕುಲಗಳನ್ನು ಪರಿಗಣಿಸದೆ ಅಂತರ್ ಜಾತೀಯ ವಿವಾಹಕ್ಕೂ ಮುಂದಾದದ್ದು ಮಾತ್ರ ಅತ್ಯಂತ ಕ್ರಾಂತಿಕಾರಕವಾದ ಹೆಜ್ಜೆ. ಒಟ್ಟಾರೆ ಸಾವಿರಾರು ವರ್ಷಗಳಿಂದ ಹುಟ್ಟಿನ ಕಾರಣ ದಿಂದಾಗಿಯೇ ಕೀಳೆಂದು ಪರಿಗಣಿತವಾಗಿ ಎಲ್ಲ ರೀತಿಯ ಸಂಕಷ್ಟ ಅವಮಾನಗಳಿಗೆ ಗುರಿಯಾಗಿದ್ದ ದಲಿತರಿಗೆ ಒಂದು ಗೌರವಪೂರ್ಣವಾದ ಅಸ್ಮಿತೆಯನ್ನು ತಂದುಕೊಟ್ಟು ಅವರಲ್ಲಿ ಎಲ್ಲಿಲ್ಲದ ಆತ್ಮವಿಶ್ವಾಸವನ್ನು ತುಂಬಿ ಮೇಲರಿಮೆಯನ್ನು ಉಂಟುಮಾಡಿದ್ದರ ಜೊತೆಗೆ ಅವರಿಗೆ ಶ್ರೇಷ್ಠ ವರ್ಣದವರಿಗೆ ಮಾತ್ರ ಸಾಧ್ಯವಿದ್ದ ಆಧ್ಯಾತ್ಮದ ಹಾದಿಯನ್ನು ಮುಕ್ತಗೊಳಿಸಿದ್ದು ವೀರಶೈವದ ಬಹುದೊಡ್ಡ ಸಾಧನೆ.

ವೀರಶೈವಧರ್ಮ ಪ್ರತಿಪಾದಿಸಿದ 'ಕಾಯಕ ತತ್ವ' ಅದನ್ನೊಪ್ಪಿ ಬಂದವರಿಗೆ ಇನ್ನೊಂದು ರೀತಿಯಲ್ಲಿ ಬಿಡುಗಡೆಯ ಹಾದಿಯನ್ನು ತೆರೆಯಿತು. ವೃತ್ತಿಗಳಲ್ಲಿನ ಮೇಲು-ಕೀಳು ಭಾವನೆಯೇ ಭಾರತೀಯ ಸಮಾಜದ ಜಾತಿಗಳಲ್ಲಿ ತಾರತಮ್ಯಕ್ಕೆ

---

* ವಿವರಗಳಿಗೆ: ಬರಗೂರು ರಾಮಚಂದ್ರಪ್ಪ, ಸಂಸ್ಕೃತಿ, ಶ್ರಮ ಮತ್ತು ಸೃಜನಶೀಲತೆ, ಪು. ೨೦೫.

ಕಾರಣವಾದದ್ದು ಈಗಾಗಲೇ ಇತಿಹಾಸ. ಬ್ರಾಹ್ಮಣ, ಕ್ಷತ್ರಿಯ ವೈಶ್ಯ, ಶೂದ್ರಗಳೆಂಬ ವರ್ಣಾಶ್ರಮ ವಿಭಜನೆಯೊಂದಿಗೇ ವೃತ್ತಿಗಳೂ ನಿರ್ಧರಿತವಾಗಿಬಿಟ್ಟಿದ್ದರಿಂದ ಮುಂದೆ ವಿವಿಧ ದೈಹಿಕಶ್ರಮವನ್ನಾಶ್ರಯಿಸಿದ ವೃತ್ತಿಗಳದೇ ಒಂದೊಂದು ಜಾತಿಯಾದದ್ದರ ಜೊತೆಗೆ ಅವಕ್ಕೆ ಪಾವಿತ್ರ್ಯದ ಭಾವನೆಯೂ ತಳುಕುಹಾಕಿಕೊಂಡಿತು. ಉಪಜೀವನಕ್ಕಾಗಿ ನಡೆಸುವ ವೃತ್ತಿಗಳು ಇವಾದ್ದರಿಂದ ಇವುಗಳಲ್ಲಿ ತರತಮ ಸಲ್ಲದೆಂದು ಭಾವಿಸಿದ ವಚನಕಾರರು ಈ ಎಲ್ಲ ವೃತ್ತಿಗಳೂ ಸಮಾನವೆಂದು ಸಾರಿದರು. ಮತ್ತು ಅವನ್ನು ಪ್ರಾಮಾಣಿಕತೆಯಿಂದ ಗೌರವಭಾವನೆಯಿಂದ ಮಾಡಬೇಕೆಂದರು. "ಕಾಯಕವೇ ಕೈಲಾಸ" ವೆಂದು ಸಾರುವ ಮೂಲಕ ಅದು ಯಾವ ಬಗೆಯ ಕಾಯಕವೇ ಆದರೂ ಶ್ರೇಷ್ಠವೆಂದೇ ಘೋಷಿಸಿದರು. ಕಾಯಕದಿಂದಲೇ ಮುಕ್ತಿ ಎಂದರು. ಕಾಯಕಕ್ಕೆ ಕೊಟ್ಟ ವ್ಯಾಖ್ಯೆ "ಕಾಯಕವೆಂಬುದು ತನುಮನ ಬಳಲಿಸಿ ತಂದು ದಾಸೋಹವ ಮಾಡುವುದು" (ನುಲಿಯ ಚಂದಯ್ಯ). ಈ ದುಡಿಮೆ ಐಹಿಕ ಬದುಕಿನ ಸಾಧನವಷ್ಟೇ ಅಲ್ಲದೆ ಆಧ್ಯಾತ್ಮಿಕ ಸಾಧನೆಗೂ ಸಾಧನವೆಂದರು– "ಕಾಯ ಕಾಯಕವ ಮಾಡುತ್ತಿರಲು ಮನವು ಲಿಂಗದಲ್ಲಿ ಬೆರೆಸಿ ತೆರಹಿಲ್ಲದಿಪ್ಪ ಮಡಿವಾಳನ ಪರಿಯ ನೋಡಾ". ಅದು ಬರಿಯ ಕಾಯಕವಲ್ಲ; ಸತ್ಯಶುದ್ಧಕಾಯಕ. ಸಾಮಾನ್ಯರು ಹೋಗಲಿ, ವೀರಶೈವದ ಅತ್ಯನ್ನತ ಶ್ರದ್ಧಾಕೇಂದ್ರಗಳಾದ ಗುರು, ಲಿಂಗ, ಜಂಗಮರಿಗೂ ಕಾಯಕದಿಂದ ವಿನಾಯಿತಿಯಿಲ್ಲ. "ಗುರುವಾದರೂ ಕಾಯಕದಿಂದಲೇ ಜೀವನ್ಮುಕ್ತಿ, ಲಿಂಗವಾದರೂ ಕಾಯಕದಿಂದಲೇ ಶಿಲೆಯ ಕುರುಹು ಹರಿವುದು. ಜಂಗಮವಾದರೂ ಕಾಯಕದಿಂದಲೆ ವೇಷಪಾಶ ಹರಿವುದು (ನುಲಿಯ ಚಂದಯ್ಯ) ಎಂದು ಹೇಳಿದ್ದರಲ್ಲಿ ಕಾಯಕದ ಮಹತ್ವ ಎಷ್ಟೆಂಬುದು ವೇದ್ಯವಾಗುತ್ತದೆ. ಕಾಯಕ ಎಷ್ಟು ಮಹತ್ವದ್ದೆಂದರೆ "ಕಾಯಕದಲ್ಲಿ ನಿರತನಾದಡೆ ಗುರುದರ್ಶನವಾದರೂ ಮರೆಯಬೇಕು, ಲಿಂಗಪೂಜೆಯಾದರೂ ಮರೆಯಬೇಕು"(ಆಯ್ದಕ್ಕಿ ಮಾರಯ್ಯ). ರಾಘವಾಂಕನ ಸಿದ್ಧರಾಮಚರಿತೆಯಲ್ಲಿ ಸಿದ್ಧರಾಮ ಹೇಳುವುದು ಕೂಡ "ಶಿವಯೋಗಿಯ ಶರೀರಂ ವೃಥಾ ಸವೆಯಲಾಗದು, ಅನುಗೊಂಬನಿತು ಕಾಯಕಂ ನಡೆಯುತಿರಬೇಕು" ಎಂದು. ಕಾಯಕದಿಂದಲೇ ಶರಣರನ್ನು ಗುರುತಿಸುವ ಮಟ್ಟಿಗೆ ಅದು ಅವಿನಾಭಾವಸಂಬಂಧ ಹೊಂದಿತು. ಮಡಿವಾಳ ಮಾಚಯ್ಯ, ಅಂಬಿಗರ ಚೌಡಯ್ಯ, ನುಲಿಯ ಚಂದಯ್ಯ, ಜೇಡರ ದಾಸಿಮಯ್ಯ, ಮೋಳಿಗೆ ಮಾರಯ್ಯ, ತುರುಗಾಹಿ ರಾಮಣ್ಣ, ಕಲಕೇತಯ್ಯ –ಇವು ಕೆಲವು ಹೆಸರುಗಳು ಮಾತ್ರ. ದೇವರು,

ಮೋಕ್ಷ, ಆಧ್ಯಾತ್ಮಿಕ ಸಾಧನೆಗಳೆಲ್ಲವೂ ಶ್ರೇಷ್ಠರಾದ ಮೇಲ್ವರ್ಗದವರಿಗಷ್ಟೇ ಎಂಬಂಥ ಪರಿಸ್ಥಿತಿಯಿದ್ದಾಗ ಅವು ತೀರ ಕೆಳಗಿನವರುಗಳಲ್ಲಿ ಕೆಳಗಿನವರನ್ನೂ ಒಳಗೊಂಡಂತೆ ಎಲ್ಲರಿಗೂ ಇರುವಂಥವು ಅಷ್ಟೇ ಅಲ್ಲ, ಅದು ಅವರ ಹಕ್ಕು ಎಂದು ಸಾರಿ ಅವುಗಳ ಗಳಿಕೆಗೆ ಕಾಯಕ ತತ್ವದ ಮೂಲಕ ಮಾರ್ಗವನ್ನು ತೋರಿಸಿದ್ದು ವೀರಶೈವ. "ಕೃತ್ಯಕಾಯಕವಿಲ್ಲದವರು ಭಕ್ತರಲ್ಲ, ಸತ್ಯಶುದ್ಧವಿಲ್ಲದುದು ಕಾಯಕವಲ್ಲ" ಎಂದು ಉರಿಲಿಂಗಪೆದ್ದಿಯ ಪತ್ನಿಯಾದ ದಲಿತ ಶರಣೆ ಕಾಳವ್ವೆ ನಿರ್ವಚಿಸುವಷ್ಟು ಮಟ್ಟಿಗೆ ಅದು ತುದಿಯಿಂದ ಹಿಡಿದು ಕೆಳಗಿನವರೆಗೆ ಎಲ್ಲರನ್ನೂ ಒಳಗೊಳ್ಳುವ ಬಿಡುಗಡೆಯ ಧರ್ಮವಾಯಿತು.

> "ಕಾಸಿಕಮ್ಮಾರನಾದ, ಬೀಸಿ ಮಡಿವಾಳನಾದ
> ಹಾಸನಿಕ್ಕಿ ಸಾಲಿಗನಾದ, ವೇದವನೋದಿ ಹಾರುವನಾದ
> ಕರ್ಣದಲ್ಲಿ ಜನಿಯಿಸಿದವರುಂಟೆ?"

ಎಂದು ಬಸವಣ್ಣ ಹೇಳುವಾಗ ಕಾಯಕದಿಂದ ಜಾತಿ ಗುರುತಿಸಿದರೂ ಅದು ಅವರಲ್ಲಿ ಮೇಲು-ಕೀಳೆಂಬ ಭೇದಭಾವಕ್ಕೆ ಬುನಾದಿಯಾಗಬಾರದೆಂಬ ಧೋರಣೆ ಇದೆ. ಗಂಗಮ್ಮನೆಂಬ ಸಾಮಾನ್ಯ ಶರಣೆ ಪ್ರಕಟವಾಗಿಯೇ "ಆವ ಕಾಯಕ ಮಾಡಿದಡೂ ಒಂದೇ ಕಾಯಕವಯ್ಯಾ. ಆವ ವ್ರತವಾದರೂ ಒಂದೇ ವ್ರತವಯ್ಯಾ" ಎಂದು ಘೋಷಿಸುವಷ್ಟರಮಟ್ಟಿಗೆ ಅದು ಪಾವಿತ್ರ್ಯತೆಯನ್ನು ಒಳಗೊಂಡಿತ್ತು. ಒಟ್ಟಾರೆ ಆಧ್ಯಾತ್ಮಿಕತೆ ಇಲ್ಲವೆ ಧಾರ್ಮಿಕತೆಯನ್ನು ನೆಲೆಯಾಗುಳ್ಳ ಕಾಯಕ ತತ್ವ ಹೆಚ್ಚು ಅರ್ಥವಂತಿಕೆ ಪಡೆದುಕೊಂಡಿತು.

ವಚನ ಚಳವಳಿ ಇನ್ನೆರಡು ಪಾತಳಿಗಳಲ್ಲೂ ಬಿಡುಗಡೆಯ ಹಾದಿಯನ್ನು ತೆರೆಯಿತು. ಮೊದಲನೆಯದಾಗಿ ಹೆಣ್ಣಿಗೆ ಪೂರ್ಣರೂಪದಲ್ಲಿ ಧಾರ್ಮಿಕ ಸ್ವಾತಂತ್ರ್ಯವನ್ನು ನೀಡುವ ಮೂಲಕ ಆಧ್ಯಾತ್ಮದ ಹಾದಿಯನ್ನು ಮುಕ್ತಗೊಳಿಸಿತು. ವೈದಿಕ ಧರ್ಮದಲ್ಲಿ ಗಂಡಿನ ನೆರಳಾಗಿ ಕೈಗೊಳ್ಳುವ ವ್ರತ ನೇಮ ಇತ್ಯಾದಿಗಳನ್ನು ಹೊರತುಪಡಿಸಿದರೆ ಆಧ್ಯಾತ್ಮಿಕ ಅಥವಾ ಧಾರ್ಮಿಕಸ್ವಾತಂತ್ರ್ಯವೆಂಬುದು ಇಲ್ಲವೇ ಇಲ್ಲ. ಜೈನಧರ್ಮದಲ್ಲೂ ಗಂಡಿನ ಜನ್ಮ ತಾಳಿಯೇ ಕೇವಲಜ್ಞಾನಿಯಾಗಲು, ತೀರ್ಥಂಕರನಾಗಲು ಸಾಧ್ಯ. ಆದರೆ ವೀರಶೈವದಲ್ಲಿ ಗಂಡಿಗೆ ಸಮನಾದ ಧಾರ್ಮಿಕ ಮತ್ತು ಆಧ್ಯಾತ್ಮಿಕ ಸ್ವಾತಂತ್ರ್ಯವನ್ನು ವಚನಚಳವಳಿ ಕೊಟ್ಟಿತು.

"ಮೊಲೆ ಮುಡಿ ಬಂದರೆ ಹೆಣ್ಣೆಂಬರು,
ಗಡ್ಡಮೀಸೆ ಬಂದರೆ ಗಂಡೆಂಬರು
ನಡುವೆ ಸುಳಿವಾತ್ಮನು ಗಂಡೂ ಅಲ್ಲ ಹೆಣ್ಣೂ ಅಲ್ಲ
ಕಾಣಾ ರಾಮನಾಥಾ"

ಎಂಬ ವಚನದಲ್ಲಿ ಗಂಡಿಗೂ ಹೆಣ್ಣಿಗೂ ಇರುವ ವ್ಯತ್ಯಾಸವೇನಿದ್ದರೂ ಜೈವಿಕವಾದದ್ದು ಎಂದು ದಾಸಿಮಯ್ಯನು ಸಾರಿದ. ಇನ್ನೂ ಹಲವರು ವಚನಕಾರರೂ ಇದನ್ನು ಸ್ಪಷ್ಟಪಡಿಸಿದ್ದಾರೆ ಮತ್ತು ಹೆಚ್ಚುಕಡಿಮೆ ಇದೇ ಮಾತುಗಳನ್ನೇ ಪುನರುಚ್ಚರಿಸಿದ್ದಾರೆ. ಹೆಣ್ಣು ಈ ವಿಷಯದಲ್ಲಿ ಗಂಡಿಗೆ ಸಮಾನಳೆಂಬುದೇ ಅವರ ನಿಲುವು. ಅದೇ ದಾಸಿಮಯ್ಯನೇ

"ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ
ಸತಿಪತಿಗಳೊಂದಾಗದವನ ಭಕ್ತಿ ಅಮೃತದೊಳು ವಿಷಬೆರೆದಂತೆ
ಕಾಣಾ ರಾಮನಾಥಾ"

ಎಂದು ಸಾರುವ ಮೂಲಕ ಆಧ್ಯಾತ್ಮ ಸಾಧನೆಗೆ ಹೆಣ್ಣು ಯಾವ ರೀತಿಯಲ್ಲೂ ಒಂದು ತೊಡಕಲ್ಲ ಎಂದು ಘೋಷಿಸಿದ. ಹೆಣ್ಣಿನ ಆಧ್ಯಾತ್ಮಿಕ ಸಾಧನೆಗೆ ಅಡಚಣೆ ಗಳೆಂದು, ಹೊಲೆಯೆಂದು ಸಾಂಪ್ರದಾಯಿಕವಾಗಿ ನಂಬಲಾಗಿದ್ದ ಜನನ ಸೂತಕ ಮತ್ತು ರಜಸ್ಸೂತಕಗಳನ್ನು ಹೊಲೆಯಲ್ಲವೆಂದು ಶರಣರು ಘೋಷಿಸಿದರು. ಶರಣರು ಯಾರೂ ಆಧ್ಯಾತ್ಮ ಸಾಧನೆಗಾಗಿ ಸಂಸಾರ ಪರಿತ್ಯಾಗ ಮಾಡಿದವರಲ್ಲ. ಸಂಸಾರವೆಂಬುದು ಬಂಧನವಲ್ಲ; ಅದು ಅತ್ಯಂತ ಸಹಜವಾದ್ದು ಎಂಬುದೇ ಅವರ ನಿಲುವು. ಸ್ವತಃ ಉರಿಲಿಂಗ ಪೆದ್ದಿಯೇ ಸಂಸಾರದಲ್ಲಿದ್ದೇ ಆಧ್ಯಾತ್ಮ ಸಾಧನೆ ಸಾಧ್ಯವೆಂದು ಕೆಳಗಿನ ವಚನದಲ್ಲಿ ಮನಕ್ಕೆ ನಾಟುವಂತೆ ಹೇಳಿದ್ದಾನೆ–

ಹೊನ್ನಬಿಟ್ಟು ಹೆಣ್ಣಬಿಟ್ಟು ಮಣ್ಣಬಿಟ್ಟು ಬ್ರಹ್ಮಚಾರಿಗಳಾಗಬೇಕೆಂದು
ನುಡಿವ ಅಣ್ಣಗಳ ಪರಿಯ ನೋಡಿರೇ
ಹೆಣ್ಣ ಬಿಟ್ಟಡೆಯೂ ಹೊನ್ನ ಬಿಡರಿ
ಹೊನ್ನ ಬಿಟ್ಟಡೆಯೂ ಮಣ್ಣ ಬಿಡರಿ
ಒಂದ ಬಿಟ್ಟಡೆಯೂ ಒಂದ ಬಿಡರಿ
ಬ್ರಹ್ಮಚಾರಿಗಳೆಂತಪ್ಪಿರಿ ಹೇಳಿರಣ್ಣಾ?

ಹೆಣ್ಣಬಿಟ್ಟು ಬ್ರಹ್ಮಚಾರಿಗಳಾಗಬೇಕೆಂದು ಅವರೆಂತು ಹೇಳಿದರು?
ನಿವೆಂತು ಕೇಳಿದಿರಿ? ಹೆಣ್ಣನು ಹೆಣ್ಣೆಂದರಿವಿರಿ
ಹೊನ್ನನು ಹೊನ್ನೆಂದರಿವಿರಿ ಮಣ್ಣನು ಮಣ್ಣೆಂದರಿವಿರಿ,
ಬ್ರಹ್ಮಚಾರಿಗಳೆಂತಪ್ಪಿರಣ್ಣಾ?
ಬಿಟ್ಟಡೆ ಹೆಣ್ಣು, ಹೊನ್ನು ಮಣ್ಣು ಈ ಮೂರನೂ ಬಿಟ್ಟು
ನಿರಾಭಾರಿ ಜಂಗಮನಾಗಿ ಸುಳಿದಡೆ ಭವಂ ನಾಸ್ತಿ ತಪ್ಪದು.
ಹಿಡಿದಡೆ ಹೆಣ್ಣು ಹೊನ್ನು ಮಣ್ಣು ಈ ಮೂರನೂ ಹಿಡಿದು
ಗುರು, ಲಿಂಗ ಜಂಗಮಕ್ಕೆ ಸದ್ಭಕ್ತಿಯಿಂ ದಾಸೋಹವ ಮಾಡಬಲ್ಲಡೆ
ಭವಂ ನಾಸ್ತಿ ತಪ್ಪದು........
ಅಲ್ಲಿ ಇದ್ದಡೆಯೂ ನೀರತಾವರೆಯಂತಿಪ್ಪರು
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ ನಿಮ್ಮ ಶರಣರು.

ಹೀಗೆ ಸ್ತ್ರೀ ಸಮಾನತೆಯನ್ನು ಪುರಸ್ಕರಿಸಿ ಸಂಸಾರ ಜೀವನದಲ್ಲಿದ್ದುಕೊಂಡೇ ಆಧ್ಯಾತ್ಮಸಾಧನೆ ಸಾಧ್ಯವೆಂದು ಹೇಳಿದ್ದರ ಫಲವಾಗಿ ಇಡೀ ಕರ್ನಾಟಕದಲ್ಲಿ, ಅಷ್ಟೇ ಏಕೆ ಇಡೀ ಭಾರತದಲ್ಲಿ ಮೊತ್ತಮೊದಲ ಬಾರಿಗೆ ಅಷ್ಟೊಂದು ಸಂಖ್ಯೆಯಲ್ಲಿ ಸ್ತ್ರೀಯರು ಅದರಲ್ಲೂ ಅತ್ಯಂತ ಕೆಳವರ್ಗದವರೆಂದು ಪರಿಗಣಿತರಾದ ದಲಿತ–ಹಿಂದುಳಿದ ವರ್ಗದ ಸ್ತ್ರೀಯರು ಆಧ್ಯಾತ್ಮಸಾಧನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡದ್ದೇ ಅಲ್ಲದೆ ತಮ್ಮ ಆಧ್ಯಾತ್ಮಿಕ ಅನುಭವಗಳಿಗೆ ತಮ್ಮ ಭಾಷೆಯಾದ ಕನ್ನಡದಲ್ಲಿ ಅತ್ಯಂತ ಅರ್ಥಪೂರ್ಣ ವಾಗಿ ಅಭಿವ್ಯಕ್ತಿಯನ್ನು ನೀಡಿದರು. ಬಸವಣ್ಣನವರ ಪತ್ನಿ ನೀಲಾಂಬಿಕೆಯಿಂದ ಮೊದಲುಗೊಂಡು ಅಕ್ಕಮಹಾದೇವಿ, ಅಕ್ಕಮ್ಮ, ಆಯ್ದಕ್ಕಿ ಲಕ್ಕಮ್ಮ, ಮುಕ್ತಾಯಕ್ಕ, ಸೂಳೆ ಸಂಕವ್ವ, ಅಮುಗೆ ರಾಯಮ್ಮ, ಉರಿಲಿಂಗಪೆದ್ದಿಯ ಪತ್ನಿ ಕಾಳವ್ವೆಯವರೆಗೆ ಅಸಂಖ್ಯಾತ ಮಹಿಳೆಯರು ಹೀಗೆ ಆಧ್ಯಾತ್ಮ ಸಾಧನೆಯಲ್ಲಿ ತೊಡಗಿಸಿಕೊಂಡು ವಚನಗಳನ್ನು ರಚಿಸಿದರೆಂಬುದು ಸಾಮಾನ್ಯವಾದ ಸಂಗತಿಯಲ್ಲ.

ಒಟ್ಟಾರೆ ಹೇಳಬೇಕೆಂದರೆ ಮಡಿಮೈಲಿಗೆ, ಮೇಲು, ಕೀಳು, ಜಾತಿ, ಲಿಂಗಗಳ ಭೇದವೆಣಿಸದೆ ಎಲ್ಲ ಮನುಷ್ಯರಿಗೆ ಧರ್ಮವನ್ನು ಮುಕ್ತಗೊಳಿಸಿ ಬಿಡುಗಡೆಯ ಹಾದಿಯನ್ನು ತೆರೆದು, ಮೇಲ್ವರ್ಗದವರ ಶ್ರೇಷ್ಠತೆಯನ್ನು ತಿರಸ್ಕರಿಸಿ ಅವರಿಗೆ ಪ್ರಬಲ ಪ್ರತಿಭಟನೆಯನ್ನೊಡ್ಡುವ ಮೂಲಕ ಉರಿಲಿಂಗಪೆದ್ದಿಯಂಥ ಒಬ್ಬ ದಲಿತ

ಶರಣನಾಗಲು ಸಾಧ್ಯವಾದದ್ದು ಮಾತ್ರವಲ್ಲದೆ ಸಕಲಶಾಸ್ತ್ರಪಾರಂಗತನಾಗಿ ಮಠಾಧಿಪತಿಯಾಗಿ ಗುರುಪೀಠವನ್ನಲಂಕರಿಸಿ ತನ್ನ ಆಧ್ಯಾತ್ಮಿಕ ಅನುಭವಗಳನ್ನು ಅತ್ಯಂತ ಸಮರ್ಥವಾದ ರೀತಿಯಲ್ಲಿ ತನ್ನ ನುಡಿಯಲ್ಲಿ ಅಭಿವ್ಯಕ್ತಗೊಳಿಸಲು ಸಾಧ್ಯವಾಗುವಂತೆ ಮಾಡಿದ ವಚನ ಚಳವಳಿ ನಿಶ್ಚಯವಾಗಿಯೂ ಭಾರತದ ಧಾರ್ಮಿಕ ಮತ್ತು ಆಧ್ಯಾತ್ಮಿಕ ಚರಿತ್ರೆಯಯಲ್ಲೊಂದು ವಿನೂತನ ಅಧ್ಯಾಯವನ್ನು ತೆರೆಯಿತೆನ್ನುವುದರಲ್ಲಿ ಯಾವುದೇ ಸಂಶಯವಿಲ್ಲ.

೨. ಪೆದ್ದಣ್ಣ ಉರಿಲಿಂಗಪೆದ್ದಿಯಾದ ಮಹಾಪವಾಡ

ನಮ್ಮ ದೇಶ ಪವಾಡಗಳಿಗೆ ಹೆಸರಾದ ದೇಶ. ಬಾಬಾಗಳು, ಸನ್ಯಾಸಿಗಳು ಯೋಗಿಗಳು ದೇವಪುರುಷರು ಇವರೆಲ್ಲ ನಂಬಲೂ ಸಾಧ್ಯವಿಲ್ಲದ ಅನೇಕ ಪವಾಡಗಳನ್ನು ನಡೆಸಿದರೆಂಬ ದಂತಕಥೆಗಳು, ಐತಿಹ್ಯಗಳಿಂದ ಭಾರತೀಯ ಧಾರ್ಮಿಕ ಇತಿಹಾಸ ಇಡಿಕಿರಿದಿದೆ. ಅದು ಎಷ್ಟರಮಟ್ಟಿಗೆ ಎಂದರೆ ಪವಾಡದ ಕತೆಗಳಿಲ್ಲದ ಸನ್ಯಾಸಿ, ಮಹಾಂತರಿಲ್ಲ. ಅಥವಾ ಒಂದಾದರೂ ಪವಾಡ ಮಾಡದಿದ್ದರೆ ಅವನು ಮಹಂತನೇ ಅಲ್ಲ, ಮಹಿಮಾವಂತನೆ ಅಲ್ಲ ಸಿದ್ದಪುರುಷನೂ ಅಲ್ಲ ಎನ್ನುವ ಮಟ್ಟಿಗೆ ಪವಾಡವು ಧಾರ್ಮಿಕಪುರುಷರ ಹೆಸರಿನೊಂದಿಗೆ ತಳುಕು ಹಾಕಿಕೊಂಡುಬಿಟ್ಟಿದೆ. ಕ್ರಿಶ್ಚಿಯನ್ ಧರ್ಮದಲ್ಲಿ ಕೂಡ ಇಂದಿಗೂ ಒಬ್ಬ ಪಾದ್ರಿಯನ್ನು ಸಂತನೆಂದು/ಸಂತಳೆಂದು ಘೋಷಿಸಬೇಕಾದರೆ ಒಂದಾದರೂ ಪವಾಡ ನಡೆಸಿದ ಬಗ್ಗೆ ಉಲ್ಲೇಖವಿರಬೇಕೆಂದು ಹೇಳುತ್ತಾರೆ. ಸಿದ್ಧರಾಮ, ಬಸವಣ್ಣ ಮೊದಲಾದ ಶರಣರು ಕೂಡ ಹಲವಾರು ಪವಾಡಗಳನ್ನು ನಡೆಸಿದ ಬಗ್ಗೆ ರೋಚಕ ಕಥೆಗಳಂತೂ ಇವೆ. ಆದರೆ ನಿಜಜೀವನದಲ್ಲಿ ನಡೆದೊಂದು ಸತ್ಯಸಂಗತಿಯೇ ಪವಾಡವನ್ನೂ ಮೀರಿಸಿದ ಪವಾಡವಾಗಿರುವುದು ಉರಿಲಿಂಗಪೆದ್ದಿಯ ಬದುಕಿನ ಸಂದರ್ಭದಲ್ಲಿ. ಅದೃಶ್ಯಕವಿಯ 'ಪ್ರೌಢದೇವರಾಯ ಕಾವ್ಯ(ಸು.೧೫೨೫)' ಶಾಂತಲಿಂಗದೇಶಿಕನ 'ಭೈರವೇಶ್ವರಕಾವ್ಯದ ಕಥಾಮಣಿ ಸೂತ್ರರತ್ನಾಕರ' (ಸು.೧೬೭೨)ಗಳಲ್ಲಿ ಮತ್ತು ಬಸವರಾಜನ 'ಉರಿಲಿಂಗಪೆದ್ದಯ್ಯನ ಕಥೆ( )'ಎಂಬ ಹಸ್ತಪ್ರತಿಯಲ್ಲಿ ಉರಿಲಿಂಗಪೆದ್ದಿಯ ಬದುಕಿಗೆ ಸಂಬಂಧಪಟ್ಟ ಕೆಲವು ವಿವರಗಳು ಉಕ್ತವಾಗಿವೆ.

ಅದರ ಪ್ರಕಾರ ಉರಿಲಿಂಗದೇವನೆಂಬ ಮಹಾನ್ ಶಿವಶರಣ ಮಹಾರಾಷ್ಟ್ರದ ನಾಂಥೇಡ್ ಜಿಲ್ಲೆಯ ಆವಸೆ ಕಂಧಹಾರ್(ಕಾಂಧಾರ್)ನಲ್ಲಿಯ ನಲ್ಲೂರಿ ಮಠದ ಸ್ವಾಮಿಯಾಗಿದ್ದನು. ಕೆಲವರು ಅಭಿಪ್ರಾಯಪಟ್ಟಿರುವಂತೆ ಅದು ಬಿಜಾಪುರ ಜಿಲ್ಲೆಯ ನಂದವಾಡಗಿ ಗ್ರಾಮ. ಅಲ್ಲಿ ಉರಿಲಿಂಗದೇವ ಉರಿಲಿಂಗಪೆದ್ದಿ ಇಬ್ಬರ

ಗದ್ದುಗೆಗಳೂ ಒಂದು ಕೆರೆಯೂ ಇದೆ ಎಂದು ತಿಳಿದುಬಂದಿದೆ. ಆ ಕೆರೆಯನ್ನು ಕಟ್ಟಿಸಿದವನು ಅಲ್ಲಿ ಹಿಂದೆ ದೊರೆಯಾಗಿದ್ದ ನಂದರಾಜನೆನ್ನುತ್ತಾರೆ. ಶಿವಲೆಂಕಮಂಚಣ್ಣನೆಂಬ ಮಹಾಪಂಡಿತನ ಮಗನಾದ ಉರಿಲಿಂಗದೇವನು ಸ್ವತಃ ಒಬ್ಬ ದೊಡ್ಡವಿದ್ವಾಂಸ, ಮಹಾಭಕ್ತ. ಕ್ರಾಂತಿಕಾರಿ ಮನೋಭಾವದ ನೇರ ನಡೆ ನುಡಿಯ ಶರಣ. ನಾಂಧೇಡ್ ಜಿಲ್ಲೆಯ ಆವಸೆ ಕಂಧಾರದಲ್ಲಿಯ ಶ್ರೀಮಠದ ಗುರು. ಉರಿಲಿಂಗದೇವರ ಮಹಿಮೆಗೆ ಮಾರುಹೋದ ನಂದರಾಜನು ಮಠವನ್ನು ಕಟ್ಟಿಸಿದ್ದನೆಂದು ಪ್ರತೀತಿ. 'ಶರಣಸತಿ ಲಿಂಗಪತಿ' ಭಾವದ ಸಾಧಕನಾದ ಈ ಶರಣ ಪೂಜಾಕಾಲದಲ್ಲಿ ಸ್ತ್ರೀಯಂತೆ ವೇಷಧರಿಸಿ ಧ್ಯಾನಮಗ್ನನಾಗಿ ಲಿಂಗವನ್ನು ಪತಿ ಎಂದು ಭಾವಿಸಿ ಮೈಮರೆತು ಪೂಜೆ ಸಲ್ಲಿಸುತ್ತಿದ್ದನಂತೆ. ಆತನ ವಚನಗಳಲ್ಲಿ ಮಧುರಭಾವದ ಉತ್ಕಟಭಕ್ತಿ ಕೆನೆಗಟ್ಟಿದೆ. ನಿದರ್ಶನಕ್ಕೆ ಇವನ್ನು ನೋಡಬಹುದು:

> **ಈ ನಲ್ಲನ ಬೇಟದ ಕೂಟದ ಪರಿಯನು**
> **ಏನೆಂದು ಹೇಳುವೆ? ವಿಪರೀತ ಕೆಳದಿ**
> **ಪುರುಷ ಶಕ್ತಿಯಾಗಿ ಶಕ್ತಿ ಪುರುಷನಾಗಿ**
> **ನೆರೆದು ಸುಖಿಸುವೆನು ಹೇಳಾ ಕೆಳದಿ**
> **ಅತಿಕಾಮಿ ವಿಪರೀತನು ಉರಿಲಿಂಗದೇವನು**
> **ನೆರೆಯಲು ನೆರೆವುದು ಮನದಿಚ್ಛೆ ಕೆಳದಿ**

(ವ. ಸಂ.೧೦.ಸಂ.ವ.ಸಂ ಪುಟ.೩೮೭

ಉರಿಲಿಂಗದೇವನು ಕಲ್ಯಾಣಕ್ಕೆ ಆಗಾಗ್ಗೆ ಹೋಗಿಬರುತ್ತಿದ್ದು ಅಲ್ಲಿ ಬಸವಾದಿಗಳು ಕೈಗೊಂಡಿದ್ದ ಕ್ರಾಂತಿಕಾರಕ ಚಟುವಟಿಕೆಗಳ ನಿಕಟ ಪರಿಚಯವಿದ್ದ ವ್ಯಕ್ತಿಯಾಗಿದ್ದಿರಬೇಕು. ಅದೃಶ್ಯಕವಿ ಹೇಳಿರುವಂತೆ "ಏಳ್ನೂರು ಶಿಷ್ಯರನ್ನು ಪಡೆದಿದ್ದ" ಈ ಮಹಂತನು

> **ಭವಭಕ್ತವೃಂದಕ್ಕೆ ವೀರಶೈವೋಪದೇ**
> **ಶವನೀವುದಕ್ಕೆ ತಾವೇ ಗುರುಗಳಾಗಿರುತ**
> **ಭವದ ಬೇರಂ ಕಿತ್ತು ಧರಣಿಯೊಳ್ ಮೆರೆವುತ್ತ ಇದ್ದವನು.**

ಇಂಥ ಗುರುವಿನಲ್ಲಿ ಭಕ್ತಿಭಾವಹೊಂದಿದ್ದ ನಂದವಾಡಗಿಯ ಸೂರಯ್ಯ ನೆಂಬೊಬ್ಬ ಭಕ್ತನು ಉರಿಲಿಂಗದೇವನಿಂದ ಲಿಂಗದೀಕ್ಷೆ ಪಡೆಯಲಿಚ್ಛಿಸಿ ಅವನನ್ನು

ಕೇಳಿಕೊಳ್ಳುತ್ತಾನೆ. ಸೂರಯ್ಯನು ಅಂಥ ದೀಕ್ಷೆಗೆ ಅರ್ಹನೆಂದು ಅರಿತಿದ್ದ ಉರಿಲಿಂಗದೇವನು ದೀಕ್ಷೆ ಕೊಡಲೊಪ್ಪಿ ಅವನ ಆಹ್ವಾನದಂತೆ ಭಕ್ತನ ಮನೆಗೆ ಹೋಗುತ್ತಾನೆ.

ಸೂರಯ್ಯನ ಮನೆಯಲ್ಲಿ ಅಂದು ವಿಶೇಷ ಸಂಭ್ರಮ ಸಡಗರ. ದೀಕ್ಷಾವಿಧಿಗೆ ಅಗತ್ಯವಾದ ಪರಿಕರಗಳು ಮತ್ತು ಸಕಲ ಸಿದ್ಧತೆಗಳೊಂದಿಗೆ ಪರಿವಾರಸಮೇತನಾಗಿ ಸೂರಯ್ಯ ಮುಹೂರ್ತವನ್ನು ಎದುರುನೋಡುತ್ತಿದ್ದಾನೆ. ಗುರುವೂ ಮಡಿವುಟ್ಟು ಗದ್ದುಗೆಯನ್ನೇರಿ ಕುಳಿತಿದ್ದಾನೆ. ಆ ಸಂದರ್ಭದಲ್ಲೇ ಅನಿರೀಕ್ಷಿತವಾದೊಂದು ಘಟನೆ ನಡೆದುಬಿಟ್ಟಿತು.

ಅದೇ ಊರಿನಲ್ಲಿ ಅಸ್ಪೃಶ್ಯ ಜಾತಿಗೆ ಸೇರಿದ ಪೆದ್ದಣ್ಣನೆಂಬುವನು ತನ್ನ ಹೆಂಡತಿ ಕಾಳವ್ವೆಯೊಂದಿಗೆ ಸಂಸಾರಮಾಡಿಕೊಂಡಿದ್ದನು. ಬಡವನಾದ ಪೆದ್ದಣ್ಣನು ತನ್ನ ಉಪಜೀವನಕ್ಕೆ ಕಳ್ಳತನವನ್ನು ಅವಲಂಬಿಸಿ ಅಲ್ಲಲ್ಲಿ ಮಾಡಿದ ಚೋರ ಕೃತ್ಯಗಳಿಂದ ಜೀವನ ಸಾಗಿಸುತ್ತಿದ್ದನು. ಉರಿಲಿಂಗಪೆದ್ದಿಯ ಜೀವನ ಕುರಿತ ಹಸ್ತಪ್ರತಿಯಲ್ಲಿ ಕಳ್ಳತನದ ಪ್ರಸ್ತಾಪವಿಲ್ಲ. ಬದಲಿಗೆ ಕಟ್ಟಿಗೆ ಮಾರಿ ಜೀವಿಸುತ್ತಿದ್ದನೆಂದು ಹೇಳಿದೆ. ಬಹುಶಃ ಕಟ್ಟಿಗೆ ಮಾರಾಟದಿಂದ ಬಂದ ಹಣ ಸಾಲದಿದ್ದಾಗ ಕಳ್ಳತನಕ್ಕೆ ಕೈಹಾಕುತ್ತಿದ್ದಿರಬೇಕು. ಸೂರಯ್ಯನ ಮನೆಯ ಸಡಗರ ಸಂಭ್ರಮಗಳನ್ನು ನೋಡಿದ್ದ ಪೆದ್ದಿಯು ಅಲ್ಲಿಯ ವಸ್ತು ದ್ರವ್ಯಗಳನ್ನು ಕದಿಯುವ ಉದ್ದೇಶದಿಂದ ಸೂರಯ್ಯನ ಮನೆಯ ಮಾಳಿಗೆ ಏರಿ ಬೆಳಕಿಂಡಿಯಿಂದ ಒಳಗಿಳಿಯುವ ಯತ್ನದಲ್ಲಿ ಅದರಬಳಿ ಕುಳಿತಿದ್ದನು. ಕೆಳಗೆ ದೇವರಮನೆಯಲ್ಲಿ ಏರ್ಪಾಟಾಗಿದ್ದ ದೀಕ್ಷಾ ಕಾರ್ಯಕ್ರಮವನ್ನು ಉತ್ಸುಕತೆಯಿಂದ ನೋಡುತ್ತಿದ್ದನು. ಅಷ್ಟುಹೊತ್ತಿಗೆ ಉರಿಲಿಂಗದೇವನು ಅಂಗೈಯಲ್ಲಿ ಲಿಂಗವನ್ನಿರಿಸಿಕೊಂಡು ಶರಣಸತಿ-ಲಿಂಗಪತಿಭಾವಕ್ಕೆ ತಕ್ಕ ವೇಷ ಧರಿಸಿ ಆ ಸಂಬಂಧವಾದ ಸ್ತೋತ್ರಗಳನ್ನೂ ವಚನಗಳನ್ನೂ ಹೇಳುತ್ತ

ಶಿಷ್ಯನ ಮಸ್ತಕದ ಮೇಲೆ ಕೈಯಿಟ್ಟು ಪಂಚಾಕ್ಷರೀ ಮಂತ್ರೋಪದೇಶ ಸಹಿತವಾಗಿ ಇಷ್ಟಲಿಂಗ ಪ್ರಾಣಲಿಂಗ ಭಾವಲಿಂಗಗಳ ನೆಲೆ ಕಳೆಗಳನ್ನು ತಿಳಿಸಿಕೊಟ್ಟು ಲಿಂಗದೀಕ್ಷೆಯಿತ್ತನು.

ಈ ಎಲ್ಲ ದೀಕ್ಷಾವಿಧಿಗಳನ್ನು ಬೆಳಕಿಂಡಿಯಿಂದ ನೋಡುತ್ತಿದ್ದ ಪೆದ್ದಣ್ಣನಿಗೆ ಅದು ಮುಕ್ತಾಯದ ಹಂತಕ್ಕೆ ಬರುತ್ತಿದ್ದಂತೆ ತನ್ನ ಹೃದಯದಲ್ಲಿ ಪರಿವರ್ತನೆ ಉಂಟಾಗಿ ಕಳ್ಳತನಮಾಡಬೇಕೆಂದಿದ್ದ ಅಳಿಯಾಸೆ ತೊಲಗಿ ಭಕ್ತಿಭಾವ ಉದಿಸಿ

ಹೇಗಾದರೂ ಸರಿ ತಾನೂ ಅದೇ ಗುರುವಿನಿಂದ ಲಿಂಗದೀಕ್ಷೆ ಪಡೆಯಲೇಬೇಕೆಂಬ ಒತ್ತಾಸೆ ಮೂಡುತ್ತದೆ. ಆ ಗಳಿಗೆಯಿಂದ ಅವನ ರೀತಿಯೇ ಬದಲಾಗುತ್ತದೆ. ಅಂದಿನಿಂದ ಕಳ್ಳತನ ತ್ಯಜಿಸಿ ಕಟ್ಟಿಗೆಕಾಯಕದಿಂದಲೇ ಜೀವಿಸತೊಡಗಿದನು. ಶ್ವಪಚನೆನಿಸಿ ಅಸ್ಪೃಶ್ಯಜಾತಿಗೆ ಸೇರಿದ್ದರಿಂದಲೋ ಏನೋ ತಾನಾಗಿ ಹೋಗಿ ದೀಕ್ಷೆಕೊಡಿರೆಂದು ಕೇಳುವ ಧೈರ್ಯವಾಗಲಿಲ್ಲ. ಅದಕ್ಕಾಗಿ ಗುರುವಿನ ಗಮನ ಸೆಳೆಯಲು ಒಂದು ಉಪಾಯಹೂಡಿದನು. ಅದೇಂದರೆ ಪ್ರತಿನಿತ್ಯ ಉರಿಲಿಂಗದೇವರ ಮಠಕ್ಕೆ ಕಟ್ಟಿಗೆ ಹೊರೆಯನ್ನು ತೆಗೆದುಕೊಂಡುಹೋಗಿ ಯಾರಿಗೂ ಗೊತ್ತಾಗದಂತೆ ಮಠದಲ್ಲಿ ಹಾಕಿ ಬಂದುಬಿಡುತ್ತಿದ್ದನು. ಇದು ಅವನು ನಡೆಸುತ್ತಿದ್ದ ಸತ್ಯಶುದ್ಧಕಾಯಕ. ಕಟ್ಟಿಗೆಗಳು ದಿನವೂ ಬಂದುಬೀಳುತ್ತಿದ್ದುದನ್ನು ಕಂಡು ವಿಸ್ಮಿತನಾದ ಉರಿಲಿಂಗದೇವ ಇದನ್ನು ತಂದುಹಾಕುತ್ತಿದ್ದವನನ್ನು ಪತ್ತೆಮಾಡಬೇಕೆಂದು ಒಂದು ದಿನ ತಾನೇ ಕಾದಿದ್ದು ಪೆದ್ದಣ್ಣನನ್ನು ಪತ್ತೆಹಚ್ಚಿದನು. ಪೆದ್ದಣ್ಣನು ನಮಸ್ಕರಿಸಿದನು. ಗುರುವು ಕಟ್ಟಿಗೆಗೆ ಬೆಲೆ ತೆಗೆದುಕೊಂಡುಹೋಗಲು ಒತ್ತಾಯಿಸಿದನು. ಆಗ ಪೆದ್ದಣ್ಣನು ತನ್ನ ವೃತ್ತಾಂತವನ್ನೆಲ್ಲ ಹೇಳಿ ತನಗೆ ಹಣ ಬೇಡವೆಂದೂ ನಂದವಾಡದ ಭಕ್ತನಿಗೆ ದಯಪಾಲಿಸಿದಂತೆ ತನಗೂ ಲಿಂಗದೀಕ್ಷೆ ನೀಡಬೇಕೆಂದು ಬೇಡಿಕೊಂಡನು. ಅವನ ಪೂರ್ವೋತ್ತರಗಳನೆಲ್ಲ ಅವನಿಂದ ಕೇಳಿದ್ದ ಗುರು

> **"ಯಾವ ಮಾತಿದು ನೀನು ಶ್ವಪಚಿಗ**
> **ನಾವು ಲಿಂಗವಕೊಟ್ಟಿರುಂಟೆಲೊ**
> **ಗಾವಳಿಗ ನೀನತ್ತ ಸಾರೆಲೊ ಹಾಗಮಂ ಕೊಂಡು"**(ಉ. ಪೆ. ಕಥೆ)

ಎಂದು ಹೊರಟುಹೋಗುವಂತೆ ಹೇಳಿ ಮುನ್ನಡೆದನು. ಆದರೆ ಪೆದ್ದಣ್ಣನು ಹಣ ತೆಗೆದುಕೊಳ್ಳದೆ ಮುನ್ನಿನಂತೆಯೇ ಮಠಕ್ಕೆ ಕಟ್ಟಿಗೆ ತಂದುಹಾಕುವುದನ್ನು ಮುಂದುವರೆಸಿದನು. ತನಗೆ ದೀಕ್ಷೆ ನೀಡಬೇಕೆಂದು ಉರಿಲಿಂಗದೇವ ಕಂಡಾಗಲೆಲ್ಲ ಯಾಚಿಸುತ್ತಿದ್ದನು. ಆದರೆ ಇವನ ಈ ದೀಕ್ಷಾನಿಷ್ಠೆ ಎಷ್ಟು ದೃಢ ಎಂಬುದನ್ನು ಒರೆಹಚ್ಚಲೋ ಎಂಬಂತೆ ಗುರು ಅವನ ಕೋರಿಕೆಯನ್ನು ನಿರ್ಲಕ್ಷಿಸುತ್ತಲೇ ಹೋದನು. 'ನಮ್ಮಂಥವರಿಗೆ ಗುರುಗಳು ಲಿಂಗ ದೀಕ್ಷೆ ನೀಡುವುದುಂಟೆ ಈ ಆಸೆ ಬಿಟ್ಟುಬಿಡು' ಎಂಬ ಹೆಂಡತಿಯ ಮಾತನ್ನೂ ಕಿವಿಗೆ ಹಾಕಿಕೊಳ್ಳದೆ ಸುಮಾರು ಹನ್ನೆರಡು ವರ್ಷದತನಕ ಈ ಮೋಳಿಗೆ ಸೇವೆಯನ್ನು ಮುಂದುವರೆಸಿದನೆಂದು ಉರಿಲಿಂಗ ಪೆದ್ದಯ್ಯನ ಕಥೆಯ ಹಸ್ತಪ್ರತಿ ತಿಳಿಸುತ್ತದೆ. ಹಗಲೆಲ್ಲ ಹೆಂಡತಿಯ ಮಾತಿನಿಂದ

ಬೇಸತಿದ್ದ ಪೆದ್ದಣ್ಣ ಒಂದು ದಿನ ಗುರು ಸಂಚಾರಕ್ಕೆ ಹೊರಟಿದ್ದ ಸಮಯದಲ್ಲಿ ಎದುರಾಗಿ ತನಗೆ ಲಿಂಗದೀಕ್ಷೆ ಕೊಡಲೇಬೇಕೆಂದು ಬಹಳವಾಗಿ ಕಾಡಿದನು. ಉರಿಲಿಂಗದೇವನು ಇದರಿಂದ ರೋಸಿಹೋಗಿ ಸಿಟ್ಟುಮಾಡಿಕೊಂಡು ಅಲ್ಲೇ ಬಿದ್ದಿದ್ದ ಒಂದು ಕಲ್ಲನ್ನು ಕೈಯಲ್ಲಿ ಹಿಡಿದು "ಘೇ ದಗಡಿ ಜಾ" ಎಂದು ಹೇಳಿ ಕೊಟ್ಟು ಅವನನ್ನು ಕಳಿಸಿಬಿಟ್ಟನು. ಡಾ. ಚಿದಾನಂದಮೂರ್ತಿಯವರು[೧] ಮತ್ತು ಡಾ. ಪಿ.ವಿ. ನಾರಾಯಣ[೨] ಅವರು ಊಹಿಸುವಂತೆ ಉರಿಲಿಂಗದೇವ ಹೇಳಿದ (ತಗೋ ಕಲ್ಲು. ತೊಲಗು) ಮಾತು ಮೂಲತಃ ಕನ್ನಡದಲ್ಲೇ ಇದ್ದು ಭೈರವೇಶ್ವರಕಾವ್ಯ ಹುಟ್ಟುವ ಕಾಲಕ್ಕೆ ನಾಂಧೇಡ್ ಜಿಲ್ಲೆ ಮರಾಠಿ ಪ್ರಭಾವಕ್ಕೆ ಒಳಗಾದ ಪರಿಣಾಮವಾಗಿ ಆತ ಈ ಮಾತು ಬಳಸಿರಬಹುದು. ಪೆದ್ದಣ್ಣನು ವಿಧೇಯ ಶಿಷ್ಯನಂತೆ ಭಯಭಕ್ತಿಯಿಂದ ಆ ಕಲ್ಲನ್ನೇ ತೆಗೆದುಕೊಂಡುಬಂದು ಪೂಜಿಸತೊಡಗಿದನು. 'ಘೇ ಜಾ ದಗಡಿಜಾ' ಎಂಬುದನ್ನೇ ಮಂತ್ರವಾಗಿ ಪಠಿಸತೊಡಗಿದನು. ಅವನ ಪೂಜಾ ಭಕ್ತಿನಿಷ್ಠೆಗಳಿಂದಾಗಿ ಆ ಕಲ್ಲೇ ಅವನ ಪಾಲಿಗೆ ಜ್ಯೋತಿರ್ಲಿಂಗವಾಯಿತು. ಹೆಂಡತಿಗೂ ಗುರು ಕರುಣಿಸಿದ ಲಿಂಗವೆಂದು ಹೇಳಿ ನಂಬಿಸಲು ಯತ್ನಿಸಿದ. ಆದರೆ ಅವಳು ಅದು ಲಿಂಗವೆಂದು ಒಪ್ಪದೆ "ಗುರುಗಳು ನಮ್ಮಂಥವರಿಗೆ ಲಿಂಗ ಕೊಡಲು ಸಾಧ್ಯವೇ ಇಲ್ಲ, ಇದು ಕಲ್ಲು" ಎಂದು ಹೀಯಾಳಿಸಲು 'ಇದನ್ನು ಕಲ್ಲೆಂದು ಕಡೆಗಣಿಸಬೇಡ, ಇದೇ ಸಾಕ್ಷಾತ್ ಮಲ್ಲಿಕಾರ್ಜುನಮೂರ್ತಿ , ನನ್ನ ಕೈಗೆ ಪ್ರಾಪ್ತವಾಗಿದೆ . ನೀನು ಕೂಡ ಶುಚಿರ್ಭೂತಳಾಗು" ಎಂದು ಅವಳನ್ನೂ ಅಣಿಗೊಳಿಸಿ ಗುರುವಿನಿಂದ ದೊರೆತ ಕಲ್ಲನ್ನೇ ಲಿಂಗವೆಂದು ತಿಳಿದು ಗದ್ದುಗೆಯ ಮೇಲಿರಿಸಿ ಗುರುವಿನ ಬಾಯಿಂದ ಬಂದ ಮಾತುಗಳನ್ನೇ ಮಂತ್ರವೆಂದು ಭಾವಿಸಿ ಪಠಿಸುತ್ತ ಧ್ಯಾನಸ್ಥನಾಗುತ್ತಾನೆ. ಪೆದ್ದಣ್ಣನ ಈ ಲಿಂಗನಿಷ್ಠೆ, ಪೂಜೆ ಸನ್ನಡತೆಗಳು ಊರೆಲ್ಲ ಸುದ್ದಿಯಾಯಿತು. ಇವನ ಈ ಶ್ರದ್ಧೆ ಭಕ್ತಿಗಳನ್ನು ನಿಕಷಕ್ಕೆ ಒಡ್ಡುವಂಥ ಒಂದು ಘಟನೆ ನಡೆಯಿತು.

ಆ ಊರಿನ ಅರಸನಾದ ನಂದರಾಜನು ಬರದ ಬೀಡಾಗಿದ್ದ ಊರಿನ ಜಲಕ್ಷಾಮವನ್ನು ಹಿಂಗಿಸಲು ಒಂದು ಕೆರೆಯನ್ನು ತೋಡಿಸಲಾರಂಭಿಸುತ್ತಾನೆ.

---

೧. ಎಂ. ಚಿದಾನಂದಮೂರ್ತಿ: ಉರಿಲಿಂಗಪೆದ್ದಿ, ವಚನಕಾರರು: ವ್ಯಕ್ತಿ ಹಾಗೂ ಅಭಿವ್ಯಕ್ತಿ: ಪು. ೨೨೩

೨. ಪಿ. ವಿ. ನಾರಾಯಣ: ಉರಿಲಿಂಗಪೆದ್ದಿ–ಕಾಳವ್ವೆ, ಪು. ೮

ಕೆರೆಯ ಮಧ್ಯದಲ್ಲಿ ಒಂದು ದೊಡ್ಡ ಹಾಸುಬಂಡೆ ಅಡ್ಡವಾಗಿ ನೀರು ಬೀಳಲಿಲ್ಲ. ತಿಳಿದವರನ್ನು ವಿಚಾರಿಸಲು ಆ ಹಾಸುಬಂಡೆಯನ್ನು ತೆಗೆಸಿದರೆ ನೀರು ಒಸರುವುದೆಂದರು. ಆದರೆ ಅದು ಅಸಾಧ್ಯವೆನಿಸಿ ದೊರೆಯು ಉರಿಲಿಂಗದೇವನನ್ನು ಅರಮನೆಗೆ ಕರೆಸಿಕೊಂಡು ಈ ತೊಂದರೆಯನ್ನು ನಿವಾರಿಸಿ ಜಲವೊಸರುವಂತೆ ಮಾಡಬೇಕೆಂದು ಕೇಳಿಕೊಂಡನು. ಆಗಲಿ ಎಂದುಹೇಳಿ ಮಠಕ್ಕೆ ಹಿಂತಿರುಗುವ ಹಾದಿಯಲ್ಲಿ ಎದುರಾಗಿ ನಮಸ್ಕರಿಸಿದ ಪೆದ್ದಣ್ಣನಿಗೆ ಉರಿಲಿಂಗದೇವನು ರಾಜನು ತನಗೆ ಸಲ್ಲಿಸಿದ್ದ ಕೋರಿಕೆಯ ವಿಷಯವನ್ನು ತಿಳಿಸುತ್ತಾನೆ. ಇದು ತನಗೆ ಗುರುಸೇವೆ ಸಲ್ಲಿಸಲು ದೊರೆತ ಅವಕಾಶವೆಂದು ಭಾವಿಸಿ ಬಹಳ ಸಂತೋಷದಿಂದ ಆ ಕೆಲಸಕ್ಕೆ ಮುಂದಾಗುತ್ತಾನೆ. ಪೆದ್ದಣ್ಣ ಕೆರೆಯ ಹತ್ತಿರಕ್ಕೆ ಬಂದು ಗುರುಸ್ಮರಣೆಮಾಡುತ್ತ ತಾನು ಪೂಜಿಸುತ್ತಿದ್ದ, ಗುರು ನೀಡಿದ್ದ ಲಿಂಗವನ್ನು ಕುರಿತು 'ಫೇ ದಗಡಿ ಜಾ" ಎಂಬ ಮಂತ್ರವನ್ನು ಉಚ್ಚರಿಸಲು ಅದು ಹೋಗಿ ಹಾಸುಗಲ್ಲನ್ನು ಭೇದಿಸಿ ಪುಡಿಪುಡಿಮಾಡಿತು. ಕೂಡಲೇ ಆ ಜಾಗದಿಂದ ನೀರು ಚಿಲುಮೆಯಾಗಿ ಚಿಮ್ಮಿ ಕೆರೆ ತುಂಬಿಕೊಂಡಿತು. ಈ ಸುದ್ದಿತಿಳಿದ ಗುರುವಂತೂ ತುಂಬ ಸಂತುಷ್ಟನಾಗುತ್ತಾನೆ. ಗುರು ಮೊದಲುಗೊಂಡು ಊರವರೆಲ್ಲ ಪೆದ್ದಣ್ಣನ ಭಕ್ತಿಯನ್ನು ಹಾಡಿಹೊಗಳುತ್ತಾರೆ. ದೊರೆಯು ಗುರುಶಿಷ್ಯರಿಬ್ಬರನ್ನೂ ಸನ್ಮಾನಿಸುತ್ತಾನೆ. ಈ ಒಂದು ಪ್ರಸಂಗದಿಂದ ಪೆದ್ದಣ್ಣ ಅತ್ಯಂತ ಯಶೋವಂತನಾದ.

ಇದರ ಪರಿಣಾಮವಾಗಿ ಪೆದ್ದಣ್ಣನು ಲಿಂಗದೀಕ್ಷೆಗೆ ಅತ್ಯಂತ ಅರ್ಹನೆಂದು ಮನವರಿಕೆಯಾದ ಉರಿಲಿಂಗದೇವನು ಇನ್ನು ಇವನನ್ನು ಸತಾಯಿಸಬಾರದೆಂದು ಪೆದ್ದಣ್ಣನಿಗೂ ಅವನ ಹೆಂಡತಿ ಕಾಳವ್ವೆ ಇಬ್ಬರಿಗೂ ಲಿಂಗದೀಕ್ಷೆ ನೀಡಿ ಇಷ್ಟಲಿಂಗವನ್ನನುಗ್ರಹಿಸುತ್ತಾನೆ. ಇದಕ್ಕೆ ಉರಿಲಿಂಗದೇವನಿಗೆ ಬಸವಾದಿಗಳಿಂದಲೇ ಮಾರ್ಗದರ್ಶನ ದೊರೆತಿರಬೇಕು. ಹರಳಯ್ಯ ಶಿವನಾಗಮಯ್ಯ ಮುಂತಾದವರೆಲ್ಲ ಲಿಂಗದೀಕ್ಷೆ ಸ್ವೀಕರಿಸಿ ಶರಣರಾದ ನಿದರ್ಶನವಿದ್ದೇ ಇತ್ತು. ಉರಿಲಿಂಗಪೆದ್ದಿಯ ವಚನಗಳಲ್ಲಿ ಅವನ ಜೀವನಕ್ಕೆ ಸಂಬಂಧಿಸಿದ ಕೆಲವೊಂದು ಸಂಗತಿಗಳು ಅಭಿವ್ಯಕ್ತಿಪಡೆದಿವೆ. ಲಿಂಗದೀಕ್ಷೆಯಿಂದ ತನಗಾದ ಅನಿರ್ವಚನೀಯ ದಿವ್ಯಾನಂದಕ್ಕೆ ಈ ವಚನಗಳಲ್ಲಿ ಅಭಿವ್ಯಕ್ತಿ ನೀಡಿದ್ದಾನೆ:

೧. ಎನ್ನ ನಾನರಿಯದೆ ಪುರಾಕೃತ ಕರ್ಮಫಲದಿಂ ಕರ್ಮವಶನಾಗಿ
ಅಜ್ಞಾನಿಯಾಗಿ ಮಹಾದೀನನಾಗಿದ್ದಲ್ಲಿ

ಪಾಪಪುಣ್ಯ ಸುಖದುಃಖಾದಿ ಕ್ರಿಯಾಕರ್ಮವೆಲ್ಲವು ಎನ್ನದು, ನಾನೇ ಸಂಸಾರಿ.
ಎನ್ನ ಸಂಸಾರವ ಕೆಡಿಸಿ, ಘೃಣಾಮೂರ್ತಿ ಸದ್ಗುರು ಕೃಪೆಮಾಡಿ
ಪೂರ್ವಜಾತವ ಕಳೆದು ಪುನರ್ಜಾತನ ಮಾಡಿ
ಶಿವಜ್ಞಾನಸಂಪನ್ನನ ಮಾಡೆ ಬದುಕಿದೆನು.
ಎನ್ನ ನಿಜವನರಿದೆನು ನಾನೇ ಗುರುಪುತ್ರನು.
ಕಾಯವು ಪ್ರಸಾದಕಾಯ, ಭಕ್ತಕಾಯನಾಗಿ ಕಾಯಲಿಂಗ ಪ್ರಾಣವು
ಲಿಂಗಪ್ರಾಣವಾಗಿ ಪ್ರಾಣಲಿಂಗವು
ಎನ್ನ ಶ್ರೀಗುರುಲಿಂಗ ಎನ್ನ ಜಂಗಮಲಿಂಗವು
ಪ್ರಸಾದಲಿಂಗವು ಮಂತ್ರಲಿಂಗವು
ಶ್ರೀವಿಭೂತಿಲಿಂಗವು ಮಹಾಜ್ಞಾನ ತಾನೆ ಲಿಂಗವು-(ವ.ಸಂ.೬೮.)

೨. ಎನಗಾದ ಮಹಾಪದವನರಿಯದೆ ನಾನು ಬಳಲಿದೆನಯ್ಯಾ
ಎನ್ನ ಪದವ ಈಗ ಅರಿದೆನು
ಬಳಲಿಕೆ ಹೋಯಿತ್ತು, ಪರಿಣಾಮವಾಯಿತ್ತು.
ಶಿವಶಿವಾ ಶಿವನೆ ಕರ್ತನು, ನಾನು ಭೃತ್ಯನು
ಮಿಕ್ಕುವೆಲ್ಲಾ ಮಿಥ್ಯವೆಂದರಿದು
ಈ ಮಹಾಜ್ಞಾನ ಪದಕ್ಕೆ ಈ ಘನತರ ಸುಖಕ್ಕೆ
ಈ ಮಹಾ ಪರಿಣಾಮಕ್ಕೆ ಇನ್ನಾವುದೂ ಸರಿಯಲ್ಲ.
ಉಪಮಾತೀತ ವಾಙ್ಮನೋತೀತ ನೀನೆ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ (ವ.ಸಂ.೬೨)

೩. ಧರ್ಮದೊಳಗೆ ಶಿವಧರ್ಮವೇ ಧರ್ಮವೆಂದರಿದೆನಾಗಿ
ಧರ್ಮಸಾಧ್ಯವಾಯಿತ್ತೆನಗೆ.
ಗುರುಲಿಂಗಜಂಗಮವ ಪಡೆದೆನಾಗಿ
ಅರ್ಥಸಾಧ್ಯವಾಯಿತ್ತೆನಗೆ
ಶರಣಸತಿ ಲಿಂಗಪತಿಎಂದರಿದೆನಾಗಿ
ಕಾಮ ಸಾಧ್ಯವಾಯಿತ್ತೆನಗೆ
ಮಹಾಪ್ರಸದವನಿಂಬುಗೊಂಡು ಧರಿಸಿದೆನಾಗಿ
ಮೋಕ್ಷಸಾಧ್ಯವಾಯಿತ್ತೆನಗೆ (ವ. ಸಂ. ೧೪೭)

ಗುರುವಿನ ಬಗ್ಗೆ ಅವನ ಕಣ ಕಣದಲ್ಲೂ ಪೂಜ್ಯಭಾವ ಕೃತಜ್ಞತೆಗಳು ತುಂಬಿರುವುದನ್ನು, ಆ ಗುರುವಿಗೆ ತಾನು ಏನನ್ನು ತಾನೆ ಪ್ರತಿಯಾಗಿ ನೀಡಬಲ್ಲೆ ಎಂದು ತನ್ನ ಅಂತರಂಗಕ್ಕೆ ಕೇಳಿಕೊಂಡು ತಾನು ಅರ್ಪಿಸುವ ಫಲಪುಷ್ಪಾದಿಗಳಾವುದಕ್ಕೂ ಗುರುವಿಗೆ ಅರ್ಪಿತವಾಗುವ ಗುರುತ್ವವಿಲ್ಲದ ಕಾರಣ ತನ್ನ ಮನೋವಾಕ್ಕಾಯಸಹಿತವಾಗಿ ತನ್ನನ್ನೇ ಅರ್ಪಿಸಿಕೊಳ್ಳುವುದೇ ಸರಿ ಎನ್ನುವ ಭಾವದ ಈ ವಚನವನ್ನು ನೋಡಬಹುದು:

ಎನ್ನ ಸದ್ಗುರುವು ಮಾಡುವ ಗುರುತ್ವ ಉಪಮಾತೀತವಯ್ಯ
ಅದೆಂತೆಂದಡೆ: ಎನ್ನ ನೇತ್ರದಲ್ಲಿ ತನ್ನ ರೂಪ ತುಂಬಿ,
ಎನ್ನ ನೇತ್ರವನು ಗುರುವು ಮಾಡಿದ.
ಎನ್ನ ಶ್ರೋತ್ರದಲ್ಲಿ ಮಹಾಮಂತ್ರವ ತುಂಬಿ,
ಎನ್ನ ಶ್ರೋತ್ರವನು ಗುರುವು ಮಾಡಿದ.
ಎನ್ನ ಘ್ರಾಣದಲ್ಲಿ ಗುರುಪಾದಪದ್ಮದಲ್ಲಿಹ ಮಹಾಗಂಧವ ತುಂಬಿ
ಎನ್ನ ಘ್ರಾಣವನು ಗುರುವು ಮಾಡಿದ.
ಎನ್ನ ಜಿಹ್ವೆಯಲ್ಲಿ ತನ್ನ ಕರುಣಪ್ರಸಾದವ ತುಂಬಿ,
ಎನ್ನ ಜಿಹ್ವೆಯನು ಗುರುವು ಮಾಡಿದ.
ಎನ್ನ ಕಾಯವನು ಭಕ್ತಕಾಯ ಮಮಕಾಯವೆಂದು ಪ್ರಸಾದಕಾಯವೆಂದೆನಿಸಿ,
ಎನ್ನ ಕಾಯವನು ಗುರುವು ಮಾಡಿದ.
ಎನ್ನ ಪ್ರಾಣದಲ್ಲಿ ಲಿಂಗಪ್ರಾಣಸಂಬಂಧವ ಮಾಡಿ
ಎನ್ನ ಪ್ರಾಣವನು ಗುರುವು ಮಾಡಿದ.
ಇಂತು ಎನ್ನ ಅಂತರಂಗ ಬಹಿರಂಗವನು ಗುರುವು ಮಾಡಿ,
ಸರ್ವಾಂಗವನೂ ಗುಪ್ತವ ಮಾಡಿದ ಮಹಾಶ್ರೀಗುರುವಿಂಗೆ
ನಾನಿನ್ನೇನ ಮಾಡುವೆನಯ್ಯ: ಮಾಡುವೆನಯ್ಯ ಗುರು ಪೂಜೆಯನು।
ಆವಾವ ದ್ರವ್ಯಂಗಳನು ಆವಾವ ಪದಾರ್ಥಂಗಳನು,
ಆವಾವ ಪುಷ್ಪಫಲಾದಿಗಳನು ವಿಚಾರಿಸಿ ನೋಡಿದಡೆ ಅವಾವಕ್ಕು ಗುರುತ್ವವಿಲ್ಲ।
ಸರ್ವದ್ರವ್ಯ ಮೂಲ ಮನ ಸರ್ವಪದಾರ್ಥಮೂಲ ಮನ।
ಸರ್ವರಸ ಪುಷ್ಪಫಲಾದಿಗಳೆಲ್ಲವಕ್ಕೆಯು ಮೂಲಿಗ ಮನವು।
ಇದು ಕಾರಣ ಸರ್ವಗುರುತ್ವವನುಳ್ಳ ಎನ್ನ ಮನೋವಾಕ್ಕಾಯ।

ಸಹಿತವಾಗಿ ಗುರುವಿಂಗಿತ್ತು
ಎನ್ನ ಶಿರವನು ಶ್ರೀಗುರುವಿನ ದರ್ಶನ ಸ್ಪರ್ಶನವ ಮಾಡಿ
ಸುಖಿಯಾಗಿಪ್ಪೆನಯ್ಯಾ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. (ವ. ಸಂ.೭೦)

ಆನಂತರದಲ್ಲಿ ಉರಿಲಿಂಗದೇವನು ಶಿಷ್ಯನ ಮನೆಯಲ್ಲೇ ಪ್ರಸಾದ ಸ್ವೀಕರಿಸುವ ಬಯಕೆಯನ್ನು ವ್ಯಕ್ತಪಡಿಸಿ ಸ್ವೀಕರಿಸುತ್ತಾನೆ. ಪೆದ್ದಣ್ಣ ತನ್ನ ಹಿಂದಿನ ಕುಲಗೋತ್ರ ನೀಗಿಕೊಂಡು ಶಿವಕುಲಶ್ರೇಷ್ಠನಾಗಿ ಶರಣನೆನಿಸುತ್ತಾನೆ.

ಎಲ್ಲಕ್ಕಿಂತ ಹೆಚ್ಚಾಗಿ ಮುಂದೆ ಈ ದಂಪತಿಗಳು ಸಮರಸವಾಗಿ ಬಾಳಿ ಅನುಭಾವದ ಮಾರ್ಗದಲ್ಲಿ ಬಹಳಷ್ಟು ಪ್ರಗತಿ ಸಾಧಿಸುತ್ತಾರೆ. ಬಹುಶಃ ಅಂದಿನಿಂದಲೆ ಮಹಾಪಂಡಿತನಾದ ಉರಿಲಿಂಗದೇವನ ಪದತಲದಲ್ಲಿ ಕುಳಿತೇ ಪೆದ್ದಣ್ಣ ಎಲ್ಲ ವೇದ ಉಪನಿಷತ್ತು ಆಗಮ ಶಾಸ್ತ್ರಗಳನ್ನು ಅಭ್ಯಾಸಮಾಡಿ ನಿಷ್ಣಾತಿಯನ್ನು ಸಾಧಿಸಿದನೆನಿಸುತ್ತದೆ. ಗುರು ಉರಿಲಿಂಗ ದೇವನು ಕೋಪದಲ್ಲಿ 'ಹೊರಟುಹೋಗು' ಎಂಬ ಅರ್ಥದಲ್ಲಿ ಹೇಳಿದ 'ಘೇ ಜಾ ದಗಡಿ ಜಾ' ಎಂಬ ಮಾತು ಮತ್ತು ಅವನು ನೀಡಿದ ಬೀದಿಯಲ್ಲಿ ಬಿದ್ದಿದ್ದ ಒಂದು ಕಲ್ಲು ಇವುಗಳನ್ನೇ ಬಳಸಿ ಪೆದ್ದಣ್ಣನು ಕೆರೆಯ ಮಧ್ಯದ ಹಾಸುಬಂಡೆಯನ್ನೊಡೆದು ನೀರುಚಿಮ್ಮುವಂತೆ ಮಾಡಿದ ಪವಾಡ ನಡೆಯಿತೋ ಇಲ್ಲವೆ ಅದೊಂದು ದಂತ ಕಥೆಯೋ ಎಂಬ ಸಂಶಯ ನಮ್ಮನ್ನು ಕಾಡಿದರೂ ಕಳ್ಳನೂ ನಿರಕ್ಷರ ಕುಕ್ಷಿಯೂ ಆಗಿದ್ದ ದಲಿತ ಪೆದ್ದಣ್ಣ ತನ್ನ ಭಕ್ತಿ, ನಿಷ್ಠೆಗಳಿಂದ ಗುರುವಿನ ಹೃದಯವನ್ನೇ ಅಪಹರಿಸಿ ತನ್ನ ಸ್ವಂತ ಪರಿಶ್ರಮದಿಂದ ವೇದಾಗಮಾದಿ ಸಕಲ ಶಾಸ್ತ್ರಗಳಲ್ಲಿ ಪರಿಣತಿಯನ್ನು ಸಾಧಿಸಿ ಮಹಾಶರಣಾಗಿ ಮಹಾ ಅನುಭಾವಿಯಾಗಿ ಪರಿವರ್ತಿತನಾದದ್ದು ಮಾತ್ರ ಅಕ್ಷರಶಃ ನಿಜ. ಇದೇ ನಿಜವಾದ ಪವಾಡ.

ಹುಟ್ಟು ಮನುಷ್ಯನ ಯೋಗ್ಯತೆಯನ್ನು ನಿರ್ಣಯಿಸುವಂಥದಲ್ಲವೇ ಅಲ್ಲ ಎಂಬುದೇ ಬಸವಣ್ಣನ ಸಿದ್ಧಾಂತ. ಮತ್ತು ಪೆದ್ದಣ್ಣನ ಈ ಮಹಾ ಸಾಧನೆ ಹುಟ್ಟಿನಿಂದ ವ್ಯಕ್ತಿಯ ಹಿರಿಮೆ-ಗರಿಮೆಗಳು ನಿರ್ಧಾರವಾಗುವುದರ ವಿರುದ್ಧವೇ ದನಿಯೆತ್ತಿದ್ದ ಬಸವಣ್ಣನ ಆಶಯಕ್ಕೆ ಸಿಕ್ಕ ಅಪೂರ್ವ ಯಶಸ್ಸು.

ಮುಂದೆ ಪೆದ್ದಣ್ಣನ ವ್ಯಕ್ತಿತ್ವ ಏರಿದ ಎತ್ತರವನ್ನು ಕಂಡುಕೊಂಡ ಉರಿಲಿಂಗದೇವ ತನ್ನ ಮಠಕ್ಕೆ ಉತ್ತರಾಧಿಕಾರಿಯಾಗಲು ಪೆದ್ದಣ್ಣನೇ ತಕ್ಕವನೆಂದು ನಿರ್ಧರಿಸಿ ಅವನನ್ನೇ ಆಚಾರ್ಯಪೀಠದಲ್ಲಿ ಸ್ಥಾಪಿಸಿದನು. ಮತ್ತು ತನ್ನದೇ

ಹೆಸರನ್ನು ಒಳಗೊಂಡ 'ಉರಿಲಿಂಗಪೆದ್ದಿ' ಎಂಬ ಆಶ್ರಮನಾಮವನ್ನು ನೀಡಿದನು. ಈ ಕುರಿತು ಎದುರಾಗಬಹುದಾಗಿದ್ದ ಸಾಮಾಜಿಕ ಪ್ರತಿಭಟನೆಯನ್ನು ಲೆಕ್ಕಿಸದೆ ಎಂಟುನೂರು ವರ್ಷಗಳಷ್ಟು ಹಿಂದೆಯೇ ಶ್ರೇಷ್ಠಕುಲಜನೂ ಬ್ರಹ್ಮಚಾರಿಯೂ ಆದ ವಿದ್ವಾಂಸನೊಬ್ಬನು ಧಾರ್ಮಿಕ ಪೀಠಮೊಂದರ ಪಟ್ಟಾಧಿಕಾರಿಯಾಗಬೇಕೆಂಬ ಸಂಪ್ರದಾಯದ ಅನುಲ್ಲಂಘನೀಯ ನಿಯಮವನ್ನೂ ಮೀರಿ ದಲಿತನೂ ವಿವಾಹಿತನೂ ಆದ ಅಸ್ಪೃಶ್ಯನೊಬ್ಬನನ್ನು ಧರ್ಮಪೀಠವೊಂದಕ್ಕೆ ಪೀಠಾಧಿಕಾರಿಯಾಗಿ ನೇಮಕಮಾಡಿದ್ದು ಭಾರತದ ಧಾರ್ಮಿಕ ಇತಿಹಾಸದಲ್ಲೇ ಒಂದು ಅಭೂತಪೂರ್ವ ಘಟನೆ. ಒಟ್ಟಾರೆ ದಲಿತ ಪೆದ್ದಣ್ಣನು ಹಲವು ಶಾಸ್ತ್ರಗಳಲ್ಲಿ ಪಾರಂಗತನೆನಿಸಿ ಆ ಶಾಸ್ತ್ರಗಳನ್ನೇ ಪ್ರಶ್ನಿಸುವಮಟ್ಟಿನ ವೈಚಾರಿಕತೆಯನ್ನು, ವಿದ್ವತ್ತನ್ನು ಮತ್ತು ಕೆಚ್ಚನ್ನು ಬೆಳೆಸಿಕೊಂಡು ಸಂಪ್ರದಾಯವಾದಿಗಳಿಗೆ ಸವಾಲು ಹಾಕುವ ಪಿಠಾಧಿಪತಿಯಾದದ್ದು ಪವಾಡಗಳನ್ನು ಮೀರಿಸಿದ ಸತ್ಯಸ್ಯ ಸತ್ಯವಾದ ಮಹಾನ್ ಪವಾಡವೇ ಸರಿ.

ಇದನ್ನು ತಾಳಿಕೊಳ್ಳಲಾಗದ ಸಂಪ್ರದಾಯಸ್ಥರು ಮಠಕ್ಕೆ ಬೆಂಕಿಹಚ್ಚಿದ ಉಲ್ಲೇಖವೂ ಇದೆ. ಆದರೆ ಉರಿಲಿಂಗದೇವನ ಆಯ್ಕೆ ಉತ್ಕೃಷ್ಟವಾಗಿದ್ದಿತೆಂಬುದನ್ನು ಸಮರ್ಥಿಸುವ ರೀತಿಯಲ್ಲಿ ವಿದ್ವತ್ತು ಮತ್ತು ಶಿವಾನುಭವದಲ್ಲಿ ಶಿಖರಸದೃಶ ಸಾಧನೆಮಾಡಿದ ವ್ಯಕ್ತಿ ಅವನಾಗಿದ್ದರಿಂದ ವಿರೋಧದ ಸೊಲ್ಲು ಅಡಗಿಹೋಯಿತು. ತನ್ನ ಹೆಂಡತಿ ಕಾಳವ್ವೆಯೂ ತನ್ನೊಂದಿಗೆ ಶಿವಯೋಗಮಾರ್ಗದಲ್ಲಿ ಸಮಸಮನಾಗಿ ಹೆಜ್ಜೆಹಾಕುವಂತೆ ಮಾಡುವ ಮೂಲಕ " ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ" ಎಂಬ ದಾಸಿಮಯ್ಯನ ವಚನವನ್ನು ನಿಜಮಾಡಿದ್ದು ಕೂಡ ಸಾಮಾನ್ಯ ಸಾಧನೆಯೇನಲ್ಲ.

೩. ಉರಿಲಿಂಗಪೆದ್ದಿಯ ವಚನಗಳ ಸಾಮಾನ್ಯ ಸ್ವರೂಪ

ಈಗಾಗಲೇ ಕಂಡುಕೊಂಡಂತೆ ಪೆದ್ದಣ್ಣನು ಉರಿಲಿಂಗ ಪೆದ್ದಿಯಾಗಿ ಮುಂದೆ ಉರಿಲಿಂಗದೇವನ ಉತ್ತರಾಧಿಕಾರಿಯಾಗಿ ನೇಮಕವಾಗುವ ಹೊತ್ತಿಗೆ ಕನ್ನಡ, ಸಂಸ್ಕೃತ, ವೇದ ಆಗಮ ಉಪನಿಷತ್ತು, ಮತ್ತು ಇನ್ನಿತರ ಹಲವು ಶಾಸ್ತ್ರಗಳಲ್ಲಿ ಪರಿಣತಿಯನ್ನು ಪಡೆದುಕೊಂಡಿದ್ದ. ಬಹುಶಃ ಸ್ವತಃ ಮಹಾಪಂಡಿತನಾಗಿದ್ದ ಉರಿಲಿಂಗದೇವನೇ ಅವನ ಈ ಬಗೆಯ ಶಿಕ್ಷಣಕ್ಕೆ ನೆರವಾಗಿದ್ದಿರಬೇಕು. ಕಲ್ಯಾಣಕ್ಕೆ ಹೋಗಿ ಬರುತ್ತಿದ್ದು ಅಲ್ಲಿಯ ಕಾರ್ಯಚಟುವಟಿಕೆಗಳೊಂದಿಗೆ ನಿಕಟಸಂಪರ್ಕವಿಟ್ಟು ಕೊಂಡಿದ್ದ ಉರಿಲಿಂಗಪೆದ್ದಿ ಕೂಡ ವಿಪುಲವಾಗಿಯೇ ವಚನಗಳನ್ನು ರಚಿಸಿದ್ದಾನೆ. 'ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ' ಎಂಬುದು ಅವನ ವಚನಗಳ ಅಂಕಿತ. ಇದುವರೆಗೆ ದೊರೆತಿರುವ ಅವನ ವಚನಗಳು ಒಟ್ಟು ೩೬೩. ವಚನಕಾರರು ಅಚ್ಚಗನ್ನಡದ ಬೇಸಾಯಗಾರರು ಎಂಬುದು ಸರಿಯೇ. ಬಸವಣ್ಣ, ಚನ್ನಬಸವಣ್ಣ ಮುಂತಾದ ಉಚ್ಚವರ್ಗದಿಂದ ಬಂದ ವಚನಕಾರರ ವಚನಗಳಲ್ಲಿ ವಿರಳವಾಗಿ ತಮ್ಮ ಮಾತಿಗೆ ಸಮರ್ಥನೆಯಾಗಿ ಆಗಮಗಳು, ವೇದ ಉಪನಿಷತ್ತು ಇತ್ಯಾದಿಗಳಿಂದ ವಿರಳವಾಗಿ ಸಂಸ್ಕೃತ ಶ್ಲೋಕಗಳನ್ನು ಉದ್ಧರಿಸಿರುವುದು ಕಂಡುಬರುತ್ತದೆ. ಅದು ವಿಪುಲ ಪ್ರಮಾಣದಲ್ಲಂತೂ ಇಲ್ಲ. ಆದರೆ ಉರಿಲಿಂಗಪೆದ್ದಿಯ ವಚನಗಳಲ್ಲಿ ವೇದ, ಆಗಮ, ಉಪನಿಷತ್ತು ಮತ್ತು ಇನ್ನಿತರೆ ಸಂಸ್ಕೃತ ಗ್ರಂಥಗಳಿಂದ ಹೇರಳವಾಗಿ ಸಂಸ್ಕೃತ ಶ್ಲೋಕಗಳನ್ನು, ಪಂಕ್ತಿಗಳನ್ನು ಉದ್ಧರಿಸಲಾಗಿದೆ. ಇದು ಮೇಲುನೋಟಕ್ಕೇ ಎದ್ದುಕಾಣುವ ಸಂಗತಿ. ೩೬೩ ವಚನಗಳಲ್ಲಿ ಸುಮಾರು ಒಂದುನೂರು ವಚನಗಳಲ್ಲಿ ಸಂಸ್ಕೃತ ಶ್ಲೋಕಗಳನ್ನು ಹೆಚ್ಚಾಗಿಯೇ ಉಲ್ಲೇಖಿಸಲಾಗಿದೆ. ಅವನು ಸ್ವಂತ ಪರಿಶ್ರಮದಿಂದ ಗಳಿಸಿದ ಅಪಾರ ಸಂಸ್ಕೃತಪಾಂಡಿತ್ಯ ಅವನ ವಚನಗಳಲ್ಲಿ ಉಜ್ವಲವಾಗಿ ಪ್ರತಿಫಲಿತಗೊಂಡಿದೆ.

ಉರಿಲಿಂಗಪೆದ್ದಿಯ ವಚನಗಳಲ್ಲಿ ಪ್ರಸ್ತಾಪಿಸಲಾಗಿರುವ ಸಂಗತಿಗಳು, ವಿಷಯಗಳು, ದೃಢವಾದ ಶಿವನಿಷ್ಠೆ, ಶಿವಮಹಿಮೆ, ಶಿವಪಾರಮ್ಯ, ವೀರಶೈವ ಆಚಾರಗಳಾದ ಅಷ್ಟಾವರಣ ಒಳಗೊಳ್ಳುವ ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ವಿಭೂತಿ, ರುದ್ರಾಕ್ಷಿಗಳ ವಿಚಾರ, ಮತ್ತು ಪಂಚಾಕ್ಷರಿ, ಷಡಕ್ಷರಿ, ಮತ್ತು ಓಂಕಾರ ಮಂತ್ರಗಳ ಮಹತ್ವ, ಪಂಚಾಚಾರ, ತ್ರಿವಿಧ ದಾಸೋಹಗಳ ವಿಚಾರ, ಷಟ್ಸ್ಥಲ ಸಾಧನಮಾರ್ಗ, ಜಾತಿಶ್ರೇಷ್ಠತೆ, ಜಾತಿತಾರತಮ್ಯಗಳ ಖಂಡನೆ, ಯಜ್ಞ ಯಾಗಾದಿಗಳು ಮತ್ತು ಬ್ರಾಹ್ಮಣ್ಯದ ಖಂಡನೆ ಇತ್ಯಾದಿಗಳು. ಈ ಸಂಗತಿಗಳಿಗೆ ಅವನ ವಚನಗಳಲ್ಲಿ ವಿಸ್ತಾರವಾದ ಇಂಬು ದೊರೆತಿದೆ. ವಚನಕಾರರು ಸಾಮಾನ್ಯ ವಾಗಿ ತಾವು ಹೇಳಬೇಕಾದ ವಿಚಾರ ಅಥವಾ ತತ್ವ ಅಥವಾ ವಚನದ ಉದ್ದೇಶವನ್ನು ವಚನದ ಕೊನೆಯ ವಾಕ್ಯದಲ್ಲಿ ವ್ಯಕ್ತಪಡಿಸಿ ಅದರ ಮೇಲಿನ ವಾಕ್ಯಗಳಲ್ಲಿ ಆ ಕೊನೆಯ ವಾಕ್ಯದಲ್ಲಿನ ವಿಚಾರವನ್ನು / ಮಾತನ್ನು ಸಮರ್ಥಿಸಲು ಅಗತ್ಯವಾದ ಉಪಮೆ, ಸಾಮತಿ, ದೃಷ್ಟಾಂತಗಳನ್ನು ನೀಡುತ್ತಾರೆ. ಮಧ್ಯೆ ಮಧ್ಯೆ ಜನಬಳಕೆ ಯಲ್ಲಿರುವ ಗಾದೆಮಾತು, ನುಡಿಗಟ್ಟುಗಳನ್ನು ಬಳಸುತ್ತಾರೆ. ಅಗತ್ಯವೆನಿಸಿದರೆ ತಮ್ಮ ಮಾತಿಗೆ ಸಮರ್ಥನೆಯಾಗಿ ಆಗಲೇ ತಿಳಿಸಿದಂತೆ ಸಂಸ್ಕೃತ ಶ್ಲೋಕಗಳನ್ನು ಉಲ್ಲೇಖಿಸುತ್ತಾರೆ. ಉರಿಲಿಂಗಪೆದ್ದಿಯ ವಿಶಿಷ್ಟತೆ ಎಂದರೆ ಬೇರೆ ಯಾವ ವಚನಕಾರರಲ್ಲೂ ಕಂಡುಬರದಷ್ಟು ಪ್ರಮಾಣದಲ್ಲಿ ಸಂಸ್ಕೃತದ ಉಲ್ಲೇಖೋಕ್ತಿಗಳು ಕಂಡುಬರುತ್ತವೆ. ಆ ಭಾಷೆಯಲ್ಲಿನ ಅವನ ಪಾಂಡಿತ್ಯ, ಪ್ರಭುತ್ವಗಳು ನಾನಾಶಾಸ್ತ್ರಗಳ ಪರಿಜ್ಞಾನ, ವ್ಯುತ್ಪತ್ತಿ, ಬೆರಗು ಮೂಡಿಸುವಂತಿವೆ. ಬಿಗಿದ ಹುಬ್ಬಿನ ಛಲದಿಂದ ಅವನು ವೈದಿಕರ ಭಾಷೆಯೆಂದೇ ಹೆಸರಾದ ಸಂಸ್ಕೃತದಲ್ಲಿ ಪರಿಣತಿಯನ್ನು ಗಳಿಸಿದ್ದಾನೆ. ಮೂಲತಃ ದಲಿತನಾದ ಅವನ ಸಂಸ್ಕೃತ ಕಲಿಕೆಯೂ ಒಂದು ರೀತಿಯಲ್ಲಿ ಮೇಲ್ವರ್ಗದವರಿಗೆ ಸವಾಲೆಸೆಯುವ ರೀತಿಯದೇ ಅಗಿದೆ. ಉಳಿದ ಜನವರ್ಗಗಳಿಗೆ, ಅದರಲ್ಲೂ ಅಂತ್ಯಜರಿಗೆ ಸಂಸ್ಕೃತ ಭಾಷೆ ಮತ್ತು ಶಾಸ್ತ್ರಗಳ ವಾಸನೆಯೂ ಸೋಕದಂತಿರಿಸುವ ಮೂಲಕ ಅದು ತಮ್ಮ ಜನ್ಮಜಾತ ಆಸ್ತಿ ಎಂದು ಭಾವಿಸಿದ್ದವರ ವಿರುದ್ಧ ತೋರಿದ ಬಂಡಾಯವೂ ಇದಾಗಿರಬೇಕು. ಜೊತೆಗೆ ಡಾ. ಪಿ.ವಿ. ನಾರಾಯಣ ಅವರು ಹೇಳುವಂತೆ "ಯಾವುದು ಮೇಲು ವರ್ಗದವರ ಶೋಷಣೆಯ ಅಸ್ತ್ರವಾಗಿತ್ತೋ ಅದರಿಂದಲೇ ಆ ಮಿಥ್ಯೆಯನ್ನೊಡೆ ಯುವ ಬಯಕೆಯೂ ಕೆಲಸಮಾಡಿರಬಹುದು[೧]. "ಉರಿಲಿಂಗಪೆದ್ದಿಯಂಥವನಿಗೆ

ಮೇಲುವರ್ಗದವರಿಗೆ ತನ್ನ ಸಾಮರ್ಥ್ಯವನ್ನು ತೋರಿಸುವ ಹಂಬಲ, ಬೇಕಾದರೆ ಚಪಲ ಎನ್ನಬಹುದು, ಇರಬಹುದು".[2]

ಹಾಗಾಗಿ ಮಾತೆತ್ತಿದರೆ ಸಾಕು, ಹೆಜ್ಜೆ ಹೆಜ್ಜೆಗೆ ವೇದ ಉಪನಿಷತ್ತು ಆಗಮ ಪುರಾಣಗಳಿಂದ ವಿಪುಲವಾಗಿ, ಪುಂಖಾನುಪುಂಖವಾಗಿ, ಆದರೆ ಸಯುಕ್ತಿಕವಾಗಿ ಶ್ಲೋಕಗಳನ್ನು, ಪಂಕ್ತಿಗಳನ್ನು ಉಲ್ಲೇಖಿಸುತ್ತಹೋಗುತ್ತಾನೆ. ತಾನು ಪ್ರತಿಪಾದಿಸಬೇಕಾದ ವಿಚಾರಗಳನ್ನು ಒಂದು ತಾರ್ಕಿಕ ನೆಲೆಗೊಯ್ಯಲು, ಅವಕ್ಕೆ ಅಧಿಕೃತತೆ ತಂದುಕೊಡಲು ಹೀಗೆ ಮಾಡುತ್ತಾನೆನ್ನಬೇಕು.

ಸಾಮಾನ್ಯವಾಗಿ ಅವನ ವಚನಗಳು ದೀರ್ಘ ರಚನೆಗಳು. ೩೬೩ ವಚನಗಳಲ್ಲಿ ಸುಮಾರು ೮೦ ವಚನಗಳು ಸಾಮಾನ್ಯಕ್ಕಿಂತ ದೀರ್ಘವಾದವು. ಪುಟಗಟ್ಟಲೆ ಮುಂದುವರಿಯುವ ಕೆಲವು ದೀರ್ಘ ವಚನಗಳಲ್ಲಿ ಅಷ್ಟೇ ಅಧಿಕವಾಗಿ ಸಂಸ್ಕೃತದ ಉಲ್ಲೇಖಗಳಿವೆ. ಒಂದು ವಿಷಯ, ಸಂಗತಿಯನ್ನು ಸ್ಪಷ್ಟಪಡಿಸಲು ೩೨೬ನೇ ವಚನದಲ್ಲಿ, ವಾತುಳಾಗಮ, ವಾಶಿಷ್ಠ ಪುರಾಣ, ಬ್ರಹ್ಮಾಂಡಪುರಾಣ ಶಿವರಹಸ್ಯ, ಉತ್ತರವಾತುಳ, ಅಥರ್ವಣವೇದ, ಶಿವಧರ್ಮ ಪುರಾಣ, ಗಾರುಡಪುರಾಣ ಯಜುರ್ವೇದ, ಸಾಮವೇದ, ಸ್ಕಂದಪುರಾಣ, ಜ್ಞಾನವೈಭವಖಂಡಮಹಿಮ್ನ, ಶಿವಧರ್ಮೋತ್ತರ, ಪುರುಷಸೂಕ್ತ, ಉಪನಿಷತ್ತು, ಕೂರ್ಮಪುರಾಣ, ಋಗ್ವೇದ, ಲೈಂಗ್ಯ, ಸೌರಪುರಾಣ, ಕಾಳಿಕಾಖಂಡ, ಶಂಕರಸಂಹಿತೆ, ವೀರಾಗಮವೇ ಮೊದಲಾದ ೨೨ ಆಕರಗಳಿಂದ ಆಧಾರಗಳನ್ನು ಉಲ್ಲೇಖಿಸುತ್ತಾನೆ. ೧೬೭ ಸಾಲುಗಳಷ್ಟು ದೀರ್ಘವಾಗಿರುವ ಒಂದು ವಚನದಲ್ಲಿ ತತ್ವದೀಪಿಕೆಯ ಸಾಲುಗಳು ೨೨ ಆದರೆ, ಶಿವರಹಸ್ಯದಿಂದ ಉದ್ಧರಿಸಿರುವ ಸಾಲುಗಳು ೬೦.

ಕನ್ನಡ ಪುಸ್ತಕ ಪ್ರಾಧಿಕಾರ ಪ್ರಕಟಿಸಿರುವ ಸಂಕೀರ್ಣ 'ವಚನ ಸಂಪಪುಟ'ದ ಉರಿಲಿಂಗಪೆದ್ದಿಯ ವಚನ ಭಾಗದಲ್ಲಿ ೧೪೮೬(೨೨೨)ನೇ ವಚನದಲ್ಲಿ ಮೂರು ಶಬ್ದಗಳ ತುಣುಕು ಮಾತ್ರ ಕನ್ನಡ, ಉಳಿದುದೆಲ್ಲ ಸಂಸ್ಕೃತ. ೧೫೧೬ನೇ ವಚನದಲ್ಲಿ ೮೪ ಸಾಲುಗಳು ಸಂಸ್ಕೃತವಾದರೆ ೩೧ ಸಾಲುಗಳು ಮಾತ್ರ ಕನ್ನಡ. ೧೨೮೧(೧೭)ನೇ ವಚನದಲ್ಲಿ ಹದಿನೈದುಸಾಲುಗಳು ಸಂಸ್ಕೃತವಾದರೆ ಹದಿಮೂರು ಸಾಲುಗಳು ಕನ್ನಡ. ೧೩೪೫(೮೧)ನೇ ವಚನದಲ್ಲಿ ೨೭ ಸಾಲುಗಳಲ್ಲಿ ೨೫ ಸಾಲುಗಳು ಸಂಸ್ಕೃತವಾದರೆ ಎರಡು ತುಣುಕುಗಳು ಮಾತ್ರ ಕನ್ನಡ.

---

೧ ಮತ್ತು ೨. ವಚನಸಾಹಿತ್ಯದಲ್ಲಿ ಉರಿಲಿಂಗ ಪೆದ್ದಿ–ಕಾಳವ್ವೆ, ಪು.೫೭,೫೮

ಅವನ ಸಂಸ್ಕೃತಭೂಯಿಷ್ಠತೆಗೆ ನಿದರ್ಶನವಾಗಿ ಒಂದು ಸಣ್ಣ ವಚನವನ್ನು ಉಲ್ಲೇಖಿಸಬಹುದು:

ಲಿಂಗದ ಮರ್ಮವನರಿವುದರಿದು
ಲಿಂಗದಸಂಜ್ಞೆಯನರಿವುದರಿದು
ಲಿಂಗವಂತಹದಿಂತಹದೆಂದರಿವುದರಿದು ನೋಡಾ
ಲಿಂಗದಲ್ಲಿಯೇ ಆಗಮವಯ್ಯ
ಭೂಮಿಯೇ ಪೀಠಿಕೆ, ಅಕಾಶವೇ ಲಿಂಗವೆಂದರಿದಾತನು
ಲಿಂಗವನರಿದವನಲ್ಲ.
ಲಿಂಗದಲ್ಲಿಯೇ ಆಗಮವಯ್ಯ
ಲಿಂಗದಾದಿ ಬ್ರಹ್ಮ, ಮಧ್ಯ ವಿಷ್ಣು, ಅಂತ್ಯ ರುದ್ರ
ಇಂತು ತ್ರೈಲಿಂಗವೆಂದರಿದಾತನು ಲಿಂಗವನರಿದವನಲ್ಲ
ಲಿಂಗದಲ್ಲಿಯೇ ಆಗಮವಯ್ಯಾ
ಲಿಂಗಮಧ್ಯೇ ಜಗತ್ಸರ್ವಂ ಎಂಬ ಭಾವಭರಿತಲಿಂಗ
'ಬ್ರಹ್ಮವಿಷ್ಣ್ವಾದಿ ದೇವಾನಾಮಪ್ಯಗೋಚರಂ' ಎಂದು
ಮಾಹೇಶ್ವರಜ್ಯೋತಿರಿದಮಾಪಾತಾಲೇ ವ್ಯವಸ್ಥಿತಂ।
ಅತೀತಂ ಸತ್ಯಲೋಕಾಧೀನನಂತಂ ದಿವ್ಯಮೀಶ್ವರಂ॥
ಇಂತಾದನು ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರನು
ಎಂದರಿದ ಶರಣಂಗೆ ಸುಲಭ, ಮಿಕ್ಕಿದವರ್ಗೆ ಅಸುಲಭ.

ಮಹಾನ್ ಅನುಭಾವಿಯಾದ ಈತ ಅನುಭಾವವನ್ನು ಅಭಿವ್ಯಕ್ತಿಸುವುದೇ ಪಾಂಡಿತ್ಯಪೂರ್ಣವಾದ ಭಾಷೆಯಲ್ಲಿ. ಅರಿವಿನ ತೃಪ್ತಿಗೆ ಅನುಭಾವವೇ ಆಶ್ರಯ ಎಂಬುದು ನಿಜವೇ ಆದರೂ ಆ ಆನುಭಾವಿಕಜ್ಞಾನವನ್ನು ವಿದ್ವತ್ಪೂರ್ಣವಾದ ಭಾಷೆಯಲ್ಲಿ ಹೇಳಿದ್ದರಿಂದಾಗಿ ಅದಕ್ಕೆ ಅತಿಶಯವಾದ ಗುರುತ್ವ ಪ್ರಾಪ್ತವಾಗಿದೆ. ವಿದ್ವತ್ತು ಮತ್ತು ಅನುಭಾವಗಳ ಈ ಸಮನ್ವಯ ಪೆದ್ದಿಯಲ್ಲಿ ಕಂಡುಬರುವ ಹಾಗೆ ಬೇರಾರಲ್ಲೂ ಕಂಡುಬರುವುದಿಲ್ಲವೆಂದೇ ಹೇಳಬಹುದು. ಅದರಲ್ಲೊಂದು ತಾರ್ಕಿಕ ವಾದಸರಣಿ ಇರುತ್ತದೆ. ಕೆಲವೆಡೆ ಆಕರಗಳನ್ನು ಹೆಸರಿಸಿದ್ದರೆ ಇನ್ನು ಕೆಲವೆಡೆ ಆಕರಗಳನ್ನು ಹೆಸರಿಸದೆ ಹಾಗೆಯೇ ಉಲ್ಲೇಖಿಸುವುದನ್ನು ನೋಡಿದರೆ

ಇವೆಲ್ಲಾ ಅವನಿಗೆ ವಾಚೋವಿಧೇಯವಾಗಿದ್ದಂತೆ ತೋರುತ್ತದೆ. ಆತನ ಪುರಾಣಜ್ಞಾನ, ಇತಿಹಾಸಜ್ಞಾನ ಕೂಡ ಅಸಾಧಾರಣವಾದದ್ದೇ. ಆತನು ಇತರ ಭಾರತೀಯ ದರ್ಶನಗಳಾದ ಚಾರ್ವಾಕ, ಜೈನ, ಬೌದ್ಧ, ಮೀಮಾಂಸಾ, ಸೌರ, ಶಾಕ್ತ, ಗಾಣಾಪತ್ಯವೇ ಮೊದಲಾದ ದರ್ಶನಗಳ ತಿಳಿವೂ ಇದ್ದ ಬಹುಶ್ರುತನಾಗಿದ್ದಕ್ಕೆ ಅವನ ವಚನಗಳಲ್ಲಿ ಪುರಾವೆ ಸಿಗುತ್ತದೆ.

೩. ಉರಿಲಿಂಗಪೆದ್ದಿಯ ವಚನಗಳ ಅಂತರಂಗ

ಉರಿಲಿಂಗಪೆದ್ದಿ ಮುಖ್ಯವಾಗಿ ಒಬ್ಬ ಮಹಾನ್ ಭಕ್ತ ಮತ್ತು ಅನುಭಾವಿ. ಸಮಾಜದ ಅತ್ಯಂತ ಕೆಳಸ್ತರದಿಂದ ಅತ್ಯುನ್ನತ ಸ್ತರಕ್ಕೇರಿದ ಶರಣ. ಅವನ ಈ ಏರಿಕೆಯ ಹಿಂದೆ ಅಗಾಧವಾದ ಸಾಧನೆ ಇದೆ. ಸಹಜವಾಗಿಯೇ ಅವನಲ್ಲಿ ಅಪಾರ ಕೆಚ್ಚು ನೆಚ್ಚುಗಳು, ಅದಮ್ಯ ಆತ್ಮವಿಶ್ವಾಸ ಮನೆಮಾಡಿವೆ. ಅವನ ವಚನಗಳು ಅವನು ಸಾಗಿಬಂದ ಸಾಧನಾಪಥದ ಹೆಜ್ಜೆಗುರುತುಗಳಾಗಿರುವಂತೆಯೇ ಶರಣಧರ್ಮವನ್ನು ಅನುಸರಿಸುವ ಸಾಧಕರಿಗೆ ಸೋಪಾನಗಳೂ ಆಗಿವೆ. ಹೀಗಾಗಿ ಅವನ ವಚನಗಳಲ್ಲಿ ಮೂರು ಮುಖ್ಯ ವಿಚಾರಧಾರೆಗಳನ್ನು ಸ್ಪಷ್ಟವಾಗಿ ಗುರುತಿಸಬಹುದು. ಮೊದಲನೆಯದು ವೀರಶೈವದ ತಾತ್ವಿಕ ವಿಚಾರಗಳ ನಿರೂಪಣೆ. ಎರಡನೆಯದು ಅವನ ಆತ್ಮನಿರೀಕ್ಷಣೆಯ ವಚನಗಳು. ಮೂರನೆಯದು ಇವೆರಡಕ್ಕಿಂತ ಭಿನ್ನವೂ ಅತ್ಯಂತ ಮುಖ್ಯವೂ ಆದ, ವೈದಿಕರ ಡಂಬಾಚಾರಗಳು, ಅವರ ನಂಬಿಕೆಗಳು, ಮಡಿವಂತಿಕೆ ಸಮಾಜದ ಜಾತೀಯ ಅಸಮಾನತೆಗಳು ಇತ್ಯಾದಿಗಳ ಉಗ್ರ ವಿರೋಧ, ಇದಕ್ಕೆ ಕಾರಣರೆಂದು ನಂಬಲಾದ, ಸಮಾಜದ ಮೆಲ್ತುದಿಯಲ್ಲಿದ್ದ ವೈದಿಕರ/ಬ್ರಾಹ್ಮಣರ ಶ್ರೇಷ್ಠತೆಯನ್ನು ಪ್ರಶ್ನಿಸುವುದು, ಉಗ್ರವಾಗಿ ಖಂಡಿಸುವುದು.

ಮೊದಲನೆಯದಾದ ವೀರಶೈವದ ತಾತ್ವಿಕ ವಿಚಾರಗಳ ನಿರೂಪಣೆಯಲ್ಲಿ ಅವನಿಗಿರುವ ಅನನ್ಯ ಶಿವನಿಷ್ಠೆಗೆ ತಕ್ಕಂತೆ ಶಿವನ ಪಾರಮ್ಯವನ್ನು, ಹರಸರ್ವೋತ್ತಮತೆಯನ್ನು ನಿಸ್ಸಂಶಯವಾಗಿ ಸ್ಥಾಪಿಸುವುದು ಅವನ ಉದ್ದೇಶ. ಅದಕ್ಕಾಗಿ ವೈದಿಕ ಆಕರಗಳು, ಪುರಾಣಗಳು, ಶಾಸ್ತ್ರಗಳು ಎಲ್ಲದರಿಂದಲೂ ಆಧಾರಗಳನ್ನು ಮಂಡಿಸುವ ಮೂಲಕ ಇದನ್ನು ಸಾಧಿಸುತ್ತಹೋಗುತ್ತಾನೆ. ಎರಡನೆಯದಾಗಿ ವೀರಶೈವದ ಅಷ್ಟಾವರಣಗಳಾದ ಗುರು, ಲಿಂಗ, ಜಂಗಮ, ತ್ರಿವಿಧ ದಾಸೋಹ, ಪಾದೋದಕ, ಪ್ರಸಾದ, ವಿಭೂತಿ,ರುದ್ರಾಕ್ಷಿ ಮತ್ತು ಮಂತ್ರಗಳ ಅರ್ಥಮತ್ತು ಮಹತ್ವಗಳನ್ನು

ವಿಧವಿಧವಾಗಿ ನಿರೂಪಿಸುತ್ತಾನೆ. ಇವಕ್ಕೆಲ್ಲ ಅವನು ವೈದಿಕ ಧರ್ಮಗ್ರಂಥಗಳಾದ ವೇದ, ಉಪನಿಷತ್ತು, ಶಿವಾಗಮಗಳು, ಪುರಾಣಗಳು ಇನ್ನಿತರೆ ಶಾಸ್ತ್ರಗ್ರಂಥಗಳ ಆಧಾರಕೊಟ್ಟು ಸ್ಥಾಪಿಸುತ್ತ ಹೋಗುತ್ತಾನೆ. ಹೀಗೆ ಮಾಡುವಾಗ ಪಾರಂಪರಿಕ ವ್ಯಾಖ್ಯಾನಗಳನ್ನು ಖಂಡಿಸುವುದು, ವಿರೋಧಿಸುವುದು, ವಿಭಿನ್ನವಾಗಿ ವ್ಯಾಖ್ಯಾನಿಸುವುದು ಇದನ್ನೆಲ್ಲ ಮಾಡುತ್ತಾನೆ. ಇದೊಂದು ರೀತಿಯಲ್ಲಿ ಇಬ್ಬಗೆಯ ರೀತಿ. ತನಗೆ ಅಗತ್ಯ ಕಂಡಾಗ ತನ್ನ ವಾದಕ್ಕೆ ಸಮರ್ಥನೆಯಾಗಿ ಬಳಸಿದ ಆಕರಗಳನ್ನೇ ಅವುಗಳ ಕೆಲವೊಂದು ವಿಚಾರಧಾರೆಗಳನ್ನು ಖಂಡಿಸಲೂ ಬಳಸಿಕೊಳ್ಳುತ್ತಾನೆ. ಇವುಗಳನ್ನು ವಿವರವಾಗಿ ನೋಡಬಹುದು. ಮೊದಲಿಗೆ ವೀರಶೈವದ ಶ್ರದ್ಧಾಕೇಂದ್ರಗಳಾದ ಗುರು, ಲಿಂಗ, ಜಂಗಮ, ತ್ರಿವಿಧ ದಾಸೋಹವೇ ಮೊದಲಾದವುಗಳನ್ನು ಕುರಿತ ಅವನ ವಿಚಾರಗಳನ್ನು ಪರಿಶೀಲಿಸಬಹುದು.

ಗುರು

ಭಾರತೀಯ ಪರಂಪರೆಯಲ್ಲಿ ಆಧ್ಯಾತ್ಮಿಕ ಗುರುವಿಗೆ ಅತ್ಯಂತ ಗೌರವದ ಮತ್ತು ಮಹತ್ವದ ಸ್ಥಾನವಿದೆ. ಅಜ್ಞಾನತಿಮಿರದಿಂದ ಅಂಧನಾದವನ ಕಣ್ಣುಗಳನ್ನು ಜ್ಞಾನವೆಂಬ ಅಂಜನದ ಶಲಾಕೆಯಿಂದ ತೆರೆಸುವ ಬ್ರಹ್ಮವಿದ್ಯಾಬೋಧಕನೆಂದು ಉಪನಿಷತ್ತುಗಳಲ್ಲಿ ಅಪಾರವಾಗಿ ಕೊಂಡಾಡಿ ಗುರುವಿಗೆ ಪೂಜ್ಯಸ್ಥಾನ ನೀಡಲಾಗಿದೆ. ಭಕ್ತನಿಗೆ ಲಿಂಗದೀಕ್ಷೆ ನೀಡಿ ಅವನನ್ನು ಲೌಕಿಕದ ನೆಲೆಯಿಂದ ಅಲೌಕಿಕದ ನೆಲೆಗೆ ಕೊಂಡೊಯ್ಯುವ ಗುರುವಿಗೆ ವೀರಶೈವದಲ್ಲಿ ಎಲ್ಲಿಲ್ಲದ ಪೂಜ್ಯ ಸ್ಥಾನ. ಸಿದ್ಧರಾಮನು ತಾನು “ಗುರುವಿನಿಂದ ಲಿಂಗವ ಕಂಡೆನಲ್ಲದೆ ಲಿಂಗದಿಂದ ಲಿಂಗವ ಕಾಣಲಿಲ್ಲ” ಎಂದು ಹೇಳುವಲ್ಲಿ ಲಿಂಗಕ್ಕಿಂತಲೂ ಗುರು ಉನ್ನತನೆಂಬ ಭಾವವೇ ವ್ಯಕ್ತವಾಗಿದೆ. ಕಬೀರದಾಸರೂ ಒಂದು ದೋಹೆಯಲ್ಲಿ ದೇವರಿಗಿಂತ ಗುರುವಿಗೇ ಮೊದಲು ನಮಿಸಿದ್ದಾಗಿ ಹೇಳುತ್ತಾರೆ–

ಗುರು ಗೋವಿಂದ್ ದೋವೂ ಖಡೆ ಕಾಕೆ ಲಗ್ಯೂ ಪಾಂವ್
ಗುರುಹೀ ಲಗ್ಯೋ ಪಾಂವ್ ಜೋ ಗೋವಿಂದ್ ದಿಯೋ ಬತಾಯ್

(ಗುರು ಗೋವಿಂದರಿಬ್ಬರೂ ಎದುರು ನಿಂತರೆ ಯಾರ ಪಾದಕೆ ನಮಿಸಲಾನು
ಗೋವಿಂದನನು ತೋರಿಕೊಟ್ಟ ಗುರುವಿಗೇ ನಮಿಸಿದೆ ನಾನು)

ವೀರಶೈವರಲ್ಲಿ ಗುರು ಎಂದರೆ ಅವನು ಸಾಕ್ಷಾತ್ ಲಿಂಗಸ್ವರೂಪಿಯೇ. "ಸಾಕಾರವಿಡಿದು ಗುರು ಲಿಂಗವಾದ, ನಿರಾಕಾರವಿಡಿದು ಪ್ರಾಣಲಿಂಗವಾದ" ಎಂಬ ಚೆನ್ನಬಸವಣ್ಣನ ವಚನವಾದರೂ ಅದನ್ನೇ ಹೇಳುತ್ತದೆ. ಸ್ಪರ್ಶಮಣಿಯು ಇತರೆಲ್ಲ ಲೋಹಗಳನ್ನು ಚಿನ್ನವಾಗಿ ಪರಿವರ್ತಿಸುವಂತೆ ಲೋಕದ ಮಾನವನಾದ ಭವಿಯನ್ನು ಭಕ್ತನನ್ನಾಗಿ ಪರಿವರ್ತಿಸುವ ಮಹಾ ಶಕ್ತಿಉಳ್ಳ ಗುರು ಗುರುವೇ. ಕಾರಣ ಲೋಹಗಳೆಂದೂ ಸ್ಪರ್ಶಮಣಿಯಾಗಲಾರವು ಎಂಬರ್ಥದ ಅವನ ಇನ್ನೊಂದು ವಚನವೂ ಗುರುವಿನ ಮಹತ್ವವನ್ನೇ ಮನದಟ್ಟುಮಾಡಿಕೊಡುವ ವಚನ. ಎಂದೇ ಅವನಿಗೆ ಅತ್ಯಂತ ಪೂಜ್ಯ ಸ್ಥಾನ. ಉರಿಲಿಂಗಪೆದ್ದಿಯ ವಚನಗಳಲ್ಲಾದರೂ ಗುರುವನ್ನು ಕುರಿತ ನಿತಾಂತ ಭಕ್ತಿಭಾವ ಮತ್ತು ಪೂಜ್ಯತೆಗಳು ಕೋಡಿವರಿದಿವೆ.

"ನ ಗುರೋರಧಿಕಂ, ನ ಗುರೋರಧಿಕಂ ನ ಗುರೋರಧಿಕಂ, ನ ಗುರೋರಧಿಕಂ ವಿದಿತಂ ವಿದಿತಂ ವಿದಿತಂ ವಿದಿತಂ ಶಿವಶಾಸನತಃ" ಎಂದುದು ವಚನ.

ಶಿಷ್ಯನಿಗೆ ದೀಕ್ಷೆ ಕೊಡಲೆಂದೇ ಸಾಕ್ಷಾತ್ ಶಿವನೇ ನರರೂಪದಲ್ಲಿ ಗುರುವಾಗಿ ಬಂದಿದ್ದಾನೆಂದು ತಿಳಿಯಬೇಕೆಂದು ಹೇಳುತ್ತಾನೆ:

ಶ್ರೀಗುರು ಮರ್ತ್ಯಕ್ಕೆ ಬಂದು
ಅಷ್ಟಾದಶ ಜಾತಿಗಳೊಳಗಿದ್ದರೇನು ಮರ್ತ್ಯನೆ? ಅಲ್ಲ
ಸಾಕ್ಷಿಃ ಗುರುದೇವೋ ಮಹಾದೇವೋ ಗುರುದೇವಸ್ಸದಾಶಿವಃ।
ಗುರುದೇವಾತ್ಪರಂ ನಾಸ್ತಿ ತಸ್ಮೈ ಶ್ರೀ ಗುರವೇ ನಮಃ॥ ಎಂದುದಾಗಿ,
ಮಹಾದೇವನು ತಾನೇ
ಲಲಾಟಲೋಚನೇ ಚಾಂದ್ರೀ ಕಲಾಮಪಿ ಚ ದೋರ್ದ್ವಯಂ।
ಅಂತರ್ನಿಧಾಯ ವರ್ತೇಹಂ ಗುರುರೂಪೋ ಮಹೇಶ್ವರಃ॥
ಎಂದುದಾಗಿ ಶಿವನು ಗುರುರೂಪಾಗಿ ವರ್ತಿಸುತ್ತಿಹನು.
ಪರಶಿವೋ ಗುರುಮೂರ್ತಿಃ ಶಿಷ್ಯದೀಕ್ಷಾದಿ ಕಾರಣಾತ್।
ಶಿಷ್ಯಾತೀತಂ ಮಹಾಚೋದ್ಯಂ ಚೋದ್ಯರೂಪಾಯ ವೈ ನಮಃ॥

ಎಂದುದಾಗಿ

ಶಿಷ್ಯಂಗೆ ಕರುಣಿಸಿ ದೀಕ್ಷೆಯಂ ಮಾಡಬೇಕೆಂದು ಬಂದನಯ್ಯಾ
ಮಹಾಕಾರುಣ್ಯಮೂರ್ತಿ ಪರಮಶಿವನು ತಾನೆ,
ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರ. (ವ.ಸಂ.೨೯೧)

ಗುರುವನ್ನು ಮೀರಿದಂಥದ್ದು ಯಾವುದೂ ಇಲ್ಲವೆಂದು ಹೇಳುತ್ತ ಆ ಗುರು ಸಾಕ್ಷಾತ್ ಪರಶಿವನೇ ಹೊರತು ಬೇರೆ ಅಲ್ಲ. ಅವನು ಈ ಲೋಕದಲ್ಲಿ ಹದಿನೆಂಟು ಜಾತಿಗಳಲ್ಲಿ ಜನಿಸಿದ್ದಾಗ್ಯೂ ಅವನು ಶಿವಮೂರ್ತಿಯೇ. ಶಿವನೇ ಗುರುರೂಪದಲ್ಲಿ ವ್ಯವಹರಿಸುತ್ತಿದ್ದಾನೆಂದೇ ಅರ್ಥ. ಶಿಷ್ಯನಿಗೆ ದೀಕ್ಷೆ ಕರುಣಿಸಿದ ಕಾರಣದಿಂದಲೇ ಅವನು ಶಿವನಲ್ಲದೆ ಬೇರೆ ಅಲ್ಲ. ಇನ್ನೊಂದು ವಚನದಲ್ಲೂ (ವ.ಸಂ. ೧೧೯) ಗುರುಕರುಣದಿಂ ಗುರುವನ್ನರಿತಮೇಲೆ ಎಲ್ಲೆಲ್ಲಿಯು ಗುರುವಲ್ಲದೆ ತಾನಿಲ್ಲ ಎಂಬ ಸ್ಥಿತಿ ಉಂಟಾಗುತ್ತದೆ ಎನ್ನುತ್ತಾನೆ. ಗುರುವಿನ ಹಿರಿಮೆ ಗರಿಮೆಗಳನ್ನು ಎಷ್ಟು ಬಗೆಯಾಗಿ ಹಾಡಿದರೂ ತೃಪ್ತಿಯಿಲ್ಲವೆಂಬಂತೆ ಮತ್ತೆ ಮತ್ತೆ ಗುರುವಿನ ಮಹತ್ವವನ್ನು ಸ್ಥಾಪಿಸುತ್ತಹೋಗುತ್ತಾನೆ:

"ಮದ್ಗುರುವೆ, ಸದ್ಗುರುವೆ, ತ್ರಿಜಗದ್ಗುರುವೆ
ಶಿವಂಗೆ ಮಾತೆಯಾದ ಮನೋರಥವೀವ ಮಹದ್ಗುರುವೆ
ಶಿವ ಇವ ಉಪಮಾತೀತನೆ' ಎಂದು ಹೊಂಪುಳಿಹೋಗುತ್ತಾನೆ

ಶ್ರೀಗುರುವಿನ ಸಂಗದಿಂದ ಶ್ರೀಗುರುವಪ್ಪುದು ತಪ್ಪದು ಎಂದು ಸ್ವಾನುಭವದಿಂದಲೋ ಎಂಬಂತೆ ನುಡಿಯುತ್ತಾನೆ. ಶಿವಾದ್ವೈತವೆಂದರೆ ಪರಶಿವನೇ ಗುರು, ಲಿಂಗ ಮತ್ತು ಜಂಗಮ ಎಂದು ತಿಳಿಯುವುದು ಎಂಬ ಭಾವದ ಈ ವಚನ:

ಗುರುಸ್ವರೂಪನಾಗಿ ಮಹಾಸ್ಥಾನದಲ್ಲಿರುತ್ತಿದ್ದೆ,
ಲಿಂಗಸ್ವರೂಪನಾಗಿ ಭ್ರೂಮಧ್ಯದಲ್ಲಿರುತ್ತಿದ್ದೆ
ಜಂಗಮಸ್ವರೂಪನಾಗಿ ಹೃದಯಕಮಲಮಧ್ಯದಲ್ಲಿರುತ್ತಿದ್ದೆ
ಈ ಪರಿಯಲ್ಲಿ ಅಂತರಂಗದಲ್ಲಿ ಭರಿತನಾಗಿದ್ದೆಯಯ್ಯಾ
ಬಹಿರಂಗದಲ್ಲಿ ಶ್ರೀಗುರುಲಿಂಗವಾಗಿ ದೀಕ್ಷಿಸಿ ರಕ್ಷಿಸಿದೆ.
ಶಿವಲಿಂಗವಾಗಿ ಕರಸ್ಥಲದಲ್ಲಿ ಪೂಜೆಗೊಂಡು ರಕ್ಷಿಸಿದೆ,
ಜಂಗಮಲಿಂಗವಾಗಿ ಅವಗುಣಂಗಳೆಲ್ಲವನೂ ಕಳೆದು ಶಿಕ್ಷಿಸಿದೆ.

ಇಂತೀ ತ್ರಿವಿಧವು ಒಂದೇ ರೂಪಾಗಿ
ಎನ್ನ ಅಂತರಂಗಬಹಿರಂಗ ಭರಿತನಾಗಿ
ಪ್ರಸಾದವ ಕರುಣಿಸಿ ಮುಕ್ತನ ಮಾಡಿದೆಯಯ್ಯಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ.

ತನಗೆ ಇಷ್ಟಲಿಂಗ ದೀಕ್ಷೆಯನ್ನಿತ್ತು ತನಗೊಂದು ಹೊಸ ಜನ್ಮವನ್ನಿತ್ತ ಶ್ರೀಗುರು ತನ್ನ ಸಕಲ ಅಂಗಗಳಲ್ಲೂ ಅವನೆಲ್ಲ ಅಂಗಗಳನ್ನೂ ತುಂಬಿ ತನ್ನನ್ನೂ ಗುರುವಾಗಿ ಪರಿವರ್ತಿಸಿಬಿಟ್ಟನೆಂದು ಸಂಪೂರ್ಣ ಕೃತಜ್ಞತಾಭಾವದಲ್ಲಿ ಹೃದಯತುಂಬಿ ಹಾಡಿರುವ ಈ ವಚನ ಶಿಷ್ಯನ ಅಖಂಡ ಭಕ್ತಿಯನ್ನೂ ಸರ್ವಸಮರ್ಪಣ ಭಾವವನ್ನೂ ಜೊತೆಜೊತೆಯಲ್ಲೇ ವ್ಯಕ್ತಪಡಿಸುತ್ತಿದೆ:

ಶ್ರೀಗುರು ಮಾಡಿದ ಗುರುತ್ವ ಉಪಮಾತೀತವು
ನೇತ್ರದಲ್ಲಿ ತನ್ನ ರೂಪುತುಂಬಿ
ನೇತ್ರವ ಗುರು ಮಾಡಿದನು
ಶ್ರೋತ್ರದಲ್ಲಿ ಮಹಾಮಂತ್ರವ ತುಂಬಿ
ಶ್ರೋತ್ರವ ಗುರು ಮಾಡಿದನು
ಘ್ರಾಣದಲ್ಲಿ ಮಹಾಗಂಧವ ತುಂಬಿ
ಘ್ರಾಣವ ಗುರು ಮಾಡಿದನು
ಜಿಹ್ವೆಯಲ್ಲಿ ಕರುಣಪ್ರಸಾದವ ತುಂಬಿ
ಜಿಹ್ವೆಯ ಗುರು ಮಾಡಿದನು
ಕಾಯವ ಮಹಾಕಾಯವೆನಿಸಿ, ಪ್ರಸಾದಕಾಯವೆನಿಸಿ
ಕಾಯವ ಗುರು ಮಾಡಿದನು
ಪ್ರಾಣವನೂ ಲಿಂಗಪ್ರಾಣ ಸಂಬಂಧವ ಮಾಡಿ
ಪ್ರಾಣವ ಗುರು ಮಾಡಿದನು.
ಇಂತು ಅಂತರಂಗ ಬಹಿರಂಗವನು ಗುರು ಮಾಡಿದನು
ಸರ್ವಾಂಗವನು ಗುರುವ ಮಾಡಿದ ಗುರುವಿಂಗೆ
ನಾನಿನ್ನೇನ ಮಾಡುವೆನಯ್ಯಾ?
ಗುರುಪೂಜೆಗನುವಾದ ದ್ರವ್ಯಂಗಳನೂ, ಆವಾವ ಪದಾರ್ಥಂಗಳನೂ
ಆವಾವ ಪುಷ್ಪಫಲಾದಿಗಳನೂ

ವಿಚಾರಿಸಿ ನೋಡಿದಡೆ ಆವುವೂ ಗುರುತ್ವವಿಲ್ಲ.
ಸರ್ವದ್ರವ್ಯಮೂಲವೂ ಸರ್ವಪದಾರ್ಥಮೂಲವೂ
ಸರ್ವರಸಪುಷ್ಪಫಲಾದಿಗಳಿಗೆ ಎಲ್ಲದಕ್ಕೂ
ಮೂಲಿಗ ಮನವು ಗುರುತ್ವವನ್ನುಳ್ಳದ್ದು.
ತನ್ನ ಮನೋವಾಕ್ಸಹಿತ ಕಾಯವನೂ ಸದ್ಗುರುವಿಂಗಿತ್ತು
ಶ್ರೀಗುರುವರ್ಶನಮಾಡಿ ಸುಖಿಯಪ್ಪೆ ನಾನು
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ...
(ವ. ಸಂ.೩೧೬. ಸಂಕೀರ್ಣ ವಚನ ಸಂಪುಟ, ಪು.೫೮೮)

ಈ ವಚನಗಳಲ್ಲಿ ಅವನ ಅತ್ಮಚರಿತ್ರೆಯ ಎಳೆಗಳನ್ನೂ ಗುರುತಿಸಬಹುದು.

ಲಿಂಗ

ಅಷ್ಟಾವರಣಗಳಲ್ಲೊಂದಾದ ಲಿಂಗತತ್ವದ ಬಗ್ಗೆಯೂ ವೀರಶೈವದಲ್ಲಿ ಅಸದೃಶವಾದ ಪೂಜ್ಯತೆ. ಲಿಂಗವೆಂದರೆ ಅಂಗದ ಮೆಲೆ ಧರಿಸುವ ಇಷ್ಟಲಿಂಗವೆಂದೇ ಅರ್ಥ. ವೀರಶೈವದ ಮಹಾನ್ ವೈಶಿಷ್ಟ್ಯವೇ ಸ್ಥಾವರ ಲಿಂಗಪೂಜೆಯನ್ನು ವಿರೋಧಿಸಿ ಇಷ್ಟಲಿಂಗವನ್ನು ಪುರಸ್ಕರಿಸಿರುವುದು. ಸಿದ್ಧರಾಮನಂತೂ "ಕಟ್ಟಿದ ಲಿಂಗವ ಬಿಟ್ಟು ನೆಟ್ಟಿದ ಲಿಂಗವನಟ್ಟಿ ಮೊಟ್ಟೆ ತಾವರೆ ಮೊದಲಾದ ಪುಷ್ಪವ ಧರಿಸುವಾತನಿರವು ಚಾಂಡಾಲನ ಇರವು ನೋಡಾ" ಎಂದು ಕಟುವಾಗಿ ಟೀಕಿಸುತ್ತಾನೆ. ಅಲ್ಲಮನಂತೂ 'ಲಿಂಗಪ್ರತಿಷ್ಠೆಯ ಮಾಡಿದವಂಗೆ ನಾಯಕನರಕ' ಎನ್ನುತ್ತಾನೆ. ಗುರು ಕರುಣಿಸಿದ ಲಿಂಗವನ್ನು ನಿಷ್ಠೆಯಿಂದ ಪೂಜಿಸುವುದೇ ಭಕ್ತನ ನಡೆಯೆಂಬುದು ವಿರಶೈವದ ನಂಬಿಕೆ. "ಸಾಕಾರವಿಡಿದು ಅರ್ಚನೆಯಂ ಮಾಡುವುದಲ್ಲದೆ ನಿರಾಕಾರವ ನಂಬಲಾಗದು" ಎಂದು ಹೇಳುವ ಉರಿಲಿಂಗಪೆದ್ದಿ ಲಿಂಗದ ಮಹತ್ತು, ಲಿಂಗದ ಬಗೆಗಿನ ನಿಷ್ಠೆ, ಲಿಂಗವನ್ನು ಪೂಜಿಸುವ ರೀತಿ ಇವುಗಳನ್ನು ಕುರಿತಂತೆ ಹಲವಾರು ವಚನಗಳನ್ನು ರಚಿಸಿದ್ದಾನೆ. "ಲಿಂಗವೆಂಬುದು ಪರಶಕ್ತಿಯುತ ಪರಶಿವನ ನಿಜದೇಹ, ಲಿಂಗವೆಂಬುದು ಪರಶಿವನ ಘನತೇಜ ಲಿಂಗವೆಂಬುದು ಪರಶಿವನ ನಿರತಿಶಯಾನಂದಸುಖವು" ಎಂದು ಅದೆಷ್ಟು ಬಗೆಯಾಗಿ ಲಿಂಗದ ಮಹಾನತೆಯನ್ನು ವರ್ಣಿಸಿದರೂ ಅವನಿಗೆ ತೃಪ್ತಿಯಿಲ್ಲ. ಈ ಕೆಳಗಿನ ವಚನದಲ್ಲಿ ಲಿಂಗದ ಮಹಾನತೆಯನ್ನು ಅನೇಕ ಸಂಸ್ಕೃತದ ಉಕ್ತಿಗಳಿಂದ

ಮನದುಂಬಿ ವರ್ಣಿಸುತ್ತಾನೆ. ತನಗೆ ಗುರುವಿನಿಂದ ಲಿಂಗ ಪ್ರಾಪ್ತಿಯಾದ ಸಂದರ್ಭದ ದಿವ್ಯಾನಂದ ಇಲ್ಲಿಯ ಪಂಕ್ತಿಗಳಲ್ಲಿ ಸುಳುಹುದೋರಿದೆ.

'ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ'
ಎಂದೆನಿಸುವ ಲಿಂಗವು,
ಅತ್ಯತಿಷ್ಠತ್ ದಶಾಂಗುಲಂ ಎಂದೆನಿಸುವ ಲಿಂಗವು
'ಚಕಿತಮಭಿದತ್ತೇ' ಎಂದೆನಿಸುವ ಲಿಂಗವು
'ಅಣೋರಣೀಯಾನ್ ಮಹತೋ ಮಹೀಯಾನ್' ಎಂದೆನಿಸುವ ಲಿಂಗವು
'ಅಯಂ ಮೇ ಹಸ್ತೋ ಭಗವಾನ್ ಅಯಂ ಮೇ ಭಗವತ್ತರಃ'
ಎಂದೆನಿಸುವ ಲಿಂಗವು
'ಏಕಮೂರ್ತಿಸ್ತ್ರಿಧಾಭೇದಾಃ' ಎಂದೆನಿಸಿ ಶ್ರೀಗುರುಲಿಂಗಜಂಗಮರೂಪಾಗಿ
'ಇಷ್ಟಂ ಪ್ರಾಣಸ್ತಥಾ ಭಾವಸ್ತ್ರಿಧಾ ಚೈಕಂ ವರಾನನೇ' ಎಂದುದಾಗಿ
ತ್ರಿವಿಧ ಏಕೀಭವಿಸಿದ ಲಿಂಗರೂಪಾಗಿ
ಎನ್ನ ಕರಸ್ಥಳಕೆ ಬಂದು ಕರತಳಾಮಳಕದಂತೆ ತೋರುವೆ.
ಆಹಾ ಎನ್ನ ಸತ್ಯವೇ, ಆಹಾ ಎನ್ನ ನಿತ್ಯವೇ
ಆಹಾ ಎನ್ನ ಪುಣ್ಯವೇ, ಆಹಾ ಎನ್ನ ಭಾಗ್ಯವೇ
ಶಿವ ಶಿವ ಮಹಾದೇವ! ನೀನೇ ಬಲ್ಲೆ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

(ವ.ಸಂ.೨೨೬. ಸಂವ.ಸಂ.ಪುಟ.೫೨೮)

ನಿತ್ಯನಿರಂಜನ ಪರಂಜ್ಯೋತಿರ್ಲಿಂಗವು
ಪ್ರತ್ಯಕ್ಷವಾಗಿ ಎನ್ನ ಕರಸ್ಥಲಕ್ಕೆ ಬಂದಿರಲು
ಮತ್ತೊಂದ ನೆನೆದು ಬದುಕಿಹೆನೆಂಬುದು ಅಜ್ಞಾನ ನೋಡಾ

"ಎನ್ನ ಅಂತರಂಗದಲ್ಲಿ ಆವರ್ತಿಸಿ
ಬಹಿರಂಗದಲ್ಲಿ ವರ್ತಿಸಿ ತೋರುವೆಯಯ್ಯಾ
ಎನ್ನ ಕಂಗಳ ಮೊದಲ–ಕೊನೆಯಲ್ಲಿ ನೀ ತೋರುತಿಪ್ಪೆಯಯ್ಯಾ
ಲಿಂಗಂ ಪ್ರಕಾಶಮವ್ಯಕ್ತಂ ಲಿಂಗಂ ಪ್ರತ್ಯಕ್ಷಗೋಚರಂ।
ಲಿಂಗಂ ಪ್ರಸನ್ನ ರೂಪಂ ಚ ತಲ್ಲಿಂಗಂ ಜ್ಯೋತಿರಾತ್ಮಕಂ॥

ಎನ್ನ ಬ್ರಹ್ಮರಂಗದಲ್ಲಿ ತೋರುವ ಜ್ಯೋತಿ ನೀನೇ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ". (ವ. ಸಂ. ೬೫)

ಮೇಲೆ ಉಲ್ಲೇಖಿಸಲಾದ ಈ ಎಲ್ಲ ವಚನಗಳು ಸಂದೇಹಕ್ಕೆಡೆಯಿಲ್ಲದಂತೆ ತನಗೆ ಇಷ್ಟಲಿಂಗ ಪ್ರಾಪ್ತಿಯಾದ ಸಂದರ್ಭದ ಮಹದಾನಂದದ ಜೊತೆಗೇ ಲಿಂಗದ ಮಹಾನತೆಯನ್ನೂ ನಿರೂಪಿಸುತ್ತಿವೆ.

'ಲಿಂಗವ ನಂಬಿದಡೆ ಸರ್ವಸಿದ್ಧಿ, ಲಿಂಗವ ನಂಬದಿರ್ದಡೆ ನಾಯಕನರಕ' ಎಂದು ಘೋಷಿಸುವ ಉರಿಲಿಂಗಪೆದ್ದಿ ಲಿಂಗ ಮತ್ತು ಶರಣ ಎಂದಿಗೂ ಬೇರೆ ಬೇರೆಯಲ್ಲ; ಅವರ ಸಂಬಂಧ "ಶರಣಮಧ್ಯೇ ತು ಲಿಂಗಂ ಲಿಂಗಮಧ್ಯೇ ತು ಶರಣಂ" ಎಂಬಂಥ ಅವಿನಾಭಾವ ಸಂಬಂಧ. 'ಲಿಂಗವಿದ್ದುದೇ ಕೈಲಾಸ, ಲಿಂಗವಿದ್ದುದೇ ಕಾಶೀಕ್ಷೇತ್ರ, ಲಿಂಗವಿದ್ದುದೇ ಅಷ್ಟಾಷಷ್ಟಿ ಮುಕ್ತಿ ಕ್ಷೇತ್ರ' ಎಂದಷ್ಟೇ ಸಾರಿದರೆ ಸಾಲದು. ಭಕ್ತನ ಕಾಯ ಲಿಂಗಕಾಯ ಎಂದು ಸಾರಿದರೇ ತೃಪ್ತಿ. ಇಷ್ಟಲಿಂಗಧಾರಿಯಾದ ಶರಣನಿಗೆ ಪರಶಿವನು ಅಂದರೆ ಲಿಂಗವು ಕರುಣಿಸದೆ ಇರುವ ಪದವಿಯಿಲ್ಲ ಎಂದು ಈ ಕೆಳಗಿನ ವಚನದಲ್ಲಿ ಹೇಳುತ್ತಿದ್ದಾನೆ:

ಲಿಂಗವಂತಂಗೆ ಲಿಂಗವು ಮಾಡಿದ ಪದವನು ಲಿಂಗವಂತರೆ ಬಲ್ಲರು
ಕೇವಲ ಸಾಕ್ಷಾತ್ಕರವಸ್ತುವನು ಕರಸ್ಥಲದಲ್ಲಿ ಮೂರ್ತಿಯಾಗಿ
ಬಿಜಯಂಗೈಸಿ ಕೊಟ್ಟನಾಗಿ ಸಾಲೋಕ್ಯಪದ
ಅಂಗದಮೇಲೆ ನಿರಂತರ ಪೂಜೆಗೊಳ್ಳುತ್ತಿಹನಾಗಿ ಸಾಮೀಪ್ಯಪದ
ಸದ್ಭಕ್ತರೂಪ ಮಾಡಿದನಾಗಿ ಸಾರೂಪ್ಯಪದ
ಪ್ರಾಣಲಿಂಗವ ಮಾಡಿ ಅವಿನಾಭಾವವ ಮಾಡಿದನಾಗಿ ಸಾಯುಜ್ಯಪದ
ಇಂತೀ ಚತುರ್ವಿಧ ಪದವಾಯಿತ್ತು.
'ಲಿಂಗಮಧ್ಯೇ ಶರಣಂ ಶರಣಮಧ್ಯೇ ಲಿಂಗಂ' ಎಂಬುದಾಗಿ
ಸರ್ವಭೋಗಂಗಳನೂ ಸಹವಾಗಿ ಭೋಗಿಸಿ
ಪ್ರಸಾದವನಿಕ್ಕಿ ಸಲಹಿದನಾಗಿ ಸದ್ಯೋನ್ಮುಕ್ತನು, ಸರ್ವಾಂಗಲಿಂಗವು.
ಈ ತಾತ್ಪರ್ಯದ ಮರ್ಮವನು ಲೋಕದ ಜಡಜೀವಿಗಳೆತ್ತ ಬಲ್ಲರಯ್ಯಾ
ಬಲ್ಲಡೆ ಲಿಂಗಾನುಭಾವಿಗಳೇ ಬಲ್ಲರಯ್ಯಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ.

(ವ.ಸಂ.೨೪೩. ಸಂ.ವ.ಸಂ. ಪು.೫೩೬)

ಇಷ್ಟಲಿಂಗಧಾರಣೆ ಮಾಡಿಸಿಕೊಂಡು ಲಿಂಗಪೂಜೆಯಲ್ಲಿ ಮೈಮರೆತ ಭಕ್ತನ ಸ್ಥಿತಿಯೆಂದರೆ ಅದು ಒಂದು ರೀತಿಯಲ್ಲಿ ತಾದಾತ್ಮ್ಯಾವಸ್ಥೆ. ಆ ಸ್ಥಿತಿಯಲ್ಲಿ ಅವನ ಅಸ್ಮಿತೆ ಅಹಂಕಾರಗಳು ಲಯವಾಗಿಹೋಗಿ ಮನ, ಬುದ್ಧಿ ಶರೀರಗಳು ಕ್ರಿಯಾಶೂನ್ಯವಾಗಿರುತ್ತವೆ. ಅಂಥದೊಂದು ಸ್ಥಿತಿಯನ್ನು ಈ ವಚನದಲ್ಲಿ ನಿರೂಪಿಸುತ್ತಿದ್ದಾನೆ:

ಲಿಂಗವು ಸರ್ವಾಂಗದಲ್ಲಿ ಭರಿತವಾಗಿರಲು
ಮನ ಅರಿಯದು, ತನು ಸೋಂಕದು
ಜ್ಞಾನ ಕಾಣಿಸದು, ಭಾವ ಮುಟ್ಟದು.
ಶಿವಶಿವಾ ವಿಶ್ವಾಸದಿಂ ಗ್ರಹಿಸಿ ಹಿಡಿಯದೆ ಕೆಟ್ಟೆ.
ಅಂತರಂಗ ಬಹಿರಂಗಭರಿತವಾಗಿ ಲಿಂಗವಿದಾನೆ ಇದಾನೆ.
ಮನವೇ ನಿಮಿಷದಲಿ ವಿಶ್ವಾಸದಿಂ ಗ್ರಹಿಸಿದಡೆ
ಸತ್ಯನಪ್ಪೆ ನಿತ್ಯನಪ್ಪೆ ಮುಕ್ತನಪ್ಪೆ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ.

(ವ.ಸಂ.೨೫೫.ಸಂ.ವ.ಸಂ.ಪುಟ.೫೪೭)

ಪ್ರಾಣಲಿಂಗದ ಸ್ವರೂಪ, ಲಕ್ಷಣಗಳ ಬಗ್ಗೆಯೂ ವಿಸ್ತಾರವಾಗಿಯೇ ನಿರ್ವಚಿಸುತ್ತಹೋಗುತ್ತಾನೆ. ಶ್ರೀಗುರು ಕರುಣಿಸಿಕೊಟ್ಟ ಪ್ರಾಣಲಿಂಗವು ಪಂಚಬ್ರಹ್ಮ ಮುಖವುಳ್ಳ ವಸ್ತು. ಅದು ಪರಸ್ವರೂಪಿ. ಹೇಗೆಂದರೆ ಶಿವಸಂಬಂಧವಾದ ಪರಮತೇಜೋಲಿಂಗ ದೇಹಿಗಳಿಂದ, ವ್ಯೋಮಾದಿಭೂತಗಳಿಂದ ಸಮಸ್ತ ತತ್ವಗಳಿಗಿಂತಲೂ ಮೇಲಿನ ತತ್ವವಾಗಿರುವುದರಿಂದಲೇ ಪರವೆಂಬ ಸಂಜ್ಞೆಹೊಂದಿದೆ. ಅನಂತಕೋಟಿ ಬ್ರಹ್ಮಾಂಡಗಳನ್ನೂ ತನ್ನಲ್ಲಿ ಅಡಗಿಸಿಕೊಂಡು ಸಮಸ್ತ ಜಗಜ್ಜನರಿಗೂ ತಾನೇ ಕಾರಣವಾಗಿ ಗೂಢ ಸಂಜ್ಞೆ ಹೊಂದಿದೆ. ಅದು ಬ್ರಹ್ಮಾದಿಗಳ ಹೃತ್ಕಮಲಮಧ್ಯದಲ್ಲಿದ್ದು ವ್ಯೋಮವೇ ಮೊದಲಾದ, ಭೂತಗಳ ಸೃಷ್ಟಿಗೆ ತಾನೇ ಕಾರಣವಾಗಿದೆ. ತನ್ನ ಸೃಷ್ಟಿಶಕ್ತಿಯಿಂದ ಸೃಷ್ಟವಾದ ಸಮಸ್ತ ಸಂಸಾರವೇ ಮೊದಲಾದ ಪ್ರಪಂಚಕ್ಕೆ ಕಾರಣವಾದ್ದರಿಂದ 'ಅನಾದಿವತ್' ಎಂಬ ಸಂಜ್ಞೆ ಹೊಂದಿದೆ. ಇದೆಲ್ಲಕ್ಕೆ ಸಮರ್ಥನೆ ನೀಡುವಂತೆ ವಾತುಳಾಗಮ, ವಾಶಿಷ್ಠ, ಬ್ರಹ್ಮಾಂಡಪುರಾಣ, ಶಿವರಹಸ್ಯ, ಉತ್ತರವಾತುಳ, ಅಥರ್ವಣ ವೇದ, ಸಾಮವೇದ, ಶಿವಧರ್ಮ ಪುರಾಣ, ಗಾರುಡ ಪುರಾಣ, ಯಜುರ್ವೇದ, ಗಾಯತ್ರಿ, ಸ್ಕಂದಪುರಾಣ, ಜ್ಞಾನ ವೈಭವಖಂಡ, ಮಹಿಮ್ನ, ಶಿಧರ್ಮೋತ್ತರ, ಪುರುಷಸೂಕ್ತ, ಉಪನಿಷತ್ತು, ಕೂರ್ಮಪುರಾಣ,

ಋಗ್ವೇದ, ಲೈಂಗ್ಯ, ಸೌರಪುರಾಣ, ಕಾಳಿಕಾಖಂಡ, ಶಂಕರಸಂಹಿತೆ ,ವೀರಾಗಮವೇ ಮೊದಲಾದ ಇಪ್ಪತ್ತನಾಲ್ಕು ಆಕರಗಳಿಂದ ಸಂಸ್ಕೃತದ ಉಲ್ಲೇಖಗಳನ್ನು ಕೊಟ್ಟು ಪ್ರಾಣಲಿಂಗದ ಸ್ವರೂಪವನ್ನು ವಿಶದವಾಗಿ ಮನದಟ್ಟು ಮಾಡಿಕೊಡುವಲ್ಲಿ ಆತನ ಪಾಂಡಿತ್ಯ, ವಿಸ್ತಾರವಾದ ಓದು ಮತ್ತು ಆಧ್ಯಾತ್ಮ ಎಲ್ಲವೂ ಅದ್ಭುತವಾಗಿ ಲಕ್ಷ್ಯಕ್ಕೆ ಬರುತ್ತವೆ.

ಜಂಗಮ

ವೀರಶೈವರ 'ತ್ರಿವಿಧ'ಗಳಾದ ಗುರು, ಲಿಂಗ, ಜಂಗಮದಲ್ಲಿ ಜಂಗಮಕ್ಕೆ ಸರ್ವಶ್ರೇಷ್ಠ ಸ್ಥಾನ. ಅವನು ಪರಮ ಪವಿತ್ರ ಮತ್ತು ಪರಮಪೂಜ್ಯ. ಭವಿತನವನ್ನು ಕಳೆದು ಭಕ್ತನನ್ನಾಗಿಸಿದ ಗುರುವಿಗಿಂತಲೂ, ಅಷ್ಟೇ ಏಕೆ ಲಿಂಗಕ್ಕಿಂತಲೂ ಶ್ರೇಷ್ಠ. ಬಸವಣ್ಣನ ಜಂಗಮಪ್ರೇಮ ಮತ್ತು ಜಂಗಮಭಕ್ತಿಗಳು ವರ್ಣಿಸಲಸದಳ–

೧. "ಮರಕ್ಕೆ ಬೇರು ಬಾಯಿಯೆಂದು ತಳಯಿಂಕೆ ನೀರನೆರೆದಡೆ
ಮೇಲೆ ಪಲ್ಲವಿಸಿತ್ತು ನೋಡಾ
ಲಿಂಗದ ಬಾಯಿ ಜಂಗಮವೆಂದು ಪಡಿಪದಾರ್ಥವ ನೀಡಿದಡೆ
ಮುಂದೆ ಸಕಳಾರ್ಥವನೀವನು
ಆ ಜಂಗಮವ ಹರನೆಂದು ಕಂಡು, ನರನೆಂದು ಭಾವಿಸಿದಡೆ
ನರಕ ತಪ್ಪದು ಕಾಣಾ ಕೂಡಲ ಸಂಗಮದೇವಾ.

(ಬ. ವ. ಸಂ. ೪೨೧. ಪುಟ.೧೦೨)

೨. ಕನ್ನಡಿಯ ನೊಡುವ ಅಣ್ಣಗಳಿರಾ ಜಂಗಮವ ನೋಡಿರೆ
ಜಂಗಮದೊಳಗೆ ಲಿಂಗಯ್ಯ ಸನ್ನಿಹಿತವಾಗಿಪ್ಪ
ಸ್ಥಾವರ ಜಂಗಮದೊಳಗೆ ಲಿಂಗಯ್ಯ ಸನ್ನಿಹಿತನಾಗಿಪ್ಪ
'ಸ್ಥಾವರ ಜಂಗಮ ಒಂದೆ' ಎಂದುದು ಕೂಡಲಸಂಗನ ವಚನ.

(ವ. ಸಂ. ೧೮೭. ಪುಟ.೪೮)

ಇಡೀ ವಿಶ್ವದ ಯೋಗಕ್ಷೇಮದ ಹೊಣೆಹೊತ್ತ ಸರ್ವಸಂಗಪರಿತ್ಯಾಗಿಯೆಂಬ ಕಾರಣಕ್ಕೆ ಜಂಗಮನಿಗೆ ಎಲ್ಲಿಲ್ಲದ ಮಹತ್ವ. ನಡೆದಾಡುವ ಲಿಂಗವೆಂದೇ ಹೆಸರಾದ ಜಂಗಮನು ಮನೆಗೆ ಬಂದರೆ ಲಿಂಗಪೂಜೆ ಮಾಡುತ್ತಿದ್ದರೂ ಮರೆತು ಜಂಗಮನನ್ನು

ಎದುರುಗೊಳ್ಳಬೇಕು. ಜಂಗಮ ಯವುದೇ ಜಾತಿಗೆ ಸೇರಿರಬಹುದು. ಅವನ ಜಾತಿಯನ್ನರಸುವಂತಿಲ್ಲ.

ಉರಿಲಿಂಗಪೆದ್ದಿಯಲ್ಲೂ ಜಂಗಮದ ಶ್ರೇಷ್ಠತೆಯನ್ನು ಹಾಡಿಹೊಗಳುವ ವಚನಗಳಿವೆ. ಆಚಾರಕರ್ಪೂರ, ವಿಚಾರಕರ್ಪೂರ, ಅವಿಚಾರಕರ್ಪೂರವಳವಟ್ಟವನೇ ಜಂಗಮ ಎಂಬುದು ಉರಿಲಿಂಗಪೆದ್ದಿಯ ವಿಚಾರ (ವಚನ:೩೯). ೪೦ನೇ ವಚನದಲ್ಲಿ ಜಂಗಮನ ನಿಜಸ್ವರೂಪವನ್ನು ಈ ಮಾಲಾ ರೂಪಕದಲ್ಲಿ ಚಿತ್ರವತ್ತಾಗಿ ಕಡೆದು ನಿಲ್ಲಿಸಿದ್ದಾನೆ:

ತನಗೆ ಮುಸುಕಿದ ಮಾಯಾ ಪಟಲದ ಭ್ರಮೆಯಂ ಪರಿದು
ಶ್ರೀಗುರುವಿನ ಸದ್ಭಾವಜ್ಞಾನಮನಕರಣದಿಂ
ಉದಯಿಸಿದವನಜಾತ ಸ್ವಯಂಭುವೆಂದರಿದು,
ಆಶೆಯಾಮಿಷ ಕಾಯಗುಣ ಇಂದ್ರಿಯದುರವಣೆ
ಮನೋವಿಕಾರಾದಿಗಳಿಗೆ ಸಿಲ್ಕದೆ
ಆ ಮನ ಮೊದಲಾದ ಕಾರಣಂಗಳ ತನ್ನರಿವಿನಾಜ್ಞೆಯಿಂ
ಲಿಂಗದಲ್ಲಿ ನೆನಹು ನೆಲೆಗೊಳಿಸಿ, ನೋಟವನಿಮಿಷವೆನಿಸಿ
ಅನ್ಯನುಡಿ ಅನ್ಯನಡೆಯೆಲ್ಲಮಂ ಮುನ್ನವೆ ತ್ಯಜಿಸಿ
ಲಿಂಗದ ನಡೆನುಡಿ ಚೈತನ್ಯವಳವಟ್ಟು
ಪರಶಿವನ ಪರತತ್ವವೆ ಪರಮಕರ್ಪೂರವಿಷಯ,
ಶಿಕ್ಷಾದಂಡವೆ ಕಟ್ಟಿಗೆ ಪಂಚಭೂತಕಾಯವನುಳಿದ ಅಕಾಯವೆ ಕಂಥೆ
ಪರಮವೈರಾಗ್ಯವೆ ಯೋಗವಟ್ಟಿಗೆ
ನಿರಾಶಾ ಪಥವೆ ಯೋಗವಾವುಗೆ ನಿಷ್ಕಾಮಿತವೆ ಒಡ್ಯಾಣ
ಬಿಂದು ಚಲಿಸಿದ ಸಂಧಾನಗತಿ ನಿಂದು
ಲಿಂಗಸಂಯೋಗದ ಸಮರತಿಯ ಮುಕ್ತ್ಯಂಗನೆಯೆನಿಸುವ

....

....

ಆ ಭಸ್ಮೋದ್ಧೂಳನ ಪ್ರಕಾಶದಿಂ ಅಜ್ಞಾನತಮವಳಿದ ಸುಜ್ಞಾನಕ್ಷೇತ್ರದಲ್ಲಿ ಸುಳಿವ
ಸುಳುಹೆ ದೇಶಾಂತರವಾಗಿ ಚರಿಸವುದೆಂತೆಂದೊಡೆ:
ಜಂಗಮಸ್ಯ ಗೃಹಂ ನಾಸ್ತಿ ಸ ಗಚ್ಛೇತ್ ಭಕ್ತಮಂದಿರಂ।

ಯದಿ ಗಚ್ಚೇತ್ ಭವೇರ್ಗೇಹಂ ತದ್ದಿ ಗೋಮಾಂಸಭಕ್ಷಣಂ ॥ ಎಂದುದಾಗಿ
ಇಂತೀ ವಿಚಾರದಲ್ಲಿ ಸುಳಿವ ಸುಳುಹೆ ವಿಚಾರ ಕರ್ಪರ,
ವೇದಾತೀತಾಗಮಾತಿತಃ ಶಾಸ್ತ್ರಾತೀತೋ ನಿರಾಶ್ರಯಃ ।
ಆನಂದಾಮೃತ ಸಂತುಷ್ಟೋ ನಿರ್ಮಮೋ ಜಂಗಮಃ ಸ್ಮೃತಃ ॥

ಹೀಗೆ ಜಂಗಮನ ಗುಣವಿಶೇಷಗಳನ್ನು ಹೇಳುತ್ತಾ ಹೋಗುತ್ತಾನೆ. ಸುಮಾರು ೧೨೦ ಸಾಲುಗಳ ೨೫೨ನೇ ವಚನದಲ್ಲೂ ಜಂಗಮ ಬೇರೆಯಲ್ಲ ಶಿವ ಬೇರೆಯಲ್ಲ ಎಂದು ಹೇಳುವಾಗ ಜಂಗಮನಿಗೆ ಅವಮಾನಮಾಡಿದರೆ ಆಗ ಸ್ಥಾವರಲಿಂಗಪೂಜೆ ಮಾಡಿದರೂ ಅದು ನಿರರ್ಥಕ ಎನ್ನುವುದು ಜಂಗಮನ ಔನ್ನತ್ಯವನ್ನು ನಿಸ್ಸಂದೇಹವಾಗಿ ಸಾರುವ ಮಾತಾಗಿದೆ. ಆ ಜಂಗಮನ ವಿಶಿಷ್ಟ ಗುಣಲಕ್ಷಣಗಳನ್ನು ಮತ್ತೂ ನಿರೂಪಿಸುತ್ತಾನೆ:

ಯಸ್ಯ ಚಿತ್ತಂ ಶಿವೇಲೀನಂ ತಸ್ಯ ಜಾತ್ಯಾದಿ ನ ಸ್ಮರೇತ್ ।
ಶಿವಲಿಂಗೇ ಶಿಲಾಬುದ್ಧಿಂ ಕುರ್ವಾಣ ಇವ ಪಾತಕೀ॥

....

....

ಲಿಂಗಧಾರೀ ಮಹಾಲಿಂಗೀ ಲಿಂಗಧ್ಯಾನೀ ನಿರಂತರಂ
ಲಿಂಗಾಲಿಂಗೀ ಮಹತ್ಸಂಗೀ ತತ್ಸ್ಯಾಜ್ಜಂಗಮಲಕ್ಷಣಂ
ಸ್ಥಾವರಂ ಜಂಗಮಶ್ಚೈವ ದ್ವಿವಿಧಂ ಲಿಂಗಮುಚ್ಯತೇ।
ಜಂಗಮಸ್ಯಾವಮಾನೇನ ಸ್ಥಾವರಂ ನಿಷ್ಫಲಂಭವೇತ್॥

ಉರಿಲಿಂಗಪೆದ್ದಿ ಜಂಗಮನನ್ನು ಅದೆಂಥ ಶ್ರೇಷ್ಠ ನೆಲೆಯಲ್ಲಿ ನಿಲ್ಲಿಸುತ್ತಾನೆಂದರೆ ಜಂಗಮವಿಲ್ಲದೆ ಭಕ್ತಿಯ ಕಲ್ಪನೆಯೇ ಇಲ್ಲ:

ಗುರುಲಿಂಗಜಂಗಮ ಒಂದೆ ಎಂದರಿಯದೆ
ಮಾಡುವ ಭಕ್ತಿ ಅದೆ ಅನಾಚಾರ

....

ಜಂಗಮವಿರಹಿತವಾದ ಭಕ್ತಿ ಇಲ್ಲ
ಭಕ್ತಂಗಾದಡೂ ಜಂಗಮವೆ ಬೇಕು
ಜಂಗಮಕ್ಕಾದಡೂ ಜಂಗಮವೆ ಬೇಕು

ತ್ರಿವಿಧ ದಾಸೋಹ

ಅಷ್ಟಾವರಣಗಳಲ್ಲಿ ಪರಮಪವಿತ್ರವೆಂದು ಪರಿಗಣಿತವಾದ ಗುರು, ಲಿಂಗ, ಜಂಗಮಕ್ಕೆ ಮಾಡಬೇಕಾದ ಸೇವೆಯೇ ತ್ರಿವಿಧ ದಾಸೋಹ. ಭಕ್ತನು ಸೇವಕಭಾವದಿಂದ (ದಾಸೋಹಂ ಭಾವ) ಈ ಮೂರಕ್ಕೂ ಸೇವೆ ಸಲ್ಲಿಸುವುದು ತನ್ನ ಆದ್ಯ ಕರ್ತವ್ಯವೆನ್ನುವುದೇ ಈ ತ್ರಿವಿಧ ದಾಸೋಹದ ಹಿಂದಿನ ತತ್ವ. ತನು ಮನ ಧನಗಳಿಂದ ಗುರು, ಲಿಂಗ ಜಂಗಮದ ಸೇವೆಯನ್ನು ಅತಃಕರಣಪೂರ್ವಕವಾಗಿ ಮಾಡಬೇಕು. ಗುರುಸೇವೆಯಿಂದ ತನು, ಲಿಂಗಸೇವೆಯಿಂದ ಮನ, ಜಂಗಮ ಸೇವೆಯಿಂದ ಧನ ಕರಗಿಸಬೇಕು. ಉರಿಲಿಂಗ ಪೆದ್ದಿ ತ್ರಿವಿಧ ದಾಸೋಹದ ಮಹತ್ವ, ಪ್ರಾಧಾನ್ಯಗಳನ್ನು ಬಹಳಷ್ಟು ವಚನಗಳ ಮೂಲಕ ಸ್ಥಾಪಿಸುತ್ತಾನೆ,

ತನುವರ್ಪಿತ ಗುರುವಿಂಗೆ
ಮನವರ್ಪಿತ ಲಿಂಗಕ್ಕೆ
ಧನವರ್ಪಿತ ಜಂಗಮಕ್ಕೆ
ಇಂತೀ ತ್ರಿವಿಧಕ್ಕೆ ಅರಿದರ್ಪಿಸಬಲ್ಲಡೆ
ಅರ್ಪಿತ ಈ ತ್ರಿವಿಧ ಸವೆಯದೆ ಅರ್ಪಿಸುವ ಅರ್ಪಿತವೆಂತೊ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ? (ವ.ಸಂ.೩.ಸಂ.ವ.ಸಂ.ಪುಟ.೩೯೭)

ಚಲ್ವ ಭಕ್ತಿ, ಚಲ್ವಮುಕ್ತಿಗಳೆಂದರೇನೆ ಗುರುಲಿಂಗ ಜಂಗಮಕ್ಕೆ ತನುಮನಧನವ ಸವೆಸುವುದು; ಅದೇ ಸರ್ವಸಿದ್ಧಿ ಎಂದು ಹೇಳಿ ಗುರು, ಲಿಂಗ ಜಂಗಮಕ್ಕೆ ಯಾವ ಭಾವದಲ್ಲಿ ಸೇವೆ ಸಲ್ಲಿಸಬೇಕು ಎನ್ನುವುದನ್ನು ಅತ್ಯಂತ ಮರ್ಮಸ್ಪರ್ಶಿಯಾಗಿ ಹೇಳುತ್ತಾನೆ. ಸೇವೆಯಲ್ಲಿ ಕರುಳುಬಳ್ಳಿಯ ಸಂಬಂಧದಲ್ಲಿರುವಂಥ ಆತ್ಮೀಯತೆ, ಪ್ರೀತಿ ಇರಬೇಕು ಎನ್ನುವುದು ಪೆದ್ದಿಯ ಭಾವನೆ.

ಪುತ್ರ ಮಿತ್ರ ಕಳತ್ರಕ್ಕೆ ಸ್ನೇಹಿಸುವಂತೆ
ಶ್ರೀ ಗುರುಲಿಂಗಜಂಗಮಕ್ಕೆ ಸ್ನೇಹಿಸಬೇಕು
ಸ್ನೇಹವೇ ಬಾತೆ ಕಾಣಿರೋ
ಲಿಂಗಕ್ಕೆ ಸ್ನೇಹವೇ ಭಕ್ತಿ ಕಾಣಿರೋ
ಸ್ನೇಹವೇ ಭಕ್ತಿಗೆಮೂಲ ಕಾಣಿರೋ

–ಎಂದು ಮಿತ್ರಸಂಹಿತೆಯನ್ನು ಮುಂದಿಡುತ್ತಾನೆ.

ನಿರ್ವಂಚನೆಯಿಂದ ನಿರುಪಾಧಿಕನಾಗಿ ತ್ರಿವಿಧ ದಾಸೋಹಿಯಾದ ವ್ಯಕ್ತಿಯೆಂದರೆ ಅವನೇ ಷಟ್ಸ್ಥಲ ಬ್ರಹ್ಮಿ, ಆತನೇ ಶರಣ, ಅವನೇ ಸುಜ್ಞಾನಿ ಎಂದು ಇನ್ನೊಂದು ವಚನದಲ್ಲಿ ಹೇಳಿದ್ದಾನೆ. ನಿಜವಾದ ಭಕ್ತರು, ಗುರು, ಲಿಂಗ ಜಂಗಮದಲ್ಲಿ ಯಾವುದೇ ರೀತಿಯ ಭೇದವೆಣಿಸದೆ ಸಮಾನವಾಗಿ ಕಾಣಬೇಕೆಂಬುದು ಕೂಡ ಈ ತ್ರಿವಿಧದಾಸೋಹದ ತಿರುಳು. ಪೆದ್ದಿ ಅದನ್ನು ಹಲವಾರು ವಚನಗಳಲ್ಲಿ ಮನದಟ್ಟುಮಾಡುತ್ತಾನೆ.

"ಗುರುಲಿಂಗಜಂಗಮವನೊಂದೆ ಎಂದು ನಿಶ್ಚೈಸಿ, ಇದೇ ಅಧಿಕ, ಇದರಿಂದಬಿಟ್ಟು ಮತ್ತಾವುದೂ ಅಧಿಕವಿಲ್ಲ. ಗುರುಲಿಂಗಜಂಗಮದಲ್ಲಿಯ ಭಕ್ತಿಯೇ ಭಕ್ತಿ ಅರ್ಚನೆಯೇ ಅರ್ಚನೆ" ಎಂದು ಒಂದು ವಚನದಲ್ಲಿ ಹೇಳಿದರೆ (ವ.ಸಂ. ೧೪೧) ಇನ್ನೊಂದು ವಚನದಲ್ಲಿ–

ಶ್ರೀಗುರುಲಿಂಗಜಂಗಮ ಒಂದೆಯೆಂದು
ಭಾವಿಸದರ್ಚಿಸದ ವಿಚಾರಿಸದ ದುರ್ಭಾವಿ ಉಪಾಧಿಕನು, ವಂಚಕನು
ದಾಸೋಹವ ಮಾಡಲರಿಯದಹಂಕಾರಿ, ಆಭಾಸನು ಅಪೂಜ್ಯನು
ಭಕ್ತನಲ್ಲ, ಮಾಹೇಶ್ವರನಲ್ಲ –ಎನ್ನುತ್ತಾನೆ.

ಅದು ಸಾಲದೆಂಬಂತೆ "ವೇದ ಶಾಸ್ತ್ರ ಪುರಾಣ ಆಗಮಗಳ ಮರ್ಮವನರಿದ ಫಲ ದಾಸೋಹವಯ್ಯಾ" ಎನ್ನುತ್ತಾನೆ ಮತ್ತು "ಇವನ್ನೆಲ್ಲ ಅರಿತು ದಾಸೋಹವಿಲ್ಲದಿದ್ದಡೆ ಆ ಓದು ಗಿಳಿ ಓದಿನಂತೆ" ಎಂದು ನಿರ್ಣಾಯಕವಾಗಿ ಹೇಳುತ್ತಾನೆ.

ಅಷ್ಟಾವರಣಗಳಲ್ಲಿ ಸೇರಿರುವ ಮಂತ್ರ, ವಿಭೂತಿ, ರುದ್ರಾಕ್ಷಿಗಳ ಕುರಿತೂ ಅನೇಕ ವಚನಗಳಲ್ಲಿ ಪ್ರಸ್ತಾಪಿಸುತ್ತಾನೆ.

ವೀರಶೈವರ ಪರಮಪೂಜ್ಯ ಮಂತ್ರಗಳೆಂದರೆ ಪ್ರಸಿದ್ಧ ಪಂಚಾಕ್ಷರಿ ಮಂತ್ರವಾದ "ನಮಃ ಶಿವಾಯ", ಮತ್ತು ಷಡಕ್ಷರಿ ಮಂತ್ರವೆನಿಸಿದ "ಓಂ ನಮಃ ಶಿವಾಯ". ಮಂತ್ರವೆಂದರೆ ಜೀವಿಗಳನ್ನು ರಕ್ಷಿಸುವ ಯಂತ್ರಸಾಧನ ಎಂಬ ಅರ್ಥವಿದೆ. .ಮೋಕ್ಷಸಾಧನೆಯಲ್ಲಿ ಮಂತ್ರದ್ದು ಮಹತ್ವದ ಪಾತ್ರ. ಉರಿಲಿಂಗಪೆದ್ದಿಯು ಪಂಚಾಕ್ಷರಿ ಮಂತ್ರವನ್ನು ಕುರಿತು ನಾಲ್ಕೈದು ವಚನಗಳನ್ನು ರಚಿಸಿದ್ದರೆ ಷಡಕ್ಷರಿ ಮಂತ್ರದ ಮಹತ್ವವನ್ನು ಕುರಿತೇ ಸುಮಾರು ಹತ್ತು ವಚನಗಳನ್ನು ರಚಿಸಿದ್ದಾನೆ. ಪಂಚಾಕ್ಷರಿಯೇ ಎಲ್ಲ ಮಂತ್ರಗಳಿಗೂ ಉತ್ಪತ್ತಿ, ಸ್ಥಿತಿ, ಲಯಸ್ಥಾನ; ಎಲ್ಲ ಕಾರಣಗಳಿಗೂ ಮೂಲ.

ನಿಜವಾದ ವೇದವಿದನೆಂದರೆ, ಶಾಸ್ತ್ರಕೋವಿದನೆಂದರೆ, ಮಹಾಮಹಿಮನೆಂದರೆ ಪಂಚಾಕ್ಷರಿಯನ್ನು ತಿಳಿದಿರುವ ಸದ್ಭಕ್ತ ಎಂದು ಹೇಳಿ

ಸಪ್ತಕೋಟಿಮಹಾಮಂತ್ರಂ ಉಪಮಂತ್ರಸ್ತನೇಕತಃ ।
ಪಂಚಾಕ್ಷರ ಪ್ರತಿಲೀಯಂತೇ ಪುನಸ್ತಸ್ಯವರ್ಗತಃ ॥

ಎನ್ನುತ್ತಾನೆ. ಮುಂದೆ ಇನ್ನೊಂದು ವಚನದಲ್ಲೂ ಪಂಚಾಕ್ಷರಿಯ ಮಹತ್ವವನ್ನು ಕುರಿತು–

ವೇದಾದಿ ಅಷ್ಟಾದಶ ವಿದ್ಯೆಗಳ ಸರ್ವಮಂತ್ರಗಳ ಮೂಲವು ಶ್ರೀಪಂಚಾಕ್ಷರಿ
ಶಿವಾದಿ ಸರ್ವ ತತ್ವಮೂಲವು
ಶ್ರೀ ಗುರುಲಿಂಗಜಂಗಮ ಪ್ರಾಣ ಸರ್ವಸ್ವಮೂಲವು

ಎಂದು ಘೋಷಿಸುವುದೇ ಅಲ್ಲದೆ

ಅಂತ್ಯಜನಾಗಲಿ ಅಗ್ರಜನಾಗಲಿ
ಮೂರ್ಖನಾಗಲಿ, ಪಂಡಿತನಾಗಲಿ
ಜಪಿಸುವುದು ಶ್ರೀ ಪಂಚಾಕ್ಷರಿಯ
ಆ ಜಪದಿಂದ ರುದ್ರನಪ್ಪುದು ತಪ್ಪದು

–ಎಂದು ಅದಕ್ಕೆ ಅಧಿಕೃತತೆಯನ್ನು ನೀಡುವಂತೆ 'ಲೈಂಗ್ಯ'ದ "ಅಂತ್ಯಜೋಪ್ಯ ಗ್ರಜೋವಾಪಿ ಮೂರ್ಖೋ ವಾ ಪಂಡಿತೋಽಪಿವಾ ಪಂಚಾಕ್ಷರಿ ಜಪೇನ್ನಿತ್ಯಂ ಸ ರುದ್ರೋ ನಾತ್ರ ಸಂಶಯ" ಎಂಬ ಉಕ್ತಿಯನ್ನು ಉದ್ಧರಿಸುತ್ತಾನೆ

ಆಗನೇ ವಚನದಲ್ಲಿ ಷಡಕ್ಷರೀ ಮಂತ್ರದ ಬಗ್ಗೆ ಹೇಳುವಾಗ ಅದರ ಒಂದೊಂದೂ ಅಕ್ಷರದ ಉಚ್ಚಾರ, ಅದು ಏನನ್ನು ಸಂಕೇತಿಸುತ್ತದೆ ಎಂಬುದನ್ನೆಲ್ಲ ವಿವರವಾಗಿ ತಿಳಿಸಿ

"ಷಡಕ್ಷರ ಜಪಾನ್ನಾಸ್ತಿ ಸರ್ವೇಷಾಂ ಬಂಧನಂ ತಥಾ ।
ತನ್ಮಂತ್ರಂ ಚ ಜಪನ್ ಭಕ್ತ್ಯಾ ಮುಕ್ತೋ ನ ಸಂಶಯಃ॥"

ಎಂದು ನಿರ್ಣಾಯಕವಾಗಿ ಸಾರಿ

"ಜನ್ಮದ ಭವಬಂಧನವ ತೊಡೆಯ ಬಲ್ಲಡೆ
ಷಡಕ್ಷರವೇ ಬೀಜಮಂತ್ರ"

ಎಂದು ಪುನರುಚ್ಚರಿಸುತ್ತಾನೆ. ವಿಭೂತಿ ರುದ್ರಾಕ್ಷಿಗಳ ಮಹತ್ವದ ಬಗ್ಗೆಯೂ ಕೆಲವೇ ಆದರೂ ಸಾರವತ್ತಾದ ಮಾತುಗಳನ್ನು ಹೇಳಿದ್ದಾನೆ. "ದುರಿತ ಸಂಕುಳವನೊರಸಿ ಅಂತರವಿರಳಜ್ಞಾನ ಸಂಕೇತವಾಗಿ ಶರಣರ ನೊಸಲಿಗೆ ಶೃಂಗಾರವಾಗಿರುವ" ವಿಭೂತಿಯ ಮಹತ್ವವೆಂಥದೆಂದರೆ

"ಅಷ್ಟಾಷಷ್ಟಿತೀರ್ಥವಂ ಮಿಂದ ಫಲ
ಒಂದುದಿನದ ಭಸ್ಮಸ್ನಾನಕ್ಕೆ ಸರಿಬಾರದು
ಕಾಲಕರ್ಮದ ದೆಸೆಯನೊರೆಸಬಲ್ಲಡೆ
ಶಿವನ ಧೂಳಿತಮಪ್ಪ ಶ್ರೀವಿಭೂತಿಗೆ ಸಮನಾದ್ದು ಬೇರಿಲ್ಲ"

ಎಂದು ಇತ್ಯರ್ಥಮಾಡುತ್ತಾನೆ. ಹಾಗೆಯೇ ರುದ್ರಾಕ್ಷಿಗಳೆಂದರೆ ತ್ರಿಪುರದಹನ ಕಾಲದಲ್ಲಿ ಪರಮೇಶ್ವರನ ನೇತ್ರಗಳಿಂದ ಮೂಡಿಬಂದವು ಎನ್ನುತ್ತಾನೆ. ಪಂಚಮುಖದ ರುದ್ರಾಕ್ಷಿಯೆಂದರೆ ಶಿವನ ಪಂಚಮುಖಗಳಾದ ಸದ್ಯೋಜಾತ, ವಾಮದೇವ ಅಘೋರ, ಈಶಾನ, ಮತ್ತು ತತ್ಪುರುಷಗಳೇ ಎಂಬ ಭಾವ ರುದ್ರಪದವಿಯನೀವ ರುದ್ರಾಕ್ಷಿ ಎಂದು ಅದರ ಬಗ್ಗೆ ಆದರ ವ್ಯಕ್ತಪಡಿಸುತ್ತಾನೆ.

ಹೀಗೆಯೇ ಪಾದೋದಕ ಪ್ರಸಾದಗಳ ಮಹತ್ವ, ಶ್ರೇಷ್ಠತೆ ಕುರಿತಂತೆಯೂ ಕೆಲವೇ ವಚನಗಳಲ್ಲಿ ತಿಳಿಸಿದ್ದಾನೆ.

ಪ್ರಸಾದವೆಂದರೆ ಜಂಗಮ ಆರೋಗಣೆಯಮಾಡಿ ಮಿಕ್ಕುದು ಪ್ರಸಾದ ಎಂದು ಹೇಳಿದರೆ ಅಷ್ಟೇ ಸಾಲದು. ಪೆದ್ದಿಯ ಪ್ರಕಾರ ಪ್ರಸಾದ ಪರಾಪರವಾದುದು.

ದೀಕ್ಷಾಮೂರ್ತಿ ಪರಶಿವ ಗುರುಲಿಂಗಕ್ಕೆ
ತನುಮನಧನವನರ್ಪಿಸುವುದು
ಪೂಜಕಾರ ಪರಮಗುರು ಮಹಾಲಿಂಗಕ್ಕೆ
ತನುಮನಧನವರ್ಪಿಸಿ
ಶಿಕ್ಷಾಮೂರ್ತಿ ಪರಮಗುರು ಜಮಗಮಲಿಂಗಕ್ಕೆ
ತನುಮನಧನವರ್ಪಿಸಿ ಪ್ರಸನ್ನ ಪ್ರಸಾದವ ಪಡೆದು ಭೋಗಿಸುವುದು

ಭಕ್ತನೊಬ್ಬ ಷಟ್ಸ್ಥಲದ ಸೋಪಾನವನ್ನೇರುತ್ತ ಜೀವನಸಾರ್ಥಕ್ಯವನ್ನು ಮಾಡಿಕೊಳ್ಳುವ ಬಗೆಯನ್ನು ಒಂದೆರಡು ವಚನಗಳಲ್ಲೇ ಆದರೂ ಪ್ರಸ್ತಾಪಿಸುತ್ತಾನೆ.

ಶಿವಪಾರಮ್ಯ: ವೇದ, ಶಾಸ್ತ್ರ, ಪುರಾಣಾದಿ ವೈದಿಕ ಆಕರಗಳ ಆಧಾರ; ವೈದಿಕ ದೈವಗಳ ಮತ್ತು ವೈದಿಕರ ವಿರುದ್ಧದ ಬಂಡಾಯ: ಕೆಳವರ್ಗದಿಂದ ಬಂದು ತನ್ನ ಸಂಕಲ್ಪಶಕ್ತಿ ಮತ್ತು ಸಾಧನೆಯ ಬಲದಿಂದ ಉನ್ನತ ಸ್ತರಕ್ಕೇರಿದ್ದ ಉರಿಲಿಂಗಪೆದ್ದಿ ಕೇವಲ ಅನುಭಾವಿ ಮತ್ತು ಶರಣನಲ್ಲ. ಸಮಾಜದಲ್ಲಿ ಹಾಸುಹೊಕ್ಕಾಗಿದ್ದ ಜಾತೀಯ ಅಸಮಾನತೆಯ ವಿರುದ್ಧ, ಅಸಮಾನತೆಗೆ ಕಾರಣವಾದ ಉಚ್ಚವರ್ಗದವರ ವಿರುದ್ಧ, ಅವರ ಶಾಸ್ತ್ರಗಳ ವಿರುದ್ಧ, ಒಟ್ಟಾರೆ ವ್ಯವಸ್ಥೆಯ ವಿರುದ್ಧ ಅವನಲ್ಲಿ ತೀವ್ರವಾದ ಅಸಮಾಧಾನ, ಕಹಿ ಇದ್ದೇ ಇತ್ತು. ಅವನ ವಚನಗಳಲ್ಲಿ ಇವುಗಳ ವಿರುದ್ಧದ ಬಂಡಾಯ ತೀವ್ರ ಸ್ವರೂಪವನ್ನು ತಳೆದಿರುವುದು ಸುಸ್ಪಷ್ಟ. ಆದರೆ ಶೋಷಕ ನೆಲೆಯ ಮೇಲ್ತುದಿಯಲ್ಲಿರುವ ಬ್ರಾಹ್ಮಣರ ಬಗೆಗಿನ ವಿರೋಧದಷ್ಟೇ ಉಗ್ರವಾಗಿ ವೇದೋಪನಿಷತ್ತುಗಳ ವಿಚಾರದಲ್ಲಿ ಇದು ಪೂರ್ಣರೂಪದ ವಿರೋಧದಂತೆ ಕಂಡು ಬರುವುದಿಲ್ಲ. ಒಂದು ರೀತಿಯ ದ್ವಂದ್ವ ಅವನಲ್ಲಿ ಇರುವಂತಿದೆ. ವೀರಶೈವದ ನಿಷ್ಠಾವಂತ ಅನುಯಾಯಿಗೆ ಇರಬೇಕಾದ್ದು ತನ್ನ ಅರಾಧ್ಯ ದೈವವಾದ ಶಿವನಲ್ಲಿ ಅಚಲವಾದ ಅನನ್ಯವಾದ ಮಾಹೇಶ್ವರ ನಿಷ್ಠೆ. ಆ ನಿಷ್ಠೆ ವ್ಯಕ್ತವಾಗುವ ಬಗೆಗಳಲ್ಲಿ ಹಲವಾರು ಶಾಸ್ತ್ರ, ಪುರಾಣ, ಆಗಮಗಳ ಆಧಾರಕೊಟ್ಟು ಶಿವಪಾರಮ್ಯವನ್ನು ಸಂದೇಹಕ್ಕೆಡೆಯಿಲ್ಲದಂತೆ ಸ್ಥಾಪಿಸುವುದು ಒಂದು ಬಗೆಯಾದರೆ ಅನ್ಯದೈವಗಳು ಶಿವನಿಗಿಂತ ಯಾವ ರೀತಿಯಲ್ಲೂ ಮೇಲಲ್ಲವೆಂದು ಸ್ಥಾಪಿಸಲು ಅನ್ಯದೈವವನ್ನು ಇಳಿಸುವುದೂ ಇನ್ನೊಂದು ಬಗೆ. ಉರಿಲಿಂಗಪೆದ್ದಿ ಈ ಎರಡೂ ವಿಧಾನಗಳಿಂದ ಶಿವಪಾರಮ್ಯ ಮತ್ತು ಶಿವನಿಷ್ಠೆಗಳನ್ನು ಸ್ಥಾಪಿಸುವ ಕೆಲಸವನ್ನು ಮಾಡುತ್ತಾನೆ. ಶಿವನನ್ನು ಕುರಿತಾದ ನಿಷ್ಠೆ, ಹರಪಾರಮ್ಯ ಇವುಗಳನ್ನು ಸ್ಥಾಪಿಸುವ ಸಂದರ್ಭದಲ್ಲಿ ಅವನು ಅದುವರೆಗಾಗಲೇ ಶ್ರೀವೈಷ್ಣವಧರ್ಮದ ಆಚಾರ್ಯರು ಅನುಯಾಯಿ ಗಳಿಂದ ಸರ್ವದೇವೋತ್ತಮನೆಂದು ಆರಾಧಿಸಲ್ಪಡುತ್ತಿದ್ದ ವಿಷ್ಣುವನ್ನು, ವಿಷ್ಣುಭಕ್ತರನ್ನು ಲೇವಡಿಮಾಡುವ ಖಂಡಿಸುವ ವಚನಗಳನ್ನು ಧಾರಾಳವಾಗಿಯೇ ರಚಿಸಿರುವುದು ಕಂಡುಬರುತ್ತದೆ.

ಶಿವನನ್ನು ಲಿಂಗರೂಪದಲ್ಲಿ ಪೂಜಿಸುವುದು ಹರಪ್ಪ-ಮೊಹೆಂಜೋದಾರೋ ಕಾಲಕ್ಕಾಗಲೇ ರೂಢಿಯಲ್ಲಿದ್ದಿತೆಂದು ಚರಿತ್ರಕಾರರು ಹೇಳುತ್ತಾರೆ. ಋಗ್ವೇದದಲ್ಲಿ ಕೂಡ ಇದರ ಪ್ರಸ್ತಾಪವಿದೆ. ಋಗ್ವೇದದಲ್ಲಿ ರುದ್ರನನ್ನು ಸ್ತುತಿಸುವ ಸೂಕ್ತಗಳಿವೆ. ಮೊದಲಿಗೆ ಅವನೊಬ್ಬ ಅಪ್ರಧಾನ ದೇವತೆಯಾದರೂ ಬರುಬರುತ್ತ ಅವನಿಗೆ

ಸರ್ವೋಚ್ಚ ದೇವತೆಯ ಸ್ಥಾನ ಸಿಕ್ಕಿತು. ಹಾಗೂ ಶಿವ, ರುದ್ರರಲ್ಲಿ ಅಭೇದವುಂಟಾಗಿ ಅವರಿಬ್ಬರೂ ಒಬ್ಬನೇ ದೇವರೆಂದು ಪರಿಗಣಿಸಲ್ಪಟ್ಟುದು ವಿಸ್ಮಯದ ಸಂಗತಿ. ಇನ್ನು ಉಪನಿಷತ್ತುಗಳ ಕಾಲಕ್ಕೆ ಶಿವನ ಬಗೆಗಿನ ಕಲ್ಪನೆ ಅತ್ಯುನ್ನತ ಹಂತಕ್ಕೇರಿ ಅವನೇ ಪರಬ್ರಹ್ಮ ಎಂದಾಯಿತು. ಶ್ವೇತಾಶ್ವತರೋಪನಿಷತ್ತಿನಲ್ಲಿ 'ಅಣೋರಣೀಯಾನ್ ಮಹತೋಮಹೀಯಾನ್' ಎಂಬಂಥ ವರ್ಣನೆಗಳು ಇವೆ. ಭರ್ಗ, ಭಗವಾನ್, ಮಹಾದೇವ, ಮಹೇಶ್ವರ, ಈಶಾನ ಎಂಬ ಹೆಸರುಗಳೆಲ್ಲ ಅವನನ್ನು ಹೇಳುವಂಥವೇ. ಹೀಗಾಗಿ ವೈದಿಕಕ್ಕೆ ವಿರುದ್ಧವಾಗಿ, ಅದಕ್ಕೊಂದು ಪರ್ಯಾಯ ಧರ್ಮವೆಂಬಂತೆ ಪ್ರಾರಂಭವಾದ ವೀರಶೈವಧರ್ಮ ವೈದಿಕದ ಅನೇಕ ಆಚರಣೆಗಳನ್ನು ನಂಬಿಕೆಗಳನ್ನು ಉಗ್ರವಾಗಿ; ಮುಖ್ಯವಾಗಿ ಅದರ ಯಜ್ಞಯಾಗಾದಿಗಳು ಆ ಸಂಬಂಧವಾದ ಪ್ರಾಣಿಬಲಿ, ಅದರ ವರ್ಣಾಶ್ರಮ ವಿಭಜನೆ ಅದಕ್ಕೆ ಲಗತ್ತಾದ ಜಾತೀಯ ಮೇಲು-ಕೀಳಿನ ತಾರತಮ್ಯ, ಮಡಿವಂತಿಕೆ ಇತ್ಯಾದಿಗಳನ್ನೆಲ್ಲ ಎಷ್ಟೇ ಉಗ್ರವಾಗಿ ವಿರೋಧಿಸಿದರೂ ವೈದಿಕರೂ ಪೂಜಿಸುತ್ತಿದ್ದ ಶಿವನನ್ನು ಆರಾಧ್ಯದೇವತೆಯಾಗಿ ಅಂಗೀಕರಿಸಿದ್ದರಿಂದ ಶಿವಪಾರಮ್ಯ, ಶಿವನ ಶ್ರೇಷ್ಠತೆ ಹರಸರ್ವೋತ್ತಮತೆಗಳನ್ನು ಸ್ಥಾಪಿಸಲು ಅದೇ ವೈದಿಕ ಆಧಾರಗಳ ಮೊರೆಹೋಗಬೇಕಾಗಿಬಂದದ್ದೊಂದು ವಿಪರ್ಯಾಸವೇ ಸರಿ. "ವೇದಕ್ಕೆ ಒರೆಯ ಕಟ್ಟುವೆ ಶಾಸ್ತ್ರಕ್ಕೆ ನಿಗಳವನಿಕ್ಕುವೆ, ತರ್ಕದ ಬೆನ್ನ ಬಾರನ್ನೆತ್ತುವೆ ಆಗಮದ ಮೂಗ ಕೊಯ್ವೆ" ಎಂದೆಲ್ಲ ಹೇಳಿದ ಬಸವಣ್ಣನವರು ಮತ್ತು ಚೆನ್ನಬಸವಣ್ಣ ಕೂಡ ಶಿವಪಾರಮ್ಯ ಸ್ಥಾಪಿಸಲು ವೇದ, ಉಪನಿಷತ್ತು ಮತ್ತು ಆಗಮಗಳ ಅನೇಕ ಉಕ್ತಿಗಳನ್ನು ತಮ್ಮ ವಚನಗಳಲ್ಲಿ ಧಾರಳವಾಗಿ ಉಲ್ಲೇಖಿಸಿರುವುದುಂಟು. ಇನ್ನು ಉರಿಲಿಂಗಪೆದ್ದಿಯಾದರೋ ವೇದ ಉಪನಿಷತ್ತುಗಳೇ ಮೊದಲಾದ ಸಕಲಶಾಸ್ತ್ರಗಳಲ್ಲಿ ನಿಷ್ಣಾತಿಯನ್ನು ಸಂಪಾದಿಸಿದ್ದನಾಗಿ ಶಿವಪಾರಮ್ಯವನ್ನು ಸ್ಥಾಪಿಸಲು ಅವುಗಳಿಂದ ಪುಂಖಾನುಪುಂಖವಾಗಿ ಶ್ಲೋಕಗಳನ್ನು, ಶ್ಲೋಕಭಾಗಗಳನ್ನು ತನ್ನ ವಚನಗಳಲ್ಲಿ ಉಲ್ಲೇಖಿಸುತ್ತಾನೆಂಬುದನ್ನು ಈಗಾಗಲೇ ಹೇಳಿದೆ. "ಛಲಬೇಕು ಶರಣಂಗೆ ಪರದೈವವೊಲ್ಲೆಂಬ"ಎಂಬ ಬಸವಣ್ಣನವರ ವಚನಕ್ಕೆ ತಕ್ಕಂತೆ ಶಿವನನ್ನು ಹೊರತುಪಡಿಸಿದ ಇತರೆ ಯಾವ ದೈವಗಳೂ ಶಿವನಿಗೆ ಯಾವ ರೀತಿಯಲ್ಲೂ ಸಮನಲ್ಲ ಎಂದು ಹೇಳಿದರಷ್ಟೇ ಅವನಿಗೆ ತೃಪ್ತಿಯಿಲ್ಲ, ಅವುಗಳ ಕೀಳ್ಮೆಯನ್ನು, ಅವುಗಳ ಅಲ್ಪತೆಯನ್ನು ಸಾಧಿಸಲು ತನ್ನೆಲ್ಲ ಅಪಾರವಾದ ವೇದ, ಶಾಸ್ತ್ರ, ಆಗಮ ಮತ್ತು ಪುರಾಣಗಳ ಓದನ್ನು

ಬಳಸಿಕೊಂಡು ಪಾತಾಳಗರಡಿ ಹಾಕಿ ಆಧಾರಗಳನ್ನು ಹೆಕ್ಕಿ ಹೆಕ್ಕಿ ಕೊಡುವುದನ್ನು ನೋಡಿದಾಗ ಒಂದುಕಡೆ ಅವನ ಶಾಸ್ತ್ರಪಾಂಡಿತ್ಯ, ಆಳವಾದ ಸಂಸ್ಕೃತ ಭಾಷಾ ಪಾಂಡಿತ್ಯ ಕಂಡು ಬೆರಗು ಮೂಡಿದರೆ ಇನ್ನೊಂದೆಡೆ ಗರುಡನಂತೆ ಆಧ್ಯಾತ್ಮದ ವಿಸ್ತಾರವಾದ ಆಗಸದಲ್ಲಿ ಸರ್ವತಂತ್ರ ಸ್ವತಂತ್ರನಾಗಿ ವಿಹರಿಸಬೇಕಾದ ಜ್ಞಾನಿಯನ್ನು ಕೂಡ ಧರ್ಮದ ಉಗ್ರ ಆವೇಶ ಹೀಗೆ ಯಾವುದೋ ಸಂಕುಚಿತ ಪರಿಧಿಯಲ್ಲಿ ಕಟ್ಟಿಹಾಕಿಬಿಟ್ಟಿತಲ್ಲ ಎಂದು ವಿಷಾದವೆನಿಸಿದರೂ ಇದು 'pay in his own coin' ಎಂಬ ನುಡಿಗಟ್ಟಿಗೆ ತಕ್ಕಂತೆ ವೈದಿಕರ ಶಾಸ್ತ್ರ, ಪುರಣಾಧಾರಗಳಿಂದಲೇ ಅವರನ್ನು ಕಟ್ಟಿಹಾಕುವ ಅವನ ರೀತಿ ವಿಸ್ಮಯಕಾರಿಯಾಗಿದೆ. 'ದೇವನೊಬ್ಬ ನಾಮ ಹಲವು' ಎಂದು ಬಸವಣ್ಣನವರು ಹೇಳಿದರೂ ಆ ದೇವನು ಮಹಾದೇವ ನಲ್ಲದೆ ಬೇರೊಬ್ಬನಲ್ಲ ಎಂಬುದೇ ತಾತ್ಪರ್ಯ. ಶಿವನೊಬ್ಬನೇ ದೇವನೆಂದು ಒಂದುಕಡೆ ಘಂಟಾಘೋಷವಾಗಿ ಹೇಳುತ್ತ ಇನ್ನೊಂದು ಕಡೆ ಆ ಶಿವನು ವಿಷ್ಣು ಹರಿ, ಇಂದ್ರ, ಬ್ರಹ್ಮ ಮೊದಲಾದವರಿಗಿಂತ ಹೆಚ್ಚೆಂದು ಹೇಳುವಾಗಲಾದರೂ ಕನಿಷ್ಠ ಅವರ ದೈವತ್ವವನ್ನಂತೂ ಒಪ್ಪಿದಂತೆಯೇ ಆಗುತ್ತದೆನ್ನುವುದೊಂದು ವಿಪರ್ಯಾಸ. ಇದನ್ನು ವಿಸ್ತಾರವಾಗಿಯೇ ನೋಡಬಹುದು.

ಉರಿಲಿಂಗಪೆದ್ದಿ ಶಿವನ ಭಕ್ತಶಿರೋಮಣಿ. ಅವನು ದೇವಾಧಿದೇವನೆಂದು ಭಾವಿಸಿರುವವನು ಮತ್ತು ಈ ಜಗತ್ತಿನ ಸೃಷ್ಟಿಗೆ ಮೂಲಕಾರಣ ಪರವಸ್ತು ಪರಶಿವಮೂರ್ತಿಯಲ್ಲದೆ ಬೇರೆಯಲ್ಲ ಎಂದು ಅಚಲವಾಗಿ ನಂಬಿರುವವನು. "ಶಿವಂ ಪರಮಾಕಾಶ ಮಧ್ಯೇ ಧ್ರುವಂ ತತ್ಸಾಧಿಕಂ", ಅವನೇ "ಹೃದಯಮಧ್ಯೇ ವಿಶ್ವೇದೇವಾ ಜಾತವೇದಾ ವರೇಣ್ಯಃ" ಎಂಬ ಪರಬ್ರಹ್ಮನು.

ಪರಮಾತ್ಮ ಅಂತರಾತ್ಮ ಜೀವಾತ್ಮನೆಂದೆನಿಸಿ
ಶ್ರುತ ದೃಷ್ಟ ಅನುಮಾನದಿಂ ಕಂಡು
ವಿನೋದಕಾರಣ ಮಾಯಾವಶವಾಗಿ ಪಂಚಭೂತಗಳನು ಸೃಜಿಸಿ
ಸಕಲ ಪ್ರಪಂಚವನೂ ಬೆರಸಿ, ಮಾಯಾಧೀನವಾಗಿ ವಿನೋದಿಸಿದವನು

ಉರಿಲಿಂಗಪೆದ್ದಿಗೆ ಶಿವನಲ್ಲಿರುವ ಭಕ್ತಿ ಮತ್ತು ನಿಷ್ಠೆಗಳು ಅನನ್ಯವಾದವು. ತನ್ನ ಶರೀರ ಸಮಸ್ತದಲ್ಲಿ ನೆಲೆಸಿರುವ ದೇವನಿಗೆ ದೇಹದ ಸಕಲ ಅಂಗಗಳಲ್ಲೂ ಪೂಜೆ ನಡೆಯುತ್ತದೆ ಎನ್ನುತ್ತಾನೆ–

ಎನ್ನಂಗದಲ್ಲಿ ನಿನಗೆ ಮಜ್ಜನ
ಎನ್ನ ಲಲಾಟದಲ್ಲಿ ನಿನಗೆ ಗಂಧಾಕ್ಷತೆ
ಎನ್ನ ತುರುಬಿನಲ್ಲಿ ನಿನಗೆ ಕುಸುಮಪೂಜೆ
ಎನ್ನ ನೇತ್ರದಲ್ಲಿ ನಿನಗೆ ನಾನಾ ರೂಪವು ವಿಚಿತ್ರವಿನೋದ.
ಎನ್ನ ಶ್ರೋತ್ರದಲ್ಲಿ ನಿನಗೆ ಪಂಚಮಹಾವಾದ್ಯಕೇಳಿಕೆ
ಎನ್ನ ನಾಸಿಕದಲ್ಲಿ ನಿನಗೆ ಸುಗಂಧ, ಧೂಪದ ಪರಿಮಳ
ಎನ್ನ ಜಿಹ್ವೆಯಲ್ಲಿ ನಿನಗೆ ಷಡ್ರಸಾನ್ನ ನೈವೇದ್ಯ
ಎನ್ನ ತ್ವಕ್ಕಿನಲ್ಲಿ ನಿನಗೆ ವಸ್ತ್ರಾಭರಣಾಲಂಕಾರಪೂಜೆ
ಎನ್ನ ಸಚ್ಚಿದಾನಂದ ಸಜ್ಜೆಗೃಹದಲ್ಲಿ ನೀನು
ಸ್ಪರ್ಶನಂಗೆಯ್ದು ನೆರೆದಿಪ್ಪೆಯಾಗಿ ನೀನಾನೆಂಬೆರಡಳಿದು
ತಾನುತಾನಾದ ಘನವನೇನೆಂಬೆನು ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ

(ವ.ಸಂ.೬೪.ಸಂ.ವ.ಸಂ.೪೩೧)

ತನ್ನ ದೇವನಿಂದ ತಾನು ಬೇರೆಯಲ್ಲ ಎಂಬ ಅದ್ವೈತಭಾವ ಕೇವಲ ಅರಿವಿನ ವಿಷಯವಾಗದೆ, ಅನುಭಾವವಾಗಿ ಅಳವಟ್ಟ ಶರಣನಿಂದ ಮಾತ್ರ ಇಂಥ ಮಾತು ಹೊರಹೊಮ್ಮಲು ಸಾಧ್ಯ. ಇನ್ನೆರಡು ವಚನಗಳಲ್ಲೂ ಶಿವನೊಂದಿಗೆ ತಾದತ್ಮ್ಯಸ್ಥಿತಿಯನ್ನು ಹೊಂದಿದ, ಐಕ್ಯಸ್ಥಲದ ಹಂತವನ್ನು ಮುಟ್ಟಿರುವ ಅನುಭಾವಿಯೆಂಬಂಥ ಸುಳುಹು ಕಂಡುಬರುತ್ತದೆ. ಅಂತೆಯೇ ಹೇಳುತ್ತಾನೆ:

ಎನ್ನಂಗ ಸುಖಭೋಗವೇ ನಿನ್ನಂಗಸುಖಭೋಗ
ಎನ್ನೊಳಗೆ ನೀನು ನಿನ್ನೊಳಗೆ ನಾನು
ಎನ್ನ ಪ್ರಾಣ ನೀನು, ನಿನ್ನ ಪ್ರಾಣ ನಾನಾದ ಕಾರಣ
ಎನ್ನ ಸೋಂಕಿತ್ತೆಲ್ಲ ನಿನ್ನ ಪೂಜೆಯಯ್ಯಾ

"ಇಂತು ಮನೋವಾಕ್ಕಾಯದ ಅಂತರಂಗ ಬಹಿರಂಗದ ಒಳಹೊರಗೂ
ಸರ್ವಾಂಗಲಿಂಗವಾದ ಕಾರಣ
ಮನೋವಾಕ್ಕಾಯದ ಸ್ಥಿತಿಗತಿ ನೀನೆ ಅಯ್ಯಾ"

ಎಂದು ಶಿವನೊಡನೆ ತಾದಾತ್ಮ್ಯಭಾವವನ್ನು ವ್ಯಕ್ತಪಡಿಸುತ್ತಾನೆ.

ಶಿವನ ಪಾರಮ್ಯವನ್ನು ಸ್ಥಾಪಿಸಲು ವೇದ ಉಪನಿಷತ್ತು, ಆಗಮಗಳು ಮತ್ತು ಪುರಾಣಗಳನ್ನು ವಿಪುಲವಾಗಿಯೇ ಬಳಸಿಕೊಳ್ಳುತ್ತಾನೆ:

ವೇದಗಳ ಬಗ್ಗೆ ಅಷ್ಟೇನೂ ಅತ್ಯುನ್ನತ ಅಭಿಪ್ರಾಯಗಳನ್ನು ಹೊಂದಿಲ್ಲದಿದ್ದರೂ, ಹಾಗೂ ಒಂದು ಹಂತದಲ್ಲಿ, ವೇದವನ್ನು ಓದಿಯೂ ಶರಣಧರ್ಮ ಅನುಸರಿಸದ ವಿಪ್ರರನ್ನು ವಿಡಂಬಿಸುವಾಗ "ವೇದವೆಂಬ ಮಹಾ ಜ್ಯೋತಿ" ಎಂದು ಕೈವಾರಿಸಿದರೂ ಆ "ಜ್ಯೋತಿಯ ಹಿಡಿದು ಶಿವಪಥದಲ್ಲಿ ನಡೆಯಲರಿಯದೆ ಪಾಪದ ಕುಣಿಯಲ್ಲಿ ಬೀಳುವವರ ಕಂಡು ನಗೆಯಾದುದಯ್ಯಾ" ಎಂದು ಲೇವಡಿಮಾಡುವ ಉರಿಲಿಂಗಪೆದ್ದಿ ವೇದ ಉಪನಿಷತ್ತು ಆಗಮ ಮತ್ತು ಪುರಾಣಗಳಿಂದ ಶಿವನ ಬಗೆಗಿನ ಪವಿತ್ರ ಮತ್ತು ಶ್ರೇಷ್ಠ ವಾಕ್ಯಗಳನ್ನು ಉಲ್ಲೇಖಿಸುತ್ತಾನೆ:

ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ
ವಾಙ್ಮನಸಾಗೋಚರವೆಂದು ಹೇಳುತ್ತೈದಾವೆ ವಾಕ್ಯಂಗಳು
..
____.
'ಅತ್ಯತಿಷ್ಟದ್ದಶಾಂಗುಲ' 'ಏಕ ಏವ ಪುರುಷಃ'
ಎಂಬ ಶ್ರುತಿಯಿರಲು'

ಎಂದು ಒಂದೆಡೆ ಹೇಳಿದರೆ ಇನ್ನೊಂದೆಡೆ

'ಏಕ ಏವ ರುದ್ರೋ ನ ದ್ವಿತೀಯಃ'ನೆಂದು ಶ್ರುತಿ ಸಾರುತ್ತಿದೆ ಎನ್ನುತ್ತಾನೆ

'ಸರ್ವೈಶ್ವರ್ಯ ಸಂಪನ್ನಂ ಮಧ್ಯಧ್ರುವ ತತ್ವಾಧಿಕಂ' ಎಂದುದಾಗಿ
'ಅಣೋರಣೀಯಾಂ ಮಹತೋಮಹೀಯಾನ್' ಎಂದುದಾಗಿ
ಯತೋವಾಚೋ ನಿವರ್ತಂತೇ ಎಂದುದಾಗಿ,
ಅತ್ಯತಿಷ್ಠಂ ದಶಾಂಗುಲಂ ಎಂದುದಾಗಿ
ಈ ಪ್ರಕಾರದಲ್ಲಿ ವೇದಾಗಮಂಗಳು ಸಾರುತ್ತಿರಲು
ಲಿಂಗವನು ಹರಿಬ್ರಹ್ಮಾದಿ ದೇವದಾನವ ಮಾನವರಿಗೆಯು ಅರಿಯಬಾರದು.
"ಚಕಿತಮಭಿದತ್ತೇ ಶ್ರುತಿರಪಿ ಎಂದುದಾಗಿ
ವೇದಪುರುಷರಿಗೆಯು ಅರಿಯಬಾರದು"

ಎಂದು ಶಿವನ ಪಾರಮ್ಯವನ್ನು ಸ್ಥಾಪಿಸುತ್ತಾನೆ.

ಲಿಂಗಪೂಜೆಯ ಮಹಿಮೆ: ಈ ಮಹಾಪುರುಷರಪ್ಪ
ದೇವಗಣ ರುದ್ರಗಣ ಪ್ರಮಥಗಣಂಗಳು
ವಿಷ್ಣ್ವಾದಿ ದೇವದಾನವ ಮಾನವಾದಿಗಳು ಮಹಾಲಿಂಗವನೆ ಧ್ಯಾನಿಸಿ ಪೂಜಿಸಿ
ಪರಮಸುಖಪರಿಣಾಮ ಹಡೆದರಂದು ಮಾಡಿದನು.

....

....

ಗುರುಲಿಂಗಜಂಗಮಲಿಂಗ ಪರಶಿವಲಿಂಗ ಒಂದೆ

'ದೇಶಿಕಶ್ಚರಲಿಂಗಂ ಚ ತ್ರಿವಿಧಂ ಲಿಂಗಮುಚ್ಯತೇ' ಎಂದುದಾಗಿ
ಲಿಂಗದ ವರ್ಮವನು ಲಿಂಗದ ಸ್ವರೂಪವನು ಲಿಂಗದ ನಿಶ್ಚಯವನು
ಆದಿಯಲ್ಲು ಧ್ಯಾನಪೂಜೆಯ ಮಾಡಿದವರನು
ಭಕ್ತಿಪ್ರಸಾದ ಮುಕ್ತಿಯ ಪಡೆದವರನು
ವೇದಶಾಸ್ತ್ರಪುರಾಣಾಗಮಂಗಳು ಹೇಳುತ್ತಿವೆ.
ಶಿವನ ವಾಕ್ಯಂಗಳಿಗಿದೆ ದಿಟ.

(ವ.ಸಂ.೨೯೮. ಪುಟ.೫೭೪-೭೬)

ಅಂದಮೇಲೆ ಶಿವನ ಸರ್ವೋಚ್ಚತೆ ಎಂಬುದು ಸ್ವಯಂಸಿದ್ಧ.

ಶಿವ ಉಳಿದೆಲ್ಲ ದೈವಗಳಿಗಿಂತ ಶ್ರೇಷ್ಠ: ಹರಸರ್ವೋತ್ತಮತೆಯನ್ನು ಸ್ಥಾಪಿಸುವ ವ್ಯತಿಕರದಲ್ಲಿ ಅನ್ಯ ದೈವಗಳಾದ ಇಂದ್ರ, ಬ್ರಹ್ಮ, ಅದರಲ್ಲೂ ಮುಖ್ಯವಾಗಿ ವಿಪ್ರರು ಆರಾಧಿಸುತ್ತಿದ್ದ ವಿಷ್ಣು ಮತ್ತು ಅವನ ಇತರ ಅವತಾರಗಳೆಂದು ಪರಿಗಣಿಸಲಾಗಿದ್ದ ನರಸಿಂಹ, ಕೃಷ್ಣರನ್ನು ಕೀಳ್ಗಳೆಯುವುದೇ ಅಲ್ಲದೆ ವಿಪ್ರರ ಆಚಾರವನ್ನು ಕೂಡ ಉಗ್ರವಾಗಿಯೇ ಖಂಡಿಸುತ್ತಾನೆ.

ಅಚ್ಯುತಂಗೆ ಭವವುಂಟೆಂಬುದಕ್ಕೆ
ಮತ್ಸ್ಯ ಕೂರ್ಮವರಾಹ ನಾರಸಿಂಹಾವತಾರವೆ ಸಾಕ್ಷಿ
ಇಂತಪ್ಪ ಹರಿಯನು ಹರಂಗೆ ಸರಿಯೆಂದು ನುಡಿವುತಿಪ್ಪ ವಿಪ್ರರ ಬಾಯಲ್ಲಿ
ಸುರಿಯವೆ ಬಾಲಹುಳಗಳು
ಹರಿಗೆ ಹತ್ತು ಪ್ರಳಯ, ಬ್ರಹ್ಮಂಗೆ ಅನಂತ ಪ್ರಳಯ

ನಮ್ಮ ಹರಂಗೆ ಪ್ರಳಯವುಂಟಾದಡೆ ಬಲ್ಲರೆ ನೀವು ಹೇಳಿರೆ!
ನಿಮ್ಮ ವೇದದಲ್ಲಿ ಹೇಳಿಸಿರೆ
ಅರಿಯದಿರ್ದಡೆ ಸತ್ತಹಾಂಗೆ ಸುಮ್ಮನಿರಿ

–ಎಂದು ವಿಪ್ರರ ಬಾಯಿಮುಚ್ಚಿಸುತ್ತಾನೆ.

೧೧೪ನೆಯ ದೀರ್ಘ ವಚನದಲ್ಲೂ ಹರಿ, ಬ್ರಹ್ಮ ಇತರೆ ದೇವಜಾತಿಗಳು ಇವರಾರೂ ತನು ಧನ ಯಾವುದರಲ್ಲೂ ಶಿವನಿಗೆ ಸಮರಲ್ಲ. ಇಂದ್ರನಿಗೆ ಬ್ರಹ್ಮ ಗುರು, ಬ್ರಹ್ಮನಿಗೆ ವಿಷ್ಣು ಗುರು, ವಿಷ್ಣುವಿಗೆ ರುದ್ರನೆ ಗುರು, ಅಂಥ ರುದ್ರನಿಗೆ ಈಶ್ವರನೇ ಗುರು. ಆದರೆ ಕಾಲಾಂತರದಲ್ಲಿ ವೇದಗಳಲ್ಲಿ ಹೇಳುವ ರುದ್ರನೊಂದಿಗೆ ಶಿವನ ಸಮೀಕರಣವಾಯಿತು. ಈ ಇಡೀ ವಚನದಲ್ಲಿ ವೇದಗಳನ್ನು ಸರ್ವಾಧಾರ–ವಾಗಿ ಹೇಳುತ್ತಿದ್ದಾನೆ.

"ಈ ಪುರುಷನಿಂದ ನಮ್ಮಲ್ಲಿ
ಆರು ಘನಗುರುವೆಂದು ಕೇಳುವೆವೆಂದು
ಆ ಮಹಾಪುರುಷನ ಸಮೀಪಕ್ಕೆ
ಅಗ್ನಿ ವಾಯು ಮೊದಲಾಗಿಹ
ದೇವಜಾತಿಗಳೆಲ್ಲರೂ ಪ್ರತ್ಯೇಕರಾಗಿ ಹೋಗಲು
ಅತ್ಯತಿಷ್ಠದ್ದಶಾಂಗುಲಮಾಗಿರ್ದು
ಇವರುಗಳ ಗುರುತ್ವವೆಲ್ಲವನೂ ಒಂದೇ ತೃಣದಲ್ಲಿ ಮುರಿದು
ತೃಣದಿಂದಲೂ ಕಷ್ಟಲಘುತ್ವವ ಮಾಡಿದನು
ಇದುಕಾರಣ, ಪರಶಿವನೆ ಮದ್ಗುರು ಕಾಣಿರೆ
....
....
ಮಹದೈಶ್ವರ್ಯವುಳ್ಳವಂಗೆ ಮಹದೈಶ್ವರ್ಯವುಳ್ಳವನೆ ಗುರು
ಇಂದ್ರಂಗೆ ಅನೂನೈಶ್ವರ್ಯವನುಳ್ಳ ಇಂದ್ರನೆ ಗುರು.
ಇಂದ್ರಂಗೆ ಅನೂನೈಶ್ವರ್ಯವುಳ್ಳ ಬ್ರಹ್ಮನೆ ಗುರು
ಆ ಬಹ್ಮಂಗೆ ಐಶ್ವರ್ಯಕ್ಕೆ ಅಧಿದೇವತೆಯಪ್ಪ
ಮಹಾಲಕ್ಷ್ಮಿಯನುಳ್ಳ ವಿಷ್ಣುವೆ ಗುರು

ಆ ವಿಷ್ಣುವಿಂಗೆ ಅಷ್ಟಮಹದೈಶ್ವರ್ಯವನುಳ್ಳ ರುದ್ರನೆ ಗುರು
ಆ ರುದ್ರಂಗೆ ಈಶ್ವರನೆ ಗುರು, ಈಶ್ವರಂಗೆ ಸದಾಶಿವನೆ ಗುರು
ಬ್ರಹ್ಮಾ ವಿಷ್ಣುಶ್ಚ ರುದ್ರಶ್ಚ ಈಶ್ವರಶ್ಚ ಸದಾಶಿವಃ।
ಯೇ ತೇ ಗರ್ಭಗತಾ ಯಸ್ಯ ತಸ್ಮೈ ಶ್ರೀಗುರವೇ ನಮಃ ॥
ಎಂದುದಾಗಿ ಅಂತಹ ಸದಾಶಿವಂಗೆ ಎಮ್ಮ ಪರಶಿವಮೂರ್ತಿ
ಶ್ರೀಗುರುವೆ ಗುರು ಕಾಣಿರೆ

–ಎಂದೆಲ್ಲ ಶಿವನ ಸರ್ವೋತ್ಕೃಷ್ಟತೆಯನ್ನು, ಮಹಾ ಗುರುತ್ವವನ್ನು ಸ್ಥಾಪಿಸಿ ಬ್ರಾಹ್ಮಣರನ್ನು ತರಾಟೆಗೆ ತೆಗೆದುಕೊಳ್ಳುತ್ತ ಹೀಗೆ ಕಟುವಾಗಿ ವಿಡಂಬಿಸುತ್ತಾನೆ:

....

ನೀವೆಲ್ಲರು ವೇದವ ಬಲ್ಲಡೆ ಶಾಸ್ತ್ರವನರಿಯಿರಿ
ವೇದಶಾಸ್ತ್ರವ ಬಲ್ಲಡೆ ಪುರಾಣವನರಿಯಿರಿ
ವೇದಶಾಸ್ತ್ರಪುರಾಣವ ಬಲ್ಲಡೆ ಆಗಮವನರಿಯಿರಿ
ವೇದಶಾಸ್ತ್ರಪುರಾಣ ಆಗಮವ ಬಲ್ಲಡೆ
ಅದರ ತಾತ್ಪರ್ಯವನರಿಯಿರಿ
ಅಷ್ಟಾದಶ ವಿದ್ಯೆಗಳ ಮರ್ಮವನರಿಯಿರಿ
ವೇದಂಗಳು 'ಏಕ ಏವ ರುದ್ರೋ ನ ದ್ವಿತೀಯಾಯ ತಸ್ಥೇ' ಎಂದವು
ಅದನ್ನರಿಯಿರಿ ನೀವು, ಅನ್ಯವುಂಟೆಂಬಿರಿ
ಅನ್ಯವ ಧ್ಯಾನಿಸುವಿರಿ, ಅನ್ಯವ ಪೂಜಿಸುವಿರಿ, ವಿದ್ಯೆ ನಿಮಗಿಲ್ಲ,
ನೀವು ಪುಜಿಸುವ ವ್ಯಾಸಾದಿಗಳಿಗಿಲ್ಲ,
ಅವರಿಗೆ ಅಧಿಕನಾಗಿಹ ವಿಷ್ಣು ಬ್ರಹ್ಮಾದಿಗಳಿಗಿಲ್ಲ
ಶಿವ ಏಕೋ ಧ್ಯೇಯಃ ಶಿವಶಂಕರಃ ಸರ್ವಮನ್ಯತ್ ಪರಿತ್ಯಾಜ್ಯಂ ಎಂದವು"

_ಹೀಗೆಯೇ ಇನ್ನೂ ಮುಂದುವರಿಯುವ ಈ ವಚನದಲ್ಲಿ ಹಾಗೂ ಇನ್ನೂ ಹಲವಾರು ವಚನಗಳಲ್ಲಿ ವೇದಾಗಮಗಳ ಆಧಾರಗಳನ್ನು ವಿಪುಲವಾಗಿ ನೀಡಿ ಕೊನೆಗೆ ನಿರ್ಣಾಯಕವೆಂಬಂತೆ "ದೇವ ದಾನವ ಮಾನವರೆಲ್ಲರು ನೀವೆಲ್ಲರು ಆವ ಪರಿಯಲಿ ಗುರು ಹೇಳರಣ್ಣಾ" ಎಂದುಸವಾಲು ಹಾಕುತ್ತ ಹರಿ ಬ್ರಹ್ಮರು, ಗುರುತ್ವಕ್ಕೆ ಸಂವಾದಿಸಿ, ವಿಷ್ಣ್ವಾದಿ ದೇವಜಾತಿಗಳೆಲ್ಲರು ನಾ ಘನ, ತಾ ಘನ,

ನಾನು ಗುರು ತಾನು ಗುರು ಎಂದು ಮಹಾಸಂವಾದದಿಂದ ಅತಿಯಾದ ತರ್ಕಮಾಡಿ ನಗೆಗೇಡೆಯಾದರು ಎಂದು ತೀರ್ಪು ನೀಡಿ

"ವೇದ ಶಾಸ್ತ್ರ ಆಗಮ ಪುರಾಣಂಗಳಲಿ
ಎಮ್ಮ ಪರಶಿವಮೂರ್ತಿ ಮಹಾಸದ್ಗುರುವೇ ಗುರು ಕಾಣಿರೇ"

ಎಂದು ನಿರ್ಣಾಯಕವೆಂಬಂತೆ ಸ್ಥಾಪಿಸಿ ವಿಪ್ರರ ಬಾಯಿಮುಚ್ಚಿಸುತ್ತಾನೆ.

ಉರಿಲಿಂಗಪೆದ್ದಿಗೆ ಪುರಾಣಗಳಲ್ಲೂ ತಲಸ್ಪರ್ಶಿಯಾದ ಪಾಂಡಿತ್ಯ. ಯಾವುಯಾವುದೋ ಪುರಾಣಪ್ರಸಂಗಗಳನ್ನು ಉಲ್ಲೇಖಿಸುವ ಮೂಲಕ ಶಿವಪಾರಮ್ಯವನ್ನು ಸ್ಥಾಪಿಸುವುದರಲ್ಲಿ ಅವನಿಗೆ ಎಲ್ಲಿಲ್ಲದ ಆಸಕ್ತಿ. ಉದಾಹರಣೆಗೆ ಈ ಕೆಲವನ್ನು ನೋಡಬಹುದು.

ಪುರಾಣ ಪ್ರಸಂಗಗಳ ಮೂಲಕ ಶಿವಪಾರಮ್ಯ ಸ್ಥಾಪಿಸುವುದು

ರಾವಣ ಶಿವನಿಂದ ಪಡೆದ ಅವನ ಅತ್ಮಲಿಂಗವನ್ನು ಹಾಗೂ ಚಂದ್ರಾಯುಧವನ್ನು, ಪಾರ್ವತಿಯನ್ನು ಮತ್ತು ಗಣಪತಿಯನ್ನು ಹರಿ ಮತ್ತು ಅಜರು ಬಿಡಿಸಿದರು ಎಂಬ, ಹರನಿಂದ ವರ ಪಡೆದ ಭಸ್ಮಾಸುರ ಹರನ ತಲೆಯ ಮೇಲೆಯೇ ಕೈಯಿಟ್ಟು ಬೂದಿಮಾಡಲು ಯತ್ನಿಸಿದ ಕಥೆ, ವಿಷ್ಣು ಮೋಹಿನಿ ರೂಪವನ್ನು ತಾಳಿ ಅವನ ಕೈಯಿಂದಲೇ ಅವನನ್ನು ಸುಡಿಸಿದ ಕಥೆ ಎಂಬುವೆಲ್ಲ ಶಿವ ತನ್ನ ಭೃತ್ಯರ ಸಾಹಸವನ್ನು ಮೆರೆಸುವ ವಿನೋದ; ಅವರನ್ನು ಹರಿ ಅಥವಾ ಬ್ರಹ್ಮರು ಸಂಹರಿಸಿದರೆಂಬುದು ಅಜ್ಞಾನಿಗಳ ಮಾತು, 'ಮರಣವಿರಹಿತ ಶಿವನ ಕೊಲ್ಲಬಲ್ಲವರುಂಟೆ' ಎಂದು ಹೇಳಿ

ಬ್ರಹವಿಷ್ಣುಗಳು ಸ್ವತಂತ್ರರಾದರೆ ಶಿರ ಹೋಗಲೇತಕ್ಕೆ?
ಸರಸ್ವತಿಯ ಮೂಗು ಹೋಗಲೇತಕ್ಕೆ?
ಬ್ರಹ್ಮನ ಮಗ ಸನತ್ಕುಮಾರ ಒಂಟೆಯಾಗಲೇತಕ್ಕೆ?
ಹರಿಯ ಮಗ ಕಾಮನುರಿದುಹೋಗಲೇತಕ್ಕೆ?
ನಾರಸಿಂಹನು ವಧೆಗೆ ಒಳಗಾಗಲೇತಕ್ಕೆ?
ಕೃಷ್ಣನ ಹದಿನಾರು ಸಾವಿರ ಸ್ತ್ರೀಯರ ಮೇಲೆ ಬೇಡರು ನೆರೆಯಲೇತಕ್ಕೆ?
ಕಾಳುಬೇಡನೆಚ್ಚಂಬು ತಾಗಿ ಕೃಷ್ಣಗೋಳುಗುಟ್ಟಿಸಾಯಲೇತಕ್ಕೆ?

ಅದುಕಾರಣ ನಮ್ಮ ಶಿವನು ಆಡಿಸಿದಂತೆಯಾಡಿ,
ಹುಟ್ಟೆಂದರೆ ಹುಟ್ಟಿ, ನಡೆಯೆಂದರೆ ನಡೆದು ನುಡಿಯೆಂದರೆ ನುಡಿದು
ಸಾಯೆಂದರೆ ಸತ್ತು ಕೆಡಹಿದಂತೆ ಬಿದ್ದಿಹ ತೃಣದೊಂಬೆಗಳಿಗುಂಟೆ ಸ್ವತಂತ್ರ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ

(ವ. ಸಂ.೨೩೦. ಸಂ.ಸಂ. ಪುಟ: ೫೩೦))

ಶಿವಂ ಪರಾತ್ಪರಂ ಸೂಕ್ಷ್ಮಂ ನಿತ್ಯಂ ಸರ್ವಗತಾವ್ಯಯಂ।
ಅನಿಂದಿತಮನೌಪಮ್ಯಮಪ್ರಮೇಯಮನಾಮಯಮ್ ॥

ಎಂದು ಹೇಳಿ ಭೃಗು ಶಿವಶಿವಾ ಹರಹರಾ ಎಂದೆನ್ನದೆ ಶಾಪದಿಂದ ಭವಕ್ಕೆ ಬಂದು ಸತ್ತು ಹೋದದ್ದು, ದಶರಥ ರಾಯನು ನಾಚಿಕೆಯಿಲ್ಲದೆ ರಾಮರಾಮ ಎಂದು ನೆನೆದರೂ, ಆ ರಾಮ

ರಾವಣನ ಕೊಂದ ಬ್ರಹ್ಮಹತ್ಯಾದೋಷಕ್ಕೆ
ಅನೇಕ ಶಿವಲಿಂಗಗಳ ಪ್ರತಿಷ್ಠೆಯಮಾಡಿ ಪೂಜಿಸಿದ್ದು
ನರಸಿಂಹಾವತಾರವನ್ನು ಶರಭರುದ್ರ ತೀರ್ಚಿಸಿದ್ದು,
ಮಹಾಲಕ್ಷ್ಮಿ ಸರ್ವರೊಡೆಯ ಶಿವನ ದಾಸಿ,
ಮಹಾಭಾರತದಲ್ಲಿ ಹಲವು ಗಂಡರ ನೆರೆದ ಕುಂತಿಯ ಕಾಲಿಗೆ
ಹರಿ ಎರಗುವ ವಿಚಾರಹೇಳಿದರೆ ಉಬ್ಬುವ,
ಅದೇ ಹರಿ ಕಾಮಿತಫಲದಾಯಕನಾದ ಶಿವನ ಶ್ರೀಪಾದಕ್ಕೆ
ನಯನಕಮಲ ಅರ್ಪಿಸಿ ಚಕ್ರವ ಪಿಡಿದನೆಂದರೆ ಚಿಂತಿಸಿ
ಕರಕರಿಸುವ ಸಂಗತಿ, ಕೃಷ್ಣನ ಅಂಗಾಲಿನ ಕಣ್ಣನ್ನು
ಬೇಡನು ಬಾಣಬಿಟ್ಟು ಕೊಂದದ್ದು
ಈ ಎಲ್ಲ ಸತ್ಯ ಸಂಗತಿಗಳನ್ನು ಇದ್ದ ಹಾಗೆಯೇ ಹೇಳಿದರೆ
ವಿಷ್ಣುಭಕ್ತರು ಅಲಗು ತಾಕಿದಂತೆ ನೋವುತ್ತಾರೆ,
ಸಿಡಿಮಿಡಿಗೊಳ್ಳುತ್ತಾರೆ, ಉರಿದೇಳುತ್ತಾರೆ

(ವ.ಸಂ.೨೯೪ ಪುಟ. ೫೭೧-೭೨)

ಎಂದೆಲ್ಲ ಲೇವಡಿಮಾಡುತ್ತಾನೆ.

ಪ್ರಬಲ ವೈದಿಕವಿರೋಧ

"ನ ದೇವಃ ಕೇಶವಾತ್ಪರಂ" ಎಂದು ಹೇಳಿದನೆಂಬ ಕಾರಣಕ್ಕೆ ತನ್ನ ತೋಳುಗಳನ್ನು ಕಳೆದುಕೊಂಡ ವ್ಯಾಸ ಮತ್ತೆ ಈಶ್ವರನಲ್ಲದೆ ದೈವವಿಲ್ಲೆಂದು ಹೇಳಿದಾಗ ತೋಳನ್ನು ಮರಳಿ ಪಡೆದನೆಂಬ, ಪರದಾರಕಿಚ್ಛಿಸಿದ ಕಾರಣಕ್ಕೆ ತನ್ನ ಮೈಯೆಲ್ಲಾ ಅನಂಗನಂತಹ ಮೈಯಾಗಿಸಿಕೊಂಡ ಇಂದ್ರ ಈಶ್ವರಾರ್ಚನೆ ಮಾಡಿಯೇ ಆ ಯೋನಿಕೂಪಗಳೆಲ್ಲವನ್ನೂ ನಯನಂಗಳಾಗಿಸಿಕೊಂಡದ್ದು, (ವ.ಸಂ. ೨೮೩.) ಈ ಸಂಗತಿಗಳ ನಿರೂಪಣೆಯ ಮೂಲಕ ವಿಷ್ಣುವನ್ನು ಮತ್ತು ಇಂದ್ರನೇ ಮೊದಲಾದ ಇತರೆ ದೇವತೆಗಳ ಲಘುತ್ವವನ್ನು ಗೇಲಿಮಾಡುತ್ತಲೇ ಶಿವನ ಹಿರಿಮೆಗರಿಮೆಗಳನ್ನು ಮನಕ್ಕೆ ನಾಟಿಸುವ ಕೆಲಸ ಮಾಡುತ್ತಾನೆ. ಇದೇ ವಚನವನ್ನು ಮುಂದುವರಿಸಿ ವೇದಮೂರ್ತಿಗಳೆಂದು ಹೇಳಿಕೊಳ್ಳುವ ಬ್ರಾಹ್ಮಣರು ಮಾಡಿದ್ದೆಲ್ಲವೂ ವೇದಹೇಳದೆ ಇದ್ದುದನ್ನೇ ಎಂದು ಅವರ ಮುಖಕ್ಕೆ ರಾಚುತ್ತಾನೆ. ಬ್ರಾಹ್ಮಣರು ಮತ್ತು ಬ್ರಾಹ್ಮಣರು ದೈವವೆಂದು ಆರಾಧಿಸುವ ಆ ವಿಷ್ಣು ಇಬ್ಬರೂ ನಂಬಲರ್ಹರಲ್ಲ ಮತ್ತು ತಮ್ಮನ್ನು ನಂಬಿದವರನ್ನೇ ಬಲಿತೆಗೆದುಕೊಳ್ಳುವವರು ಎನ್ನುವುದು ಈ ವಚನದ ಧ್ವನಿ.

'ಶಿವನನ್ನು ನಂಬಿದವರೆಲ್ಲ ಒಂದೇ ಕುಲ' ಎಂಬ ವಚನಧರ್ಮದ ತತ್ವದಲ್ಲಿ ಅಚಲ ನಂಬಿಕೆಯಿಟ್ಟು ವೀರಶೈವಕ್ಕೆ ಅತ್ಯಂತ ಕೆಳವರ್ಗದಿಂದ ಬಂದ ದಲಿತ ಉರಿಲಿಂಗಪೆದ್ದಿಗೆ ಹುಟ್ಟಿನ ಆಧಾರದಿಂದ ಶ್ರೇಷ್ಠತೆಯನ್ನು ಮೆರೆಸುತ್ತಿದ್ದ ಹಾಗೂ ಕೆಳವರ್ಗದವರನ್ನು ಕೀಳಾಗಿ ಕಾಣುತ್ತಿದ್ದ ಬ್ರಾಹಣ ವರ್ಗದ ಬಗ್ಗೆ ಸಹಜವಾಗಿಯೇ ಅಪಾರ ಅಸಹನೆ ಮತ್ತು ಕೋಪ. ಅವನ ವಚನಗಳಲ್ಲಿ ತಾನೂ ಸೇರಿದಂತೆ ವಚನಕಾರರು, ತಮ್ಮ ವಿರೋಧಿಗಳೆಂದು ಗುರುತಿಸಿಕೊಂಡ ಬ್ರಾಹಣರ ವಿರೋಧ, ಅತ್ಯಂತ ಕಟುವಾದ ಮಾತುಗಳಲ್ಲಿ ಅಭಿವ್ಯಕ್ತಿಯನ್ನು ಪಡೆದುಕೊಂಡಿದೆ:

ವರ್ಣಾನಾಂ ಬ್ರಾಹ್ಮಣೋ ಗುರುಃ
ಎಂಬ ಕ್ರೂರ ಹೃದಯರ ಮಾತ ಕೇಳಲಾಗದು.
ಹೋ ಹೋ ಶಿವನ ಮುಖದಿಂದ ಹುಟ್ಟಿ
ಉತ್ತಮವಂತಹ ಬ್ರಾಹ್ಮಣಧರ್ಮದಲ್ಲಿ
ಜನಿಸಿದಂತಹ ವರ್ಣಿಗಳು
ಕ್ಷತ್ರಿಯನ ಭಜಿಸ ಹೇಳಿತ್ತೆ ಈ ವೇದ?
'ಶಿವ ಏಕೋ ಧ್ಯೇಯಃ ಶಿವಂಕರಃ ಸರ್ವಮನ್ಯತ್ ಪರಿತ್ಯಜೇತ್'

ಎಂದುದಾಗಿ–
ಶಿವನ ಧ್ಯಾನಿಸಿ ಇತರ ದೇವತೆಗಳ ಬಿಡಹೇಳಿತ್ತಲ್ಲವೆ?
ಅದಂತಿರಲಿ,
ಬಡಗಿ ಮಾಚಲದೇವಿಯ ಕುಲಜೆಯ ಮಾಡಿಹೆವೆಂದು
ಸತ್ತ ಕಪಿಲೆಯ ಕಡಿದು ಹಂಚಿ ತಿನ್ನಹೇಳಿತ್ತೆ ವೇದ?
ಆಗದು ಅವದಿರ ಅಂಗ
ಅಧಮರ ವರ್ಣಾಶ್ರಮಹೀನರ
ಕರ್ಮವ ಕಳೆದಹೆವೆಂದು ದತ್ತಪುತ್ರರಾಗಿ
ಹೊರಸಿನಡಿಯಲಿ ನುಸುಳಹೇಳಿತ್ತೆ ಆ ವೇದ?
ಅದಂತಿರಲಿ,
ಭುಂಜಿಸಿ ಮುಕ್ತಿಯನಿತ್ತಿಹವೆಂದಡೆ
ಹಲಕೆಲಕಾಲ ವಂದಿಸಿದ ಗೌತಮಂಗೆ
ಬಾರದೆ ಅಂದು ಗೋವಧೆ?
ಅದಂತಿರಲಿ ಬ್ರಾಹ್ಮಣಾದಿಗಳ ದೈವವೆಂದು ದಾನಾದಿಗಳ ಮಾಡಿದ
ಕರ್ಣನ ಶಿರಕವಚ ಹೋಗದೆ ಜಗವರಿಯೆ?
ವಿಷ್ಣು ದೈವವೆಂದರ್ಚಿಸಿದ ಬಲಿ ಬಂಧನಕ್ಕೆ ಬಾರನೆ ಮೂಜಗವರಿಯೆ?
(ವ. ಸಂ.೨೮೩)

ಅದೇ ಶಿವನ ಮಹಿಮೆಯ ಪರಿಯೇ ಬೇರೆ. ಅದನ್ನು ಹರಿ,ಬ್ರಹ್ಮಾದಿ ದೇವದಾನವ ಮಾನವರಿಗೂ ತಿಳಿಯಲಸಾಧ್ಯ ಎಂದು ಉರಿಲಿಂಗಪೆದ್ದಿಯ ಅಭಿಪ್ರಾಯ.

'ಸರ್ವೈಶ್ವರ್ಯ ಸಂಪನ್ನಂ ಮಧ್ಯಧ್ರುವ ತತ್ವಾಧಿಕಂ' ಎಂದುದಾಗಿ
'ಅಣೋರಣೀಯಾಂ ಮಹತೋಮಹೀಯಾನ್' ಎಂದುದಾಗಿ
'ಯತೋವಾಚೋ ನಿವರ್ತಂತೇ' ಎಂದುದಾಗಿ,
'ಅತ್ಯತಿಷ್ಠಂ ದಶಾಂಗುಲಂ' ಎಂದುದಾಗಿ
ಈ ಪ್ರಕಾರದಲ್ಲಿ ವೇದಾಗಮಂಗಳು ಸಾರುತ್ತಿರಲು
ಲಿಂಗವನು ಹರಿಬ್ರಹ್ಮಾದಿ ದೇವದಾನವ ಮಾನವರಿಗೆಯು ಅರಿಯಬಾರದು.
ಎನ್ನುತ್ತಾನೆ. (ವ.ಸಂ.೨೯೮)

ನಾನಾವಿಧದ ಪೂಜೆಗಳ ಪೂಜಿಸಿದವರೆಲ್ಲಾ ಭಕ್ತರೆ ಹೇಳಿರಣ್ಣಾ
ವಿಷ್ಣುಮೊದಲಾದ ದೇವಜಾತಿಗಳು
ತಾರಕ ರಾವಣಾದಿ ದೇವದಾನವಮಾನವರನೇಕರು
ಆ ಮಹಾದೇವನ ಪೂಜಿಸಿ ಫಲದಾಯಕರಾಗಿ
ಪದಂಗಳ ಪಡೆದರು
ಈ ಫಲದಾಯಕರೆಲ್ಲರೂ ಸದ್ಭಕ್ತರೆ? ಅಲ್ಲ
ಅವರೆಲ್ಲರೂ ಉಪಾಧಿಕರು
ಪರಧನ ಪರಸ್ತ್ರೀ ಪರದೈವವ ಬಿಟ್ಟು ಪಂಚೇಂದ್ರಿಯ ಷಡ್ವರ್ಗಂಗಳ ಬಿಟ್ಟು
ನಿರುಪಾಧಿಕರಾಗಿ ನಿರಂತರ ಪೂಜಿಸಿದಡೆ ಆತನೇ ಸದ್ಭಕ್ತನು
ಆತನೇ ಮಹಮಹಿಮನು.

ಅದೇ ರೀತಿ ವಿಷ್ಣು, ಬ್ರಹ್ಮ ಇಂದ್ರ ವ್ಯಾಸ ಇವರೆಲ್ಲರೂ ಶಿವನೊಬ್ಬನೇ ಕರ್ತ, ಶಿವನೊಬ್ಬನೇ ಪುರುಷನೆಂದು ಮನಗಂಡಿದ್ದು:

ಎರಡ ನುಡಿದ ವಿಷ್ಣುವೇನಾದ? ಎರಡ ನುಡಿದ ಬ್ರಹ್ಮನೇನಾದ?
ಎರಡನುಡಿದ ಇಂದ್ರನೇನಾದ? ಎರಡನುಡಿದ ದಕ್ಷನೇನಾದ?
ಎರಡನುಡಿದ ವ್ಯಾಸನೇನಾದನೆಂದು,
ಇವರುಗಳು ನುಡಿದ ಪರಿಯನೂ ಅದರ ಪರಿಯನೂ
ವಿಚಾರಿಸಿ ನೋಡಿದಡೆ ಶಿವನೇ ಕರ್ತನೆಂದು ನುಡಿದು,
ಮರಳಿ 'ಅಹಂ ಕರ್ತಾ' ಎಂದು ನುಡಿದು ಶಾಸ್ತಿಗೊಳಗಾದರು
ಮಾನಹಾನಿಯಾದರು ನೋಡಿರೇ,
ವಿಶ್ವವೆಲ್ಲವೂ ಪಶು, ಶಿವನೊಬ್ಬನೇ ಪತಿ
ಸರ್ವವೆಲ್ಲವೂ ಶಕ್ತಿರೂಪು, ಶಿವನೊಬ್ಬನೇ ಪುರುಷನು ಎಂದರಿದು
ಸರ್ವರೂ ಭೃತ್ಯರು ಶಿವನೊಬ್ಬನೇ ಕರ್ತನೆಂದರಿದು
ಮನ ವಚನ ಒಂದಾಗಿ ನೆನೆವುತಿಪ್ಪವರು
ಶಿವನೊಂದಾದರಯ್ಯಾ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ
ದೇವನೊಬ್ಬನೆ, ಎರಡಲ್ಲ.

ಆಂಗಿರಸ, ಶಾಂಡಿಲ್ಯ, ವೇದವ್ಯಾಸ, ವಾಲ್ಮೀಕಿ, ಮೊದಲಾದ ಋಷಿಗಳೆಲ್ಲ.... ಅಕ್ಷಯ ನರಕವನೈದಿದ್ದು ಶಿವಲಿಂಗಪೂಜೆ ಮಾಡಿ ನಿತ್ಯನಿರ್ಮಲ ಪ್ರಸನ್ನ ಪ್ರಸಾದವನೈದಿದ್ದು

ಅಂದೊಮ್ಮೆ ಬಂದುದು ದೂರ್ವಾಸನೆಂಬ ಋಷಿಗೆ
ಮರ್ತ್ಯಲೋಕದಲ್ಲಿ ಮಹಾಪವಾದ,
ಅದ ಮರಳಿ ಪರಿಪರಿಸಿಕೊಳ್ಳನೆ ಮರ್ತ್ಯಲೋಕದಲ್ಲಿ
ಶಿವಪೂಜೆಯಂ ಮಾಡಿ?

....

....

ಆಂಗಿರಸ, ಶಾಂಡಿಲ್ಯ, ವೇದವ್ಯಾಸ
ವಾಲ್ಮೀಕಿ, ಮಾಂಡವ್ಯ, ಮೊದಲಾದ ಋಷಿಗಳೆಲ್ಲರೂ
ಶಿವನಿಂದೆ ಶಿವಭಕ್ತರ ನಿಂದೆಯ ಮಾಡಿ
ಶಿವನ ಕ್ಷೇತ್ರವಹ ವೇದಾದಿ ಶಾಸ್ತ್ರಾಗಮಂಗಳಿಗೆ
ಪ್ರತಿಯಿಟ್ಟು ಕರ್ಮಶಾಸ್ತ್ರಂಗಳನೆಸಗಿ
ಅಕ್ಷಯನರಕವನೈದಿರಲಾಗಿ
ತ್ರ್ಯಕ್ಷನ ಶರಣ ಕೃಪಾ ವರದಾನಿ ಏಕನಿಷ್ಠ
ಪರಮ ಮಾಹೇಶ್ವರ ಸಾನಂದನು
ಕರುಣದಿಂದೆತ್ತನೆ ಅವರೆಲ್ಲರ ನರಕಲೋಕದಿಂದ?
ಇಂತಿವಕೆ ಸಾಕ್ಷಿ ದೃಷ್ಟಾಂತಗ್ರಂಥಗಳ ಪೇಳುವಡೆ
ಅಂತಹವು ಅನಂತ ಉಂಟು

ಹೀಗೆ ಎಷ್ಟು ವಿಧದಲ್ಲಿ ಶಿವಪಾರಮ್ಯ ಸ್ಥಾಪಿಸಿದರೂ ಪೆದ್ದಿಗೆ ತೃಪ್ತಿಯಿಲ್ಲ. ಕೇವಲ ಇತರೆ ವೈದಿಕ ದೇವರುಗಳಿಗಿಂತ ಶಿವ ಶ್ರೇಷ್ಠನೆಂದು ಹೇಳಿದರೆ ಸಾಲದು; ಜಿನನ ಕಡೆಗೂ ಅವನ ದೃಷ್ಟಿ ಪರಿದಿದೆ. ಈ ಕೆಳಗಿನ ವಚನದಲ್ಲಿ ಅದು ಕಂಡುಬರುತ್ತದೆ.

ಬ್ರಹ್ಮ, ವಿಷ್ಣು, ವಿನಾಯಕ, ಭೈರವ ಮೈಲಾರ ಜಿನ ಇವರಾರೂ ಶಿವನಂತೆ ದೇವರಲ್ಲ; ಕಾರಣ ಅವರುಗಳೆಲ್ಲ ಶಿವನ ವಾಹನವಾದ ಗೋ ವೃಷಭನಿಂದ ಬಿತ್ತಿಬೆಳೆದು ಅದರ ಕ್ಷೀರಪ್ರಸಾದದಿಂದ ತೃಪ್ತರಾದಂತೆ ಹಾಗೂ ಗೋಮೂತ್ರದಿಂದ

ಪಾವನಶುದ್ಧ ರಾದಂತೆ ಅವುಗಳ ಮೂತ್ರದಿಂದ ಪಾವನಶುದ್ಧರಾಗಲು ಸಾಧ್ಯವಿಲ್ಲ. (ವ.ಸಂ.೧೯೭)

ಹೀಗೆ ಉರಿಲಿಂಗಪೆದ್ದಿಯ ಶಾಸ್ತ್ರ ಪುರಾಣಾಗಮಗಳ ಗ್ರಂಥ ಭಂಡಾರವಲ್ಲಿ ಶಿವಪಾರಮ್ಯ ಕುರಿತಂತೆ ಅನಂತಸಾಕ್ಷಿಗಳಿವೆ.

ವೇದಶಾಸ್ತ್ರಾದಿಗಳ ಬಗೆಗಿನ ಅವನ ವಿಚಾರಗಳು

ಶಿವಪಾರಮ್ಯವನ್ನು ಸ್ಥಾಪಿಸಲು ವೇದಾಗಮಗಳ ಆಧಾರಗಳನ್ನು ಬಳಸಿ ಕೊಂಡರೂ ಅವುಗಳನ್ನು ಕುರಿತಂತೆ ಅವನಿಗೆ ಅತ್ಯುನ್ನತವಾದ ಭಾವನೆಗಳೇನಿಲ್ಲ ವೆಂಬುದನ್ನು ಹಲವಾರು ವಚನಗಳಲ್ಲಿ ವ್ಯಕ್ತಪಡಿಸಿದ್ದಾನೆ. ವೇದಗಳು ಅಪೌರುಷೇಯ ವಲ್ಲವೆಂಬುದನ್ನು ಸ್ಥಾಪಿಸುವಲ್ಲಿ ಮತ್ತು ಹಾಗೆ ಹೇಳುವ ವಿಪ್ರರನ್ನು ಖಂಡಿಸುವಲ್ಲಿ ಅವನ ವೈಚಾರಿಕ ದೃಷ್ಟಿ ನಿಚ್ಚಳವಾಗಿ ಕಂಡುಬರುತ್ತದೆ.

೧. ವೇದಂಗಳು ದೈವವೆಂಬ ವಿಪ್ರರಂತಹ ಮರುಳರುಂಟೇ ತ್ರಿಜಗದಲ್ಲಿ?
ವೇದವೆಂಬುದೊಂದು ಸಾಧಕಸಂಪತ್ತು
ವೇದಂಗಳು ಶ್ವೇತ, ಅಗಸ್ತ್ಯ, ವಿಶ್ವಾಮಿತ್ರಮುನಿಗಳಿಂದಾದವು

–ಎಂದು ಹೇಳುವುದೇ ಅಲ್ಲದೆ, ಶಿವನು ವೇದಗಳಿಗೂ ಮಿರಿದವನು ಎಂದು ಸ್ಥಾಪಿಸುತ್ತಾನೆ.

ಇಂತೀ ನಾಲ್ಕು ಶ್ರುತಿಗಳು (ಋಕ್ ಯಜುಃ, ಸಾಮ ಮತ್ತು ಅಥರ್ವಣ)

ತಮ್ಮ ಗರ್ವದಿಂದ
ನೂಂಕಿಸಿಕೊಂಡವು ಶಿವನ ಅರಮನೆಯ ಬಾಗಿಲಲ್ಲಿ
ಮತ್ತಾ ಚತುರ್ವೇದಂಗಳು ಬಂದು
ಲಿಂಗದ ಚತುರ್ದಿಶೆಯಲ್ಲಿ ಓಲೈಸಿ
ಕೈಮುಗಿದುಕೊಂಡು ಹೊಗಳುತ್ತಿದ್ದವು ಅದೆಂತೆಂದೊಡೆ ಶ್ರುತಿ
"ಓಂ ಜಯತತ್ವಾನಾಂ ಪುರುಷಮೇರು ಕಾಮ್ಯಾನಾಂ
ಪುಣ್ಯಜಪಧ್ಯಾನಾನಾಂ ಸರ್ವಜನ್ಮವಿನಾಶಿನಾಂ
ಆದಿ ಅನಾದಿ ಪಿತೃೂಣಾಂ ಅಜಕೋಟಿಸಹಸ್ರ ವಂದ್ಯಾನಾಂ
ದೇವಕೋಟಿ ಚರಣಕಮಲಾನಾಂ" ಎಂದು

ವೇದಂಗಳು ದೇವರ ಚರಣದ ಕುರುಹ ಕಾಣವು
ಆದಿಯಲ್ಲಿ ನಮ್ಮ ಪುರಾತನರು ವೇದವನೋದಿದರೆ? ಇಲ್ಲ
ಕಲ್ಲಿಲಿಟ್ಟರು ಕಾಲಿಲೊದೆದರು
ಬಿಲ್ವಪತ್ರದ ಮರದ ಕೆಳಗೆ ಲಿಂಗವಂ ಪುಟ್ಟಿಸಿ ನಿಷ್ಠೆಯ ಪಡೆದರು
ಮನೆಯ ಬಾಗಿಲ ಕಾಯಿಸಿಕೊಂಡರು
ಆಡಿಸಿದರು, ಅಡಗಿಸಿದರು
ಒಡಿದ ಲಿಂಗವಂ ತಂದು ಪ್ರತಿಷ್ಠೆಯಂ ಮಾಡಿದರು
ಇಂತಪ್ಪ ದೃಷ್ಟವ ಸಾಧಿಸಿದರು ನಮ್ಮ ಪುರಾತನರು
ನಿಮ್ಮವರು ವೇದವನೋದಿದರೆಂಬುದನರಿದು
ಅವರನೊಲ್ಲದೆ ಬಿಟ್ಟ ಕಾಣಾ, ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ.(೨೭೪)

ಇನ್ನೊಂದು ವಚನದಲ್ಲಿಯೂ ವೇದಶಾಸ್ತ್ರಗಳ ಬಗೆಗೆ ಅವನಿಗಿರುವ ತಿರಸ್ಕಾರ ಸ್ಪಷ್ಟವಾಗಿದೆ. ಅವು ವೇಶ್ಯಾಂಗನೆಯರಂತೆ ಎನ್ನುತ್ತಾನೆ.

ವೇದಶಾಸ್ತ್ರಪುರಾಣಾನಿ ಸ್ಪಷ್ಟಾ ವೇಶ್ಯಾಂಗನಾ ಇವ ।
ಯಾ ಪುನಶ್ಶಾಂಕರೀ ವಿದ್ಯಾ ಗುಪ್ತಾ ಕುಲವಧೂರಿವ

ಲಿಂಗವಂತರು ವೇದ, ಶಾಸ್ತ್ರ, ಆಗಮ, ಪುರಾಣಗಳ ಮಾರ್ಗವನ್ನು ಮೀರಿದವರು. ಅಲ್ಲದೆ ಇವುಗಳನ್ನೆಲ್ಲ ಓದಿದರೆ ಅವುಗಳಲ್ಲಿ ಪಂಡಿತರಾಗಬಹುದೇ ಹೊರತು, ಭಕ್ತರಾಗಲು ಸಾಧ್ಯವಿಲ್ಲ. ಅವನ್ನು ಓದಿದವರೆಲ್ಲ ಹಿರಿಯರಲ್ಲ. ಗುಣ, ಜ್ಞಾನ, ಧರ್ಮ, ಆಚಾರ, ಶೀಲ ಸಾಧಿಸಿದಾತನೇ ಹಿರಿಯ. ಒಂದು ಹಂತದಲ್ಲಿ ಅದು ಉದರಪೋಷಣವಿದ್ಯೆ ಎಂದು ಹೇಳಲೂ ಹಿಂಜರಿಯುವುದಿಲ್ಲ. ವೇದವಾಕ್ಯವೇನಿದ್ದರೂ ವಿಚಾರಕ್ಕೆ ಬೀಜ, ಶಾಸ್ತ್ರವಾಕ್ಯ ಸಂದೇಹಕ್ಕೆ ಬೀಜ ಎಂಬ ಆತನ ಮಾತುಗಳನ್ನು ಅಷ್ಟು ಸುಲಭವಾಗಿ ತಳ್ಳಿಹಾಕಲಾಗುವುದಿಲ್ಲ..

ಇಂತು ಗುರುಕಾರುಣ್ಯವುಳ್ಳ ದೇಹಕ್ಕೆ
ವರ್ಣಾಶ್ರಮವನತಿಗಳೆಯದಿದ್ದಡೆ

ಆ ಗುರುಕಾರುಣ್ಯ ತಾನೆಂತಿಪ್ಪುದು ಹೇಳಿರೆ ಎನ್ನುವಲ್ಲಿ ವರ್ಣಾಶ್ರಮಧರ್ಮದ ಬಗ್ಗೆ ವಿರೋಧವನ್ನು ವ್ಯಕ್ತಪಡಿಸುತ್ತಾನಾದರೂ ಅದಕ್ಕೊಂದು ಪರಿಮಿತಿಯಿದೆ ಯೆನಿಸುತ್ತದೆ. ಈ ಕೆಳಗಿನ ವಚನದ ಧೋರಣೆ ಅಂಥ ಅನುಮಾನಕ್ಕೆ ಕಾರಣ:

ವಶಿಷ್ಠಗೋತ್ರದಲ್ಲಿ ಹುಟ್ಟಿದವನು ವಶಿಷ್ಠಗೋತ್ರದವನೆಂಬಂತೆ
ಭಾರದ್ವಾಜಗೋತ್ರದಲ್ಲಿ ಹುಟ್ಟಿದವನು ಭಾರದ್ವಾಜಗೋತ್ರದವನೆಂಬಂತೆ
ಕಾಶ್ಯಪಗೋತ್ರದಲ್ಲಿ ಹುಟ್ಟಿದವನು ಕಾಶ್ಯಪಗೋತ್ರದವನೆಂಬಂತೆ
ವಿಶ್ವಾಮಿತ್ರಗೋತ್ರದಲ್ಲಿ ಹುಟ್ಟಿದವನು ವಿಶ್ವಾಮಿತ್ರಗೋತ್ರದವನೆಂಬಂತೆ
ಆಪರಿ ಆವಾವ ಗೋತ್ರದಲ್ಲಿ ಅವಾವ ಋಷಿಗಳ ವಂಶದಲ್ಲಿ ಜನಿಸಿದವನು
ಆ ಗೋತ್ರ, ಆಸಂತತಿ, ಆ ಸುತನು,
ಎಂಬುದು ಉಪಚರ್ಯವೆ? ಅಸತ್ಯವೆ ಹೇಳಿರಣ್ಣಾ?
ಅದು ತಾತ್ಪರ್ಯ, ಅದು ಸತ್ಯ.
ಆ ಪರಿ ಬ್ರಾಹ್ಮಣನ ಮಗ ಬ್ರಾಹ್ಮಣನು, ಕ್ಷತ್ರಿಯನ ಮಗ ಕ್ಷತ್ರಿಯನು
ವೈಶ್ಯನ ಮಗ ವೈಶ್ಯನು, ಶೂದ್ರನ ಮಗ ಶೂದ್ರನು, ಆ ಪರಿ ತಪ್ಪದು.
ದಿಟ,ದಿಟ ವಿಚಾರಿಸಿ ನೋಡಿರೆ.

ಆದರೆ ಹೀಗೆ ಪೀಠಿಕೆ ಹಾಕಿದ್ದು 'ವಿರೂಪಾಕ್ಷಂ ದ್ವಿಜೋತ್ತಮಂ' ಎಂಬ ಶ್ರುತಿವಾಕ್ಯ ಉದ್ಧರಿಸಿ ಮಹಾದೇವನೇ ಮಹಾಬ್ರಾಹ್ಮಣ ಎಂದು ಹೇಳಲೇನೋ ಎನ್ನಿಸುತ್ತದೆ.

ಅದು ಹೇಗೆಂದಡೆ ಶ್ರುತಿ:
'ಮಹಾಬ್ರಾಹ್ಮಣಮೀಶಾನಂ' ಎಂದುದಾಗಿ
'ಮತ್ತಂ ವಿರೂಪಾಕ್ಷಂ ದ್ವಿಜೋತ್ತಮಂ' ಎಂದುದಾಗಿ
ಮಹಾಬ್ರಾಹ್ಮಣನೇ ಮಹಾದೇವನು
ಇದಕ್ಕೆ ಮತ್ತೆ ಶಿವರಹಸ್ಯದಲ್ಲಿ
ಗುರುದೇವೊ ಮಹಾದೇವೋ ಗುರುದೇವಸ್ಸದಾಶಿವಃ।
ಗುರುದೇವಃ ಪರಂ ತತ್ವಂ ತಸ್ಮೈ ಶ್ರೀಗುರವೇ ನಮಃ॥
ಎಂದುದಾಗಿ ಮಹದೇವನೇ ಶ್ರೀಗುರು ಕಾಣಿರಣ್ಣಾ.
ಆ ಶ್ರೀಗುರುವಿನ ಕರಕಮಲದಲ್ಲಿ ಉದ್ಭವಿಸಿದ
ತಚ್ಛಿಷ್ಯನೇ ಮಹಾ ಬ್ರಾಹ್ಮಣನು, ಇಂತೆಂಬುದು ಹುಸಿಯಲ್ಲ
ಜಾತಿ ಅಜಾತಿ ಎಂದು ಅಷ್ಟಾದಶ ಜಾತಿಯೊಳಗೆ ಇಕ್ಕಲಾಗದು.
ಅಷ್ಟಾದಶ ಜಾತಿಯೊಳಗೆಂದೂ ಭಾವಿಸಲಾಗದು

ಆ ಮಹಿಮನೇ ಸತ್ಕುಲಜನು
ಇದಕ್ಕೆ ಮತ್ತುಂ
'ಬ್ರಹ್ಮಣಾ ಚರತೀ ಬ್ರಾಹ್ಮಣ' ಎಂದುದಾಗಿ
ಆ ಮಹಾಮಹಿಮನು ಬ್ರಹ್ಮವ ಆಚರಿಸುವವನಾಗಿ ಬ್ರಾಹ್ಮಣ

ಹೀಗೆ ಅವನ ಬ್ರಾಹ್ಮಣ ಕಲ್ಪನೆ ಬೇರೆಯೇ ಇದೆ. ಉಳಿದಂತೆ ಬ್ರಾಹ್ಮಣರ ಬಗೆಗಿನ ಅವನ ಧೋರಣೆ ಸ್ಪಷ್ಟವೇ ಇದೆ. ಬ್ರಾಹ್ಮಣನೆಂದರೆ ಅವನು ಶಿವಭಕ್ತನೂ ಲಿಂಗಾರ್ಚನಾತತ್ಪರನೂ ಆದವನು, ವರ್ಣಬ್ರಾಹ್ಮಣನಲ್ಲ.

ಲಿಂಗಾರ್ಚನ ವಿಹೀನಸ್ತು ದ್ವಿಜೋಪಿ ಶ್ವಪಚಾಧಮಃ ।
ಲಿಂಗಾರ್ಚನಪರೋ ನಿತ್ಯಂ ಶ್ವಪಚೋಽ ದ್ವಿಜೋತ್ತಮಃ ॥
(ವ.ಸಂ.೧೧೫. ಪುಟ.೪೬೫)

ವಿಪ್ರರನ್ನು ಕುರಿತ ವಿಡಂಬನೆ, ಲೇವಡಿ

ಬ್ರಾಹ್ಮಣರನ್ನು ಜಾತಿಬ್ರಾಹ್ಮಣರು, ವಿಪ್ರರು, ದ್ವಿಜರು, ಶಾಪಹತ ವಿಪ್ರರು ಎಂದೆಲ್ಲ ವಿಭೇದಮಾಡುತ್ತಾನೆ. ಬ್ರಾಹ್ಮಣರು ಯಜ್ಞ ಯಾಗದಿಗಳ ಸಮಯದಲ್ಲಿ ಬಲಿಯ ನೆಪದಲ್ಲಿ ಪ್ರಾಣಿವಧೆ ಮಾಡಿ ಮಾಂಸಭಕ್ಷಣೆ ಮಾಡುವುದನ್ನು ಅತ್ಯಂತ ವ್ಯಂಗ್ಯವಾಗಿ ಭರ್ತ್ಸನೆಮಾಡುತ್ತಾನೆ. ಮಾಂಸತಿನ್ನಿ ಎಂದು ವೇದಹೇಳಿತ್ತೆ ಎನ್ನುವ ಪ್ರಶ್ನೆಯಲ್ಲಿಯೇ ಇದೆಲ್ಲ ವಿಪ್ರರ ಸೃಷ್ಟಿ ಎನ್ನುವುದು ಅವನ ಮಾತಿನ ಅರ್ಥ. (ವ. ಸಂ.೧೨೬)

ಜಾತಿಬ್ರಾಹ್ಮಣಂಗೆ ಕರಸ್ಥಲದಲ್ಲಿ ಲಿಂಗ,
ಉರಸ್ಥಲದಲ್ಲಿ ರುದ್ರಾಕ್ಷಿಮಾಲೆ, ಉಪನಯನ ನೊಸಲಕಣ್ಣು
ಕಾವಿಯ ಧೋತ್ರ, ಗಾಯತ್ರಿಮಂತ್ರ
ಪುರುಷಪ್ರಮಾಣ ದಂಡ, ಭವತಿಭಿಕ್ಷಾಂದೇಹಿಯೆಂದು
ಪರಬ್ರಹ್ಮವನಾಚರಿಸಿಕೊಂಡಿಪ್ಪಾತನೆ ಬ್ರಾಹ್ಮಣ
ಇಂತಲ್ಲದೆ ಮಿಕ್ಕವರೆಲ್ಲ ಶಾಪಹತ ವಿಪ್ರರು ನೀವು ಕೇಳಿರೊ

ವಿಪ್ರರೆಂದರೆ ಋಷಿಗೋತ್ರದಲ್ಲಿ ಹುಟ್ಟಿದವರು. ಅವರೆಲ್ಲ ಅಧಮ ಜಾತಿ ಎಂದು ಉರಿಲಿಂಗಪೆದ್ದಿಯ ತೀರ್ಮಾನ. ಅಧಮ ಜಾತಿಯಾದರೂ ರುದ್ರಭಕ್ತರಾದ ಕಾರಣ ಬ್ರಾಹ್ಮಣರು.

ಇದಲ್ಲದೆ ದ್ವಿಜರನ್ನು ಕರ್ಮಭಾಂಡದವರು ಎಂದು ಜರೆಯುತ್ತ ಯಜ್ಞ ಯಾಗಾದಿಗಳ ಸಮಯದ ಅವರ ಮಾಂಸ ಭಕ್ಷಣೆಯನ್ನು ಅತ್ಯಂತ ತೀವ್ರವಾಗಿ ಚುಚ್ಚುತ್ತಾನೆ. ಕರ್ಮಭಾಂಡದವರು ಏಕೆಂದರೆ ಹರಿ ಹರನ ಭೃತ್ಯ. ಹರನಾದರೆ ಕರ್ತ. ಕರ್ತನನ್ನು ಭೃತ್ಯನಿಗೆ ಸರಿಯೆನ್ನುವವರೇ ಕರ್ಮಭಾಂಡದವರು. ಪುರಾಣದ ಕಥಾಪ್ರಸಂಗಗಳನ್ನು ಉಲ್ಲೇಖಿಸುತ್ತ ಬ್ರಾಹ್ಮಣರ ದ್ವಂದ್ವಾಚಾರ, ಡಂಬಾಚಾರಗಳನ್ನು ಉಗ್ರವಾಗಿ ಖಂಡಿಸುತ್ತಾನೆ.

ಇದರಲ್ಲಿ ಅವರ ಮಾಂಸಭಕ್ಷಣೆ, ತಮ್ಮ ಕುಲದೈವವಾದ ರುದ್ರನನ್ನು ನಿಂದಿಸಿ ತಮಗಿಂತ ಕೀಳು ಜಾತಿಯ ಕ್ಷತ್ರಿಯ ಹರಿಯನ್ನು ಪೂಜಿಸುವುದು, ಶಿವಲಿಂಗಪೂಜೆಯನ್ನಾಚರಿಸಿ ಬ್ರಾಹ್ಮಣತ್ವ ಪಡೆಯುವುದು ಬಿಟ್ಟು ಶತಯಾಗಗಳನ್ನು ಮಾಡಿ ಶೂದ್ರನಾದ ಇಂದ್ರತ್ವವನ್ನು ಬಯಸುವ ಅಧಮತೆಗಳನ್ನು ಅತ್ಯುಗ್ರವಾಗಿ ಖಂಡಿಸುತ್ತಾನೆ:

> 'ಸತ್ಯಂ ಭೋ ಬ್ರೂತ ಪಂಚಪ್ರಾಣ ಇಂದ್ರಿಯನಿಗ್ರಹಮೆಂದೋದಿ
> ಗುದ್ದಿ ಗುದ್ದಿ ಹೋತನ ತಿಂಬುದಾವಾಚಾರಮೋ?
> 'ಪಿತಾಮಹಶ್ಚ ವೈಶ್ಯಸ್ತು ಕ್ಷತ್ರಿಯೋರಪರಯೋ ಹರಿಃ
> ಬ್ರಾಹ್ಮಣೋ ಭಗವಾನ್ ರುದ್ರಃ ಸರ್ವೇಷ್ವುತ್ತಮೋತ್ತಮಃ'
> ಎಂಬ ಶ್ರುತಿಯ ನೋಡಿ,
> ತಮ್ಮ ಕುಲದೈವವಹ ಬ್ರಾಹ್ಮಣನಹ ರುದ್ರನ ನಿಂದಿಸಿ
> ತಮಗಿಂತ ಕೀಳುಜಾತಿಯಹ ಕ್ಷತ್ರಿಯ ಹರಿಯ ಆರಾಧಿಸುವ
> ಕುಲಹೀನರು ನೀವು ಕೇಳಿಭೋ:
> 'ಜನ್ಮನಾ ಜಯತೇ ಶೂದ್ರಃ ಕರ್ಮಣಾ ದ್ವಿಜ ಉಚ್ಯತೇ'
> ವೇದಾಭ್ಯಾಸೇನ ವಿಪ್ರಸ್ತು ಬ್ರಹ್ಮಣಾಚರಂತೀತಿ ಬ್ರಾಹ್ಮಣಃ
> ಎಂಬ ಶ್ರುತಿಯನೋದಿ
> ಪರಬ್ರಹ್ಮನಂತಹ ಶಿವಲಿಂಗಪೂಜೆಯನಾಚರಿಸಿ ಬ್ರಾಹ್ಮಣತ್ವವನೈದದೆ
> ಶತಯಾಗಂಗಳ ಮಾಡಿ ಶೂದ್ರನಹ ಇಂದ್ರತ್ವವ ಬಯಸುವ
> ಅಧಮರು ನೀವು ಕೇಳಿಭೋ:
> 'ಜನ್ಮನಾ ಜಾಯತೇ ಶೂದ್ರಃ ಮಾತಾ ಸ ಪ್ರಥಮಂ ಶೂದ್ರಾಣಿ
> ನ ಚೋಪದೇಶಃ ಗಾಯತ್ರೀ ನ ಚ ನ ಚ ಕ್ರಿಯಾ' ಎಂದುದಾಗಿ

ದೀಕ್ಷೆಯಿಲ್ಲದೆ ಸತಿ ಶೂದ್ರಗಿತ್ತಿಗೆ ಹುಟ್ಟಿದವನೊಡನುಂಬ
ಅನಾಚಾರಿಗೆ ಎಲ್ಲಿಯದೋ ಬ್ರಾಹ್ಮಣತ್ವ?
ಆವ ಜಾತಿಯವನಾದರೇನು? ಶಿವಭಕ್ತನೆ ಬ್ರಾಹ್ಮಣ
ಅದಕ್ಕೆ ಸಾಕ್ಷಿ:
ತಪಸಾ ಬ್ರಾಹ್ಮಣೋಽಭವತ್ ಸಾಂಖ್ಯಾಯನ ಮಹಾಮುನಿಃ
ತಪಸಾ ಬ್ರಾಹ್ಮಣೋಽಭವತ್ ಗೌತಮಸ್ತು ಮಹಾಮುನಿಃ
ಜಾತಿಂ ನ ಕಾರಯೇತ್ತೇಷು ಶ್ರೇಷ್ಠಾಃ ಸಮಭವಂಸ್ತತಃ
ತಜ್ಞಾತಿರಭವತ್ತೇನ' ಎಂದುದಾಗಿ
ತಮ್ಮ ತಮ್ಮ ಗೋತ್ರಂಗಳೆ ಸಾಕ್ಷಿಯಾಗಿ ಸಾರುತ್ತಿರಲು
ಕುಭ್ರಮೆಯಾತಕ್ಕೆ?
ಶ್ವಪಚೋಽಪಿ ಮುನಿಶ್ರೇಷ್ಠಃ ಶಿವಭಕ್ತಿ ಸಮನ್ವಿತಃ।
ಶಿವಭಕ್ತಿವಿಹೀನಸ್ತು ಶ್ವಪಚೋಽಪಿ ದ್ವಿಜಾಧಮಃ ॥ ಎಂದುದಾಗಿ
ಶಿವಭಕ್ತನೆ ಕುಲಜ, ಶಿವಭಕ್ತಿ ಇಲ್ಲದವನೆ ಶ್ವಪಚನೆಂದರಿಯದ
ಅಜ್ಞಾನಿಗಳು ನೀವು ಕೇಳಿಭೋ! (೨೦೯)

ಉರಿಲಿಂಗಪೆದ್ದಿಯ ಅಭಿಪ್ರಾಯದಲ್ಲಿ ಹುಟ್ಟಿನಿಂದ ಬ್ರಾಹ್ಮಣರೆನಿಸಿಕೊಂಡವರು ಬ್ರಾಹ್ಮಣರಲ್ಲ. ಶಿವಭಕ್ತರಾಗಿ ಬ್ರಹ್ಮದಲ್ಲಿ ಚರಿಸುವವರು ಮಾತ್ರ ಜಾತಿಬ್ರಾಹ್ಮಣರು. ಯಜ್ಞಯಗಾದಿಗಳನ್ನು ಮಾಡಿಕೊಂಡು ಮಾಂಸಭಕ್ಷಣೆ ಮಾಡುವವರು ಶಾಪಹತ ಬ್ರಾಹ್ಮಣರು. ವೇದ, ಮಾಂಸ ತಿನ್ನಲು ಹೇಳಿರಲಿಲ್ಲ. ಆದರೆ ಕೃತ, ತ್ರೇತಾ, ದ್ವಾಪರ ಮತ್ತು ಕಲಿಯುಗಗಳಲ್ಲಿ ಹೋಮ ಮಾಡುವ ಸಂದರ್ಭದಲ್ಲಿ ಕ್ರಮವಾಗಿ ಗಜಾಸುರ, ಅಶ್ವಾಸುರ ಮಹಿಶಾಸುರ ಮತ್ತು ಹೋತನ ಬಲಿ ಅರ್ಪಿಸಲಾಗುತ್ತಿತ್ತು. ವೇದಗಳ ಪ್ರಕಾರ ಬಲಿಯೆಲ್ಲವೂ ಸಾಂಕೇತಿಕ ಎಂದು ಉರಿಲಿಂಗಪೆದ್ದಿಯ ಅಭಿಪ್ರಾಯ. ಕುಲ, ಚಲ ಯೌವನ, ರೂಪು, ವಿದ್ಯಾ, ರಾಜ್ಯ, ತಪವೆಂಬ ಅಷ್ಟಮದಗಳ ಗಜ, ಪ್ರಾಣ, ವ್ಯಾನ, ಅಪಾನ, ಉದಾನ ಸಮಾನ, ನಾಗ, ಕೂರ್ಮ, ಕೃಕರಗಳೆಂಬ ಕುದುರೆ, ಹಾಗೆಯೇ ಜಾತಿ, ವರ್ಣ, ಆಶ್ರಮ, ಕುಲಗೋತ್ರನಾಮಗಳೆಂಬ ಕೋಣ ಮತ್ತು ಮನ, ಬುದ್ಧಿ, ಚಿತ್ತ, ಅಹಂಕಾರಗಳೆಂಬ ಹೋತಕ್ಕೆ ಸಂಕೇತವಾಗಿದ್ದುವು ಎಂಬುದು ಉರಿಲಿಂಗಪೆದ್ದಿಯ ವಿಚಾರ. ಇನ್ನೊಂದು ವಚನದಲ್ಲೂ (ವ.ಸಂ. ೧೩) ಬ್ರಾಹ್ಮಣರ ಆಚಾರಗಳಲ್ಲಿರುವ ದ್ವೈಧವನ್ನು ಲೇವಡಿಮಾಡುತ್ತಾನೆ.

ವಿಭೂತಿಯನೊಲ್ಲದೆ ಬಿಳಿಯ ಮಣ್ಣನ್ನಿಡುವ ಶ್ವಪಚರು ಎಂದು ಹಣೆಗೆ ಮಟ್ಟಿಯನ್ನಿಡುವ ಬ್ರಾಹ್ಮಣರ ಅಚಾರವನ್ನು ಲೇವಡಿಮಾಡುತ್ತಾನೆ. ಹರಿ ಮತ್ತು ಹರರು ಒಂದೇ ಎಂದು ಹೇಳುವ ಭವಿಗಳಾದ ಈ ಶಾಪಹತ ಹಾಗೂ ಕರ್ಮಚಾಂಡಾಳ ವಿಪ್ರರು ದೈವವೆಂದು ಪೂಜಿಸುವ ವಿಷ್ಣು ತನ್ನ ಒಂದು ಕಣ್ಣನ್ನೇ ಹರನ ಪಾದಕ್ಕರ್ಪಿಸಿ ವೈಕುಂಠವನ್ನು ಪಡೆದನೆಂದು ಪೆದ್ದಿಯ ಅಭಿಪ್ರಾಯ. ಅಂಥ ಮಹಾದೇವನ ಭಕ್ತರನ್ನು ದೂಷಿಸುವವರ ದ್ವಂದ್ವಾಚಾರವನ್ನು ಹೀಗೆ ಬಯಲಿಗೆಳೆಯುತ್ತಾನೆ:

ಬ್ರಾಹ್ಮಣಿಕೆಗೆ ನೆಲಗಟ್ಟಾದ ಗಾಯತ್ರೀ ಮತ್ತು ವೇದಕ್ಕೆ ನೆಲಗಟ್ಟಾದ ಓಂಕಾರ ಎರಡೂ ಶಿವನನ್ನೇ ಸ್ತುತಿಸುತ್ತಿವೆ.

ಅದೆಂತೆಂದೊಡೆ:
ಓಂಕಾರ ಪ್ರಭವಾ ವೇದಾ ಓಂಕಾರ ಪ್ರಭವಾಸ್ವರಾಃ ।
ಓಂಕಾರಪ್ರಭವಂ ಸರ್ವಂ ತ್ರೈಲೋಕ್ಯಂ ಸಚರಾಚರಂ ॥

ಇನ್ನು ಗಾಯತ್ರಿ:
'ಓಂ ಮಹಃ ಓಂಜನಃ ಓಂತಪಃ
ಓಂ ಸತ್ಯಂ ಓಂ ತತ್ಸವಿತುರ್ವರೇಣ್ಯಂ
ಭರ್ಗೋ ದೇವಸ್ಯ ಧೀಮಹಿ ಧಿಯೋಯೋನಃಪ್ರಚೋದಯಾತ್;
ಎಂದು ಶ್ರಾದ್ಧ ತದ್ದಿನ ಪಿತೃಕಾರ್ಯಮಾಡುವಲ್ಲಿ
ವಿಶ್ವದೇವರ ಸ್ಥಾಪನೆಯಂ ಮಾಡುವಿರಿ
ವಿಶ್ವದೇವಾಯ ಸ್ವಾಹಾ ಎಂದು ಅರ್ಚನೆ ವಂದನೆಯಂ ಮಾಡುವಿರಿ
ಯಥೋಕ್ತವಾಗಲಿ ಯಥಾಕಾಲವಾಗಲೆಂದು ಬೇಡಿಕೊಂಬಿರಿ
'ಗಯಾಯಾಂ ಶ್ರೀರುದ್ರಪಾದೇ ದತ್ತಮಸ್ತು' ಎಂದೆಂಬಿರಲ್ಲಾ
'ಗಯಾಯಾಂ ಶ್ರೀ ವಿಷ್ಣುಪಾದೇ ದತ್ತಮಸ್ತು'
ಎಂದೆಂದುಂಟಾದಡೆ ಹೇಳಿರೇ
ಸತಿಗೆ ಪಿಂಡವ ಕೊಡುವಲ್ಲಿ
ವಸುರುದ್ರಾದಿತ್ಯರೂಪೇಭ್ಯೋ ಮಧ್ಯಪಿಂಡಸ್ತು ಪುತ್ರದಃ।
ವೇದೋಕ್ತ ರುದ್ರನಿರ್ಮಾಲ್ಯಂ ಉರಸ್ಥಾನಪವಿತ್ರಕಂ॥

ಆದಿಪಿಂಡಾಂತ್ಯಪಿಂಡಂ ಚ ವರ್ಜಯೇತ್ ಸತತಂ ಬುಧಃ
ಎಂದು ರುದ್ರಪಿಂಡದಿಂದ ಉತ್ಪತ್ಯವಾಗಿ
ಮರಳಿ ಭಕ್ತರ ಜರಿದು ಗಳಹುವಾ ಪಾತಕರೆಲ್ಲರೂ ನೀವು ಕೇಳಿರೇ
ಭಕ್ತರು ಕೊಂಬುದೇ ಪಾದೋದಕ ಪ್ರಸಾದ
ನೀವು ಉಂಬುದೇ ಭೂತಶೇಷ

....

ಆ ಭೂತಶೇಷವ ತಿಂಬ ಭೂತ ಪ್ರಾಣಿಯ
ಲಿಂಗ ಪ್ರಾಣಿಗೆ ಸರಿಯೆಂಬವನ ಬಾಯಲ್ಲಿ ಕೆರ್ಪನಿಕ್ಕಿ
ಈಶಭಕ್ತಿಯ ಮೆರೆವ ನಮ್ಮ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ.(ವ. ಸಂ.೧೩)

ಎಂದು ಚಾಟಿಬೀಸುತ್ತಾನೆ.

ಆದರೆ ಶಾಪಹತವಿಪ್ರರೆಂಬ 'ಹೀನಹೊಲೆಯರು', 'ಜಿನುಗು ಹೊಲೆಯರು', 'ಕುನ್ನಿಹೊಲೆಯರು' 'ಅನಾಚಾರಿ ಹೊಲೆಯರು' ಅಕ್ಷರಶಃ ಆನೆ, ಕುದುರೆ, ಎಮ್ಮೆ ಮತ್ತು ಹೋತಗಳನ್ನು ಕೊಂದು ತಿನ್ನುತ್ತ ಬಂದರು ಎಂದು ಅತ್ಯಂತ ಕಟುವಾದ ಭಾಷೆಯಲ್ಲಿ ಖಂಡಿಸುತ್ತಾನೆ. ಹುಟ್ಟಿನಿಂದ ಮಾಂಸಾಹಾರಿಯಾದ ಉರಿಲಿಂಗಪೆದ್ದಿ ಶರಣನಾದ ನಂತರದಲ್ಲಿ ಮಾಂಸಾಹಾರವನ್ನು ಇಷ್ಟೊಂದು ಉಗ್ರವಾಗಿ ಖಂಡಿಸುವುದು ಸೋಜಿಗವೆನಿಸುತ್ತದೆ. ಕಾರಣ ವೀರಶೈವಕ್ಕೆ ಬಂದ ಅನೇಕ ಕೆಳ ಜಾತಿಗಳವರು ತಮ್ಮ ಹಿಂದಿನ ದೈವಗಳ ಆರಾಧನೆ ಮತ್ತು ಆಹಾರ ಪದ್ಧತಿಯನ್ನು ಪೂರ್ತಿಯಾಗಿ ತೊರೆದಿರಲಿಲ್ಲವೆಂಬುದು ಅನೇಕ ವಚನಕಾರರ ವಚನಗಳಿಂದ ತಿಳಿದು ಬರುತ್ತದೆ. ಬೌದ್ಧ, ಜೈನಧರ್ಮಗಳು ಬರುವುದಕ್ಕೆ ಮುಂಚೆ ಬ್ರಾಹ್ಮಣರು ಮಂಸಾಹಾರಿಗಳಾಗಿದ್ದುದು ನಿಜವಾದರೂ ಬೌದ್ಧ ಮತ್ತು ಜೈನಧರ್ಮಗಳ ಪ್ರಭಾವದಿಂದ ಮಾಂಸಭಕ್ಷಣೆ ತ್ಯಜಿಸಿದರೆಂದು ಇತಿಹಾಸ ಹೇಳುತ್ತದೆ. ಬಸವಣ್ಣನವರ ಕಾಲದಲ್ಲಿ ಯಜ್ಞಯಾಗಾದಿಗಳ ಕಾಲಕ್ಕೆ ಹೋತ ಬಲಿಯಿದ್ದಿತಾದರೂ ಮಾಂಸಭಕ್ಷಣೆಯೂ ಇದ್ದಿತೆ ಎಂಬುದು ಸಂದೇಹವೇ.

ಇನ್ನೊಂದು ಪುರಾಣದ ಪ್ರಕಾರವೂ ಬ್ರಾಹ್ಮಣರು ಮತ್ತು ಹೊಲೆಯರು ಒಬ್ಬನೇ ತಂದೆಯಾದ ಜಮದಗ್ನಿಯ ಮಕ್ಕಳು. ಬ್ರಾಹ್ಮಣನು ಜಮದಗ್ನಿಯ ಹಿರಿಯ ಪತ್ನಿಯಾದ ರೇಣುಕಾ ದೇವಿಯ ಮಗನಾದರೆ ಹೊಲೆಯನು ಮಾತಂಗಿಯ ಮಗನು. ಗ್ರಾಮದೊಳಗೆ ಮನೆಯಲ್ಲಿದ್ದುಕೊಂಡು ಜೀವದ ಹಸುವ

ಹದಿನೆಂಟು ಜಾತಿಯ ಮಂಚದಡಿಯಲ್ಲಿ ನುಸಿದು ಗೋಮುಖದಲ್ಲಿ ಕೊಂಡುಹೋಗುವವರು ಬ್ರಾಹ್ಮಣರು, ಸಂಬೋಳಿಯೆನ್ನುವ ನಾಮಾಂಕಿತ ಕೊಟ್ಟು ಸತ್ತಹಸುವನೆಳೆದುಕೊಂಡುಹೋಗುವವರನ್ನು ಹೊಲೆಯರೆಂದು ಕರೆದರು ಎಂಬ ವಿವರಹೇಳುವ ಈ ವಚನದಲ್ಲೂ ಕಂಡುಬರುವುದು ಬ್ರಾಹ್ಮಣರ ಉಗ್ರಖಂಡನೆಯೇ:

ಶಿವಶಿವಾ, ಭಕ್ತಿಹೀನನ ಬಟ್ಟೆಯಲ್ಲಿ ಕಂಡು
ನೆಟ್ಟನೆ ಶಿವಭಕ್ತ ಜೋಹಾರ ಎಂದಡೆ,
ಸುರಾಪಾನದಲ್ಲಿ ಮಜ್ಜನಮಾಡಿದಂತಾಯಿತ್ತು ಅವನ ಶಿವಪೂಜೆ
ಕಟ್ಟಿದ ಕೆರೆಯನೊಡೆದಂತಾಯಿತ್ತು ಅವನ ಶಿವಪೂಜೆ.
ಅಮೇಧ್ಯವ ಭುಂಜಿಸಿದಂತಾಯಿತ್ತು ಅವನ ಶಿವಪೂಜೆ.
ಹೇಲೊಳಗಣ ಹುಳವ ಕೋಳಿ ಕೆದರಿದಂತಾಯಿತ್ತು ಅವನ ಶಿವಪೂಜೆ.
ಒಣಗಿದೆಲುವ ಸೊಣಗ ಕಡಿದು
ತನ್ನ ರಕ್ತವ ತಾನೇ ಭುಂಜಿಸಿದಂತಾಯಿತ್ತು ಅವನ ಶಿವಪೂಜೆ.
ಅವನ ಸರ್ವಾಂಗವು ಪಾಕುಳದ ಕುಳಿಯಂತಾಯಿತ್ತು.
ಕನ್ನಡಿಯ ಮೇಲೆ ಉದ್ದುರುಳಿದಂತಾಯಿತ್ತು ಅವನ ಶಿವಪೂಜೆ.
ಅರೆಯ ಮೇಲೆ ಆಡು ಹಿಕ್ಕೆಯನಿಟ್ಟಂತಾಯಿತ್ತು ಅವನ ಶಿವಪೂಜೆ.
ಲೋಳಸರದ ಮೇಲೆ ಬಂಡಿ ಹರಿದಂತಾಯಿತ್ತು ಅವನ ಶಿವಪೂಜೆ.
ಅದೆಂತೆಂದಡೆ: ವಿಷ್ಣು ಪುರಾಣೇ,
ಬ್ರಹ್ಮಬೀಜಂ ತೃಣಂ ನಾಸ್ತಿ ಕೇಶವಶ್ಚಾಧಿದೇವತಾ ।
ಗುರುಭ್ರಷ್ಟಶ್ಚ ಚಾಂಡಾಲೋ ವಿಪ್ರಃ ಶ್ವಾನೋ ಹಿ ಜಾಯತೇ ॥
ವಿಪ್ರಸ್ಯ ದರ್ಶನಂ ಚೈವ ಪಾಪಪಂಜರಮೇವ ಚ ।
ವಿಪ್ರಸ್ಯ ವಂದನಂ ಚೈವ ಕೋಟಿಜನ್ಮಸು ಸೂಕರಃ ॥
ಎಂದುದಾಗಿ ರೇಣುಕಾದೇವಿಯ ಮಗನೇ ಬ್ರಾಹ್ಮಣನು,
ಮಾತಂಗಿಯ ಮಗನೇ ಹೊಲೆಯನು,
ಇವರಿಬ್ಬರೂ ಜಮದಗ್ನಿಗೆ ಹುಟ್ಟಿದರಾಗಿ,
ಇದಕ್ಕೆ ಸಾಕ್ಷಿ, ಭಾರದ್ವಾಜ ವಿಶ್ವಾಮಿತ್ರ ಅಗಸ್ತ್ಯ ನಾರದ ಕೌಂಡಿಲ್ಯ
ಈಯೈವರು ಸಾಕ್ಷಿಯಲ್ಲಿ,
ನಿಮ್ಮ ನಿಮ್ಮೊಳಗೆ ಸಂವಾದವು ಬೇಡೆಂದು

ವಿಭಾಗವಂ ಮಾಡಿಕೊಟ್ಟ ವಿವರಮಂ ಕೇಳಿರಣ್ಣಾ
ಗ್ರಾಮದೊಳಗಣ ಸೀಮೆಯ ಗೃಹವನೇ ಹೊಲೆಯರಿಗೆ ಕೊಟ್ಟರು,
ಸತ್ತ ಹಸುವನೆಳೆದುಕೊಂಡು ಹೋಹವರನೇ
ಹೊಲೆಯರ ಮಾಡಿದರು.
ಜೀವದ ಹಸುವ ಹದಿನೆಂಟು ಜಾತಿಯ ಮಂಚದಡಿಯಲ್ಲಿ ನುಸಿದು
ಗೋದಾನಮುಖದಲ್ಲಿ ಕೊಂಡು ಹೋಹರನೇ
ಬ್ರಾಹ್ಮಣರ ಮಾಡಿದರು.
ಇನ್ನು ನಿಮಗೂ ತಮಗೂ ಸೊಮ್ಮು ಸಂಬಂಧವಿಲ್ಲವೆಂದು ಕಂಡಾಗ
ತೊಲಗುವಂತೆ ಸಂಬೋಳಿಯೆಂಬ ನಾಮಾಂಕಿತವಂ ಕೊಟ್ಟು
ತೊರೆ ಪತ್ರಮಂ ಬರೆದರಾಗಿ.
ಇದನರಿಯದಿದ್ದಡೆ ಇನ್ನೂ ಕೇಳಿರಣ್ಣ:
ನಳಚಕ್ರವರ್ತಿರಾಯನು ಪಿಂಡ ಪಿತೃಕಾರ್ಯವ ಮಾಡುವಲ್ಲಿ,
ಹೊನ್ನ ಗೋವಂ ತಂದು ಬಿನ್ನಾಣದಲ್ಲಿ ದಾನವ ಕೊಟ್ಟಲ್ಲಿ,
ಹೊಲೆಯರು ನಾಡಕೂಟವ ಕೂಡಿ ಆ ಸ್ಥಲ ತಾರ್ಕಣೆಯಲ್ಲಿ
ಪೂರ್ವಸಾಧನ ಸಂಬಂಧದಿಂದ ನ್ಯಾಯವನಾಡಿ
ಇತ್ತಂಡವ ಹಂಚಿಕೊಂಡ ವಿವರವ ಕೇಳಿರಣ್ಣಾ:
ಕೊಂಬುಕೊಳಗನೇ ತೆಗೆದು ಏಳುನೂರೆಪ್ಪತ್ತು ತೂಕ ಚಿನ್ನವ ಹಂಚಿಕೊಂಡು
ಉಳಿದ ಕೊಂಬು ಕೊಳಗವ ವಿಪ್ರರು ಎತ್ತಿಕೊಂಡರಾಗಿ,
ಈ ಹೊನ್ನಗೋವನಳಿದು ತಿಂಬ ಕುನ್ನಿಗಳ
ಕಂಡು ಕೇಳಿಯೂ ಅರಿದು ಮರೆದೂ
ಉತ್ತಮಕುಲದ್ವಿಜರೆಂದು ಅಲ್ಲಿ ಉಪದೇಶವಂ ಕೊಂಡು
ನಮಸ್ಕರಿಸುವ ಅಜ್ಞಾನಿ ಹೊಲೆಯರ ನಾನೇನೆಂಬೆನಯ್ಯಾ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ. (ವ.ಸಂ.೩೦೭)

ಇನ್ನುಳಿದಂತೆ ಉರಿಲಿಂಗಪೆದ್ದಿಯ ವಚನಗಳಲ್ಲಿ ವೀರಶೈವ ತಾತ್ವಿಕತೆ, ಅನುಭಾವ, ಭಕ್ತಿಗಳಿಗೇ ಪ್ರಾಧಾನ್ಯ ದೊರೆತಿದ್ದು ಅದನ್ನು ಸರಳವಾದ ಕನ್ನಡಮಾತಿನಲ್ಲಿ ನಿರೂಪಿಸುತ್ತಾ ಹೋಗುತ್ತಾನೆ.

ಆಧ್ಯಾತ್ಮ ಪೂಜೆ ಇವೆಲ್ಲ ಬದುಕಿನಿಂದ ಹೊರಗಾದವಲ್ಲವೇ ಅಲ್ಲ. ಸಾಮಾನ್ಯ ಜನರಲ್ಲಿ ವ್ರತ, ಪೂಜೆ ಎಲ್ಲವೂ ಆಡಂಬರದ, ಪ್ರದರ್ಶನದ ವಸ್ತುಗಳಾಗಿರುವುದೇ ಹೆಚ್ಚು. ನಮ್ಮ ವ್ರತಗಳು, ಉತ್ಸವಗಳೂ ಅದಕ್ಕೆ ಪೋಷಕ/ಸಮರ್ಥಕಗಳ ಹಾಗೆಯೇ ಇರುವುದು ಹೆಚ್ಚು. ಆದರೆ ನಿಜವಾದ ಆಧ್ಯಾತ್ಮವೆನ್ನುವುದು ಅಂತರಂಗದ ಅರಳುವಿಕೆಯಿಂದ ಸಾಧ್ಯವಾಗುವಂಥದು. ಅದೆಲ್ಲವೂ ಬದುಕಿನ ಸಹಜಕ್ರಿಯೆಗಳೇ ಆದಾಗ ಅಧ್ಯಾತ್ಮವೆನ್ನುವುದು ಹೊರಗಿನದಾಗದೆ, ವ್ಯಕ್ತಿಯ ಬದುಕಿನ ಭಾಗವೇ ಅಗಿರುತ್ತದೆ ಎಂದು ಈ ವಚನ ಹೇಳುತ್ತದೆ:

ಪರಾಂಗನೆಯರ ಅಂಗವ ಹಿಂಗಿಹುದೆ ಶೌಚ
ಅನ್ಯಾರ್ಜಿತದಲ್ಲಿ ಉದರವ ಹೊರೆಯದಿಹುದೆ ಸ್ನಾನ
ಮನದ ಮೈಲಿಗೆಯ ಕಳೆವುದೆ ಮಡಿವರ್ಗ.
ಶರಣರಲ್ಲಿ ಮಂಗಳಭಾವದಿರವೆ ಭಸ್ಮ ಲೇಪನ
ವಿಶ್ವತೋಮುಖನ ನೋಟಕಾರುಣ್ಯ ತನ್ನ ಮೇಲಿರಲು ರುದ್ರಾಕ್ಷಧಾರಣ
ಹಿಂಸೆಯ ಮಾಡದಿಹುದೆ ಆತ್ಮಶುದ್ಧಿ
ನಿರಹಂಕರವೆ ಪದ್ಮಾಸನ, ಸುಚಿತ್ತವೆ ದೃಷ್ಟಿ.
ಸತ್ಯವೆ ಲಿಂಗ ಸಾಹಿತ್ಯ ಅಗ್ಗವಣಿ
ದಯಾವಾಕ್ಯವೆ ಗಂಧ ಅಕ್ಷರವೆ ಅಕ್ಷತೆ
ನಿರ್ಮಲವೆ ಪುಷ್ಪ, ನಿಸ್ಸಂದೇಹವೆ ಧೂಪ
ನಿಸ್ಸಂಕಲ್ಪವೆ ದೀಪ ನಿಂದೆಯ ಮಾಡದಿಹುದೆ ಜಪ
ಪರಿಣಾಮವೆ ಆರೋಗಣೆ, ಅಖಂಡಿತವೆ ತಾಂಬೂಲ
ಇಂತೀ ಇಷ್ಟಲಿಂಗದ ಪೂಜೆಯ ಪರಿಯಲ್ಲಿ
ಪ್ರಾಣಲಿಂಗದ ಪೂಜೆಯ ಮಾಡಲು
ಅಂತರಂಗ ಬಹಿರಂಗ ಸರ್ವಾಂಗಲಿಂಗವಾಗಿರ್ಪುದು ಎನ್ನುತ್ತಾನೆ.

(ವ.ಸಂ.೧೭೩. ಪುಟ.೪೯)

ವೀರಶೈವದ ತ್ರಿವಿಧಗಳು ಬೇರೆ ಬೇರೆಯಲ್ಲ ಒಂದೆಂದರಿದ ಲಿಂಗ ಸ್ವಾಯತವಾದ ಭಕ್ತನ ನಿಲವು, ಸ್ಥಿತಿಗತಿಗಳನ್ನು ಈ ವಚನದಲ್ಲಿ ಸರಳ ರೀತಿಯಲ್ಲಿ ತಿಳಿಸಿಕೊಟ್ಟಿದ್ದಾನೆ.

ಅಮೃತದೊಳಗೆ ಜನಿಸಿ ಅಮೃತದೊಳಗೆ ವರ್ತಿಸುವ
ಅಮೃತದೇಹಿಗೆ ಹಸಿವು ತೃಷೆಯೆ?
ಆ ಅಮೃತವೆ ಆಹಾರ, ಆ ಅಮೃತವೆ ಸೇವನೆ,
ಬೇರೊಂದು ವಸ್ತುವುಂಟೆ? ಇಲ್ಲ.
ಅಮೃತವೇ ಸರ್ವಪ್ರಯೋಗಕ್ಕೆ.
ಇದಕ್ಕೆ ಕಟ್ಟಳೆಯುಂಟೆ? ಕಾಲವುಂಟೆ?
ಆಜ್ಞೆ ಉಂಟೆ? ಬೇರೆ ಕರ್ತರುಂಟೆ? ಇಲ್ಲ.
ಮನವೇ ಮೇರೆ, ಪರಿಣಾಮವೇ ಅವಧಿ ನೋಡಾ.
ಶ್ರೀಗುರುಲಿಂಗದಲ್ಲಿ ಜನಿಸಿ, ಶಿವಲಿಂಗದಲ್ಲಿ ಬೆಳೆದು
ಜಂಗಮಲಿಂಗದಲ್ಲಿ ವರ್ತಿಸಿ, ಪ್ರಸಾದಲಿಂಗದಲ್ಲಿ ಪರಿಣಾಮಿಸಿ,
ಗುರು ಲಿಂಗ ಜಂಗಮ ಪ್ರಸಾದ ಒಂದೆಂದರಿದು
ಆ ಚತುರ್ವಿಧ ಏಕವಾದ ಲಿಂಗವೇ ಪ್ರಾಣ, ಪ್ರಾಣವೇ ಲಿಂಗ
ಲಿಂಗವೇ ಅಂಗ, ಅಂಗವೆ ಲಿಂಗವಾದ
ಲಿಂಗಸ್ವಾಯತವಾದ ಲಿಂಗೈಕ್ಯಂಗೆ
ಜಪ ಧ್ಯಾನ ತಪಕ್ಕೆ ಅರ್ಚನೆಗೆ ಪೂಜನೆಗೆ
ಆಗಮವುಂಟೆ? ಕಾಲವುಂಟೆ? ಕರ್ಮವುಂಟೆ? ಕಲ್ಪಿತವುಂಟೆ? ಇಲ್ಲ.
ಸರ್ವವೂ ಲಿಂಗಮಯ.
ಆ ಲಿಂಗವಂತಂಗೆ ನಡೆದುದೇ ಆಗಮ, ಪೂಜಿಸಿದುದೇ ಕಾಲ
ಮಾಡಿದುದೇ ಕ್ರಿಯೆ, ನುಡಿದುದೇ ಜಪ, ನೆನೆದುದೇ ಧ್ಯಾನ
ವರ್ತಿಸಿದುದೇ ತಪಸ್ಸು.
ಇದಕ್ಕೆ ಅವಧಿಯುಂಟೆ? ಮೇರೆಯುಂಟೆ? ಇಲ್ಲ.
ಮನವೇ ಮೇರೆ, ಪರಿಣಾಮವೇ ಅವಧಿ ನೋಡಾ.
ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ, ರವಿ, ಶಶಿ, ಆತ್ಮ
ಮನೋವಾಕ್ಕಾಯ ಹೊನ್ನು ಹೆಣ್ಣು ಮಣ್ಣು
ಮೊದಲಾದ ಸರ್ವಪದಾರ್ಥವನರ್ಪಿಸಿ,
ಗುರು ಲಿಂಗ ಜಂಗಮದ ಪ್ರಸನ್ನತೆಯ ಪಡೆದ ಮಹಾಪ್ರಸಾದಿಗೆ
ಸರ್ವವೂ ಪ್ರಸಾದವಲ್ಲದೆ ಮತ್ತೊಂದಿಲ್ಲ.

ಆ ಪ್ರಸಾದಿಗೆ ಪದಾರ್ಥವೆಂಬ ಪ್ರಸಾದವೆಂಬ ಭೇದವುಂಟೆ?
ಅರ್ಪಿತವೆಂಬ ಅನರ್ಪಿತವೆಂಬ ಸಂದೇಹವುಂಟೆ?
ಕೊಡುವಲ್ಲಿ ಕೊಂಬಲ್ಲಿ ಸೀಮೆಯುಂಟೆ?
ನಿಸ್ಸೀಮಪ್ರಸಾದಿಗೆ ಸರ್ವವೂ ಪ್ರಸಾದ.
ಆ ಭೋಗಕ್ಕೆ ಮೇರೆ ಉಂಟೆ? ಅವಧಿಯುಂಟೆ? ಇಲ್ಲ.
ಮನವೇ ಮೇರೆ, ಪರಿಣಾಮವೇ ಅವಧಿ ನೋಡಾ.
ವೇದ ಶಾಸ್ತ್ರ ಆಗಮ ಪುರಾಣ ಮೊದಲಾದ ಸರ್ವವಿದ್ಯಂಗಳ
ತಾತ್ಪರ್ಯ ಮರ್ಮ ಕಳೆಗಳನರಿದ ಮಹಾಜ್ಞಾತೃವಿಂಗೆ
ಆ ಮಹಾಜ್ಞಾನವೇ ದೇಹ, ಆ ಮಹಾಜ್ಞೇಯವೇ ಪ್ರಾಣ.
ಈ ಮಹತ್ತಪ್ಪ ಜ್ಞಾತೃ ಜ್ಞಾನ ಜ್ಞೇಯ ಒಂದಾದ
ಮಹಾಬೆಳಗಿನ ಸುಖಸ್ವರೂಪಂಗೆ
ಮರ್ತ್ಯ ಸ್ವರ್ಗ ದೇವಲೋಕವೆಂಬ ಫಲಪದದಾಸೆಯುಂಟೆ? ಇಲ್ಲ.
ನಿರಂತರ ತೇಜೋಮಯ ಸುಖಸ್ವರೂಪನು
ವಿದ್ಯಾಸ್ವರೂಪನು ನಿತ್ಯಾನಂದಸ್ವರೂಪನು.
ಆ ಮಹಾಮಹಿಮನ ಮಹಾಸುಖಕ್ಕೆ
ಅವಧಿಯುಂಟೆ? ಮೇರೆಯುಂಟೆ? ಇಲ್ಲ.
ಮನವೇ ಮೇರೆ, ಪರಿಣಾಮವೇ ಅವಧಿ ನೋಡಾ.
ಆ ಮಹಾನುಭಾವಿ ತಾನೆ ಕೇವಲ ಜ್ಯೋತಿರ್ಮಯಲಿಂಗವಯ್ಯಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ. ॥೧೯॥

ಆತ್ಮನಿರಿಕ್ಷಣೆಯ ವಚನಗಳು

ಶರಣರು ಲೋಕಜೀವನವನ್ನು ನಿರೀಕ್ಷಿಸಿ ಅದರ ಡೊಂಕನ್ನು ತಿದ್ದಲೆತ್ನಿಸಿದಂತೆ ತಮ್ಮ ಅಂತರಂಗವನ್ನು ಒರೆಹಚ್ಚಿನೋಡಿಕೊಳ್ಳುವ ಆತ್ಮನಿರೀಕ್ಷಣೆಯ ವಚನಗಳನ್ನು ರಚಿಸಿರುವುದೂ ಉಂಟು. ಉರಿಲಿಂಗಪೆದ್ದಿ ಲೋಕದ ಡೊಂಕನ್ನು ತಿದ್ದುವುದಕ್ಕಿಂತ ಹೆಚ್ಚಾಗಿ ತನ್ನನ್ನು ತಾನೇ ಪರೀಕ್ಷೆಗೊಡ್ಡಿಕೊಂಡಿರುವುದೇ ಹೆಚ್ಚು.

ಲೌಕಿಕದ ಆಸೆಗಳು, ಕಾಮವಾಸನೆಗಳು ತನ್ನನ್ನು ಘಾಸಿಮಾಡುತ್ತಿವೆ, ಹೆಣ್ಣಿನ ವ್ಯಾಮೋಹದಿಂದ ತಾನಿನ್ನೂ ಮುಕ್ತನಲ್ಲ ಎಂದೆನಿಸಿದಾಗ ಹೊಮ್ಮಿರುವ ವಚನಗಳು ಇವು:

ಆದಿಮಧ್ಯ ಅವಸಾನದಲ್ಲಿಯೂ ಎನ್ನನು
ಆಶೆಯೇ ಗ್ರಹಿಸುತ್ತಿದೆ
ಶಿವಶಿವಾ ಆಸೆಯಿಂದ ಘಾಸಿಯಾಗುತ್ತಿದ್ದೇನೆ
ಶಿವಶಿವಾ ಆ ಹೊನ್ನು ಹೆಣ್ಣು ಮಣ್ಣಿನ ಆಶೆ
ಘಾಸಿಮಾಡಿ ಕಾಡುತ್ತಿದೆ.
ಶಿವಶಿವಾ ಈ ಆಶೆಯ ಕೆಡಿಸಿ
ನಿಮ್ಮ ಶ್ರೀಪಾದದೆಸೆಯೆ ನಿವಾಸವಾಗಿರಿಸಯ್ಯಾ ಎನ್ನನು.
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ. (ವ. ಸಂ.೪೩.ಪುಟ.೪೨೨)

ಹಾಗೆಯೇ ಈಕೆಳಗಿನ ವಚನದಲ್ಲೂ ಹೊನ್ನು ಹೆಣ್ಣು ಮಣ್ಣುಗಳ ಆಶಾ ವ್ಯಾಮೋಹದಿಂದ ಪೀಡಿತನಾಗಿದ್ದ ನಾನು ಇನ್ನುಮುಂದೆ ಇವಕ್ಕಾಸೆಮಾಡೆ ಎಂಬ ಆತ್ಮದ ದನಿ ಇದೆ:

ಹೆಣ್ಣ ಧ್ಯಾನಿಸಿ ನಿಮ್ಮ ಮರೆದೆನಯ್ಯಾ
ನಾನು ಮರೆದ ಕಾರಣ ನಿನೆನ್ನ ಮರೆದೆ. ನೀ ಮರೆದ
ಕಾರಣ ಹೆಣ್ಣು ಸಾಧ್ಯವಾಗದು
ನಿನ್ನ ಮೋಹ ತಪ್ಪಿ ಕೆಟ್ಟೆನಯ್ಯಾ.
ಹೊನ್ನು ಹೆಣ್ಣು ಮಣ್ಣು ಎಂಬ ಆಸೆಯೆನ್ನ ಗಾಸಿಮಾಡೆ.
ಕೆಟ್ಟೆ ಕೆಟ್ಟೆ ಶಿವಧೋ ಶಿವಧೋ ಮಹಾದೇವ
ಹೊನ್ನು ಹೆಣ್ಣು ಮಣ್ಣಿಗೆ ಕರ್ತನು ನೀನು
'ತೇನ ವಿನಾ ತೃಣಾಗ್ರಮಪಿ ನ ಚಲತಿ'
ಎಂಬುದನರಿದೂ, ಮದದಲ್ಲಿದ್ದು ಕೆಟ್ಟೆ.
ಈ ಕೇಡಲ್ಲದೆ ಹಸಿವು ತೃಷೆ ವ್ಯಸನ ವಿಷಯ
ಪಂಚೇಂದ್ರಿಯ ಷಡುವರ್ಗ ನೀನಾಗಿ ಕಾಡುತ್ತಿವೆ.
ಕೆಟ್ಟೆ, ಕೆಟ್ಟೆ, ಶಿವಧೋ ಮಹಾದೇವ.
ಹೊನ್ನು ಹೆಣ್ಣು ಮಣ್ಣಿನ ಆಶೆಯಿಂದ ಈ ಅವಸ್ಥೆಗೊಳಗಾದೆನು
ಇನ್ನಿವಕ್ಕಾಶೆಮಾಡೆನು, ನಿಮ್ಮ ಮರೆಯೆನು, ನಿಮ್ಮಾಣೆ
ಭಕ್ತವತ್ಸಲ ಭಕ್ತದೇಹಿಕದೇವ ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರ.
(ವ.ಸಂ. ೩೬೧. ಪುಟ.೬೨೦)

ಬಸವಣ್ಣನವರ ಬಗೆಗಿನ ಭಕ್ತಿ, ಗೌರವ

ವೀರಶೈವದ ಕ್ರಾಂತಿಪುರುಷ, ಭಕ್ತಿಭಂಡಾರಿ ಬಸವಣ್ಣನವರ ಬಗ್ಗೆಯಂತೂ ಉರಿಲಿಂಗಪೆದ್ದಿಗೆ ಅತುಳವಾದ ಭಕ್ತಿಭಾವ, ಪೂಜ್ಯತೆ. ಈ ಕೆಳಗಿನ ಎರಡು ವಚನಗಳಲ್ಲಿ ಬಸವಣ್ಣನ ವ್ಯಕ್ತಿತ್ವದ ಮಹಾನತೆಯನ್ನು ಮನಂಬುಗುವಂತೆ ವರ್ಣಿಸಿದ್ದಾನೆ:

'ಬಸವ ಬಸವ ಬಸವ' ಎನುತಿರ್ಪವರೆಲ್ಲರು
ಬಸವನ ಘನವನಾರೂ ಅರಿಯರಲ್ಲ!
ಅನಾದಿ ಪರಶಿವನಲ್ಲಿ ಅಂತರ್ಗತಮಾಗಿದ್ದ
ಮಹಾಪ್ರಕಾಶವೆ ಬಹಿಷ್ಕರಿಸಿತ್ತು.
ಆ ಚಿತ್ತೆ ಚಿದಂಗ ಬಸವ
ಆ ಚಿದಂಗ ಬಸವನಿಂದುದಯಿಸಿದ
ಚಿದ್ವಿಭೂತಿಯನೊಲಿದು ಧರಿಸಿದ ಶರಣರೆಲ್ಲರು
ಜ್ಯೋತಿರ್ಮಯಲಿಂಗವಪ್ಪುದು ತಪ್ಪದು ಕಾಣಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.(ವ. ಸಂ. ೧೯೩)

ಬಸವಣ್ಣನನ್ನು ತಾನು ಕಂಡುಕೊಂಡ ಪರಿಯನ್ನು ಈ ವಚನದಲ್ಲಿ ಅತ್ಯದ್ಭುತವಾಗಿ ಮೈದುಂಬಿ ವರ್ಣಿಸಿದ್ದಾನೆ:

ಶ್ರೀಗುರುಲಿಂಗದಲ್ಲಿ ಬಸವಣ್ಣನ ಕಂಡೆನು
ಬಸವಣ್ಣನಲ್ಲಿ ಶ್ರೀಗುರುಲಿಂಗವ ಕಂಡೆನು
ಶಿವಲಿಂಗದಲ್ಲಿ ಬಸವಣ್ಣನ ಕಂಡೆನು
ಬಸವಣ್ಣನಲ್ಲಿ ಶಿವಲಿಂಗವ ಕಂಡೆನು
....
....
ಇಂತಹ ಮಹಾಮಹಿಮರುಂಟೆ?
ಶಿವ ಶಿವಾ ಇಂತಹ ಸದ್ಭಕ್ತರುಂಟೆ?
ಇದು ಕಾರಣ, ಶ್ರೀಗುರುಲಿಂಗವೂ ಬಸವಣ್ಣನೇ
ಶಿವಲಿಂಗವೂ ಬಸವಣ್ಣನೇ, ಜಂಗಮಲಿಂಗವೂ ಬಸವಣ್ಣನೇ
ಪ್ರಸಾದಲಿಂಗವೂ ಬಸವಣ್ಣನೇ

ಇಷ್ಟಲಿಂಗವೂ ಬಸವಣ್ಣನೇ, ಪ್ರಾಣಲಿಂಗವೂ ಬಸವಣ್ಣನೇ
ಭಾವಲಿಂಗವೂ ಬಸವಣ್ಣನೇ
ಆಚಾರಲಿಂಗವೂ ಬಸವಣ್ಣನೇ ಮಹಲಿಂಗವೂ ಎನಗೆ ಬಸವಣ್ಣನಯ್ಯಾ
(ವ. ಸಂ.೩೨೨)

ಹಳೆಯ ದೇವರು ಧರ್ಮ ಆಚಾರಗಳನ್ನು ಉಳಿಸಿಕೊಂಡಿದ್ದ ಭಕ್ತರನ್ನು ಕುರಿತು

ಸಮಾಜದ ಎಲ್ಲ ವರ್ಗಗಳಿಂದ ಹೊಸಧರ್ಮವನ್ನೊಪ್ಪಿ ಜನರು ವೀರಶೈವಕ್ಕೆ ಉತ್ಸಾಹದಿಂದೇನೋ ಬಂದರು. ವೀರಶೈವವನ್ನೊಪ್ಪಿ ಇಷ್ಟಲಿಂಗಧಾರಣೆ ಮಾಡಿಸಿಕೊಂಡು ಭಕ್ತರಾದಮೇಲೆ ಆರಾಧ್ಯದೈವವಾದ ಶಿವನಲ್ಲಿ ಅನನ್ಯ ನಿಷ್ಠೆ ಹೊಂದಿರಬೇಕು. ಆದರೆ ಅನೇಕ ತಲೆಮಾರುಗಳಿಂದ ತಾವು ಪೂಜಿಸುತ್ತಿದ್ದ ದೈವ, ದೇವರುಗಳ ಬಗೆಗಿನ ನಂಬಿಕೆಯನ್ನು ಅಷ್ಟು ಬೇಗ ಕಳೆದುಕೊಳ್ಳುವುದು ಜನರಿಗೆ ಸಾಧ್ಯವಾಗುವುದಿಲ್ಲ. ಗುಟ್ಟಾಗಿ ಹಳೆಯ ದೈವಗಳಿಗೆ ನಡೆದುಕೊಳ್ಳುತ್ತಿರುತ್ತಾರೆ. ಅಲ್ಲದೆ ಮೊದಲಿನ ಹಾಗೆಯೇ ಬ್ರಾಹ್ಮಣರು, ಜೈನ, ಬೌದ್ಧ ಸನ್ಯಾಸಿಗಳನ್ನು ಗುರುಗಳೆಂದು ಭಾವಿಸಿ ದೀಕ್ಷೆ, ಉಪದೇಶಗಳನ್ನು ಪಡೆದುಕೊಳ್ಳುತ್ತಿದ್ದವರೂ ಇದ್ದರು. ಅಂಥವರ ಬಗ್ಗೆ ಉರಿಲಿಂಗಪೆದ್ದಿಗೆ ಅಪಾರ ಸಿಟ್ಟು. ಅಂಥವರನ್ನು ಉಗ್ರವಾಗಿ ಖಂಡಿಸಿದ್ದಾನೆ.

೧) ....ಇಂತೀ ಪ್ರಾಣಾತ್ಮನನೂ ಪರಮಾತ್ಮನಪ್ಪ ಶಿವಲಿಂಗವನೂ
ಶ್ರೀಗುರು ಯೋಗವಮಾಡಿ ತೋರಿಸಿಕೊಟ್ಟು ಕರುಣಿಸಿದ ಬಳಿಕ
ಗುರ್ವಾಜ್ಞೆಯಂ ಮೀರಿ ದ್ವಿಜರನು, ಸನ್ಯಾಸಿಯನು
ಶ್ರೀಗುರ್ವಾಜ್ಞೆಯನರಿಯದ ಶಿವನ ಮಹಾತ್ಮೆಯನರಿಯದ
ಶಿವಲಿಂಗವೇ ಪರಮಾತ್ಮನೆಂಬ ತಾತ್ಪರ್ಯವನರಿಯದ
ಈ ಭ್ರಷ್ಟರ ಮರಳಿ ಮರಳಿ ಗುರುವೆಂದು ಮಾಡಿ
ಉಪದೇಶವಂ ಮಾಡಿಸಿಕೊಳಬಹುದೆ
ಶಿವಶಿವಾ ಅದು ಗುರುದ್ರೋಹ ಶ್ರೀಗುರು ತಪ್ಪಮಾಡಿದುದಿಲ್ಲ
ಶ್ರೀಗುರು ಸರ್ವಧರ್ಮಂಗಳಿಗೆಯೂ
ಅಧಿಕಾಧಿಕವೆಂದುಹೇಳಿ ತೋರಿಕೊಟ್ಟು ಕರುಣಿಸಿದ ಬಳಿಕ
ಆತ್ಮಯೋಗವೆಂದು ವೈದಿಕವೆಂದು, ಸಕಲವೆಂದು ನಿಷ್ಕಲವೆಂದು

ವೈಷ್ಣವವೆಂದು ಮಾಯಾವಾದಿಗಳೆಂದು ಚಾರ್ವಾಕರೆಂದು ಬೌದ್ಧರೆಂದು
ಇತ್ಯಾದಿ ಭಿನ್ನ ದರ್ಶನಂಗಳಲ್ಲಿ ಧರ್ಮಶಾಸ್ತ್ರಂಗಳ ಕೇಳಿ
ಮರಳಿ ಉಪದೇಶವಂ ಮಾಡಿಸಿಕೊಳಬಹುದೆ?
ಶಿವಶಿವಾ ಅದು ಗುರುದ್ರೋಹ...........(೧೧೯)

೨) ಬಹಿರಂಗದಲ್ಲಿ ಶಿವ, ಅಂತರಂಗದಲ್ಲಿ ಅನ್ಯದೈವ
ಬಹಿರಂಗದಲ್ಲಿ ಲಿಂಗಕ್ರೀ, ಅಂತರಂಗದಲ್ಲಿ ಅನ್ಯಕ್ರೀ
ಬಹಿರಂಗದಲ್ಲಿ ಭಕ್ತರು, ಅಂತರಂಗದಲ್ಲಿ ಭವಿಗಳು
ಇಂತಿವರುಗಳ ಭಕ್ತರೆಂಬೆನೆ? ಎನಬಾರದು,
ನಿಮ್ಮ ಪೂಜಿಸಿಹರಾಗಿ ಭಕ್ತರೆಂಬೆನೆ? ಸದಾಚಾರಕ್ಕೆ ಸಲ್ಲರು
ಲಿಂಗವಂತರು ಮೆಚ್ಚರು.

೩) ಅಂಗದ ಮೇಲೆ ಲಿಂಗ ಸಾಹಿತ್ಯವಾದ ಬಳಿಕ
ಮರಳಿ ಅನ್ಯದೈವಂಗಳನಾರಾಧಿಸುವ ಕುನ್ನಿಗಳು ನೀವು ಕೇಳಿಭೋ
ವಿಷ್ಣುವೇ ದೈವವೆಂದು ಆರಾಧಿಸಿದ ಬಲಿಗೆ ಬಂಧನವಾಯಿತ್ತು
ವಿಷ್ಣುವೇ ದೈವವೆಂದು ಆರಾಧಿಸಿದ ಕರ್ಣನ ಕವಚ ಹೋಯಿತ್ತು
ವಿಷ್ಣುವೇ ದೈವವೆಂದು ಆರಾಧಿಸಿದ ನಾಗಾರ್ಜುನನ ಶಿರ ಹೋಯಿತ್ತು
ಅದಂತಿರಲಿ,
ಬ್ರಾಹ್ಮಣನೇ ದೈವವೆಂದು ಆರಾಧಿಸಿದ ಗೌತಮಂಗೆ ಗೋವಧೆಯಾಯಿತ್ತು
ಬ್ರಹ್ಮನನೇದೈವವೆಂದು ಆರಾಧಿಸಿದ ದಕ್ಷಂಗೆ ಕುರಿದಲೆಯಾಯಿತ್ತು
....
....
ಈ ಬಿನುಗು ದೈವಂಗಳ ಭಕ್ತಿ ಬಣಗು ನಾಯಿ ಒಣಗಿದೆಲುವ ಕಚ್ಚಿಕೊಂಡು
ಕಂಡಕಂಡ ಕಡೆಗೆ ಹರಿದಂತಾಯಿತ್ತು

೪. ಲಿಂಗವನಂಗದಲ್ಲಿ ಧರಿಸಿಕೊಂಡು
ಅಂಗವೇ ಲಿಂಗ ಲಿಂಗವೇ ಅಂಗ
ಪ್ರಾಣವೇ ಲಿಂಗ ಲಿಂಗವೇ ಪ್ರಾಣವಾಗಿ
ಅಂತರಂಗ ಬಹಿರಂಗ ಸರ್ವಾಂಗವೆಲ್ಲವೂ ಲಿಂಗವದ ಬಳಿಕ

ಇಂತೀ ಶ್ರೀಗುರು ಕೊಟ್ಟ ಲಿಂಗವ ಬಿಟ್ಟು
ಬೇರೆ ಮತ್ತೆ ಆತ್ಮತತ್ವವ ವಿಚಾರಿಸಿ ನೋಡಬೇಕೆಂದು
....
....
ಲಿಂಗವನರಿಯದೆ ಲಿಂಗಬಾಹಿರರಾದ
ದ್ವಿಜರನು ಯೋಗಿಯನು ಸನ್ಯಾಸಿಯನು ಗುರುವೆಂದು ಭಾವಿಸಬಹುದೆ?
ಶಿವಶಿವಾ ಅದು ಗುರುದ್ರೋಹ (೧೫)

ಉರಿಲಿಂಗಪೆದ್ದಿಯ ವೈಚಾರಿಕ ನಿಲುವು

ಹೀಗೆ ಉರಿಲಿಂಗಪೆದ್ದಿ ತನ್ನ ವಚನಗಳಲ್ಲಿ ಸಾಮಾಜಿಕ ಸ್ತರದಲ್ಲಿ ತಾಂಡವವಾಡುತ್ತಿದ್ದ ಜಾತೀಯ ಅಸಮಾನತೆಗಳನ್ನು ಖಡತುಂಡವಾಗಿ ಖಂಡಿಸುವಲ್ಲಿ, ನಿಜವಾಗಿ ಮನುಷ್ಯ ಶ್ರೇಷ್ಠನೆನಿಸುವುದು ಹೇಗೆಂದು ಹೇಳುವ ಮೂಲಕ ಕುಲಜನೆನ್ನುವುದಕ್ಕೆ ಹೊಸವ್ಯಾಖ್ಯಾನ ನೀಡುವಲ್ಲಿ ಉನ್ನತ ವೈಚಾರಿಕತೆಯನ್ನು ಮೆರೆದಿರುವುದು ಹಾಗೂ ವೇದಗಳು ಅಪೌರುಷೇಯವೆಂದು ಭಯಭಕ್ತಿಗಳನ್ನು ತೋರಿಸುತ್ತಿದ್ದ ಕಾಲದಲ್ಲಿ ಅವುಗಳು ಅಪೌರುಷೇಯವಲ್ಲ; ಋಷಿಪ್ರಣೀತವಾದವು, ಅವನ್ನು ದೈವವೆನ್ನುವ ವಿಪ್ರರು ಮರುಳರು ಮತ್ತು ಅವು ಕೇವಲ ಸಾಧಕಸಂಪತ್ತು ಎಂದು ಹೇಳುವಂಥ ವೈಚಾರಿಕತೆ ತೋರಿರುವುದು ಸೂರ್ಯನಷ್ಟೇ ಸತ್ಯ. ಅವನು ವೈಚಾರಿಕತೆಯನ್ನು ಮೆರೆದಿರುವ ಇನ್ನೊಂದು ಸಂಗತಿಯೆಂದರೆ ಭಕ್ತನು ಧರಿಸಿದ್ದ ಇಷ್ಟಲಿಂಗವು ಅಕಸ್ಮಾತ್ ಕೆಳಕ್ಕೆ ಬಿದ್ದುಹೋದರೆ ಏನು ಮಾಡಬೇಕೆಂದು ಹೇಳುವಲ್ಲಿ. ಅಂಥ ಸಮಯದಲ್ಲಿ ಲಿಂಗಧಾರಿಯು ದುರ್ಮರಣವನ್ನು ಆಹ್ವಾನಿಸಿ ದೇಹತ್ಯಾಗಮಾಡಬೇಕೆಂಬುದು ಆ ಕಾಲದ ಕೆಲವರ ಅಭಿಪ್ರಾಯವಾಗಿತ್ತು. ಅಲ್ಲದೆ ಅವನು ಅಪವಿತ್ರನಾಗಿ ಬಿಡುತ್ತಾನೆಂದು ತಿಳಿದು ಅವನನ್ನು ಮುಟ್ಟದೆ ದೂರವಿಡುವುದೂ ಇತ್ತು. ಆದರೆ ಆ ಬಗ್ಗೆ ಉರಿಲಿಂಗಪೆದ್ದಿ ತಳೆದಿರುವ ನಿಲುವು ಅತ್ಯಂತ ವೈಜ್ಞಾನಿಕವಾದದ್ದು. ಗರಡಿಯಲ್ಲಿ ಸಾಧನೆ ಮಾಡುವವನು ಕೈತಪ್ಪಿ ಕೋಲು ಕೆಳಕ್ಕೆ ಬಿದ್ದರೆ ಕೋಲುಬಿಟ್ಟು ಸಾಧನೆಯನ್ನು ಯಾರಾದರೂ ಬಿಟ್ಟುಕಳೆಯುತ್ತಾರೆಯೇ? ಎನ್ನುತ್ತಾನೆ:

ಶ್ರೀಗುರು ಶಿಷ್ಯಂಗೆ.............ಇಷ್ಟಲಿಂಗವಂ ಮಾಡಿ
ಶಿಷ್ಯನ ತನುವಿನಮೇಲೆ ಧರಿಸಿದ ಲಿಂಗವು
ಅವತಳವಾಗಿ ಭೂಮಿಯಲ್ಲಿ ಸಿಂಹಾಸನಂಗೊಡಿತ್ತೆಂದು
ಸಮಾಧಿಯ ಹೊಗುವರಯ್ಯಾ
ಲಿಂಗಕ್ಕೆ ಅವತಳವಾದಡೆ , ಭೂಮಿ ತಾಳಬಲ್ಲುದೆ?
ಮಾರಾಂತನ ಗೆಲಿದೆನೆಂದು ಗರಡಿಯ ಹೊಕ್ಕು
ಕಠಾರಿಯ ಕೋಲ ತಳೆದುಕೊಂಡು ಸಾಧನೆಯ ಮಾಡುವಲ್ಲಿ
ಕೈತಪ್ಪಿ ಕೋಲು ನೆಲಕ್ಕೆ ಬಿದ್ದಡೆ ಆಕೋಲ ಬಿಟ್ಟು
ಸಾಧನೆಯಂ ಬಿಟ್ಟುಕಳೆವರೇ ಅಯ್ಯ?
ತಟ್ಟಿಮುಟ್ಟಿ ಹಳಚುವಲ್ಲಿ
ಅಲಗು ಬಿದ್ದಡೆ ಭಂಗವಲ್ಲದೆ ಕೋಲು ಬಿದ್ದಡೆ ಭಂಗವೇ ಅಯ್ಯ?
ಆ ಕೋಲ ತಳೆದುಕೊಂಡು ಸಾಧನೆಯಂ ಮಾಡುವುದೇ ಕರ್ತವ್ಯ.
ಆ ಲಿಂಗ ಹುಸಿ ಎಂದಡೇನಯ್ಯ?
ಶ್ರೀವಿಭೂತಿವೀಳೆಯಕ್ಕೆ ಸಾಕ್ಷಿಯಾಗಿ ಬಂದ ಶಿವಗಣಂಗಳು ಹುಸಿಯೇ?
ಆ ಗಣಂಗಳು ಹುಸಿಯಾದಡೆ ಕರ್ಣಮಂತ್ರ ಹುಸಿಯೇ?
ಆ ಕರ್ಣಮಂತ್ರವು ಹುಸಿಯಾದಡೆ
ಶ್ರೀಗುರುಲಿಂಗವು ಹುಸಿಯೇ?
ಶ್ರೀಗುರುಲಿಂಗವು ಹುಸಿಯಾದಡೆ ಜಂಗಮಲಿಂಗ ಹುಸಿಯೇ?
ಆ ಜಂಗಮಲಿಂಗ ಹುಸಿಯಾದಡೆ
ಪಾದತೀರ್ಥ ಪ್ರಸಾದ ಹುಸಿಯೇ?
ಇಂತೀ ಷಟ್ಸ್ಥಲವ ತುಚ್ಛವಮಾಡಿ
ಗುರೂಪದೇಶವ ಹೀನವಮಾಡಿ ಸಮಾಧಿಯ ಹೊಗುವ
ಪಂಚಮಹಾಪಾತಕರ ಮುಖವ ನೋಡಲಾಗದು
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ. (ವ. ಸಂ.೩೨೫.)

ಮತೀಯ ಆವೇಶ, ಗಣಾಚಾರ

ಆದರೆ ಅಂಥ ಕ್ರಾಂತಿಕಾರಿಯ ವೈಚಾರಿಕತೆಯೂ ಮತೀಯ ಆವೇಶದಲ್ಲಿ ಮೈಮರೆತಾಗ ಅವೈಚಾರಿಕತೆಯ ರಾಹು ಅದನ್ನು ಹೇಗೆ ತುತ್ತುಗೊಳ್ಳಬಹುದೆಂಬುದಕ್ಕೆ

ಶಿವಭಕ್ತರಲ್ಲದ ಗುರು, ಲಿಂಗ ಜಂಗಮರನ್ನು ನಿಂದಿಸುವ ಭವಿಗಳ ವಿಷಯಕ್ಕೆ ತೋರ ಬೇಕಾದ ನಡೆಗೆ ಅವನ ಈ ಉಗ್ರ ಹೇಳಿಕೆಗಳು ಸಾಕ್ಷಿ:

ಶಿವಾಚಾರ ಶಿವಕಾರ್ಯಕ್ಕೆ ವಕ್ರವಾದವರ
ಗುರುಲಿಂಗಜಂಗಮವ ನಿಂದಿಸಿನುಡಿದವರ
ಬಾಯಸೀಳಿ ನಾಲಗೆಯ ಕಿತ್ತುಕೊಲುವೆನು
ಅದೆಂತೆಂದೊಡೆ:
ಯೋ ವಾಪ್ಯುತ್ಪಾಟಯೇಜ್ಜಿಹ್ವಾಂ ಶಿವನಿಂದಾರಕಸ್ಯ ತು ।
ತ್ರಿಸಪ್ತಕುಲಮುದ್ಧರೇತ್ ಶಿವಲೋಕೇ ಮಹೀಯತೇ ॥
ಮತ್ತಂ ಶಿವಭಕ್ತನಿಂದೆಯನು ಎನ್ನ ಕಿವಿಯಲಿಕೇಳಿ
ಆ ನಿಂದಕರ ಕೊಲ್ಲುವೆನು ಅಲ್ಲದಿರ್ದಡೆ ನಾನು ಸಾವೆನು
ಅದೆಂತೆಂದೊಡೆ:
ಶ್ರುತ್ವಾ ನಿಂದಾಂ ಶಿವಸ್ಯಾಥ ತತ್ ಕ್ಷಣಾತ್ ದೇಹಮುತ್ಸೃಜೇತ್ ।
ತಸ್ಯ ದೇಹನಿಹಂತಾ ಚೇತ್ ರುದ್ರಲೋಕಂ ಸ ಗಚ್ಛತಿ॥
ಎಂದುದಾಗಿ
ಇದನರಿತು ಶಿವನಿಂದಕರ ಸಂಹರಿಸಿದಲ್ಲದೆ
ಎನಗೆ ಸಂತೋಷವಿಲ್ಲವಯ್ಯಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ

–ಎಂದು ಉಗ್ರ ನಿಲುವು ತೋರುತ್ತಾನೆ.

ಇನ್ನೊಂದು ವಚನದಲ್ಲಿ ಕೂಡ ಇಂಥದೇ ಉಗ್ರ ಮತೀಯಾಭಿಮಾನ ವ್ಯಕ್ತವಾಗಿದೆ:

ಲಿಂಗಮೊಡನೆ ಸಹಭೋಜನಮಾಡುವ
ಸದ್ಭಕ್ತನ ಆಚರಣೆ ಕ್ರಿಯೆಗಳೆಂತುಟಯ್ಯಾ ಎಂದಡೆ
ಲಿಂಗಜಂಗಮದ ಕುಂದುನಿಂದೆಯಂ ಕೇಳಲಾಗದು
ಕೇಳಿದಡೆ ಆ ಲಿಂಗನಿಂದಕನ ಕೊಲುವುದು.
ಕೊಲಲಾಗದಿರ್ದಡೆ ತನ್ನ ತಾನಿರಿದುಕೊಂಡು ಸಾವುದು
ಸಾಯಲಾಗದಿರ್ದಡೆ ಅವನ ಬಯ್ವುದು

ತನ್ನ ಅರ್ಥಪ್ರಾಣಾಭಿಮನವು ಶಿವಾರ್ಪಣವಾಯಿತೆಂದು
ಮನದಲ್ಲಿ ಸಂತೋಷವ ತಾಳಿದಡೆ ಪ್ರಸಾದವುಂಟು
ಇಂತಲ್ಲದೆ ಮನದಲ್ಲಿ ನೋವತಾಳಿದಡೆ ಆಚಾರಭ್ರಷ್ಟನು

ವೀರಶೈವದಲ್ಲಿ ಇಂಥ ಗಣಾಚಾರವನ್ನು ನಿಜವಾದ ಭಕ್ತನ ನಡೆಯೇ ಎಂಬಂತೆ ಮಾನ್ಯಮಾಡಲಾದ ಕಾಲವಿತ್ತು. ಬಹುಧರ್ಮಗಳನ್ನು ಅನುಸರಿಸುವವರು ಒಂದೇ ನಾಡಿಲ್ಲಿ ಇದ್ದಾಗ ಇನ್ನೊಬ್ಬರ ನಂಬಿಕೆಗಳಿಗೆ ಭಂಗ ತಾರದೆ ಅವರ ನಂಬಿಕೆಗಳನ್ನು ಹಿಯಾಳಿಸದೆ ನಿಂದಿಸದೆ ಜೀವನಸಾಗಿಸಬೇಕಾದ್ದು ಎಲ್ಲ ನಾಗರಿಕರ ಬದುಕಿನ ರೀತಿಯಾಗಬೇಕು. ಈ ದೇಶದಲ್ಲಿ ಅದನ್ನು ಸಾಮಾನ್ಯವಾಗಿ ಕಾಪಾಡಿಕೊಂಡು ಬರಲಾಗಿದ್ದರೂ ದುರ್ದೈವವಶಾತ್ ಕೆಲವರು ತಮ್ಮದಲ್ಲದ ಧರ್ಮದವರ ನಂಬಿಕೆಗಳನ್ನು ಉಗ್ರವಾಗಿ ನಿಂದಿಸುವುದು, ಟೀಕಿಸುವುದು ನಡೆಯುತ್ತ ಬಂದಿದೆ. ಬೇರೆಲ್ಲ ವಿಷಯಗಳಲ್ಲಿ ಅತ್ಯಂತ ವೈಚಾರಿಕವಾಗಿ ನಡೆದುಕೊಳ್ಳುವ ವಚನಕಾರರಲ್ಲಿ ಕೆಲವರು ಹೀಗೆ ಗಣಾಚಾರದ ವಿಷಯ ಬಂದಾಗ ಉಗ್ರಭಾವನೆ ಗಳನ್ನು ವ್ಯಕ್ತಪಡಿಸವುದನ್ನು ನೋಡಿದಾಗ ಧಾರ್ಮಿಕ ಉಗ್ರಾಭಿಮಾನ ವೈಚಾರಿಕತೆಯನ್ನೂ ನಂದಿಸಿಬಿಡುತ್ತದೆಯೇನೋ ಅನಿಸುತ್ತದೆ.

೫. ಉರಿಲಿಂಗಪೆದ್ದಿಯ ವಚನಗಳ ಸಾಹಿತ್ಯಗುಣ

ವಚನಕಾರರು ಯಾರೂ ಸಾಹಿತ್ಯರಚನೆ ಮಾಡಬೇಕೆಂಬ ಉದ್ದೇಶದಿಂದ ವಚನಗಳನ್ನು ರಚಿಸಿದವರಲ್ಲ ಎಂಬುದು ಎಲ್ಲರಿಗೂ ತಿಳಿದೇ ಇದೆ. ತಮ್ಮ ಭಗವದ್ಭಕ್ತಿಯನ್ನು, ಅಂತರಂಗದ ಗೂಢಾತ್ ಗೂಢತರವಾದ ಆಧ್ಯಾತ್ಮಿಕ ಅನುಭವಗಳನ್ನು, ಧಾರ್ಮಿಕ/ತಾತ್ವಿಕ ವಿಚಾರಗಳನ್ನು, ಆತ್ಮನಿರೀಕ್ಷಣೆಯ ಸಂಗತಿಗಳನ್ನು ಸಮಾಜದ ಅಂಕುಡೊಂಕುಗಳನ್ನು ನಿರೂಪಿಸಲು ತಮ್ಮ ತಾಯ್ನುಡಿಯನ್ನು ಬಳಸಿಕೊಂಡರು. ಅದೃಷ್ಟವಶಾತ್ ಹಾಗೆ ನಿರೂಪಿಸಿದ ಅನೇಕರ ಮಾತುಗಳು ವರಕವಿ ಬೇಂದ್ರೆಯವರ 'ಒಳಗಿದ್ರೆ ಹದ ಹೊರಗೆ ಬರ್ತಾವ್ ಪದ' ಎಂಬ ಉಕ್ತಿಯಂತೆ ಅವರ ಹದಗೊಂಡ ಅನುಭವದ ಪರಿಣಾಮವಾಗಿ ಕಾವ್ಯವಾಗಿರುವುದು ಕನ್ನಡದ ಅದೃಷ್ಟವೇ ಸರಿ. ಮಹಾನ್ ಕವಿಹೃದಯದ ಬಸವಣ್ಣನವರ ಮತ್ತು ಅತ್ಯಂತ ಆರ್ದ್ರ ಭಾವಗಳ ಕವಯಿತ್ರಿಯಾದ ಅಕ್ಕನವರ ವಚನಗಳಂತೆ ಉರಿಲಿಂಗಪೆದ್ದಿಯ ವಚನಗಳು ಕಾವ್ಯಾತ್ಮಕವಾಗಿಲ್ಲವೆಂಬುದು ನಿಜ. ಉರಿಲಿಂಗಪೆದ್ದಿಯ ಉದ್ದೇಶವೇ ಧಾರ್ಮಿಕ ಮತ್ತು ತಾತ್ವಿಕ ವಿಚಾರಗಳನ್ನು ಸರಳವಾದ ಭಾಷೆಯಲ್ಲಿ ನಿರೂಪಿಸುವುದು ಮತ್ತು ವೇದಶಾಸ್ತ್ರಪುರಾಣಾದಿಗಳ ಆಧಾರದಿಂದ ಶಿವಪಾರಮ್ಯವನ್ನು ಸ್ಥಾಪಿಸುತ್ತಲೇ ಸ್ಥಾಪಿತ ಸಂಪ್ರದಾಯದ ವೈರುಧ್ಯಗಳನ್ನು ಮೌಢ್ಯಗಳನ್ನು ಖಂಡಿಸುವುದು ಮತ್ತು ಜಾತೀಯ ಅಸಮಾನತೆ ಮತ್ತು ಬ್ರಾಹ್ಮಣರ ಶ್ರೇಷ್ಠತೆಯನ್ನು ವಿರೋಧಿಸುವುದು ಹಾಗೂ ಗಾಢ ಶಿವಭಕ್ತಿಯನ್ನು ಅಭಿವ್ಯಕ್ತಿಸುವುದಾಗಿತ್ತು. ಅದಕ್ಕೆ ತಕ್ಕಂತೆ ಆತ ಸರಳವೂ ಅಲಂಕಾರರಹಿತವೂ ನೇರವೂ ಆದ ಭಾಷೆಯನ್ನು ಅಳವಡಿಸಿಕೊಂಡನು. ಜೊತೆಗೆ 'pay in his own coin' ಎಂದು ಇಂಗ್ಲಿಷಿನಲ್ಲಿ ಹೇಳುವಹಾಗೆ ವೈದಿಕರಿಗೆ ಅವರದೇ ನುಡಿಯೆಂದು ಭಾವಿಸಲಾಗಿದ್ದ ಸಂಸ್ಕೃತದ ಆಕರಗಳಿಂದ ಯುಕ್ತಿಯುಕ್ತವಾಗಿ ಆಧಾರಗಳನ್ನು ನೀಡುವ ಮಾರ್ಗವನ್ನು ಅಳವಡಿಸಿಕೊಂಡನು. ಅದರ ಪರಿಣಾಮ ಈಗಾಗಲೇ

ಹೇಳಿರುವಂತೆ ಸುಮಾರು ಒಂದು ನೂರು ವಚನಗಳು ಸಂಸ್ಕೃತೋಲ್ಲೇಖಗಳನ್ನು ವಿಪುಲವಾಗಿಯೇ ಒಳಗೊಂಡು ಇನ್ನಿತರೆ ವಚನಕಾರರ ವಚನಗಳಿಗಿಂತ ಆತನ ವಚನಗಳು ವಿಭಿನ್ನವಾಗಿ ಕಾಣುತ್ತವೆ. ಇಷ್ಟಾದರೂ ಆತನ ವಚನಗಳು ತೀರಾ ನಿರಲಂಕಾರವೇನಲ್ಲ. ಅಲ್ಲಲ್ಲಿ ಉಪಮೆಗಳು, ರೂಪಕಗಳು, ದೃಷ್ಟಾಂತಗಳು, ಗಾದೆಮಾತುಗಳು ಹದಿರಿನ ನುಡಿಗಳು, ನುಡಿಗಟ್ಟುಗಳು ಇವೆಲ್ಲ ಬಂದಿವೆ. ಕೆಲವನ್ನು ನೋಡಬಹುದು.

ವಿಷಯವನ್ನು ಹೆಚ್ಚು ತೊಡಕಿಲ್ಲದೆ ನೇರವಾಗಿ ಹೇಳುವ ಅಗತ್ಯಕಂಡಾಗ ಅದು ಅಷ್ಟೇ ನೇರವಾದ ಮಾತುಗಳಲ್ಲಿ ಸರಳವಾಗಿ ಅಭಿವ್ಯಕ್ತಿಯನ್ನು ಕಂಡುಕೊಂಡಿರುವುದಕ್ಕೆ:

ಎನ್ನ ಗತಿ, ನಿನ್ನ ಗತಿ
ಎನ್ನ ಕೇಳಿಕೆ ನಿನ್ನ ಕೇಳಿಕೆ
ಎನ್ನ ನೋಟವೆ ನಿನ್ನ ನೋಟ.
ಎನ್ನಂಗ ಸ್ಪರ್ಶನವೆ ನಿನ್ನಂಗ ಸ್ಪರ್ಶನ
ಎನ್ನಂಗ ಸುಖಭೋಗವೆ ನಿನ್ನಂಗ ಸುಖಭೋಗ
ಎನ್ನೊಳಗೆ ನೀನು, ನಿನ್ನೊಳಗೆ ನಾನು
ಎನ್ನ ಪ್ರಾಣ ನೀನು, ನಿನ್ನ ಪ್ರಾಣ ನಾನಾದ ಕಾರಣ
ಎನ್ನ ಸೋಂಕಿತ್ತೆಲ್ಲ ನಿನ್ನ ಪೂಜೆಯಯ್ಯಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ

(ವ. ಸಂ.೬೭. ಪುಟ.೪೩೨)

ಇನ್ನು ಮುಕ್ತನೆಂದಡೆ ಮುನ್ನಲೇನು ಬದ್ದನೆ?
ಮುನ್ನ ಮುನ್ನವೇ ಮುಕ್ತನು
ಒಂದು ಕಾರಣದಿಂದ ಬದ್ಧನಾದಡೇನು? ಗುರುಕರುಣದಿಂದ ಮುಕ್ತನು
ಗುರುಕರುಣದಿಂದ ಗುರುವಾದ ಬಳಿಕ
ಬದ್ಧ–ಮುಕ್ತನೆಂಬ ದಂದುಗದ ನುಡಿ ಹೊದ್ದಲುಂಟೆ?
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ

(ವ.ಸಂ.೫೬)

ಅನುಭಾವದ ವಿಚಾರಗಳನ್ನು ಸುಂದರವಾದ ರೂಪಕಗಳಲ್ಲಿ, ದೃಷ್ಟಾಂತಗಳಲ್ಲಿ ಹೇಳಿದಾಗ ಅವುಗಳ ಸೊಗಸೇ ಬೇರೆ. ಉದಾಹರಣೆಗೆ ಈ ದೃಷ್ಟಾಂತ:

ಮಣ್ಣಬೆಲ್ಲವ ಮಾಡಿ, ಮಗುವಿನ ಕೈಯಲ್ಲಿಕೊಟ್ಟು
ಊರತಿರುಗುವ ತುಡುಗುಣಿಯಂತೆ
ಪ್ರಾಣಲಿಂಗವನರುಹುವ ಜ್ಞಾನಗುರುವಿನ
ಕೈಯ ದೀಕ್ಷೆಯ ಪಡೆಯಲರಿಯದೆ ,
ಇಷ್ಟಲಿಂಗವನೊಬ್ಬ ಭ್ರಷ್ಟನ ಕೈಯಲೀಸಿಕೊಂಡು
ಅಲ್ಲಿ ಭಜಿಸಿ ಭ್ರಾಂತುಗೊಂಬ ಮಿಟ್ಟೆಯ ಭಂಡರನೇನೆಂಬೆ ಹೇಳಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ

(ವ. ಸಂ.೨೧೩)

ಓಂಕಾರದ ಮಹತ್ವವನ್ನು ಹೇಳುವುದು ಈ ಸುಂದರವೂ ಅರ್ಥಪೂರ್ಣವೂ ಆದ ರೂಪಕದಲ್ಲಿ:

ಓಂಕಾರವೆಂಬ ವೃಕ್ಷದಲ್ಲಿ
ಋಗ್ವೇದ ಯಜುರ್ವೇದ ಸಾಮವೇದ ಅಥರ್ವಣ ವೇದಗಳೆಂಬ
ನಾಲ್ಕು ಶಾಖೆಗಳು
ಅನಂತಾವ್ಯೆ ವೇದಂಗಳೆಂಬ ಉಪಶಾಖೆಗಳು
ಶಾಸ್ತ್ರಂಗಳೆಂಬ ಅಂಕುರ ಪಲ್ಲವ
ಪುರಾಣಗಳೆಂಬ ಪುಷ್ಪ
ಆಗಮಗಳೆಂಬ ಕಾಯಿಬಲಿದು
ಶ್ರೀ ಪಂಚಾಕ್ಷರಿ ಎಂಬ ಮಧುರ ಪಣ್ಣುಗಳು.

ಶರಣರಿಗೆ ಸಂಸಾರ ವರ್ಜ್ಯವಲ್ಲ; ಸಂಸಾರ ಮತ್ತು ಲೌಕಿಕ, ಕಮಲಕ್ಕೆ ಪಂಕದ ಸಂಬಂಧ ಎಷ್ಟು ಸಹಜವೋ ಅಷ್ಟೇ ಸಹಜ ಎಂಬುದನ್ನು ಈ ದೃಷ್ಟಾಂತದ ಮೂಲಕ ನಿರೂಪಿಸುತ್ತಾನೆ:

ಪಂಕವಿಲ್ಲದ ಕಮಲಕ್ಕೆ ಸುಗಂಧ ಸುಲಲಿತವೆಂತಪ್ಪುದಯ್ಯಾ?
ಹೊನ್ನು ಹೆಣ್ಣು ಮಣ್ಣಿಲ್ಲದೆ ದೇವತಾಯೋಗ್ಯವೆಂತಪ್ಪುದಯ್ಯಾ

ಕಮಲ ಪಂಕದಲ್ಲಿ ವರ್ತಿಸಿದಂತೆ ವರ್ತಿಸುತಿಪ್ಪರು ನಿಮ್ಮ ಶರಣರು
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ'

ಹಾಗೆಯೇ 'ಸಕಲವಿಲ್ಲದೆ ನಿಷ್ಕಲವ ಕಾಣಬಾರದು' ಎಂಬ ಮಾತನ್ನು ಮನವರಿಕೆ ಮಾಡಲು ಬಳಸುವ ದೃಷ್ಟಾಂತಗಳು ಇವು:

ಸೂರ್ಯನಿಲ್ಲದೆ ಹಗಲುಂಟೆ ಅಯ್ಯಾ?
ದೀಪ ಇಲ್ಲದೆ ಬೆಳಕುಂಟೆ ಅಯ್ಯಾ?
ಪುಷ್ಪವಿಲ್ಲದೆ ಪರಿಮಳವನರಿಯಬಹುದೆ ಅಯ್ಯಾ?
ಸಕಲವಿಲ್ಲದೆ ನಿಷ್ಕಲವ ಕಾಣಬಾರದು

ಅದೇ ರೀತಿಯ ದೃಷ್ಟಾಂತಗಳು ಮಾಲೆಮಾಲೆಯಾಗಿ ಬರುತ್ತವೆ.

ಸ್ತನಾಮೃತವ ಸೇವಿಸುವ ಶಿಶು ಸಕ್ಕರೆಯನಿಚ್ಛಿಸುವುದೆ?
ಪರುಷ ದೊರಕೊಂಡ ಪುರುಷನು ಜರಗ ತೊಳೆಯಲಿಚ್ಛಿಸುವನೆ?
ದಾಸೋಹವ ಮಾಡುವ ಭಕ್ತನು ಮುಕ್ತಿಯನಿಚ್ಛಿಸುವನೆ

ವೀರಶೈವಕ್ಕೆ ಬಂದಮೇಲೂ ಅದರಲ್ಲಿ ನೆಲೆಯ ಕಾಣದೆ ಇತರೆ ಧರ್ಮೋಪ-ದೇಶಕರತ್ತ ಓಡುವವರನ್ನು ವಿಡಂಬಿಸುವುದು ಈ ಅರ್ಥಪೂರ್ಣವಾದ ದೃಷ್ಟಾಂತದ ಮೂಲಕ:

ಈ ಬಿನುಗು ದೈವಂಗಳ ಭಕ್ತಿ ಬಣಗು ನಾಯಿ ಒಣಗಿದೆಲುವ ಕಚ್ಚಿಕೊಂಡು
ಕಂಡಕಂಡ ಕಡೆಗೆ ಹರಿದಂತಾಯಿತ್ತು

ಪರಮಾತ್ಮನ ಅಗಾಧತೆ, ಸರ್ವವ್ಯಾಪಕತೆ ನಮ್ಮ ಊಹೆಗೂ ನಿಲುಕುವಂಥದಲ್ಲ ಎಂಬ ಆಶ್ಚರ್ಯಾತಿಶಯವನ್ನು ವ್ಯಕ್ತಪಡಿಸಲು ಈ ಉಪಮೆಯನ್ನು ಬಳಸುತ್ತಾನೆ:

ವಟಬೀಜವು ವೃಕ್ಷಕೋಟಿಯನೊಳಕೊಂಡಿಪ್ಪಂತೆ
ಸಟೆಯಿಂದಲಾದಜಾಂಡಬ್ರಹ್ಮಾಂಡಕೋಟಿಗಳನೊಳಕೊಂಡಿಹ ಲಿಂಗವೆ
'ಅಯಂ ಮೇ ಹಸ್ತೋ ಭಗವಾನ್' ಎಂದೆನಿಸುವ ಲಿಂಗವೆ
'ಚಕಿತಮಭಿದತ್ತೇ ಶ್ರುತಿರಪಿ' ಎಂದೆನಿಸುವ ಲಿಂಗವೆ
ಎನ್ನ ಕರಸ್ಥಲಕೆ ಬಂದು ಸೂಕ್ಷ್ಮವಾದೆ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ

ಬಸವಣ್ಣನವರ 'ಜಗದಗಲ, ಮುಗಿಲಗಲ ನಿಮ್ಮಗಲ ಎಂಬ ಪ್ರಸಿದ್ಧವಚನದಲ್ಲಿ ಅಂಥಾ ಇಡೀ ಬ್ರಹ್ಮಾಂಡವನ್ನೇ ಆವರಿಸಿರುವ ಲಿಂಗವು ತನ್ನ ಕರಸ್ಥಳಕೆ ಬಂದು ಚುಳುಕಾದ ಚೋದ್ಯವನ್ನು ವರ್ಣಿಸುವಂತೆ ಇಲ್ಲಿ ಇನ್ನೊಂದು ರೀತಿಯಲ್ಲಿ ಉರಿಲಿಂಗಪೆದ್ದಿ ವ್ಯಕ್ತಪಡಿಸುತ್ತಿದ್ದಾನೆ. 'ಸಟೆಯಿಂದಲಜಾಂಡಕೋಟಿಯನೊಳ ಕೊಂಡಿಹ' ಎಂಬ ದೀರ್ಘ ಸಮಾಸ ಶಬ್ದ ಬ್ರಹ್ಮಾಂಡದ ಅಗಾಧತೆಯನ್ನೇ ಸೂಚಿಸುತ್ತಿದೆ. ಪುರುಷಸೂಕ್ತದಲ್ಲಿ ಬರುವ ಇಡೀ ವಿಶ್ವವನ್ನು ಆವರಿಸಿರುವ ಪರಮಾತ್ಮನ ಭವ್ಯ ಸ್ವರೂಪದ ವರ್ಣನೆಯ ಸಂಸ್ಕೃತ ಮಾತುಗಳ ಕನ್ನಡ ರೂಪ ಉರಿಲಿಂಗಪೆದ್ದಿಯ ಒಂದು ವಚನದಲ್ಲಿ ಹೀಗೆ ಮೂಡಿದೆ:

ಬಹಳ ಬಹಳ ಚಕ್ಷು, ಬಹಳ ಬಹಳ ಮುಖನು
ಬಹಳ, ಬಹಳ ಬಾಹು ಬಹಳ ಪಾದನು,
ಇಂತಹ ಬಹಳ ಲಿಂಗವೆ ಬ್ರಹ್ಮ ಕಾಣಿರಣ್ಣಾ
ಅಣೋರಣೀಯಾನ್ ಮಹತೋ ಮಹೀಯಾನ್
ಎಂದುದಾಗಿ
ಬಹಳಕ್ಕೆ ಬಹಳ ಮಹಾಬಹಳ ಲಿಂಗವೆ ಬಹಳಬ್ರಹ್ಮ ಕಾಣಿರಣ್ಣಾ

(ವ. ಸಂ. ೩೪೮)

ಇನ್ನೊಂದು ಸುಂದರವಾದ ದೀರ್ಘ ರೂಪಕದಲ್ಲಿ ಮಹಾಲಿಂಗದೇವನು ಪ್ರಸಾದ ಸೇವಿಸುವ ಪರಿಯನ್ನು ಮೂರ್ತಿಮತ್ತಾಗಿ ಚಿತ್ರಿಸಿದ್ದಾನೆ.

ದೇಹವೆಂಬ ಅರಮನೆಯಲ್ಲಿ ಮಹಾಲಿಂಗವೆಂಬರಸು
ಮನವೆಂಬ ಪೀಠದ ಮೇಲೆ ಮೂರ್ತಿಗೊಂಡು
ಅಂತಃಕರಣಗಳೆಂಬ ಪರಿಚಾರಕರುಗಳ ಕೈಯಿಂದ
ಲಿಂಗಪಂಚೇಂದ್ರಿಯಂಗಳೆಂಬ ಪರಿಯಣದಲ್ಲಿ
ಶಬ್ದಸ್ಪರ್ಶರೂಪರಸಗಂಧಂಗಳೆಂಬ ಪದಾರ್ಥಗಳನು
ಎಡೆಮಾಡಿಸಿಕೊಂಡು ಸವಿಯುತ್ತಿರಲು
ಆನಂದವೇ ಮೂರ್ತಿಯಾಗಿದ್ದ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಸು.

ಇಷ್ಟೇ ಸುಂದರವೂ ಅರ್ಥಪೂರ್ಣವೂ ಆದ ಈ ಕೆಲವು ಮಾಲಾರೂಪಕಗಳೂ ಉರಿಲಿಂಗಪೆದ್ದಿಯ ಕಲ್ಪಕತೆಯ ಔನ್ನತ್ಯದ ದ್ಯೋತಕವಾಗಿರುವುದು ಯಾರಿಗಾದರೂ ಲಕ್ಷ್ಯಕ್ಕೆ ಬರುತ್ತದೆ:

೧. ಗುರುವೆಂಬ ಕಲ್ಪವೃಕ್ಷ, ಲಿಂಗವೆಂಬ ಕಾಮಧೇನು
ಜಂಗಮವೆಂಬ ಚಿಂತಾಮಣಿ ಪ್ರಸಾದವೆಂಬ ಮಹಾಮೃತವು
ಈ ಚತುರ್ವಿಧ ಪ್ರಸಾದಾಮೃತವ ಭೋಗಿಸದೆ
ಅಜ್ಞಾನ ಸಂಸಾರವೆಂಬ ಬಯಸುವರನೇನೆಂಬೆ

೨. ....ಅಂಗವೆಂಬ ಸುಕ್ಷೇತ್ರದಲ್ಲಿ
ಲಿಂಗವೆಂಬ ಮಹವ ಬಿತ್ತಿ ಶಿಷ್ಯನೆಂಬ ಅತಿರಸಮಹಾಜಲವನೆರೆದು
ಫಲಫಲಿತವಾದಡೆ ಇದೇ ಗುರು

ಅರ್ಥಾಲಂಕಾರ ಮಾತ್ರವಲ್ಲದೆ ವಿರಳವಾಗಿ ಶಬ್ದಾಲಂಕಾರಗಳನ್ನೂ ಔಚಿತ್ಯ ಪೂರ್ಣವಾಗಿ ಬಳಸಿರುವುದುಂಟು. ಉದಾಹರಣೆಗೆ:

೧ ಕಾಮಧೇನು ಕಾಮಿಸಿದುದ ಕುಡದಿರ್ದಡೆ ಆ ಕಾಮಧೇನು ಬಂಜೆ ಆಕಳಿಂದ ಕರಕಷ್ಟ
೨ ಕಲ್ಪತರು ಕಲ್ಪಿಸಿದುದ ಕುಡದಿರ್ದಡೆ.......
೩ ಕಾಮಿಸುವ ವಸ್ತು ಕರಸ್ಥಲಕೆ ಬಂದಬಳಿಕ ಕಾಮಿಸಲೇನುಂಟು?
೪ ಕ್ರೋಧಕ್ಕೆ ಕ್ರೋಧಿಸುವ ಮಹಾ ಕ್ರೋಧಿಯೇ ಶಿವಭಕ್ತನು
೫ ಚಿಂತಾಮಣಿ ಚಿಂತಿಸಿದುದ ಕುಡದಿರ್ದಡೆ................

ಗಾದೆಯ ಮಾತಿನಂಥ ವಾಕ್ಯಗಳು, ನುಡಿಗಟ್ಟುಗಳು, ಹದಿರಿನ ನುಡಿಗಳು ಹೆಚ್ಚಲ್ಲವಾದರು ಅಲ್ಲಲ್ಲಿ ಕಂಡುಬರುತ್ತವೆ.

'ಮುಂಗೈಯ ಕಂಕಣಕ್ಕೆ ಕನ್ನಡಿ ಬೇಡ'
'ಕಕ್ಷೆ ಕರಸ್ಥಲ, ಉತ್ತಮಾಂಗ ಉರಸ್ಥಲ'
'ಕಾದ ಲೋಹದ ಮೇಲೆ ಉದಕವನೆರೆದಂತ',
'ಅಮೃತಕ್ಕೆ ಹಸಿವುಂಟೆ, ಜಲಕ್ಕೆ ತೃಷೆಯುಂಟೆ',
'ಮರೆದಡೆ ಬಂಧನ, ಅರಿದಡೆ ಮೋಕ್ಷ'
'ಆಸೆಯೇ ದಾಸಿ, ನಿರಾಶೆಯೇ ಈಶಪದ'
'ತಾನುಹುಟ್ಟಿ ತಮ್ಮವ್ವೆ ಬಂಜೆ ಎನಬಹುದೆ?'

'ಆಸೆಯಿಲ್ಲದುದೇ ವೈರಾಗ್ಯ'
'ಭಕ್ತನ ನಡೆ ಪಾವನ, ನುಡಿಯೇ ತೀರ್ಥ, ಒಡಲೇ ಕ್ಷೇತ್ರ'
'ತನ್ನ ತಾನರಿಹವೆ ಪರಮಾತ್ಮಯೋಗ'

ಉರಿಲಿಂಗಪೆದ್ದಿಯ ರೀತಿ ತಾನು ಹೇಳಬೇಕಾದ ವಿಚಾರಗಳನ್ನು ನೇರವಾಗಿ ಹೇಳಿಬಿಡುವುದೇ ಆದರೂ ವಿರಳವಾಗಿಯಾದರೂ ಬೆಡಗಿನವಚನಗಳನ್ನು ರಚಿಸಿರುವುದುಂಟು. ಮನುಷ್ಯನೆಂದರೆ ದೇಹ ಆತ್ಮ ಗಳಿಂದ ಕೂಡಿದ ಎರಡು ಗಾಲಿಗಳ ರಥ ಎಂದು, ಇಂಥ ರಥದ ಯಜಮಾನ ಪರಮಾತ್ಮನೆಂದು ಕಲ್ಪಿಸಿ ರಚಿಸಿರುವ ವಚನ ಹೀಗಿದೆ:

ಒಳಗೊಂದು ಗಾಲಿ, ಹೊರಗೊಂದು ಗಾಲಿ
ಎರಡಕ್ಕೆ ಹೂಡಿದುದೊಂದು ಹರಿಯಚ್ಚು,
ಮೇಲೆ ಹಾಸಿದ ನೀಳ ಚೌಕದ ಕುರುಗುಣಿಯ ಕೊಂಬಿಂಗೆ ಈಚೆರಡು.
ಏಳು ಹುರಿಯ ಬಲುಮಿಣಿಯಿಂ ಆಳವನಿಕ್ಕಿದ ಕಾಮನ ನೊಗ.
ಅರೆತ್ತು ಹೂಡಿ, ಹಾಸು ದಡಿಕೆ ಒಂದು, ಮೇಲು ದಡಿಕೆ ಎರಡು,
ಒಂದು ದೊಡ್ಡದು, ಒಂದು ಚಿಕ್ಕದು, ಒಂದುರೆ ಚಿಕ್ಕದು,
ಬಂಡಿಯ ಮೇಲೊಬ್ಬ ಮೊದಲೆತ್ತ ಹೊಡೆವ,
ತಲೆಯಾರು ನಡುವಣಾರು ಹೊಡೆವರಿಬ್ಬರು.
ಬಂಡಿ ನಡೆವ ಬಟ್ಟೆಯಯ್ದು, ತುಂಬಿದ ಭಂಡವೈದು,
ಐದು ಬಟ್ಟೆಯಂ ತಪ್ಪಿಸಿ ಆರು ಬಟ್ಟೆಯಲಿ ನಡೆಸಿ,
ಹೇರಿದ ಭಂಡವನೊಡೆಯಂಗೊಪ್ಪಿಸಲರಿಯದೆ,
ಎಡೆಯ ಕಡಿದು ಭುಂಜಿಸಿ ಒಡೆಯಂಗೆ ದೂರಾಗಿ,
ಬಹುಮುಖದ ದಂಡಣೆಗೊಳಗಾಗಿ ಬಹಳ ಮುಖದಲ್ಲಿ ಬಂದು,
ಹೇರಡವಿಯ ಕಗ್ಗತ್ತಲಲ್ಲಿ ತೊಳಲಿ ಭ್ರಮಿಸುವ ಹೊಲಬರಿಯದೆ
ಹೊಲಬುಗೆಟ್ಟ ಮಲಮಾಯಾಧಿಕರು
ನಿಮ್ಮನೆತ್ತ ಬಲ್ಲರಯ್ಯಾ, ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ ॥೮೦।

ಹಿನೇ ವಚನದಲ್ಲೂ ವೀರಶೈವ ತಾತ್ವಿಕತೆಯಬಗ್ಗೆ ಹೇಳುವಾಗ ಈ ಬೆಡಗಿನ ರಚನೆ ಸುಳಿದಿದೆ:

ಅಂಡಜನುದರದಲ್ಲಿ ತಂದಿಕ್ಕಿದಾ ತತ್ತಿ
ಮುಂದಣಾಧಿಕ್ಯನರಿಯಬಲ್ಲುದೆ ನೋಡಾ.
ಪಿಂಡಾಧಿಕ್ಯದ ಸಂದಳಿಯದ ಮುನ್ನ ಮುಂದೆ ಬಂದಿಪ್ಪುದು
ಅದು ನೋಡಾ
ಒಬ್ಬ ಹೆಂಗೂಸಿಂಗೆ ಗಂಡು ನಾಲ್ವರು
ಗರ್ಭಿಣಿಯಾಗದ ಮುನ್ನ ಪ್ರಸೂತೆ
ಬಂಜೆಯ ಮಕ್ಕಳು ಮೂವರ್ರೈದಾರೆ
ನಾಲ್ವರ ಮೂಲವರಿಯದ ಕಾರಣ ಧರೆಯ ಮೇಲೆನಿಸಿದವು?

ಹೀಗೆಯೇ ಮುಂದುವರಿಯುತ್ತದೆ.

ಕಾಳವ್ವೆ

ಉರಿಲಿಂಗಪೆದ್ದಿಯ ಪತ್ನಿಯಾದ ಕಾಳವ್ವೆಯ ಪ್ರಸ್ತಾಪವಿಲ್ಲದೆ ಉರಿಲಿಂಗ ಪೆದ್ದಿಯ ಜೀವನ ಕಥನ ಅಪೂರ್ಣ ಎನ್ನುವಷ್ಟರಮಟ್ಟಿಗೆ ಆಕೆ ಉರಿಲಿಂಗಪೆದ್ದಿಯ ಬದುಕಿನಲ್ಲಿ ಮಹತ್ವದ ಭೂಮಿಕೆಯನ್ನು ನಿರ್ವಹಿಸಿದವಳು. ಬಸವರಾಜನ 'ಉರಿಲಿಂಗಪೆದ್ದಯ್ಯನವರ ಕಥೆ'ಯ ಪ್ರಕಾರ ನಂದವಾಡದಲ್ಲಿ ಪೆದ್ದಿಯು ತನ್ನ ಪತ್ನಿಯೊಡನೆ ಕಟ್ಟಿಗೆಯನ್ನು ಮಾರಿಕೊಂಡು ಜೀವಿಸುತ್ತಿದ್ದನೆನ್ನುವಾಗ ಕಾಳವ್ವೆಯ ಪ್ರಸ್ತಾಪವಿದೆ:

ಆ ಪುರದಿ ಶ್ವಪಚ ಪೆದ್ದಿಗ ಚಪಳೆಯು
ಅವನಿಂಗೆ ಪ್ರಿಯಳು ವ್ಯಾಪಿಸಿಯೆ
ದಂಪತಿಗಳ್ ನಿರ್ಭಾಗ್ಯಯುತದಿ ನೊಂದಿಹರು

ಮುಂದೆಯೂ ಉರಿಲಿಂಗದೇವನು ಬಹಳ ವರ್ಷಗಳ ಕಾಲ ಪೆದ್ದಿಗೆ ಲಿಂಗದೀಕ್ಷೆ ನೀಡದೆ ಕೊನೆಗೆ ಒಂದು ಹಾದಿಯ ಕಲ್ಲನ್ನು ಎತ್ತಿಕೊಟ್ಟದ್ದನ್ನೇ ಲಿಂಗವೆಂದು ತಿಳಿದು ಹೆಂಡತಿಗೆ ತೋರಿಸಿ ಲಿಂಗಪೂಜೆಗೆ ಮನೆಯನ್ನೆಲ್ಲ ಶುಚಿಗೊಳಿಸಿ ನೀನೂ ಶುಚಿರ್ಭೂತಳಾಗು ಎಂದಾಗ ಆಕೆ ಹೀಗೆ ಆಕ್ಷೇಪಿಸಿದಳೆಂದು ಅದೇ ಕಥೆಯಲ್ಲಿ ಉಕ್ತವಾಗಿದೆ:

ಮೂಢ ಮಾನವನಿದಕೆ ಅಯ್ಯಗೆ
ವೋಡಲಾಡುತ ಹನ್ನೆರಡೊರುಷವು
ಜೋಡುಹೊರೆ ಕಟಿಕೆಯನು ಹಾಕಿದೆಯೆಂದಳಾ ತರುಣಿ

ಮುಂದೆ ಪೆದ್ದಿಯ ದೃಢ ಭಕ್ತಿಯನ್ನು ಮನಗಂಡ ಉರಿಲಿಂಗದೇವ ಪೆದ್ದಿಯೊಂದಿಗೆ ಆತನ ಪತ್ನಿ ಕಾಳವ್ವೆಗೂ ಶಾಸ್ತ್ರೋಕ್ತವಾಗಿ ಇಷ್ಟಲಿಂಗದೀಕ್ಷೆಯನ್ನು ನೀಡುತ್ತಾನೆ. ಸಂಪ್ರದಾಯಸ್ಥರ ಮನೆಯ ಹೆಣ್ಣುಮಕ್ಕಳ ಹಾಗೆ ಗಂಡನೊಂದಿಗೆ

ಸಪ್ತಪದಿ ತುಳಿಯುವ ಅವಕಾಶ ಆಗಿನ ಮಡಿವಂತ ಸಮಾಜದಲ್ಲಿ ಕಾಳವ್ವೆಗೆ ಬಹುಶಃ ದೊರೆತಿರಲಾರದು. ಆದರೆ ದೀಕ್ಷೆ ಪಡೆದ ಕಾಳವ್ವೆ ಗಂಡ ಮುನ್ನಡೆದ ಶರಣಧರ್ಮದ ಹಾದಿಯಲ್ಲಿ ಅಕ್ಷರಶಃ ಅವನೊಂದಿಗೆ ಹೆಜ್ಜೆಗೆ ಹೆಜ್ಜೆಹಾಕಿ

ನಡೆದು ನಿಜವಾದ ಅರ್ಥದಲ್ಲಿ ಸಹಧರ್ಮಿಣಿ ಎನಿಸಿದಳು. ಅದಕ್ಕಿಂತ ಹೆಚ್ಚಾಗಿ ಬಹುಶಃ ನಿರಕ್ಷರಕುಕ್ಷಿಯಾಗಿದ್ದ ಆಕೆ ತಾನೂ ವಿದ್ಯಾವಂತಳಾಗಿ ತನ್ನ ಧಾರ್ಮಿಕ ಹಾಗೂ ಸಾಮಾಜಿಕ ಚಿಂತನೆಗಳಿಗೆ ವಚನಗಳ ಮೂಲಕ ಅಭಿವ್ಯಕ್ತಿಯನ್ನು ಕೊಟ್ಟಳೆಂಬುದು ಮಾತ್ರ ನಿಜಕ್ಕೂ ಎಂಥವರನ್ನೂ ನಿಬ್ಬೆರಗಾಗಿಸುವ ಸಂಗತಿ. ಅದೂ ಅಲ್ಲದೆ ಆಕೆ ಏಕೈಕ ದಲಿತ ವಚನಕಾರ್ತಿ ಎಂಬುದು ಅವಳನ್ನು ಇನ್ನಷ್ಟು ಪ್ರಖರಬೆಳಕಿನಲ್ಲಿ ನಿಲ್ಲಿಸುವಂಥದು. ಸದ್ಯದಲ್ಲಿ 'ಉರಿಲಿಂಗಪೆದ್ದಿಗಳರಸನೊಲ್ಲನವ್ವಾ' ಎಂಬ ಮುದ್ರಿಕೆಯಲ್ಲಿ ಆಕೆಯದೆಂದು ಹೇಳಲಾದ ಹನ್ನೆರಡು ವಚನಗಳು ಮಾತ್ರ ದೊರೆತಿವೆ. ಗಂಡ ಉರಿಲಿಂಗಪೆದ್ದಿಯಂತೆ ಬ್ರಾಹಣರ ಶ್ರೇಷ್ಠತೆಯನ್ನು ಉಗ್ರವಾಗಿ ಖಂಡಿಸಿ ಅವರ ಆಚಾರ, ನಡೆವಳಿಗಳನ್ನು ಲೇವಡಿ ಮಾಡುವುದು, ವ್ರತಾಚರಣೆ ಗಳನ್ನು ಕುರಿತಾದ ಕಾಳಜಿ, ನಿಜವಾದ ಭಕ್ತನ ಪರಿ, ಇವೆಲ್ಲ ಅವಳ ಸಹಜ ನುಡಿಯಲ್ಲಿ ಅಭಿವ್ಯಕ್ತಿ ಪಡೆದುಕೊಂಡಿವೆ. ಮಾತು ಹರಿತ ಮತ್ತು ಒರಟೆನಿಸಿದರೂ ಅದು ಉದ್ದಿಷ್ಟ ಗುರಿಯನ್ನು ಮುಟ್ಟುವಂಥದು. ಉರಿಲಿಂಗಪೆದ್ದಿಯಂತೆಯೇ ಅವಳು ಕೂಡ ಸಂಸ್ಕೃತಶ್ಲೋಕಗಳನ್ನು ಉದ್ಧರಿಸುವುದನ್ನು ನೋಡಿದಾಗ ಆಕೆಯ ಓದು ಗಾಢವಾದದ್ದೇ ಆಗಿರಬೇಕು ಅನಿಸುತ್ತದೆ.

ಕಾಯಕವೆಂದರೆ ಅದು ಸತ್ಯಶುದ್ಧವಾದುದೇ ಆಗಿರಬೇಕೆಂಬುದು ಹಾಗೂ ಭಕ್ತರಾದವರು ಕಾಯಕವನ್ನು ಮಾಡುತ್ತಿರಬೇಕೆಂಬುದು ಅವಳ ನಿಲುವು.

ಕೃತ್ಯಕಾಯಕವಿಲ್ಲದವರು ಭಕ್ತರಲ್ಲ
ಸತ್ಯಶುದ್ಧವಿಲ್ಲದುದು ಕಾಯಕವಲ್ಲ

ಅಷ್ಟೇ ಅಲ್ಲ, ಭಕ್ತನು ಸದಾ ಸಮಾಧಾನಿಯಾಗಿ ಇರಬೇಕು, ಸತ್ಯವಂತನಾಗಿರ ಬೇಕು ಮತ್ತು ಭಕ್ತರನ್ನು ನಿಂದಿಸುವವನಾಗಿರಬಾರದು ಎಂಬುದನ್ನು ಹೇಳುವ ರೀತಿ ಹರಿತವಾಗಿದೆ. ಇನ್ನೊಂದು ವಚನದಲ್ಲಿ ಒಳಗೊಂದು ಹೊರಗೊಂದು ಎಂದು ಇಬ್ಬಗೆಯಲ್ಲಿ ವರ್ತಿಸುವ ಭಕ್ತರನ್ನು ಮುಟ್ಟಿನೋಡಿಕೊಳ್ಳುವ ಹಾಗೆ ಕಟುವಾಗಿ ಟೀಕಿಸುತ್ತಾಳೆ:

ತೂಬರದ ಕೊಳ್ಳಿಯಂತೆ ಉರಿವಾತ ಭಕ್ತನೆ?
ಹುಸಿದು ತಂದು ಮಾಡುವಾತ ಭಕ್ತನೆ?
ಭಕ್ತರ ಕುಲವನೆತ್ತಿ ನಿಂದಿಸುವಾತ ಭಕ್ತನೆ?
"ನಿಂದಯಾ ಶಿವಭಕ್ತಾನಾಂ ಕೋಟಿಜನ್ಮನಿ ಸೂಕರಃ।
ಸಪ್ತಜನ್ಮನಿ ಭವೇತ್ ಕುಷ್ಟೀ ದಾಸೀ ದಾಸೀ ಗರ್ಭೇಷು ಜಾಯತೇ"॥
ಎಂದುದಾಗಿ ತನ್ನ ಪ್ರಾಣದ ಮೇಲೆ ಬಂದಡೂ ಬರಲಿ, ಇವರ ಬಿಡಬೇಕು.
ಬಿಡದಿರಲು ಉರಿಲಿಂಗಪೆದ್ದಿಗಳರಸನೊಲ್ಲನವ್ವಾ

(ವ. ಸಂ.೭೩೭.ಶಿ.ಶ. ವ.ಸಂ ಪುಟ.೨೨೭)

ಬ್ರಾಹ್ಮಣರು ಹೋಮದ ನೆವದಲ್ಲಿ ಅನಾದಿ ಕಾಲದಿಂದಲೂ ಪ್ರಾಣಿಹತ್ಯೆಯನ್ನು ಮಾಡಿಕೊಂಡುಬಂದುದೇ ಅಲ್ಲದೆ ಮಾಂಸಭಕ್ಷಣೆಯನ್ನೂ ಮಾಡಿದವರು. ಶಿವಭಕ್ತನಾದವನು ಇಂಥ ಒಂಟಿ ಬ್ರಾಹ್ಮಣನ ಕಂಡು ಶರಣೆಂದರೆ ಹೀನಜನ್ಮಪ್ರಾಪ್ತಿ ಎಂದು ಕಟುವಾಗಿ ಕುಟುಕುತ್ತಾಳೆ:

ಶಿವಭಕ್ತ ಹೊತ್ತಾರೆಯೆದ್ದು ಗುರುಲಿಂಗಜಂಗಮಕ್ಕೆ ಶರಣೆನ್ನದೆ
ಮುನ್ನ ಒಂಟಿ ಬ್ರಾಹ್ಮಣನ ಕಂಡು ಶರಣಾರ್ಥಿ ಎಂದಡೆ
ಎಂಬತ್ತುನಾಲ್ಕು ಲಕ್ಷ ಯೋನಿಯಲ್ಲಿ
ಹಂದಿಯ ಬಸುರಲ್ಲಿ ಬಪ್ಪುದು ತಪ್ಪದು ಕಾಣಾ –ಎನ್ನುತ್ತಾಳೆ.

(ವ. ಸಂ.೭೩೪. ಶಿ.ಶ.ವ.ಸಂ.ಪುಟ.೨೨೬)

ಬೆಳಗಾಗ ಎದ್ದು ಒಂಟಿ ಬ್ರಾಹ್ಮಣನ ಮುಖ ನೋಡಬಾರದು ಎಂಬ ಜಾನಪದ ನಂಬಿಕೆಗೆ ಕಾಳವ್ವೆ ಕೊಟ್ಟಿರುವ ಸಮರ್ಥನೆ ಮಾತ್ರ ಸೋಜಿಗವುಂಟು ಮಾಡುತ್ತದೆ.

ದಲಿತರನ್ನು ಹೊರತುಪಡಿಸಿ ಬ್ರಾಹ್ಮಣರನ್ನೂ ಒಳಗೊಂಡಂತೆ ಮಾಂಸಾಹಾರ ಮಾಡುವ ಇತರೆಲ್ಲ ಜಾತಿಯವರನ್ನೂ ಕುಲಜರೆಂದು ಪರಿಗಣಿಸಿ, ಪಂಚಾಮೃತವನ್ನು ಕರೆಯುವ ಹಸುವನ್ನು ತಿನ್ನುವ ಮಾದಿಗರನ್ನು ಮಾತ್ರ ಕೀಳು ಎಂದು ಹೀಗಳೆಯುವ, ಹಸುವಿನ ಚರ್ಮದಿಂದ ಮಾಡಿದ ಸಿದ್ದಲಿಕೆ ಸಗ್ಗಳೆಗಳಲ್ಲಿ ತುಂಬಿರುವ ತುಪ್ಪ ಮತ್ತು ನೀರಿಗೆ ಜಾತೀಯ ಮೈಲಿಗೆ ಅಂಟಿಸದೆ ಕುಡಿವ ದ್ವಂದ್ವಾಚಾರದ ವಿಪ್ರರ

ಡಂಬಾಚಾರವನ್ನು ಪ್ರಶ್ನಿಸುವ ಕಾಳವ್ವೆಯ ದನಿಯಲ್ಲಿರುವುದು ನೋವಷ್ಟೇ ಅಲ್ಲ ಉಗ್ರ ಪ್ರತಿಭಟನೆ ಕೂಡ.

> **ಕುರಿಕೋಳಿ ಕಿರಿಮೀನು ತಿಂಬವರಿಗೆಲ್ಲ ಕುಲಜ ಕುಲಜರೆಂದೆಂಬರು**
> **ಶಿವಗೆ ಪಂಚಾಮೃತವ ಕರೆವ ಪಶುವ ತಿಂಬ ಮಾದಿಗ ಕೀಳುಜಾತಿಯೆಂಬರು.**
> **ಅವರೆಂತು ಕೀಳು ಜಾತಿಯಾದರು ಜಾತಿಗಳು ನೀವೇಕೆ ಕೀಳಾದಿರೊ?**
> **ಬ್ರಾಹ್ಮಣನುಂಡುದು ಪುಲ್ಲಿಗೆ ಶೋಭಿತವಾಗಿ ನಾಯಿ ನೆಕ್ಕಿಹೋಯಿತು.**
> **ಮಾದಿಗರುಂಡ ಪುಲ್ಲಿಗೆ ಬ್ರಾಹ್ಮಣನಿಗೆ ಶೋಭಿತವಾಯಿತು**
> **ಅದೆಂತೆಂದೊಡೆ ಸಿದ್ದಲಿಕೆಯಾಯಿತು, ಸಗ್ಗಳೆಯಾಯಿತು**
> **ಸಿದ್ದಲಿಕೆಯ ತುಪ್ಪವನು ಸಗ್ಗಳೆಯ ನೀರನು**
> **ಶುದ್ಧವೆಂದು ಕುಡಿವ ಬುದ್ಧಿಗೇಡಿ ವಿಪ್ರರಿಗೆ ನಾಯಕನರಕ ತಪ್ಪದಯ್ಯಾ**
> **ಉರಿಲಿಂಗಪೆದ್ದಿಗಳರಸ ಒಲ್ಲನವ್ವಾ**

(ವ.ಸಂ೭೩೩. ಶಿ. ಶ.ವ.ಸಂ.ಪುಟ.೨೨೫)

ಒಟ್ಟಾರೆ ವಚನ ಚಳವಳಿಯ ಆಶಯಗಳಿಗೆ ತಕ್ಕಂತೆ ಬದುಕಿ ತಮ್ಮ ಶೋಷಣೆಗೆ ಕಾರಣರಾದವರ ಬಗ್ಗೆ ಉಗ್ರ ಪ್ರತಿಭಟನೆಯ ದನಿಯನ್ನು ದಾಖಲಿಸಿದ ದಲಿತೆ ಕಾಳವ್ವೆಯ ದನಿ ಎಲ್ಲ ಕಾಲದ ಶೋಷಿತ ಹೆಣ್ಣಿನ ಪರವಾದ ದನಿ ಎನ್ನುವುದು ಮರೆಯಬಾರದ ಸಂಗತಿ.

ಉರಿಲಿಂಗಪೆದ್ದಿ ಮಠ ಪರಂಪರೆ

ದಲಿತವರ್ಗದ ಮೊದಲ ಧರ್ಮಪೀಠಾಧಿಪತಿಯಾದ ಉರಿಲಿಂಗಪೆದ್ದಿಯ ನಂತರದಲ್ಲಿ ಅವನ ಹೆಸರಿನ ಮಠ ಸಂಪ್ರದಾಯದ ಬೆಳಕು, ವಚನಕಾರರ ನಂತರದಲ್ಲಿ ಅವರು ಪ್ರಾರಂಭಿಸಿದ ಸರ್ವಸಮಾನತೆಯ ಆಶಯದ ಸಾಮಾಜಿಕ ಕ್ರಾಂತಿಯ ಕಾವು ಹೇಗೆ ಸಂಪ್ರದಾಯದ ಧಾಳಿಗೆ ಸಿಕ್ಕು ತಣ್ಣಗಾಯಿತೋ ಅದೇರೀತಿ ನಂದಿಹೋಯಿತು. ಅಲ್ಲಮಪ್ರಭುವಿನಿಂದ ಪ್ರಾರಂಭವಾದ 'ವಿರಕ್ತ ಸಂಪ್ರದಾಯ' ವಿರುವಂತೆ ಹರಿಜನ ವೀರಶೈವ ಸಂಪ್ರದಾಯವೇನೋ ಇದ್ದರೂ ಅದರ ಧರ್ಮಪೀಠದ ಸಂಪ್ರದಾಯ ಉಳಿದು ಬಂದಿರಲಿಲ್ಲ. ಆದರೆ ಈಗ್ಗೆ ಸುಮಾರು ಇನ್ನೂರೈವತ್ತು ವರ್ಷಗಳ ಹಿಂದೆ ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಕೋಡ್ಲಾ ಗ್ರಾಮದಲ್ಲಿ ಸ್ಥಾಪಿತವಾದ 'ಉರಿಲಿಂಗಪೆದ್ದೀಶ್ವರ ಮಹಾಸಂಸ್ಥಾನ ಮಠ'ಕ್ಕೆ ಶಿವಯೋಗಿಸ್ವಾಮಿಗಳೆಂಬುವರು ಜೀವಧಾತುವಾಗಿ ಒದಗಿಬಂದರು. ಹೊಲೆಯ ಜಾತಿಗೆ ಸೇರಿದ ಇವರು ಸಂಪ್ರದಾಯವಾದಿಗಳ ಆಕ್ರೋಶವನ್ನೆದುರಿಸಿ ಮಠದ ಪಟ್ಟಾಧಿಕಾರಿಯಾದರು. ಅದು ಮುಂದುವರಿದುಕೊಂಡುಬಂದು ಇದರ ಶಾಖೋಪಶಾಖೆಗಳು ಈಗ ಕರ್ನಾಟಕದಾದ್ಯಂತ ಅಲ್ಲಲ್ಲಿ ಸ್ಥಾಪಿತವಾಗಿವೆ ಎಂದು ತಿಳಿದುಬಂದಿದೆ. ಮುಖ್ಯವಾಗಿ ಗುಲ್ಬರ್ಗ, ಬೀದರ್, ಜಿಲ್ಲೆಗಳಲ್ಲಿಯ ಒಟ್ಟಾರೆ ೧೭ ಸ್ಥಳಗಳಲ್ಲಿ ಹಾಗೂ ಮೈಸೂರು, ಚಾಮರಾಜನಗರ, ಮಂಡ್ಯ ಮತ್ತು ಹಾಸನ ಜಿಲ್ಲೆಗಳಲ್ಲಿಯ ೨೨ ಸ್ಥಳಗಳಲ್ಲಿ ಒಟ್ಟಾರೆ ೩೯ ಸ್ಥಳಗಳಲ್ಲಿ ಇದರ ಶಾಖೆಗಳು ಇವೆಯೆಂದು ಹೇಳಲಾಗಿದೆ. ಇಲ್ಲೆಲ್ಲ ಪೀಠಾಧಿಪತಿಗಳಾಗಿರುವವರು ಉರಿಲಿಂಗ ಪೆದ್ದಿಯ ಸಂಪ್ರದಾಯಸ್ಥರು ಅಂದರೆ ದಲಿತರಾಗಿದ್ದು ಲಿಂಗವಂತರಾದವರು. ಇವು ತಮ್ಮದೇ ಆದ ರೀತಿಯಲ್ಲಿ ದಲಿತಸಮುದಾಯದವರ ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ ಮತ್ತು ನೈತಿಕ ಉನ್ನತಿಗೆ ಶ್ರಮಿಸುತ್ತಿರುವುದಾಗಿ ತಿಳಿದುಬಂದಿದೆ. ಯಾವುದೇ ಧಾರ್ಮಿಕಪೀಠದ ಮೂಲ ಉದ್ದೇಶ ಜನರಲ್ಲಿ ಧಾರ್ಮಿಕ ಮತ್ತು

ನೈತಿಕ ಕಾಳಜಿಗಳನ್ನುಂಟುಮಾಡಿ ಶೈಕ್ಷಣಿಕವಾಗಿ ಸಾಮಾಜಿಕವಾಗಿ ಅವರನ್ನು ಮೇಲೆತ್ತುವ ಮೂಲಕ ಎಲ್ಲರೊಂದಿಗೆ ಸ್ವಾಭಿಮಾನಕ್ಕೆ ಚ್ಯುತಿಬರದ ರೀತಿಯಲ್ಲಿ ಸಮರಸವಾಗಿ ಬದುಕುವಂತೆ ಮಾಡುವುದು ತಾನೆ? ಆ ದೃಷ್ಟಿಯಿಂದ ಇದು ಸ್ವಾಗತಾರ್ಹವೇ, ಇದರಿಂದ ಉರಿಲಿಂಗಪೆದ್ದಿಯ ಆತ್ಮವೂ ಸಂತಸ ತಾಳದೆ ಇದ್ದೀತೆ?

ಉಪಸಂಹಾರ

ಹನ್ನೆರಡನೆಯ ಶತಮಾನದ ಕಾಲಕ್ಕೆ ವೈದಿಕ ಜೈನ ಬೌದ್ಧ ಮೊದಲಾದ ಈ ದೇಶದ ಪ್ರಮುಖ ಧರ್ಮಗಳು ಒಂದಲ್ಲ ಒಂದು ರೀತಿಯಲ್ಲಿ ತಮ್ಮ ಅಂತಸ್ಸತ್ವವನ್ನು ನೀಗಿಕೊಂಡು ಸಮಾಜವನ್ನು ಮುನ್ನಡೆಸುವಲ್ಲಿ ಸೋತಿದ್ದ ಸಮಯದಲ್ಲಿ ಜನರಿಗೆ ದಾರಿ ತೋರುವ ಪರ್ಯಾಯ ಧರ್ಮವಾಗಿ ವೀರಶೈವಧರ್ಮ ಉದಿಸಿತು. ಶಿವಭಕ್ತಿಯನ್ನು ಧ್ಯೇಯವಾಗಿರಿಸಿಕೊಂಡು ಮೂಡಿದ ಈ ಧರ್ಮ ಪರಕ್ಕಿಂತ ಹೆಚ್ಚಾಗಿ ಜನರ ಇಹದ ಬದುಕು ಹಸನಾಗಬೇಕೆಂಬುದರತ್ತ ನೆಟ್ಟ ದೃಷ್ಟಿಯುಳ್ಳುದಾಗಿತ್ತು. ಆದ್ದರಿಂದಲೇ ಸಮಾಜದಲ್ಲಿ ಎಲ್ಲ ರೀತಿಯ ಶೋಷಣೆಗೆ ಒಳಗಾಗಿದ್ದ ಕೆಳವರ್ಗದ ಜನತೆಗೆ ಅದರಲ್ಲೂ ಮುಖ್ಯವಾಗಿ ದಲಿತವರ್ಗದ ಜನತೆಗೆ ಒಂದು ಹೆಮ್ಮೆಯ, ಎಲ್ಲರೊಂದಿಗೆ ಹೆಜ್ಜೆಹಾಕಿ ನಡೆಯಬಹುದಾದ ಗೌರವಪೂರ್ಣ ಅಸ್ಮಿತೆಯನ್ನು ಇದು ತಂದುಕೊಟ್ಟದ್ದರ ಫಲಸ್ವರೂಪವಾಗಿ ಮೂಡಿಬಂದವನು ಉರಿಲಿಂಗಪೆದ್ದಿ. ಅವನ ಜೀವನದಲ್ಲಿ ನಡೆದೊಂದು ಆಕಸ್ಮಿಕದಿಂದ ಅವನು ಉರಿಲಿಂಗದೇವನಂಥವನನ್ನು ಗುರುವಾಗಿ ಪಡೆದದ್ದು ಒಂದು ಪವಾಡವಾದರೆ ಅದಕ್ಕಿಂತ ದೊಡ್ಡ ಪವಾಡ ಅವನು ತನ್ನ ಅಗಾಧವಾದ ಶ್ರದ್ಧೆ, ಪರಿಶ್ರಮಗಳಿಂದ ತನ್ನ ವರ್ಗದವರಿಗೆ ಕೈಯಿಂದ ಮುಟ್ಟುವುದು ಹೋಗಲಿ ನೋಡಲೂ ಸಾಧ್ಯವಿಲ್ಲದ, ಕೇವಲ ಮೇಲ್ವರ್ಗದವರ ಸ್ವತ್ತಾಗಿತ್ತೆಂದು ತಿಳಿಯಲಾಗಿದ್ದ ವೇದ, ಉಪನಿಷತ್ತು ಆಗಮ ಪುರಾಣ ಹಾಗೂ ಇನ್ನಿತರ ಶಾಸ್ತ್ರಾದಿಗಳಲ್ಲಿ ಅಪಾರವಾದ ಪಾಂಡಿತ್ಯವನ್ನು ಗಳಿಸಿಕೊಂಡದ್ದು. ಹಾಗೆ ಗಳಿಸಿಕೊಂಡ ಕಾರಣದಿಂದಾಗಿಯೇ ಧರ್ಮಪೀಠವೊಂದರ ಪೀಠಾಧಿಪತಿಯಾಗುವ ಅವಕಾಶ ಅವನನ್ನು ಹುಡುಕಿಕೊಂಡುಬಂದಿತು. ಅದಕ್ಕೆ ತಾನು ಸರ್ವಸಮರ್ಥನೆಂದು ತನ್ನ ನಡೆ, ನುಡಿ ಮತ್ತು ಕಾರ್ಯಸಾಧನೆಯಿಂದ ಪ್ರಮಾಣಿಸಿದ್ದು ಕೂಡ ಅವನ ವ್ಯಕ್ತಿತ್ವದ ಗರಿಮೆ. ಮುಂದಿನ ತನ್ನ ಬದುಕಿನಲ್ಲಿ ಶರಣರ ವಿಚಾರಧಾರೆಯನ್ನು ವಚನಗಳ ರೂಪದಲ್ಲಿ ಸಶಕ್ತವಾಗಿ ಅಭಿವ್ಯಕ್ತಿಸಿದ್ದು ಮತ್ತು ಹಾಗೆ ಅಭಿವ್ಯಕ್ತಿಸುವಾಗ

ತಾನು ಮುಖ್ಯವಾಗಿ ಎದುರಾಗಬೇಕಾಗಿದ್ದ ಯಜಮಾನಸಂಸ್ಕೃತಿಯ ವಕ್ತಾರರ ಆಕರಗಳನ್ನೇ ಆಧಾರವಾಗಿ ಬಳಸಿಕೊಂಡು ಶಿವಪಾರಮ್ಯವನ್ನು ಸ್ಥಾಪಿಸುತ್ತಲೇ ವೈದಿಕರ ಆಚಾರಗಳಲ್ಲಿಯ ದ್ವಂದ್ವಗಳು ,ಮೌಢ್ಯಗಳು, ಅವೈಚಾರಿಕತೆಗಳನ್ನು ಖಂಡತುಂಡವಾಗಿ ಖಂಡಿಸುತ್ತ ಅವರಿಗೆ ಸವಲಾದದ್ದು ಉರಿಲಿಂಗ ಪೆದ್ದಿಯ ಒಂದು ಸಾಧನೆ. ಹಾಗೆಯೇ ರೂಢಮೂಲವಾಗಿದ್ದ ಜಾತಿ ಪರಿಕಲ್ಪನೆಯ ಅಸಮಾನತೆಗಳನ್ನು ತಲೆಕೆಳಗು ಮಾಡುವ ಹಾಗೆ 'ಶ್ವಪಚೋಪಿಯಾದಡೇನು ಶಿವಭಕ್ತನೇ ಕುಲಜ, ಅವನೇ ನಿಜವಾದ ದ್ವಿಜಶ್ರೇಷ್ಠ' ಎಂದು ಸಾರಿಹೇಳುವ ಮೂಲಕ ಬ್ರಾಹ್ಮಣರ ಶ್ರೇಷ್ಠತೆಗೆ ಪ್ರಬಲವಾದ ಸವಾಲೊಡ್ಡಿದ್ದೂ ಅಲ್ಲದೆ ಶಿವಭಕ್ತನಾದವನು ಬ್ರಾಹ್ಮಣನ ಸಮಾನನಷ್ಟೇ ಅಲ್ಲ ಅವನಿಗಿಂತಲೂ ಶ್ರೇಷ್ಠ ನೆಂದು ಗಟ್ಟಿಯಾಗಿ ಹೇಳಿ ತಾನೇ ಅದಕ್ಕೊಂದು ಶ್ರೇಷ್ಠ ನಿದರ್ಶನವೆನ್ನುವಂತೆ ಬಾಳಿದ್ದು ಕೂಡ ಅವನ ವ್ಯಕ್ತಿತ್ವದ ಅನನ್ಯತೆ. ವೀರಶೈವದ ತಾತ್ವಿಕ/ ಧಾರ್ಮಿಕ ವಿಚಾರಗಳನ್ನು ಸರಳ ಕನ್ನಡದಲ್ಲಿ ಸಾಕಷ್ಟು ವಿಸ್ತಾರವಾಗಿ, ವಿವರಪೂರ್ಣವಾಗಿ ವಚನಗಳ ರೂಪದಲ್ಲಿ ಅಭಿವ್ಯಕ್ತಿಸಿರುವುದು ಅವನ ಬೆಲೆಯುಳ್ಳ ಕೊಡುಗೆಯಾಗಿದೆ.

ಇನ್ನು ಇಷ್ಟೇ ಅಥವಾ ಇದಕ್ಕಿಂತಲೂ ಮಹತ್ವದ ಸಂಗತಿ ತನ್ನ ಪತ್ನಿ ಕಾಳವ್ವೆಯನ್ನು ನಿಜವಾದ ಅರ್ಥದಲ್ಲಿ ಸಹಧರ್ಮಿಣಿಯಾಗಿ ರೂಪಿಸಿದ್ದು. ತಾನು ಮೇಲೇಳುವುದೇ ಕಷ್ಟವೆನಿಸಿದ್ದಂಥ ಸನ್ನಿವೇಶದಲ್ಲಿ "ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ" ಎನ್ನುವ ದಾಸಿಮಯ್ಯನ ಮಾತಿಗೆ ನಿದರ್ಶನವೆನಿಸುವಂತೆ ತನ್ನ ಶಿವಾನುಭಾವ ಯಾನದಲ್ಲಿ ಸಹಚರಿಯಾಗಿ ಶರಣಧರ್ಮಪಥಗಾಮಿನಿಯಾಗಿ ರೂಪಿಸಿದ್ದಷ್ಟೇ ಅಲ್ಲದೆ ಅವಳನ್ನು 'ವಿಚಾರ ಪತ್ನಿ'ಯಾಗಿಯೂ ರೂಪಿಸಿ ಅವಳೂ ಮೌಲಿಕವಾದ ವಚನರಚನೆಯಲ್ಲಿ ತೊಡಗಿಕೊಳ್ಳುವಂತೆ ಮಾಡಿದ್ದುಕೂಡ ಅಪೂರ್ವ ಸಾಧನೆಯೆನ್ನುವುದರಲ್ಲಿ ಸಂಶಯವೇ ಇಲ್ಲ. ಅದು ಇಂದಿನವರಿಗೂ ಒಂದು ಮೇಲ್ಪಂಕ್ತಿಯೇ. ಸಮಾಜದ ತೀರ ತಳವರ್ಗದಿಂದ ಬಂದ ಈತ ಅತ್ಯಂತ ಪ್ರತಿಕೂಲ ಪರಿಸ್ಥಿತಿಗಳೊಂದಿಗೆ ನಿರಂತರ ಸೆಣಸುತ್ತ, ಹುಟ್ಟಿನಿಂದ ಮೇಲು ವರ್ಗಕ್ಕೆ ಸೇರಿದ್ದ ಗುರುವೇ ಅವನ ವ್ಯಕ್ತಿತ್ವದ ಸಿದ್ಧಿಯನ್ನು ಕಂಡುಕೊಂಡು ತನ್ನ ಉತ್ತರಾಧಿಕಾರಿಯಾಗಿರಲು ಆಹ್ವಾನಿಸಿದ ಫಲಸ್ವರೂಪವಾಗಿ ಯಾರೂ ಊಹಿಸಲೂ ಸಾಧ್ಯವಿಲ್ಲದಂಥ ಎತ್ತರಕ್ಕೆ ಏರಿದ್ದು ಎಲ್ಲ ಕಾಲದ ಎಲ್ಲ ವರ್ಗದ ಜನರಿಗೆ ನಿಸ್ಸಂದೇಹವಾಗಿಯೂ ಒಂದು ಶ್ರೇಷ್ಠ ಮಾದರಿಯೇ ಸರಿ.

ಅನುಬಂಧ – ೧

ಆಯ್ದ ಕೆಲವು ವಚನಗಳ ಅನುಸಂಧಾನ

೧

ಅಮೃತಕ್ಕೆ ಹಸಿವುಂಟೆ? ಜಲಕ್ಕೆ ತೃಷೆಯುಂಟೆ?
ಮಹಾಜ್ಞಾನಸ್ವರೂಪಂಗೆ ವಿಷಯವುಂಟೆ?
ಸದ್ಗುರುಕಾರುಣ್ಯವ ಪಡೆದು ಲಿಂಗಾರ್ಚನೆಯಂ ಮಾಡುವ
ಮಹಾಭಕ್ತಂಗೆ ಬೇರೆ ಮುಕ್ತಿಯ ಬಯಕೆ ಉಂಟೆ?
ಅವರುಗಳಿಗೆ ಅದು ಸ್ವಯಂಭು ಸಹಜಸ್ವಭಾವ.
ಇನ್ನು ತೃಪ್ತಿ ಅಪ್ಯಾಯನ ಅರಸಲುಂಟೆ?
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

ಮಾನವ ಮತಿ ಊಹೆ ಮಾಡಿಕೊಳ್ಳಲೂ ಆಗದಂಥ ಸಂಗತಿಯನ್ನು ತಿಳಿಸಲು ಮನುಷ್ಯ ವಿರೋಧಾಭಾಸದ ಭಾಷೆಯ ಮೊರೆ ಹೋಗುತ್ತಾನೆ. ಅದು ವಿರೋಧವೆಂಬಂತೆ ಕಾಣುತ್ತದೆ. ಆದರೆ ವಿರೋಧವಲ್ಲ.

ಪ್ರಸ್ತುತ ಉರಿಲಿಂಗಪೆದ್ದಿಯ ಈ ವಚನ ಅದನ್ನೇ ಹೋಲುವಂಥದು. ಅಮೃತ ಕುಡಿದವರಿಗೆ ಹಸಿವೇ ಇರುವುದಿಲ್ಲ. ದೇವತೆಗಳು ಅಮೃತ ಕುಡಿದವರೆಂದು ಖ್ಯಾತಿ. ಅವರಿಗೆ ಮರಣವೂ ಇಲ್ಲ. ಆದ್ದರಿಂದಲೇ ಅದು ಅಮೃತ. ಅಂಥ ಅಮೃತಕ್ಕೆ ಹಸಿವಾಯಿತೆಂಬುದು ಯಾರೂ ಊಹೆ ಮಾಡಲೂ ಸಾಧ್ಯವಿಲ್ಲದ ಸಂಗತಿ. ಹಾಗೊಂದು ವೇಳೆ ಆಗಿದ್ದೇ ಆದರೆ ಅದರ ಹಸಿವನ್ನು ತಣಿಸುವ ಶಕ್ತಿ ಯಾರಿಗೂ ಇಲ್ಲ. ಅದೇ ರೀತಿ ಸಕಲ ಜೀವಿಗಳ ತೃಷೆಯನ್ನು ಹೋಗಲಾಡಿಸುವ ಜಲಕ್ಕೆ ತೃಷೆಯಾಯಿತೆಂದರೆ ಅದನ್ನು ಕಳೆಯುವ ಶಕ್ತಿ ಲೋಕದಲ್ಲಿ ಯಾವುದಕ್ಕೂ ಇಲ್ಲ. ನಾಗಚಂದ್ರ ಹೇಳುವಂತೆ "ಮುನ್ನೀರ್ ಬೆನ್ನೀರೆನೆ ಬೆರಸಲಣ್ಣ ತಣ್ಣೀರೊಳವೆ?" ಹಾಗೆಯೇ ಮಹಾಜ್ಞಾನಿ ಎಂದರೆ ಲೌಕಿಕ ವಿಷಯ ವಾಸನೆಗಳನ್ನೆಲ್ಲ ಗೆದ್ದವನು. ಹಾಗೆ ವಾಸನೆಗಳನ್ನು ನೀಗಿಕೊಂಡ ಕಾರಣಕ್ಕೇ ಅವನು ಜ್ಞಾನಿ. ಅಂಥವನಿಗೆ ವಿಷಯ ಸುಖಗಳ ಮೋಹವಿರಲು ಸಾಧ್ಯವಿಲ್ಲ. ಹಾಗೆ ವಿಷಯ ಸುಖಗಳ ಮೋಹವಿದೆ ಎಂದರೆ ಅದು ಅಮೃತಕ್ಕೆ ಹಸಿವಾದ ಹಾಗೆ ಅಸಂಭವವಾದ ಸಂಗತಿ. ಸದ್ಗುರುವಿನ ಕೃಪಾ ಪ್ರಸಾದದಿಂದ ಲಿಂಗದೀಕ್ಷೆ ಪಡೆದು, ಭಕ್ತನಾದವನು. ಲಿಂಗಪೂಜೆಯಲ್ಲೇ ಪರಮ ಸಂತೃಪ್ತಿ ಹೊಂದುವವನು. ಲಿಂಗಪೂಜೆಯಿಂದ ಅವನು ಪಡೆಯುವ

ಮಹದಾನಂದದ ಮುಂದೆ ಲೌಕಿಕದ ಬಂಧನದಿಂದ ಮುಕ್ತಿ ಪಡೆಯಬೇಕೆಂಬ ಆಸೆಯೂ ಹಾಸ್ಯಾಸ್ಪದವಾದದ್ದು. ಲಘುವಾದ್ದು. ಲೋಕದಲ್ಲಿ ಯಾರೂ ಊಹಿಸಲೂ ಸಾಧ್ಯವಿಲ್ಲದ ಮಹಾ ಆನಂದದ ನಿಧಿಯೇ ಲಿಂಗಾರ್ಚನಾ ಪರನಾದ ಅವನಿಗೆ ದೊರೆತಿರುವುದರಿಂದ ಅದಕ್ಕಿಂತ ಬೇರೆಯಾದ ತೃಪ್ತಿ ಅವನಿಗೆ ಇನ್ನಿಲ್ಲ. ಆನಂದವು ಅವನ ಸ್ವಭಾವದ, ವ್ಯಕ್ತಿತ್ವದ ಭಾಗವೇ ಆಗಿಬಿಟ್ಟಿರುವಾಗ ಅದಕ್ಕಿಂತ ಕಡಿಮೆಯಾದ ಮೋಕ್ಷದ ಬಯಕೆಯ ವಿಷಯಕ್ಕೆ ಅವನದು ದಿವ್ಯ ನಿರ್ಲಕ್ಷ್ಯ.

೨

ಆಯುಷ್ಯವ ಹಿರಿದಾಗಿ ಕೊಟ್ಟಡೆ, ಲಿಂಗ ಒಲಿದುದಲ್ಲ.
ಭಾಷೆಯ ಹಿರಿದಾಗಿ ಕೊಟ್ಟಡೆ, ಲಿಂಗ ಒಲಿದುದಲ್ಲ.
ಅಷ್ಟಮಹದೈಶ್ವರ್ಯವ ಹಿರಿದಾಗಿ ಕೊಟ್ಟಡೆ
ಲಿಂಗ ಒಲಿದುದಕ್ಕೆ ಕುರುಹಲ್ಲ.
ಕಾಯ ಬೆರಸಿ ಕೈಲಾಸಕ್ಕೆ ಕೊಂಡು ಹೋದರೂ ಲಿಂಗ ಒಲಿದುದಲ್ಲ.
ಇವೆಲ್ಲಾ ಪೂಜಾ ಫಲಂಗಳು, ಕೈಕೂಲಿಕಾರತನವೈಸೆ.
ಲಿಂಗ ಒಲಿದ ಪರಿ:
ಗುರುಲಿಂಗಜಂಗಮ ಒಂದೆಂದು ಅರಿದು
ನಿಶ್ಚಯ ಭಾವದಿಂ ತನು ಮನ ಧನವಲ್ಲಿಯೇ ಅರ್ಪಿಸುವುದು
ಲಿಂಗ ಒಲಿದುದು.
ಕಾಯಭಾವವಳಿದು ಲಿಂಗವೆಂದು ಭಾವಿಸಿ
ಭಾವಸಿದ್ಧಿಯಾದುದು ಲಿಂಗ ಒಲಿದುದು.
ಲಿಂಗವಲ್ಲದೆ ಇನ್ನಾವುದು ಘನ, ಎಂದರಿದುದೆ ಲಿಂಗ ಒಲಿದುದು.
ಲಿಂಗವಂತನೆ ಲಿಂಗವೆಂದರಿದುದು ಲಿಂಗ ಒಲಿದುದು.
ಸದಾಚಾರ ಲಿಂಗ ಒಲಿದುದು.
ನಿರ್ವಂಚನೆ ಲಿಂಗ ಒಲಿದುದು.
ಸರ್ವಭೋಗವನು ಲಿಂಗವಂತರಿಗೆ ಭೋಗಿಸಲಿತ್ತು
ಸಮಭೋಗವಲ್ಲದೆ ಲಿಂಗವಂತಗೆ
ವಿಶೇಷ ಭೋಗ ತಾತ್ಪರ್ಯ ಮೋಹವಾಗದಡೆ ಲಿಂಗ ಒಲಿದುದು.
ಪರಧನ ಪರಸ್ತ್ರೀ ಪರದ್ರವ್ಯ ಪರದೈವದಲ್ಲಿ
ವರ್ತಿಸದಿದ್ದಡೆ ಲಿಂಗ ಒಲಿದುದು.
ಲಿಂಗದಲ್ಲಿ ಭಕ್ತನಲ್ಲಿ ಅವಿನಾಭಾವವಳವಟ್ಟು ಭಾವಶುದ್ಧವಾಗಿ
ಸರ್ವಕ್ರೀ ಲಿಂಗಕ್ರೀಯಾದಡೆ ಲಿಂಗ ಒಲಿದುದು ದೃಷ್ಟವಯ್ಯಾ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ.

ವೀರಶೈವದಲ್ಲಿ ಅಷ್ಟಾವರಣಗಳಲ್ಲಿ ತ್ರಿವಿಧವೆನಿಸಿದ ಗುರು, ಲಿಂಗ, ಜಂಗಮರಲ್ಲಿ ಭೇದವೆಣಿಸದೆ, ಒಂದೆಂದು ತಿಳಿದು, ಅವಕ್ಕೆ ಮನೋವಾಕ್ಕಾಯ ಪೂರ್ಣವಾಗಿ ದಾಸೋಹ ಮಾಡುವುದು ಎಲ್ಲಕ್ಕಿಂತ ಮಿಗಿಲಾದ್ದು. ತಾನು ಪರಮಾತ್ಮನ ಒಲುಮೆಗೆ, ಅವನ ಕೃಪೆಗೆ ಪಾತ್ರನಾಗಿದ್ದೇನೆಂಬ ಭ್ರಮೆಯಲ್ಲಿ ಅನೇಕ ಭಕ್ತರು ಇದ್ದು ಬಿಡುತ್ತಾರೆ.

ಹಾಗಾದರೆ ಪರಮಾತ್ಮನ ಒಲುಮೆಗೆ ಪಾತ್ರನಾಗಿರುವುದಕ್ಕೆ ಕುರುಹೇನು ಎಂದರೆ, ತಾನು ದೀರ್ಘಾಯುಷಿಯಾಗಿರುವುದಾಗಲಿ ತನಗೆ ಅಷ್ಟೈಶ್ವರ್ಯ ಪ್ರಾಪ್ತವಾಗಿರುವುದಾಗಲಿ, ಕುರುಹಲ್ಲ. ಒಂದು ವೇಳೆ ಸಶರೀರವಾಗಿ ತನ್ನನ್ನು ಕೈಲಾಸಕ್ಕೆ ಕರೆದುಕೊಂಡುಹೋಗಿಯೇ ಬಿಟ್ಟರೂ ಅದು ಕೂಡ ಶಿವನೊಲಿದುದಕ್ಕೆ ಕುರುಹಲ್ಲ. ಅವನ್ನೆಲ್ಲ ಕೈಕೂಲಿಕಾರತನ ಎಂದು ವ್ಯಂಗ್ಯವಾಡುತ್ತಾನೆ. ಅಷ್ಟೇ ಅಲ್ಲ ಅವೆಲ್ಲ ಪೂಜಾಫಲಗಳು.

ಹಾಗಾದರೆ ಲಿಂಗ ಅಥವಾ ಪರಮಾತ್ಮನೊಲಿದಿದ್ದಾನೆಂಬುದಕ್ಕೆ ಕುರುಹೇನೆಂದರೆ, ತ್ರಿವಿಧಗಳಾದ ಗುರುಲಿಂಗ ಜಂಗಮವನ್ನು ಒಂದೇ ಎಂದು ತಿಳಿಯುವುದು ಮತ್ತು ತ್ರಿವಿಧ ದಾಸೋಹ ಮಾಡುವುದು. ಕಾಮಭಾವಹೀನನಾಗಿ ಭಾವಸಿದ್ಧಿಯಾಗುವುದೇ, ಲಿಂಗವನ್ನು ಮೀರಿದ ಘನವಾವುದೂ ಇಲ್ಲವೆಂಬ ಅರಿವು ಬಂದುದೇ ಲಿಂಗವೊಲಿದಿರುವುದಕ್ಕೆ ಸಾಕ್ಷಿ. ತನ್ನ ಸಕಲ ಭೋಗವನ್ನೂ ಭಕ್ತರಿಗೆ ಅರ್ಪಿಸಿ, ತನ್ನಲ್ಲಿ ಭೋಗದ ಮೋಹ ಉಂಟಾಗದಿದ್ದರೆ, ಪರಧನ, ಪರಸ್ತ್ರೀ ಪರದ್ರವ್ಯಗಳಿಗೆ ಆಸೆ ಪಡದೆ ಇದ್ದರೆ, ಭಕ್ತ ಬೇರೆ ಅಲ್ಲ ಶಿವ ಬೇರೆ ಅಲ್ಲ ಎಂಬ ಅವಿನಾಭಾವ ಹೃದ್ಗತವಾಗಿರುವುದೇ ಲಿಂಗ ಒಲಿದಿರುವುದಕ್ಕೆ ಸಾಕ್ಷಿ. ನಾನೆಂಬ ಅಹಂಭಾವ ಅಳಿದು, ನಾಹಂ ಕರ್ತಾ ಶಿವಕರ್ತಾ ಎಂಬ ನಿಹಂಕಾರ ಅಳವಟ್ಟಿರುವುದೇ ಪರಶಿವನ ಒಲುಮೆಗೆ ಪ್ರಮಾಣ.

೩

ಎನ್ನ ಮನಕ್ಕೆ ಮತ್ತೊಂದ ನೆನೆಯಲು ತೆರಹಿಲ್ಲಯ್ಯಾ
ಮಹಾದೇವನು ನೀನು, ಎನ್ನ ಮನವನವಗ್ರಹಿಸಿದೆ.
ಆ ಮನವು ನಿನ್ನನೇ ಅವಗ್ರಹಿಸಿತ್ತಾಗಿ.
ಎನ್ನ ವಾಕ್ಕಿಂಗೆ ಮತ್ತೊಂದ ನುಡಿಯಲು ತೆರಹಿಲ್ಲಯ್ಯಾ
ಮಹಾಮಂತ್ರಮಯ ನೀನು, ಎನ್ನ ವಾಕ್ಕನವಗ್ರಹಿಸಿದೆ.
ಎನ್ನ ಮಂತ್ರ ನಿನ್ನನೇ ಅವಗ್ರಹಿಸಿತ್ತಾಗಿ.
ಎನ್ನ ಕಾಯಕ್ಕೆ ಮತ್ತೊಂದ ಭೋಗಿಸೆ ತೆರಹಿಲ್ಲಯ್ಯ.
ಮಹಾಪ್ರಸಾದರೂಪನು ನೀನು, ಎನ್ನ ಕಾಯವನವಗ್ರಹಿಸಿದೆ,
ಆ ಕಾಯವು ನಿನ್ನನೇ ಅವಗ್ರಹಿಸಿದುದಾಗಿ.
ಇಂತು ಮನೋವಾಕ್ಕಾಯದ ಅಂತರಂಗಬಹಿರಂಗದ ಒಳಹೊರಗೂ
ಸರ್ವಾಂಗಲಿಂಗವಾದ ಕಾರಣ
ಮನೋವಾಕ್ಕಾಯದ ಸ್ಥಿತಿಗತಿ ನೀನೆ ಅಯ್ಯಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ.

ತ್ರಿಕರಣಪೂರ್ವಕವಾಗಿ ತನ್ನ ಆರಾಧ್ಯದೇವನನ್ನು ಆರಾಧಿಸುವ ಭಕ್ತನಿಗೆ, ತನ್ನ ಮನಸ್ಸು, ವಾಕ್ ಮತ್ತು ಕಾಯಗಳಾವುವೂ ತನ್ನ ಅಧೀನದಲ್ಲಿರದೆ, ಸಂಪೂರ್ಣವಾಗಿ ಪರಶಿವನ ವಶವಾಗಿಬಿಟ್ಟಿವೆ ಎಂಬ ಭಾವನೆವುಂಟಾಗುತ್ತದೆ. ಈ ತೆರನಾಗಿ ವಶವರ್ತಿಯಾಗಿರುವುದು ಭಕ್ತ ಇಲ್ಲವೆ ಭಗವಂತ ಒಬ್ಬರ ಪ್ರಯತ್ನದ ಫಲವಲ್ಲ, ಭಕ್ತನ ಮನ ವಾಕ್, ಕಾಯಗಳು ಭಗವಂತನನ್ನು ಆವರಿಸಿರುವಂತೆ, ಭಗವಂತನೂ ಭಕ್ತನ ಮನೋವಾಕ್ ಕಾಯಗಳನ್ನು ಆವರಿಸಿದ್ದಾನೆ. ಈ ಭಕ್ತ ಭಗವಂತರು ಪರಸ್ಪರ ವಶವರ್ತಿಗಳಾಗಿರುವುದರಿಂದ ಇದು ಬೇರ್ಪಡಿಸಲಾರದ ಬಂಧನ. ಹಾಗಾಗಿ ಮನಸ್ಸಿಗೆ ಮತ್ತೊಂದನ್ನು ನೆನೆಯಲು, ವಾಕ್ಕಿಗೆ ಮತ್ತೊಂದನ್ನು ನುಡಿಯಲು, ಕಾಯಕ್ಕೆ ಮತ್ತೊಂದನ್ನು ಭೋಗಿಸಲು ತೆರಹಿಲ್ಲವಾಗಿದೆ. ಹೀಗೆ ತ್ರಿಕರಣಗಳ ಒಳಹೊರಗೆ ಸರ್ವಾಂಗಲಿಂಗವಾದ ಕಾರಣದಿಂದ ಅವುಗಳ ಸ್ಥಿತಿಗತಿ ಅವನೇ ಎಂದು ಹೇಳುತ್ತಿದ್ದಾನೆ.

೪

ಕಾಮಧೇನು ಕಾಮಿಸಿದುದ ಕುಡದಿರ್ದಡೆ
ಆ ಕಾಮಧೇನು ಬಂಜೆ ಆಕಳಿಂದ ಕಷ್ಟ ನೋಡಾ.
ಕಲ್ಪತರು ಕಲ್ಪಿಸಿದುದ ಕುಡದಿರ್ದಡೆ
ಆ ಕಲ್ಪತರು ತರಿತಾರಿ ಬೊಬ್ಬುಲಿಯಿಂದವೂ ಕಷ್ಟ ನೋಡಾ.
ಚಿಂತಾಮಣಿ ಚಿಂತಿಸಿದುದ ಕುಡದಿರ್ದಡೆ
ಆ ಚಿಂತಾಮಣಿ ಗಾಜುಮಣಿಯಿಂದವೂ ಕರಕಷ್ಟ ನೋಡಾ.
ಶ್ರೀಗುರುಕಾರುಣ್ಯವ ಪಡೆದು ಸದ್ಭಕ್ತನಾಗಿ
ಶ್ರೀಗುರುಲಿಂಗಜಂಗಮಕ್ಕೆ ಪ್ರೀತಿಯಿಂದ ದಾಸೋಹವ ಮಾಡದಿರ್ದಡೆ
ಆ ಭಕ್ತನು ಲೋಕದ ಭವಿಗಳಿಂದವೂ ಕರಕಷ್ಟ ನೋಡಯ್ಯಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ.

ಈ ವಚನದಲ್ಲೂ ವಚನಕಾರನು, ಭಕ್ತನ ಹೆಸರಿನ ಸಾರ್ಥಕತೆಯನ್ನು ಕುರಿತೇ ವಿಚಾರ ಮಾಡಿದ್ದಾನೆ. ಭಕ್ತನ ಸಾರ್ಥಕತೆಯೆಂದರೆ, ಗುರುಲಿಂಗ ಜಂಗಮಗಳೆಂಬ ತ್ರಿವಿಧಕ್ಕೆ ಅಂತಃಕರಣ ಪೂರ್ವಕವಾಗಿ ದಾಸೋಹ ಮಾಡುವುದು. ಹಾಗೆ ದಾಸೋಹ ಮಾಡಲು ತಪ್ಪಿದ್ದೇ ಆದರೆ, ಭಕ್ತನ ಹೆಸರಿಗೇ ಅವನು ಅಯೋಗ್ಯನೂ ಅನರ್ಹನೂ ಆಗುತ್ತಾನಷ್ಟೇ ಅಲ್ಲ, ಭವಿಗಿಂತ ಕೀಳಾಗುತ್ತಾನೆಂಬುದನ್ನು ಪ್ರಸಿದ್ಧವಾದ ದೃಷ್ಟಾಂತಗಳಿಂದ ದೃಢಪಡಿಸಿದ್ದಾನೆ. ಕಾಮಧೇನುವೆಂಬ ಹೆಸರು ಅನ್ವರ್ಥಕವೆನಿಸಬೇಕೆಂದರೆ ಕಾಮಿಸಿದ್ದನ್ನು ಕೊಡಬೇಕು. ಇಲ್ಲದೇ ಹೋದರೆ ಅದು ಬಂಜೆ ಆಕಳಿಗಿಂತ ಕಡೆ. ಹಾಗೆಯೇ ಕಲ್ಪವೃಕ್ಷದ ಹೆಸರು ಸಾರ್ಥಕವೆನಿಸುವುದು ಕಲ್ಪಿಸಿದುದನ್ನು ಕೊಟ್ಟಾಗ ಮಾತ್ರ. ಹಾಗಲ್ಲದಿದ್ದರೆ ಅದು ಸಾಮಾನ್ಯ ಬೊಬ್ಬುಲಿ ಮರಕ್ಕಿಂತ ಕೀಳು ಮತ್ತು ಚಿಂತಾಮಣಿ ಚಿಂತಿಸಿದ್ದನ್ನು ಕೊಟ್ಟಾಗ ಮಾತ್ರ ಅದರ ಹೆಸರಿಗೆ ಸಾರ್ಥಕತೆ ಇಲ್ಲದಿದ್ದರೆ ತೀರಾ ಸಾಮಾನ್ಯವಾದೊಂದು ಗಾಜಿನ ಮಣಿಯೂ ಅದಕ್ಕಿಂತ ಮೇಲೆನಿಸುತ್ತದೆ. ಅಂತೆಯೇ ಭಕ್ತನು ಲೋಕದ ಭವಿಗಿಂತ ಕೀಳೆನಿಸುವನು.

೫

ಶಿಷ್ಯನ ಗುರುತ್ವವನು, ಗುರುವಿನ ಮಹತ್ವವನು,
ಗುರು ಶಿಷ್ಯನಾದ ಪರಿಯನು,
ಶಿಷ್ಯ ಗುರುವಾದ ಪರಿಯನು, ಆರಯ್ಯ ಬಲ್ಲವರುರಿ
ವಾಙ್ಮನೋತೀತ ಉಪಮಿಸಬಾರದು ಮಹಾಕ್ರೀಯನು.
ಭಕ್ತಿಯಿಂದ ಗುರುಭಕ್ತಿವತ್ಸಲನಾಗಿ ಶಿಷ್ಯನಾದ ಪರಿ
ಬೀಜವೃಕ್ಷನ್ಯಾಯದಂತೆ ಅವಿನಾಭಾವವಯ್ಯಾ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ.

ಆಧ್ಯಾತ್ಮ ಪ್ರಪಂಚದಲ್ಲಾದರೂ ಅಷ್ಟೆ ಲೌಕಿಕ ಜಗತ್ತಿನಲ್ಲಾದರೂ ಅಷ್ಟೆ ಒಂದು ಹಂತದವರೆಗೆ ಗುರು – ಶಿಷ್ಯರ ಹಿರಿ – ಕಿರಿ ಸಂಬಂಧವ. ಶಿಷ್ಯನು ತನ್ನ ಅಗಾಧವಾದ ಸಾಧನೆಯಿಂದ ಮೇಲು ಮೇಲಕ್ಕೆ ಏರಿ ಔನ್ನತ್ಯವನ್ನು ಸಾಧಿಸುತ್ತ ಹೋದಂತೆ, ಗುರುವಿನಿಂದ ಕಲಿಯುವುದೇನೂ ಇರುವುದಿಲ್ಲ ಮಾತ್ರವಲ್ಲ, ಗುರುವನ್ನೂ ಮೀರಿಸಿದ ಸಾಧನೆ ಮಾಡಿಬಿಟ್ಟನೆಂದರೆ ಶಿಷ್ಯನು ತನ್ನ ಗುರುವಿಗೂ ಗುರುವಾಗಿ ಗುರು ತನ್ನ ಒಂದು ಕಾಲದ ಶಿಷ್ಯನ ಶಿಷ್ಯನೇ ಆಗಿಬಿಡಬಹುದು. ಆಗ ಶಿಷ್ಯನ ಉನ್ನತಿಗೆ ಗುರು ಬೆರಗಾಗಿ ಸಂತಸಪಟ್ಟು ವಾತ್ಸಲ್ಯದಿಂದ ಶಿಷ್ಯನ ಗುರುತ್ವವನ್ನು ಮಾನಸಿಕವಾಗಿ ಒಪ್ಪಬಹುದು. ಗುರು ಶಿಷ್ಯರ ಭೇದವಳಿದು ಹೋಗುತ್ತದೆ. ಇಬ್ಬರೂ ಗುರು. ಇಬ್ಬರೂ ಶಿಷ್ಯರು. ಅದು ಪ್ರಸಿದ್ಧವಾದ ಬೀಜವೃಕ್ಷನ್ಯಾಯದ ಪರಿ. ಬೀಜದಿಂದ ವೃಕ್ಷ ಹೇಗೆ ನಿಜವೋ ಹಾಗೆಯೇ ವೃಕ್ಷದಿಂದ ವೃಕ್ಷವೂ ನಿಜ. ಇಂದಿನ ವೃಕ್ಷದಿಂದ ಮುಂದಿನ ವೃಕ್ಷಕ್ಕೆ ಕಾರಣವಾದ ಬೀಜ. ಹಾಗೆಯೇ ಇಂದಿನ ಬೀಜದಿಂದ ಮುಂದಿನ ಬೀಜಕ್ಕೆ ಕಾರಣವಾದ ವೃಕ್ಷ. ಅಲ್ಲಮಪ್ರಭುವಿನ ಇದೇ ಅರ್ಥದ–'**ಕೃತಯುಗದಲ್ಲಿ ಶ್ರೀ ಗುರುಶಿಷ್ಯರಿಗೆ ಬಡಿದು ಬುದ್ಧಿಯ ಕಲಿಸಿದರೆ ಆಗಲಿ ಮಹಾಪ್ರಸಾದವೆಂದೆನಯ್ಯಾ...**' ಎಂದು ಪ್ರಾರಂಭ ವಾಗುವ ವಚನ ಕೂಡಾ ಶಿಷ್ಯನ ಸಾಧನೆ ಏರುತ್ತಾ ಹೋದಂತೆ ಗುರುವೇ ಶಿಷ್ಯನಿಗೆ ನಮಿಸುವ ಹಂತ ಬರುತ್ತದೆ. ಕೃತ, ತ್ರೇತಾ, ದ್ವಾಪರ, ಕಲಿ, ಕಾಲ ಮುಂದೆ ಮುಂದೆ ಸಾಗುವುದನ್ನು ಸೂಚಿಸುತ್ತದೆ. ಕೃತ, ತ್ರೇತಾ, ದ್ವಾಪರಗಳು ಕ್ರಮಕ್ರಮವಾಗಿ ಪ್ರಾರಂಭದಿಂದ ಪರಿಪಕ್ವಾವಸ್ಥೆಗೆ ಬರುವ ವಿಕಾಸಕ್ರಮದ ದ್ಯೋತಕ. ಕೊನೆಯ ಹಂತದಲ್ಲಿ ಗುರುವೇ ಶಿಷ್ಯನಿಗೆ ನಮಿಸುತ್ತಾನೆ. ಗುರುಶಿಷ್ಯನಾದ ತನ್ನ ವಿನೋದಕ್ಕೆ ಶಿಷ್ಯನೇ ತನ್ನ ವಿನೋದಕ್ಕೆ ಗುರುವಾದ ಎಂದು ಪ್ರಭು ಹಿಂದೊಂದು ಸಂದರ್ಭದಲ್ಲಿ ಹೇಳಿರುವುದನ್ನು ಇಲ್ಲಿ ನೆನೆಯಬಹುದು.

೬

ಜಗದೊಳಗೆ ಸೂರ್ಯನಂತಿರ್ಪನಯ್ಯ ಶಿವನು.
ಲೋಕಾದಿ ಲೋಕಂಗಳೊಳಗಿರ್ದಡೇನು,
ಜಗದ ಪುಣ್ಯ, ಪಾಪ, ಸ್ವರ್ಗ, ನರಕ, ಬಂಧ, ಮೋಕ್ಷಕ್ಕೊಳಗಾದಾತನೇ ಅಲ್ಲ.
ಅದೆಂತೆಂದಡೆ,

ಜಲದೊಳಗಣ ಪ್ರಕೃತಿ ವಿಕೃತಿಗಳು ಜಲಕ್ಕಲ್ಲದೆ ಸೂರ್ಯಂಗಿಲ್ಲವಾಗಿ,
ಲೋಕದ ಸ್ಥಿತಿಗತಿ ಲೋಕಕ್ಕಲ್ಲದೆ, ಶಿವನಿಗಿಲ್ಲವಾಗಿ.
ಅನಂತಕೋಟಿ ಬ್ರಹ್ಮಾಂಡಗಳು ತನ್ನ ಒಡಲೊಳಗೆ ಅಡಗಿದವೆಂದಡೆ
ತಾ ಹೊರಗಾಗಿ ಅಡಗಲೆಡೆ ಏನುಂಟು?
ಇದು ಕಾರಣ,
ನಮ್ಮ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರನು
ವಿಶ್ವದೊಳಗೆ ಹೊದ್ದಿಯೂ ಹೊದ್ದದಿರಬಲ್ಲ,
ವಿಶ್ವಾಧಿಪತಿಯಾಗಲೂ ಬಲ್ಲ.

ದೇವರು ಮತ್ತು ಜಗತ್ತಿನ ಸಂಬಂಧದ ಸ್ವರೂಪ ಕುರಿತಂತೆ ಜಗತ್ತಿನಾದ್ಯಂತ ಭಕ್ತರು, ಚಿಂತಕರು, ಯೋಗಿಗಳು, ಸನ್ಯಾಸಿಗಳು ಬಗೆಬಗೆಯಾಗಿ ಚಿಂತಿಸಿದ್ದಾರೆ. ಉರಿಲಿಂಗಪೆದ್ದಿ ಕೂಡ ಲೋಕವನ್ನೆಲ್ಲ ಸೃಷ್ಟಿಮಾಡಿದ ಶಿವನಿಗೂ ಈ ಲೋಕಕ್ಕೂ ಇರುವ ಸಂಬಂಧದ ರೀತಿಯನ್ನು ಈ ವಚನದಲ್ಲಿ ವರ್ಣಿಸುತ್ತಿದ್ದಾನೆ. ಸೂರ್ಯ ಜಗತ್ತನ್ನೇ ಬೆಳಗುವವನಾದರೂ ಅವನು ಯಾವುದಕ್ಕೂ ಅಂಟಿದವನಲ್ಲ. ನೀರಿನ ಮೇಲೆ ಸೂರ್ಯರಶ್ಮಿ ಯಥೇಚ್ಛವಾಗಿ ಬಿದ್ದರೂ ಆ ನೀರಿನ ಪ್ರಕೃತಿ ವಿಕೃತಿಗಳು ಸೂರ್ಯನಿಗೆ ಹೇಗೆ ಸಂಬಂಧಿಸಿದ್ದಲ್ಲಮೋ ಲೋಕದ ಸ್ಥಿತಿಗತಿಗಳಾದ ಪುಣ್ಯ, ಪಾಪ, ಸ್ವರ್ಗ, ನರಕ, ಬಂಧ, ಮೋಕ್ಷಾದಿಗಳು ಶಿವನಿಗೆ ಸಂಬಂಧಿಸಿದವಲ್ಲವೇ ಅಲ್ಲ. ಅನಂತಕೋಟಿ ಬ್ರಹ್ಮಾಂಡಗಳು ಅವನಲ್ಲೇ ಅಡಗಿರುವುದು ನಿಜವಾದರೂ, ಶಿವನು ಬ್ರಹ್ಮಾಂಡಕ್ಕೆ ಅಂಟಿಯೂ ಅಂಟದಂತಿದ್ದಾನೆ.

೭

ಜಾತವೇದಸ್ಸಿನಲ್ಲಿ ಶೋಧಿಸಿ
ಪುಟವಿಟ್ಟ ಬೂದಿಯಂತಾದೆನಯ್ಯಾ ನಿಮ್ಮನಾರಾಧಿಸಿ.
ಅದೆಂತೆಂದಡೆ:
ಜ್ಞಾನಾಗ್ನಿಸ್ಸರ್ವಕರ್ಮಾಣಿ ಭಸ್ಮಸಾತ್ಕುರುತೇ ಎಂದುದಾಗಿ
ಕಾದ ಲೋಹದ ಮೇಲೆ ಉದಕವನೆರೆದಂತಾದೆನಯ್ಯಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

ಪರವಾತ್ಮಾನುಭವದ ದಿವ್ಯಾಗ್ನಿಯ ಸಂಪರ್ಕಕ್ಕೆ ಬಂದ 'ಜೀವನ'ಸ್ಥಿತಿ ಹೇಗಾಗುತ್ತದೆಂಬುದನ್ನು ತನಗೇ ಅನ್ವಯಿಸಿದಂತೆ ಈ ವಚನದಲ್ಲಿ ಹೇಳುತ್ತಿದ್ದಾನೆ. ಅಗ್ನಿಯ ಸಂಪರ್ಕದಲ್ಲೇ ಇರುವ ಬೂದಿ ಎಷ್ಟು ಪರಿಶುದ್ಧವೋ ಅದಕ್ಕೆ ಬೇರೆ ಯಾವ ಕಲುಷತೆ, ಮಾಲಿನ್ಯಗಳ ನಂಟು ಇರಲು ಸಾಧ್ಯವಿಲ್ಲವೋ ಹಾಗೆಯೇ ತಾನೂ ಆಗಿರುವುದಾಗಿ ಹೇಳುತ್ತಿದ್ದಾನೆ. ಜ್ಞಾನಾಗ್ನಿಯು ಹೇಗೆ ಸಕಲ ಕರ್ಮಗಳನ್ನೂ ಬೂದಿ ಮಾಡಿ ಬಿಡುತ್ತದೋ, ಕಾದ ಲೋಹದ ಮೇಲೆ ನೀರು ಹಾಕಿದರೆ, ಆ ನೀರಿನ ಕುರುಹೇ ಇಲ್ಲದಂತೆ ಕಬ್ಬಿಣ ಎಲ್ಲವನ್ನೂ

ಹೀರಿಕೊಂಡುಬಿಡುತ್ತದೋ (ಕಬ್ಬಿನ ಉಂಡ ನೀರಿನಂತೆ) ಹಾಗೆ ಪರಮಾತ್ಮಾನುಭವದ ದಿವ್ಯಾಗ್ನಿಯ ಸಂಪರ್ಕಕ್ಕೆ ಬಂದ ಚೇತನ ನನ್ನದಾಗಿದೆ ಎನ್ನುತ್ತಾನೆ.

೮

ಜ್ಞಾತೃವ ಜ್ಞಾನ ನುಂಗಿ, ಜ್ಞಾನವ ಜ್ಞೇಯ ನುಂಗಿ,
ಜ್ಞೇಯವು ತನ್ನಲೆ ತಾ ವಿಶ್ರಮಿಸಿ,
ಶ್ರವಣ ಮನನ ನಿಧಿಧ್ಯಾಸನದಲ್ಲಿ ತಲ್ಲೀಯವಾಗಿ,
ಸ್ಥೂಲ ಸೂಕ್ಷ್ಮ ಕಾರಣಂಗಳನೇಕೀಭವಿಸಿ,
ಒಂದೇ ಸಂವಿಧಾನವಾಗಿ, ಅನ್ಯಸಂಧಾನವರತು.
ಪರಮಾನಂದವೆ ಆಲಿಂಗನವಾಗಿ, ಆಲಿಂಗನವೇ ಪರಮಾನಂದವಾಗಿ,
ಪ್ರತಿದೋರದ ಅಪ್ರತಿಯಾಗಿ,
ಉರಿಯೊಳು ಬೈಚಿಟ್ಟು ಕರ್ಪುರದಂತಿರ್ದುದೆ ಭಕ್ತಮಾಹೇಶ್ವರೈಕ್ಯ,
ಇಂತಿರ್ದುದೆ ಪ್ರಸಾದಿ ಪ್ರಾಣಲಿಂಗಿಗಳೈಕ್ಯ, ಇಂತಿರ್ದುದೆ ಶರಣ ಲಿಂಗೈಕ್ಯ,
ಇಂತಿರ್ದುದೆ ಜೀವಪರಮೈಕವಯ್ಯಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

ಈ ವಚನದಲ್ಲಿ ಕೂಡ ಐಕ್ಯಸ್ಥಿತಿಯ ನೆಲೆಗೇರಿದ ಭಕ್ತನ ಸ್ಥಿತಿಯನ್ನು ವಿವರಿಸುತ್ತಿದ್ದಾನೆ. ಸಮುದ್ರ ಸೇರುವ ಮುನ್ನ ನದಿಯ ನೀರು ಬೇರೆ, ಸಮುದ್ರದ ನೀರು ಬೇರೆ. ಇಂಥ ನದಿಯ ನೀರೆಂದು ಗುರುತಿಸಬಹುದು. ಆದರೆ ಸಮುದ್ರ ಸೇರಿಬಿಟ್ಟಮೇಲೆ ಅದು ಸಮುದ್ರದಿಂದ ಅಭಿನ್ನವೆನಿಸಿ, ಸಮುದ್ರದ ನೀರೇ ಆಗಿಹೋಗುವ ಹಾಗೆ. ಜೀವಾತ್ಮ ತನ್ನ ಅಸ್ತಿತ್ವವನ್ನು ನೀಗಿಕೊಂಡು ಅದರಲ್ಲಿ ಏಕೀಭವಿಸಿಬಿಡುತ್ತದೆ. ಜ್ಞಾತೃ, ಜ್ಞಾನ, ಜ್ಞೇಯಗಳೆಂಬ ತ್ರಿಪುಟಿ ಭೇದವಿಲ್ಲವಾಗುತ್ತದೆ. ಅಲ್ಲಿ ಜ್ಞಾತೃವನ್ನು (ಭಕ್ತನನ್ನು) ಪರಮಾತ್ಮ ಜ್ಞಾನ ನುಂಗಿರುತ್ತದೆ. ಇನ್ನು ಜ್ಞೇಯವಾದ ಪರಮಾತ್ಮ ಜ್ಞಾತೃವನ್ನೂ ಒಳಗೊಂಡ ಜ್ಞಾನವನ್ನು ಅಡಗಿಸಿಕೊಂಡು, ಒಂದೇ ಆಗಿ, ಉರಿಯೊಳಗೆ ಸೇರಿಹೋದ ಕರ್ಪೂರದಂತೆ ಭಕ್ತನು ಷಟ್‌ಸ್ಥಲಗಳ ಸೋಪಾನವನ್ನೇರಿ ಹೋಗಿ ಶರಣ ಸ್ಥಲದಲ್ಲಿ ಲಿಂಗದಲ್ಲಿ ಐಕ್ಯನಾಗುತ್ತಾನೆ. ಆ ಸ್ಥಿತಿಯಲ್ಲಿ ದೇವದಿಂದ ಜೀವ ಬೇರೆ ಅಲ್ಲ.

೯

ಪರುಷವು ಪಾಷಾಣದಂತೆ ಇಪ್ಪುದು,
ಆ ಪರುಷವು ಪರುಷವೇದಿಗಳಿಗಲ್ಲದೆ ಅರಿಯಬಾರದು,
ಆ ಪರುಷದ ಫಲಸಿದ್ಧಿ ಪರುಷವೇದಿಗಳಿಗಲ್ಲದೆ ಅಳವಡದು.
ಲಿಂಗವೂ ಲಿಂಗವಂತನಾಗಿ
ದೇವದಾನವಮಾನವರೊಳಗಾಗಿ
ಅವರಂತೆ ಇಪ್ಪನು.

ಆ ಲಿಂಗವು ಲಿಂಗವೇದ್ಯಂಗಲ್ಲದೆ ಅರಿಯಬಾರದು.
ಪರುಷವೇದಿ ಪರುಷದ ಫಲಸಿದ್ಧಿಯಿಂದ ಸುಖಿಸುವಂತೆ
ಲಿಂಗವೇದಿ ಲಿಂಗವಂತರ ಸಂಗದಿಂದ ಸುಖಿಸಿ ಮುಕ್ತನಪ್ಪನಯ್ಯಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

ಭಕ್ತನು ಗುರುಲಿಂಗ ಜಂಗಮರನ್ನು ಸಮಾನವಾಗಿ ಕಾಣಬೇಕೆಂಬುದೇ ವೀರಶೈವ ಸಿದ್ಧಾಂತದ ಮುಖ್ಯ ತತ್ತ್ವ. ಲಿಂಗವೇ ಲಿಂಗವಂತನಾಗಿ ಇತರೆ ಎಲ್ಲ ಮನುಷ್ಯರಂತೆ ಲೋಕದಲ್ಲಿಯ ದೇವದಾನವ ಮಾನವರಲ್ಲಿ ಒಬ್ಬನಾಗಿ ಅವರ ಹಾಗೆಯೇ ಇರುತ್ತಾನೆ. ಚಿರಪರಿಚಿತವಾದ ಕವಿಸಮಯದ ಅಥವಾ ದಂತಕಥೆಯ ಸ್ಪರ್ಶಮಣಿಯ ದೃಷ್ಟಾಂತದ ಮೂಲಕ ಅದನ್ನು ವಿವರಿಸುತ್ತಿದ್ದಾನೆ. ಸ್ಪರ್ಶಮಣಿಯೂ ಉಳಿದೆಲ್ಲ ಕಲ್ಲುಗಳಂತೆಯೇ (ಪಾಷಾಣ) ಕಲ್ಲಿನಲ್ಲಿ ಕಲ್ಲಾಗಿ ಇರುತ್ತದೆ. ಇದು ಕಲ್ಲಲ್ಲ ಸ್ಪರ್ಶಮಣಿ ಎಂದು ತಜ್ಞ (ಪರುಷವೇದಿ) ಮಾತ್ರ ಅದನ್ನು ಗುರುತಿಸಿ, ಅದರ ಫಲಸಿದ್ಧಿಯನ್ನು ಅರಿಯಬಲ್ಲ. ಹಾಗೆಯೇ ಲಿಂಗವೇದಿಯಾದ ಇನ್ನೊಬ್ಬ ಭಕ್ತ ಮಾತ್ರ ಲಿಂಗವಂತನ ರೂಪದಲ್ಲಿರುವ ಲಿಂಗವನ್ನು ಗುರುತಿಸಿ ಆನಂದ ಪಡಬಲ್ಲ.

೧೦

ಮನ ಮುಟ್ಟದು, ಬುದ್ಧಿ ಒಂದಾಗದು, ಚಿತ್ತವಿಡಿಯದು,
ಅಹಂಕಾರವನುಭವಿಸದು, ಸ್ನೇಹ ಪರಿಣಾಮಿಸದು,
ಭಕುತಿ ಎಂತೊ, ಮಾಟವೆಂತೊ, ಕೂಟವೆಂತೊ ?
ನಿಮ್ಮ ಭಕ್ತಿ ಬಯಲನಪ್ಪುವಂತೆ,
ಸಮುದ್ರವನೀಸಾಡುವಂತೆ ಪೂರೈಸದು.
ಭಕ್ತ್ಯಂಗನೆಯ ರತಿಸುಖವಿಲ್ಲ,
ಮೇಲೆ ಫಲಭೋಗವೆಂತೂ ಇಲ್ಲ.
ಅಂತಃಕರಣವೇಕೀಭವಿಸಿ,
ಸಮರಸದಲ್ಲಿ ನಿಂದ ಸ್ನೇಹದ ಮಾಟವೆ ಶಿವನ ಕೂಟ.
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರನಲ್ಲಿ ಇದೆ ಭಕ್ತಿರತಿ.

ಅಸೀಮೆಯನ್ನು ಸೀಮ ಹಿಡಿಯುವುದು, ಅನಂತವನ್ನು ಸಾಂತ ಹಿಡಿಯುವುದು, ಹಿಡಿದ ಭ್ರಮೆ ತರಿಸಬಹುದೇ ಹೊರತು, ಹಿಡಿತಕ್ಕೆ ಸಿಗದು. ಬ್ರಹ್ಮಾಂಡವನ್ನೆಲ್ಲಾ ಆವರಿಸಿರುವ ಮಹತೋ ಮಹೀಯವಾದ ಪರಮಾತ್ಮನನ್ನು ಜೀವಾತ್ಮ ಅನುಭವಿಸುವುದೆಂದರೆ, ಅದು ತನ್ನ ಸಾಮರ್ಥ್ಯ ಮೀರಿದ್ದು ಎಂದು ಅನ್ನಿಸುವಂಥ ಅನುಭವ ಈ ವಚನದ ವಸ್ತು. ಅನಂತವನ್ನು, ಅಸೀಮವನ್ನು ಸಾಂತವಾದ ಜೀವದ ಮನ ಮುಟ್ಟಲಾರದು. ಬುದ್ಧಿ ಅದರೊಂದಿಗೆ ಒಂದಾಗದು. ಚಿತ್ತ ಹಿಡಿಯಲಾಗದು. ಮನುಷ್ಯನ ಮಿತಕ್ಕೊಳಪಟ್ಟ ಅಹಂಕಾರ ಅನುಭವಿಸದು. ಇನ್ನೊಂದು ರೀತಿಯಲ್ಲಿ

ಪರಮಾತ್ಮನ ಬಳಿಸಾರಿದ ಜೀವಾತ್ಮಕ್ಕೆ ತನ್ನದೆಂಬ ಭಾವವೇ ಉಳಿಯದ ಕಾರಣ ಅಹಂಕಾರವಿಲ್ಲ. ಇನ್ನು ಅನುಭವಿಸುವುದೆಲ್ಲಿ ಬಂತು. ಭಗವಂತನ ಭಕ್ತಿ ಸಾಧನೆಯೆಂದರೆ ಬಯಲನಪ್ಪಿದ್ದಂತೆ. ಬಸವಣ್ಣನವರ ವಚನ ಬಳಸಿ ಹೇಳುವುದಾದರೆ ಆ ಅಪ್ಪುಗೆಯಲ್ಲಿ ಸುಖವಿಲ್ಲ. ಸಮುದ್ರದಲ್ಲಿ ಈಸುವುದೂ ಅಷ್ಟೆ ಪಾರಾವಾರದ ಅಪಾರ ಜಲರಾಶಿ ಪೂರೈಸದ ಜಲರಾಶಿ. ಶಿವನ ಕೂಟವೆಂದರೆ ಅದನ್ನು ಲೌಕಿಕ ಸುಖದ ಪರಿಜ್ಞಾನದಿಂದ ಪರಿಭಾವಿಸಲೇ ಸಾಧ್ಯವಿಲ್ಲ. ಅದು ಸಮರಸದಲ್ಲಿ ನಿಂದ ಸ್ನೇಹದ ಮಾಟ ಎನ್ನುತ್ತಾನೆ.

೧೧

ಶಿವಭಕ್ತರ ಮಠವಲ್ಲದೆ ಒಲ್ಲೆನೆಂದು
ಅರಸಿಕೊಂಡು ಹೋದಲ್ಲಿ,
ಆ ಭಕ್ತರು ಕಾಣುತ್ತ ಆದರಣೆಯಿಂದ ಸಾಷ್ಟಾಂಗವೆರಗಿ
ಶರಣೆಂದು ಪಾದಾರ್ಚನೆಯಂ ಮಾಡಿ, ವಿಭೂತಿಯಂ ಕೊಟ್ಟು,
"ನಿಮ್ಮ ಲಿಂಗದ ಆಳಿವನು ದೇವಾ" ಎಂದು ಬಿನ್ನೈಸಿದಲ್ಲಿ,
ಭಕ್ತರ ನಡೆ ಭಕ್ತರ ನುಡಿಯ ವಿಚಾರಿಸಿದಡೆ ಪ್ರಥಮಪಾತಕ,
ಭಾಂಡ ಭಾಜನದ ಶುದ್ಧಿಯನರಸಿದಡೆ ಎರಡನೆಯ ಪಾತಕ,
ಜಲಶುದ್ಧಿಯನರಸಿದಡೆ ಮೂರನೆಯ ಪಾತಕ,
ವಾಕ್‌ಶುದ್ಧಿಯನರಸಿದಡೆ ನಾಲ್ಕನೆಯ ಪಾತಕ,
ಆ ಭಕ್ತರ ಹಸ್ತ ಮುಟ್ಟಲಾಗದೆಂದಡೆ
ಐದನೆಯ ಪಾತಕ.
ಇಂತೀ ಪಂಚಮಹಾಪಾತಕಕ್ಕೆ ಗುರಿಯಾದವರು
ನಿಮ್ಮನೆತ್ತ ಬಲ್ಲರಯ್ಯಾ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ?

ಭಕ್ತರೆಲ್ಲ ಒಂದೇ ಜಾತಿ. ಆ ಭಕ್ತರಲ್ಲಿ ನಮ್ಮ ಲೌಕಿಕದ ಹೊಲೆ ಹದಿನೆಂಟು ಜಾತಿಗಳನ್ನು ಹುಡುಕುವುದಲ್ಲ. 'ಶಿವನೊಲಿದ ಮೇಲೆ ಏತರ ಕುಲವಯ್ಯಾ' ಎಂಬ ಭಾವ ದೃಢವಾಗಬೇಕು. ಆದರೆ ಭಕ್ತನಾದ ಮೇಲೂ ಬಸವಣ್ಣನವರ ಕಾಲದಲ್ಲೂ ಪೂರ್ವದ ಜಾತಿಗಳ ಎಣಿಕೆಯಿಂದ ವ್ಯಕ್ತಿಗಳನ್ನು ಮೇಲು – ಕೀಳು ರೀತಿಯಲ್ಲಿ ನಡೆಸಿಕೊಳ್ಳುತ್ತಿದ್ದುದ್ದರ ಸುಳಿವು ಈ ವಚನದಲ್ಲಿದೆ. ಭಕ್ತನು ತಾನು ಇನ್ನೊಬ್ಬ ಭಕ್ತನನ್ನು ಇದಿರುಗೊಂಡಾಗ, ಅತನು ತಾನು "ನಿಮ್ಮ ಲಿಂಗದ ಆಳಿವನು ದೇವಾ" ಎಂದು ಬಿನ್ನೈಸಿದರೆ, ಅವನನ್ನು ಸಾಕ್ಷಾತ್ ಪರಶಿವನೇ ಎಂದು ಭಾವಿಸಿ, ಪ್ರೀತಿ ಗೌರವ ತೋರಬೇಕು. ಹಾಗೆ ಮಾಡದೆ ಅವರ ನಡೆ, ನುಡಿ, ವಿಚಾರಿಸುವುದು ಅವರ ಪಾತ್ರೆ ಪಡಗ ಮುಟ್ಟಿಸಿಕೊಳ್ಳದಿರುವುದು, ಅವರು ಮುಟ್ಟಿದ ನೀರು, ಮೈಲಿಗೆಯೆಂದು, ಅವರ ಮಾತಿನಿಂದ ಕೆಳಜಾತಿಯವನು ಎಂದು ತಿಳಿದೋ, ಅಸ್ಪೃಶ್ಯತೆಯನ್ನಾಚರಿಸುವುದು ಇವು

ಪಂಚಮಹಾಪಾತಕಗಳು. ಬಸವಣ್ಣನವರ ಮಾತನ್ನೇ ಬಳಸಿ ಹೇಳುವುದಾದರೆ "ಲಾಂಛನಕ್ಕೆ ಶರಣೆಂಬೆ, ಅವರಂತರಂಗವ ನೀನೇ ಬಲ್ಲೆ. ರತ್ನ ಮೌಕ್ತಿಕದಚ್ಚು ನಮ್ಮ ಕೂಡಲಸಂಗನ ಶರಣರು" ಎಂಬಂತೆ ಕೇವಲ ಭಕ್ತ ಜಾತಿಗೆ ಸೇರಿದವನೆಂದು ಮಾತ್ರ ತಿಳಿಯಬೇಕೇ ಹೊರತು, ಭವಿಯಾದಂದಿನ ಜಾತಿಗಳನ್ನರಸುವುದಲ್ಲ. ಭಕ್ತನಿಗೆ ಅದು ಸಲ್ಲದ ನಡೆ.

೧೨

ಮಹಾರಾಜನನೆಲ್ಲರೂ ಬಲ್ಲರು
ಆ ರಾಜನು ಆರನೂ ಅರಿಯನು.
ಅರಿಯನಾಗಿ. ಪದವಿಲ್ಲ ಫಲವಿಲ್ಲ ಭೋಗವಿಲ್ಲ ಪರಿಣಾಮವಿಲ್ಲ.
ಮಹಾರಾಜಾಧಿರಾಜ ಶಿವನನೆಲ್ಲರೂ ಬಲ್ಲರು.
ಆ ಶಿವನು ಅರಿಯನು,
ಅರಿಯನಾಗಿ ಪದವಿಲ್ಲ ಭೋಗವಿಲ್ಲ ಪರಿಣಾಮವಿಲ್ಲ.
ಇದು ಕಾರಣ,
ಶಿವನನರಿದ ಸದ್ಭಕ್ತರ ಸಂಗದಿಂದ
ಆ ಮಹಾಶಿವನು ತನ್ನನು ಅರಿವಂತೆ ಮಾಡಿಕೊಂಡನಾಗಿ
ಪದ ಫಲ ಭೋಗ ಪರಿಣಾಮ ಮತ್ತೆ ಉಂಟೇ?
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ.

ಅತ್ಯಂತ ವ್ಯಾವಹಾರಿಕವಾದ ಉದಾಹರಣೆಯೊಂದನ್ನು ನೀಡಿ, ಸದ್ಭಕ್ತರ ಸಹವಾಸದ ಮೂಲಕವಾಗಿಯೇ ಶಿವನನ್ನು ಸಾಧಿಸಿಕೊಳ್ಳಬೇಕೆಂದು ಯುಕ್ತಿಯುಕ್ತವಾಗಿ ಇದರಲ್ಲಿ ಹೇಳಿದ್ದಾನೆ. ಮಹಾರಾಜನನ್ನು ತಿಳಿದಿಲ್ಲದಿರುವ ಪ್ರಜೆ ಇಲ್ಲ. ಕಾರಣ ಅವನ ಸ್ಥಾನ ಅಂಥದು. ಆದರೆ ಹಾಗೆ ಅರಿತದ್ದರಿಂದ ಏನು ಪ್ರಯೋಜನವಾಯಿತು. ನೀನು ಯಾರು ಎಂಬುದು ಮಹಾರಾಜನಿಗೆ ತಿಳಿದಿದ್ದರೆ, ನಿನ್ನ ಸಮಸ್ಯೆ ತೊಂದರೆ ಹೇಳಿಕೊಂಡು ಪರಿಹಾರದ ಪ್ರಯೋಜನ ಪಡೆಯಬಹುದಿತ್ತು. ಆದ್ದರಿಂದ ಮಹಾರಾಜನಿಗೆ ನಾವು ಯಾರೆಂದು ನಮ್ಮನ್ನು ನಾವು ಗೊತ್ತು ಮಾಡಿಸಿಕೊಡಬೇಕು. ಅದಕ್ಕಿರುವ ಮಾರ್ಗವೆಂದರೆ ಶಿವನನ್ನು ಬಲ್ಲ ಸದ್ಭಕ್ತರ ಸ್ನೇಹ ವಿಶ್ವಾಸ ಗಳಿಸಿಕೊಂಡು ಅವರ ಮೂಲಕ ಶಿವನಿಗೆ 'ತಾನು ಯಾರೆಂದು' ಗೊತ್ತು ಮಾಡಿಕೊಡಬೇಕೆನ್ನುತ್ತಾನೆ.

೧೩

ಶ್ರೀಗಂಧದ ತರು ಕಾಮರಸಾದುದುಂಟೆ?
ಹೇಮದ ಪರ್ವತ ಹುಲುಮೊರಡಿಯಾದುದುಂಟೆ?
ಮಹಾಸಿಂಹ ಹುಲುಮೃಗವಾದುದುಂಟೆ?
ಜ್ಞಾನಿ ಅಜ್ಞಾನಿಯಾದುದುಂಟೆ?
ವಿರಕ್ತ ಸಂಸಾರಿಯಾದುದುಂಟೆ?

ಲಿಂಗವೆ ತಾನೆಂದರಿದ ಶರಣಂಗೆ
ಬೇರೆ ಅಂಗೇಂದ್ರಿಯಂಗಳ ವಿಕಾರವೆಂಬುದುಂಟೆ?
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ!

ಭಕ್ತನು ಭವಿಯಾಗುವುದು, ಜ್ಞಾನಿಯಾದವನು ಅಜ್ಞಾನಿಯಾಗುವುದು, ವಿರಕ್ತನು ಸಂಸಾರಿಯಾಗುವುದು ಊಹಿಸಲೂ ಅಸಾಧ್ಯವಾದಂಥ ಎಲ್ಲೂ ನಡೆಯದ ಸಂಗತಿ. ಅದು ಅಪರಿವರ್ತನಶೀಲ. ಅಂಥ ಉನ್ನತ ಸಿದ್ಧಿ ತಲುಪಿದ ಚೇತನ ಮೊದಲಿನ ಹಂತಕ್ಕಿಳಿಯುವುದೆಂಬುದು ಅತ್ಯಂತ ಅಸಾಧ್ಯವಾದ್ದು ಊಹೆಗೂ ಮೀರಿದ್ದು ಎಂಬುದನ್ನು ಈ ವಚನದಲ್ಲಿ ಹೇಳುತ್ತಾನೆ. ಅಲ್ಲಮ ಪ್ರಭುವಿನ ಪ್ರಸಿದ್ಧವಾದ–ಬೆಟ್ಟಕ್ಕೆ ಚಳಿಯಾದಡೆ–ವಚನವನ್ನು ನೆನಪಿಸುತ್ತದೆ.

ಶ್ರೀಗಂಧದ ಮರ ಒಂದು ಯಃಕಶ್ಚಿತ್ ಮರವಲ್ಲ. ಬಂಗಾರದ ಪರ್ವತ ಸಾಧಾರಣ ಗುಡ್ಡವಾಗಲಾರದು. ಮಹಾಸಿಂಹ ಮಹಾಸಿಂಹವೇ. ಅದು ಹುಲು ಮೃಗವಾಗಲಾರದು. ಹಾಗೆಯೇ ಜ್ಞಾನಿ, ವಿರಕ್ತ, ಲಿಂಗಾನುಭಾವಿಯಾದ ಶರಣನು ಲಿಂಗೇಂದ್ರಿಯಗಳ ವಿಕಾರಕ್ಕೊಳಗಾಗುತ್ತಾನೆಂಬುದು ಊಹಾತೀತ.

೧೪

ನಿತ್ಯನಿರಂಜನಪರಂಜ್ಯೋತಿಲಿಂಗವು
ಪ್ರತ್ಯಕ್ಷವಾಗಿ ಎನ್ನ ಕರಸ್ಥಲಕ್ಕೆ ಬಂದಿರಲು
ಮತ್ತೊಂದ ನೆನೆದು ಬದುಕಿಹೆನೆಂಬುದು ಅಜ್ಞಾನ ನೋಡಾ.
ಸತ್ಯವು ಸರ್ವಾಂಗಲಿಂಗವೆಂಬುದನರಿಯದೆ
ಮತ್ತೆ ಕಾಯವೆರಸಿ ಕೈಲಾಸಕ್ಕೆ ಹೋದಹೆನೆಂಬ ಬಯಕೆ
ಕ್ರಮವಲ್ಲವಯ್ಯಾ.
ಪಂಚಾಮೃತ ಮುಂದಿರಲು ಹಸಿದೆನೆಂದು
ಲೋಗರ ಮನೆಯಲ್ಲಿ ಅನ್ನವ ಬೇಡಿ ಬಯಸುವರೆ?
ಕಣ್ಣಮುಂದೆ ನಿಧಾನವಿರಲು ಬಳಸಲರಿಯದೆ ಬಡತನದಲ್ಲಿಹರೆ?
ಲಿಂಗವಿಲ್ಲದವರು ಮೊದಲಾಗಿ ಲಿಂಗವ ನೆನೆದು ಬದುಕಿಹೆನೆಂಬರು.
ಕಂಡು ಕಂಡು ನಂಬದಿಹುದುಚಿತವೆ?
ಮುಂಗೈಯ ಕಂಕಣಕ್ಕೆ ಕನ್ನಡಿ ಬೇಡ.
ಲಿಂಗವು ಅಂಗದೊಳಗಿರಲು
ಲಿಂಗದ ಪರಿಯ ಅನ್ಯರ ಕೈಯಿಂದ ಕೇಳಬೇಡ.
ಇದನರಿದು ಬೇರೆ ಮತ್ತೆ ಅರಸಲು ಬೇಡ
ಕಾಣೆಸೆಂದು ಮನದಲ್ಲಿ ಮರುಗಬೇಡ
ಮುಂದೆ ಜನ್ಮವುಂಟೆಂದು ಮನಸ್ಸಿನಲ್ಲಿ ನೋಯಬೇಡ.

ಇದು ಕಾರಣ, ತನ್ನ ಕರಸ್ಥಲದಲ್ಲಿದ್ದ ವಸ್ತುವ
ತಾನೆಂದರಿದಡೆ ತಾನೆ ಶಿವನು.
ಇದು ಸತ್ಯ, ಶಿವ ಬಲ್ಲ, ಶಿವನಾಗೆ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ.

ಗುರು ಕರುಣಿಸಿದ ಇಷ್ಟಲಿಂಗವೆಂದರೆ ಸಾಕ್ಷಾತ್ ಪರಂಜ್ಯೋತಿ ಸ್ವರೂಪನಾದ ಪರಶಿವ. ಅಂಗೈ ಮೇಲೆ ಅದು ಇದ್ದಿತೆಂದರೆ ತವನಿಧಿಯೇ ಕೈಯಲ್ಲಿದ್ದಂತೆ. ಅದಕ್ಕಿಂತ ಮಿಗಿಲಾದ್ದು ಮತ್ತೊಂದಿಲ್ಲ. ಅಂಥದೊಂದು ನಿತ್ಯ ನಿರಂಜನಜ್ಯೋತಿ ಕರತಲದಲ್ಲಿರುವಾಗ ಅದನ್ನು ಸ್ಮರಿಸದೆ ಬೇರಾವುದೋ ದೈವವನ್ನು ಸ್ಮರಿಸುತ್ತ ಅದು ತನ್ನ ಬದುಕೆಂದು ಹೇಳುವುದಕ್ಕಿಂತ ಅಜ್ಞಾನ ಮತ್ತೊಂದಿಲ್ಲ. ಕೈಲಾಸಾಧಿಪತಿಯೇ ಕೈಯಲ್ಲಿರುವಾಗ ಸಶರೀರನಾಗಿ ಕೈಲಾಸಕ್ಕೆ ಹೋಗುವ ಬಯಕೆ, ಪಂಚಾಮೃತ ಕೈಯಲ್ಲಿರುವಾಗ ಅದನ್ನು ಬಿಟ್ಟು ಹಸಿವು ಹಿಂಗಿಸಲು ಅವರಿವರ ಮನೆಯಲ್ಲಿ ಭಿಕ್ಷೆ ಬೇಡುವ ಎಗ್ಗತನಕ್ಕೆ ಸಮ. ಅಂಗೈಯಲ್ಲಿರುವ ಮಹಾನಿಧಿಯ ಸದುಪಯೋಗ ಪಡೆಯಲಾಗದೆ ಅದರ ಮಹಾತ್ಮೆಯ ಬಗ್ಗೆ ಅವರಿವರನ್ನು ವಿಚಾರಿಸುವ ಪರಿ, ಕಣ್ಣೆದುರು ಕಾಣುತ್ತಿರುವ ಮುಂಗೈಯ ಕಂಕಣವನ್ನು ನೇರವಾಗಿ ನೋಡಿ ತಿಳಿಯದೆ ಅದಕ್ಕಾಗಿ ಕನ್ನಡಿಯನ್ನು ತಂದು ಅದರಲ್ಲಿ ಅದರ ಪ್ರತಿಬಿಂಬವನ್ನು ಕಾಣಹೋಗುವ ಮುರ್ಖನಂತಾಗುತ್ತದೆ. ಇಷ್ಟಲಿಂಗವುಳ್ಳವನಿಗೆ ಮರುಜನ್ಮವಿಲ್ಲದಿರುವಾಗ, ಮತ್ತೆ ಜನ್ಮವುಂಟೆಂದು ಕೊರಗುವುದರಲ್ಲಿ ಅರ್ಥವಿಲ್ಲ. ಕಾರಣ ಶಿವನೇ ತಾನು, ತಾನೇ ಶಿವನು ಎನ್ನುವ ಭಾವ ಹೃದಯಗಮ್ಯವಾದರೆ, ಮರುಜನ್ಮದ ಪ್ರಶ್ನೆಯೇ ಇಲ್ಲ. ಲಿಂಗವಿಲ್ಲದವರು ಲಿಂಗವ ನೆನೆದು ಬದುಕೇನೆನ್ನುವಾಗ ಕೈ ಮೇಲಿರುವ ಲಿಂಗವನ್ನು ಕಂಡೂ ನಂಬದಿರುವುದು ಪರಮ ಮೂರ್ಖತನ. ಸರಳವೂ, ಚಿರಪರಿಚಿತವೂ ಆದ ಉಪಮೆಗಳ ಮೂಲಕ ಇದನ್ನು ಮನವರಿಕೆ ಮಾಡಿಕೊಡುವ ವಚನಕಾರನ ಪ್ರಯತ್ನ ಸಾರ್ಥಕವಾಗಿದೆ.

೧೫

ಮೃಗಾದಿಗಳಂತೆ ಆಚರಿಸಿದಡೇನು? ದಾನಾದಿಗಳ ಕೊಟ್ಟಡೇನು?
ಕ್ಷತ್ರಿಯರಂತೆ.
ಅದೆಂತೆಂದಡೆ, ಶಿವನ ವಾಕ್ಯ:
ಪಯೋಹಾರೀ ತು ಮಾರ್ಜಾಲೋ ನಗ್ನೋ ಮುಗ್ಧಃ ಪಿಶಾಚವತ್ ।
ನಿತ್ಯಸ್ನಾನಶ್ಚ ಕಾಕಶ್ಚ ವಾಲ್ಮೀಕಾಃ ಸರ್ಪಜಾತಯಃ ॥
ತೃಣಂ ಭಕ್ಷಂತಿ ಪಶವಃ ವನವಾಸಿಮೃಗಾಸ್ತಥಾ ।
ಮಾಸ್ತು ಚೈತಾನಿ ಕಾರ್ಯಾಣಿ ನ ಕರೋತಿ ಹಿ ಪಾರ್ವತಿ ॥
ಎಂದುದಾಗಿ,
ಆವ ಸಿದ್ಧಿಗಳಿಂದಲೂ ಫಲವಿಲ್ಲ,

ಏನನೋದಿ ಏನ ಕೇಳಿ ಏನ ಹೇಳಿಯೂ ಫಲವಿಲ್ಲ,
ಇವು ಭಕ್ತಿಯೊಳಗಲ್ಲ, ಮುಕ್ತಿಗೆ ಸಲ್ಲವು.
ಇದನರಿದು ಆವನಾನೊಬ್ಬನು ಲಿಂಗವರಿತು ಲಿಂಗಾರ್ಚನೆಯಂ ಮಾಡಿ,
ಗುರುಲಿಂಗಜಂಗಮಕ್ಕೆ ತನುಮನಧನವ ಸವೆಸಿದಡೆ
ಅದೇ ಚಲ್ವ ಭಕ್ತಿ, ಅದೇ ಚಲ್ವ ಮುಕ್ತಿ, ಅದೇ ಸರ್ವಸಿದ್ಧಿ.
ಅದೇ ಸರ್ವಕಾರಣವಯ್ಯಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ.

ಗುರುಲಿಂಗ ಜಂಗಮಕ್ಕೆ ತನುಮನ ಧನಗಳಿಂದ ತ್ರಿಕರಣಪೂರ್ವಕವಾಗಿ ಸಲ್ಲಿಸುವ ಸೇವೆಯೇ ತ್ರಿವಿಧ ದಾಸೋಹ. ತ್ರಿವಿಧ ದಾಸೋಹದಿಂದ ಆಗದುದು ಯಾವುದೂ ಇಲ್ಲ. ಸರ್ವಸಿದ್ಧಿಗಳನ್ನೂ ತಂದುಕೊಡುವಂಥದು. ಅದನ್ನು ಬಿಟ್ಟು ಕೆಲವರು ಕ್ಷತ್ರಿಯರು ಯಾವ ಯಾವುದೋ ನೇಮ, ವ್ರತಾಚರಣೆಗಳನ್ನು ಮಾಡುತ್ತಿರುತ್ತಾರೆ. ಪುಣ್ಯಲೋಕಗಳನ್ನು ಗಳಿಸಲು ನಾನಾ ಬಗೆಯ ದಾನಾದಿಗಳನ್ನು ಮಾಡುತ್ತಿರುತ್ತಾರೆ. ಅವುಗಳನ್ನು ಇಲ್ಲಿ ಲೇವಡಿ ಮಾಡಲಾಗಿದೆ. ಅವರು ಮಾಡುವ ವ್ರತಾಚರಣೆಗಳೆನ್ನುವುವು, ಮೃಗಾದಿಗಳ ಬದುಕಿನ ಸಹಜ ಚರ್ಯೆಯೇ ಆಗಿರುತ್ತದೆ. ಉದಾಹರಣೆಗೆ ಕೆಲವರು ಹಾಲನ್ನು ಮಾತ್ರ ಸೇವಿಸುವ, ನಗ್ನರಾಗಿರುವ, ನಿತ್ಯವೂ ಸ್ನಾನಮಾಡುವ, ಹುತ್ತ ಬೆಳೆವ ತನಕ ಮೂಗುಮುಚ್ಚಿ ಕೂತಿರುತ್ತೇವೆನ್ನುವ, ಹುಲ್ಲು ತಿನ್ನುವ, ಅರಣ್ಯಗಳಲ್ಲಿ ವಾಸಮಾಡುವಂಥ ನೇಮ, ವ್ರತಾಚರಣೆಗಳನ್ನು ಮಾಡುತ್ತಿರುತ್ತಾರೆ. ಅವರ ಈ ವ್ರತಾಚರಣೆಗಳಿಗೂ ಬೆಕ್ಕು, ಪಶು, ಪಿಶಾಚಿ, ಕಾಗೆ, ಸರ್ಪಗಳ ಮೃಗಗಳ ಚರ್ಯೆಗಳಿಗೂ ಏನೂ ವ್ಯತ್ಯಾಸವಿಲ್ಲ. ಕಾರಣ, ಬೆಕ್ಕೂ ಹಾಲು ಕುಡಿಯುತ್ತದೆ. ಕಾಗೆಯೂ ನಿತ್ಯ ಸ್ನಾನ ಮಾಡುತ್ತದೆ. ಸರ್ಪಗಳೂ ಹುತ್ತದಲ್ಲೇ ಇರುತ್ತವೆ. ಪಶುಗಳೂ ಹುಲ್ಲನ್ನು ತಿನ್ನುತ್ತವೆ. ಪಿಶಾಚಿಗಳೂ ಮುಗ್ಧರಂತೆ ನಗ್ನವಾಗಿರುತ್ತವೆ. ಮೃಗಗಳೂ ಅರಣ್ಯವಾಸಿಗಳೇ ಆಗಿರುತ್ತವೆ. ಅವುಗಳ ಚೆರ್ಯೆ ಹೇಗೆ ವ್ರತಸಿದ್ಧಿಯಲ್ಲವೋ ಅವು ಹೇಗೆ ಫಲದಾಯಕವಲ್ಲವೋ ಹಾಗೆಯೇ ಇಂಥ ನೇಮ, ವ್ರತಾಚರಣೆಗಳೂ ಫಲದಾಯಕವಲ್ಲ. ಇವು ಭಕ್ತರ ರೀತಿಯಲ್ಲ. ಇವುಗಳಿಂದ ಮುಕ್ತಿಯೂ ಲಭಿಸದು. ಅದರ ಬದಲು ಲಿಂಗಾರ್ಚನೆ ಮಾಡಿ, ತ್ರಿಕರಣಪೂರ್ವಕವಾಗಿ ತನುಮನಧನಗಳನ್ನು ಗುರುಲಿಂಗ ಜಂಗಮಕ್ಕೆ ಸವೆಸಿದರೆ ಅದರಿಂದಲೇ ಸರ್ವಸಿದ್ಧಿಯಾಗುತ್ತದೆನ್ನುತ್ತಾನೆ.

ಅನುಬಂಧ – ೨

ಉರಿಲಿಂಗಪೆದ್ದಿಯ ವಚನಗಳಲ್ಲಿ ಬರುವ ಮುಖ್ಯವಾದ ಸಂಸ್ಕೃತ ಶ್ಲೋಕಗಳ ಕನ್ನಡರೂಪ

(ವಚನಗಳ ಸಂಖ್ಯೆ : ಕನ್ನಡ ಪುಸ್ತಕ ಪ್ರಾಧಿಕಾರವು ೧೯೯೩ರಲ್ಲಿ ಪ್ರಕಟಿಸಿರುವ ಸಂಕೀರ್ಣ ವಚನಸಂಪುಟದಲ್ಲಿರುವ ವಚನಸಂಖ್ಯೆಗಳ ಇಂಗ್ಲಿಷ್‌ರೂಪ. ಕನ್ನಡ ಅಂಕಿಗಳು ಆಯಾ ವಚನದಲ್ಲಿ ಬರುವ ಶ್ಲೋಕಗಳಿಗೆ ನೀಡಿರುವ ಕ್ರಮಸಂಖ್ಯೆ)

ವಚನ ಸಂಖ್ಯೆ 3

ಕರ್ಮಣಾ ಮನಸಾವಾಚಾ ಗುರೂಣಾಂ ಭಕ್ತಿವತ್ಸಲ ।
ಶರೀರಮರ್ಥಂ ಪ್ರಾಣಂ ಚ ಸದ್ಗುರುಭ್ಯೋ ನಿವೇದಯೇತ್ ॥

ಭಕ್ತಿವತ್ಸಲರಾದ ಸದ್ಗುರುಗಳಿಗೆ ಕರ್ಮದಿಂದ ಮನಸ್ಸಿನಿಂದ ಮತ್ತು ವಾಕ್ಕಿನಿಂದ ಶರೀರವನ್ನು, ಸಂಪತ್ತನ್ನು ಮತ್ತು ಪ್ರಾಣವನ್ನು ಸಮರ್ಪಿಸುವುದು.

ವಚನ ಸಂಖ್ಯೆ 13

ಓಂಕಾರಪ್ರಭವಾ ವೇದಾ ಓಂಕಾರಪ್ರಭವಾ ಸ್ವರಾಃ ।
ಓಂಕಾರಪ್ರಭವಂ ಸರ್ವಂ ತ್ರೈಲೋಕ್ಯ ಸಚರಾಚರಂ ॥

ಸಕಲ ವೇದಗಳು, ಸ್ವರಗಳು ಮೂರುಲೋಕಗಳು ಸಕಲ ಜಡಚೇತನಗಳು, ಎಲ್ಲವೂ ಓಂಕಾರದ ಪ್ರಭೆಯಿಂದ ಕೂಡಿವೆ.

ವಚನ ಸಂಖ್ಯೆ 15

೨. **ಷಡ್ದರ್ಶನಾದಿ ದೇವೋ ಹಿ ಮಹಾದೇವೋ ನ ಸಂಶಯಃ ।**
ಮಂತ್ರಪೂಜಾದಿ ಭಿನ್ನಾನಾಂ ಮೂಲಂ ಪರಶಿವಸ್ಥಥಾ ॥

ಆರು ವಿಧವಾದ ದರ್ಶನಗಳಿಗೆ ಆದಿದೇವನು ಮಹಾದೇವನೇ. ಇದರಲ್ಲಿ ಸಂಶಯವಿಲ್ಲ. ಭಿನ್ನವಾದ ಮಂತ್ರ, ಪೂಜಾದಿಗಳಿಗೆ ಪರಶಿವನೇ ಮೂಲ.

೩. **ಯಂ ಕಾಮಯತೇ ಕಾಮಂ ತಂ ತಂ ಲಿಂಗಾರ್ಚನಾಲ್ಲಭೇತ್ ।**
ನ ಲಿಂಗೇ (ನ) ವಿನಾ ಸಿದ್ಧಿರ್ದುರ್ಲಭಂ ಪರಮಂ ಪದಂ ॥

ಯಾವ ಯಾವ ಬಯಕೆಗಳನ್ನು ಇಚ್ಛಿಸುತ್ತಾರೋ ಅವುಗಳು ಲಿಂಗಾರ್ಚನೆಯಿಂದ ಪ್ರಾಪ್ತವಾಗುತ್ತವೆ. ಲಿಂಗದ ಹೊರತು ಪರಮಪದವಾದ ಸಿದ್ಧಿಯು ದುರ್ಲಭ.

೭ ಅಗ್ನಿಹೋತ್ರಶ್ಚವೇದಶ್ಚ ಯಜ್ಞಾಶ್ಚ ಬಹುದಕ್ಷಿಣಾಃ ।
ಶಿವಲಿಂಗಾರ್ಚನಸ್ಯೈತೇ ಕೋಟ್ಯಂಶೇನಾಪಿ ನೋ ಸಮಾಃ ॥

ಅಗ್ನಿಹೋತ್ರ, ವೇದಗಳು, ಯಜ್ಞಗಳು, ಬಹುವಿಧವಾದ ದಕ್ಷಿಣೆ ಇವಾವೂ ಎಷ್ಟು ಮಾತ್ರವೂ ಶಿವಲಿಂಗಾರ್ಚನೆಗೆ ಸಮಬಾರವು.

ವಚನ ಸಂಖ್ಯೆ 16

೧. ಅನಾದಿ ಶಾಶ್ವತಂ ನಿತ್ಯಂ ಚೈತನ್ಯಂ ಚಿತ್‌ಸ್ವರೂಪಕಂ ।
ಚಿದಂಗಂ ವೃಷಭಾಕಾರಂ ಚಿದ್ಭಸ್ಮ ಲಿಂಗಧಾರಣಂ ॥
ಪ್ರಥಮಂ ಗೂಢ ನಿರ್ನಾಮ ದ್ವಿತೀಯಂ ಚಿತ್ಸ್ವರೂಪಕಂ ।
ತೃತೀಯಂ ಚಿದ್ವಿಲಾಸಂ ಚ ಚತುರ್ಥಂ ಭಸ್ಮಧಾರಣಂ ॥
ರೋಮೇ ರೋಮೇ ಚ ಲಿಂಗಂ ತು ವಿಭೂತಿಧೂಳನಾದ್ಭವೇತ್ ॥

ಇದರಲ್ಲಿ ಶಿವನ ಸ್ವರೂಪದ ವರ್ಣನೆ ಇದೆ:

ಅನಾದಿಯಾದವನು, ಶಾಶ್ವತನಾದವನು, ನಿತ್ಯನು, ಚೈತನ್ಯ ಸ್ವರೂಪಿ ಚಿತ್ ಸ್ವರೂಪನು. ಚಿತ್ ಎಂಬ ಅಂಗವುಳ್ಳವನು. ವೃಷಭಾಕಾರನು, ಚಿದ್ಭಸ್ಮ ಧರಿಸಿದವನು. ಲಿಂಗದ ವಿಭೂತಿಯನ್ನು ಮೈತುಂಬ ಹಚ್ಚಿಕೊಳ್ಳುವುದರಿಂದಾಗುವ ಫಲಗಳನ್ನು ಇದರಲ್ಲಿ ಹೇಳಲಾಗಿದೆ. ಮೊದಲನೆಯದಾಗಿ ಗೂಢವಾದ ಅಥವಾ ರಹಸ್ಯವಾದ ಪಾಪಗಳು ಆಲೋಚನೆಗಳು ಇದ್ದರೆ ಅವು ನಿರ್ನಾಮವಾಗುತ್ತವೆ. ಎರಡನೆಯದು ಚಿತ್ ಅನ್ನು ಅದರ ಸುಸ್ಥಿತಿಯಲ್ಲಿಡುತ್ತದೆ. ಮೂರನೆಯದು ಚಿದ್ವಿಲಾಸ ಅಥವಾ ಮನಸ್ಸಿಗೆ ಸಂತಸ ಉಂಟಾಗುತ್ತೆ. ನಾಲ್ಕನೆಯದಾಗಿ ರೋಮರೋಮಗಳಲ್ಲಿ ಲಿಂಗ ನೆಲೆ ನಿಲ್ಲುತ್ತದೆ.

ವಚನ ಸಂಖ್ಯೆ 17

೪. ಲಲಾಟಲೋಚನಂ ಚಾಂದ್ರೀ ಕಲಾಪಂ ಚತುರ್ದಶಂ ।
ಅಂತರ್ವರ್ತ್ಯೇಹ ನಿರ್ದೇಹಂ ಗುರುರೂಪಂ ವ್ಯವಸ್ಥಿತಂ ॥

ಭಾವರಹಿತ ಲಿಂಗವು ಹಣೆಯಲ್ಲಿ ಕಣ್ಣು ಹೊಂದಿದ್ದು, ಹದಿನಾಲ್ಕು ಅಂಶಗಳ ಚಂದ್ರಕಲೆಯಿಂದ ಕೂಡಿದ್ದು, ದೇಹರಹಿತವಾಗಿ ಅಂತರಂಗದಲ್ಲಿ ಗುರುರೂಪದಲ್ಲಿರುವಂಥದ್ದಾಗಿದೆ.

೫. ಭುಜಪ್ರಾಂತದಿಗಂತಾನಾಂ ಭೂತಾನಾಂ ಪತಯೇ ನಮಃ ।
ನಾದಲಿಂಗಮಿತಿಜ್ಞೇಯಂ ಬಿಂದುಪೀಠಮುದಾಹೃತಂ ॥

ದಿಗಂತವನ್ನೇ ಭುಜಪ್ರಾಂತವಾಗುಳ್ಳ ಭೂತಗಳ ಒಡೆಯನಿಗೆ ನಮಸ್ಕಾರ. ನಾದ ಲಿಂಗವೆಂದು ತಿಳಿಯಲ್ಪಟ್ಟವನು, ಬಿಂದುಪೀಠನು. ನಾದಬಿಂದುವಿನಿಂದ ಕೂಡಿದವನು. ಲಿಂಗಾಕಾರದಿಂದ ಶೋಭಿತನಾದವನು.

೬. ಲಿಯತೇ ಗಮ್ಯತೇ ಯತ್ರ ಯೇನ ಸರ್ವಂ ಚರಾಚರಂ ।
ತದೇತಲ್ಲಿಂಗಮಿತ್ಯುಕ್ತಂ ಲಿಂಗತತ್ತ್ವಪರಾಯಣೈಃ ॥

ಈ ಸಕಲ ಜಡಚೇತನಗಳಿಂದ ಕೂಡಿದ ಜಗತ್ತು ಎಲ್ಲಿಗೆ ಹೋಗಿ ಸೇರುತ್ತದೋ, ಎಲ್ಲಿ ಎಲ್ಲವೂ ಕರಗುತ್ತದೋ ಅದನ್ನೇ ಲಿಂಗತತ್ತ್ವಪರಾಯಣರು ಲಿಂಗವೆಂದು ಹೇಳುತ್ತಾರೆ.

೭ ಲಕಾರಂ ಲಯಸಂಪ್ರೋಕ್ತಂ ಗಕಾರಂ ಸೃಷ್ಟಿಮೇವ ಚ ।
ಲಯಾನಾಂ ಗಮನಶ್ಚೈವ ಲಿಂಗಾಕಾರಮಿಹೋಚ್ಯತೇ ॥

ಲಕಾರವು ಲಯದಿಂದ ಕೂಡಿದ್ದು ಗಕಾರವು ಸೃಷ್ಟಿಯೇ ಆಗಿದೆ. ಲಯದ ಕಡೆಗೆ ಸಾಗುತ್ತಿರುವ ಕಾರಣ ಲಿಂಗಾಕಾರವೆಂದು ಹೇಳಲಾಗುತ್ತದೆ.

ವಚನ ಸಂಖ್ಯೆ 36

೧. ಪರಂಜ್ಯೋತಿಃ ಪರಂ ತತ್ತ್ವಂ ಪರಾತ್ಪರತರಂ ತಥಾ ।
ಪರವಸ್ತು ಪ್ರಸಾದಃ ಸ್ಯಾದಪ್ರಮಾಣಂ ಪ್ರಸಾದಕಃ ॥

ಪರಂಜ್ಯೋತಿಯೂ ಪರತತ್ವವೂ ಪರಾತತ್ವರಕ್ಕಿಂತ ಮಿಗಿಲೂ ಆದ, ಪರವಸ್ತು ಪ್ರಸಾದವೂ ಆದ ಲಿಂಗವೂ ಅಪ್ರಮಾಣವೇ ಆಗಿ (ನಮ್ಮ ಅಳತೆಗೆ ಸಿಗದೆ) ಉಳಿದಿದೆ.

೨. ಪೂಜಕಾ ಬಹವಸ್ಸಂತಿ ಭಕ್ತಾಶ್ಶತಸಹಸ್ರಶಃ ।
ಮಹಾಪ್ರಸಾದಪಾತ್ರಂ ತು ದ್ವಿತ್ರಾ ವಾ ನೈವಾ ಪಂಚಷಃ ॥
ಪ್ರಸಾದಂ ಗಿರಿಜಾದೇವಿ ಸಿದ್ಧಕಿನ್ನರಗುಹ್ಯಕಾಃ॥

ಪೂಜೆಮಾಡುವವರು ಬಹಳ ಜನ. ಭಕ್ತರು ಸಾವಿರಕ್ಕೆ ನೂರು ಜನರು. ಮಹಾಪ್ರಸಾದಕ್ಕೆ ಪಾತ್ರರಾದವರು ಇಬ್ಬರೋ ಐವರೋ ಸಿದ್ಧರು, ಕಿನ್ನರರು ಮತ್ತು ಗುಹ್ಯಕಾದಿಗಳು.

ವಚನ ಸಂಖ್ಯೆ 38

೩. ಈಶ್ವರಸ್ಯ ಸಮೋ ನಾಸ್ತಿ ಬ್ರಹ್ಮಾ ವಿಷ್ಣುಶ್ಚ ಕಿಂಕರಃ ।
ಶಿವವಾಕ್ಯಸಮೋ ನಾಸ್ತಿ ವೇದಶಾಸ್ತ್ರಾಗಮೇಷು ಚ ॥

ಕಿಂಕರರಾದ ಬ್ರಹ್ಮ, ವಿಷ್ಣುಗಳು ಈಶ್ವರನ ಸಮಾನರಲ್ಲ. ವೇದ, ಶಾಸ್ತ್ರ ಆಗಮಗಳಲ್ಲಿ ಶಿವವಾಕ್ಯಕ್ಕೆ ಸಮನಾದ್ದು ಇಲ್ಲ.

ವಚನ ಸಂಖ್ಯೆ 40

೧. ಜಂಗಮಸ್ಯ ಗೃಹಂ ನಾಸ್ತಿ ಸ ಗಚ್ಛೇತ್ ಭಕ್ತಮಂದಿರಂ ।
ಯದಿ ಗಚ್ಛೇತ್ ಭವೇರ್ಗೇಹಂ ತದ್ಧಿಗೋಮಾಂಸಭಕ್ಷಣಂ ॥

ಜಂಗಮನಿಗೆ ಮನೆಯಿರುವುದಿಲ್ಲ. ಅವನು ಭಕ್ತನ ಮನೆಗೆ ಹೋಗುತ್ತಾನೆ. ಒಂದು ವೇಳೆ ಭವಿಯ ಮನೆಗೆ ಹೋದದ್ದೇ ಆದರೆ, ಅದೇ ಗೋಮಾಂಸ ಭಕ್ಷಣೆಗೆ ಸಮಾನ.

೪. ನಾದನಿಶ್ಚಲತೋ ಲಿಂಗಂ ಬಿಂದುನಿಶ್ಚಲತೋ ಚರಃ ।
ನಾದಬಿಂದು ಸಮಾಯುಕ್ತ ಶ್ರೇಷ್ಠಂ ತಲ್ಲಿಂಗಜಂಗಮಂ ॥

ನಾದವು ನಿಷ್ಫಲವಾದದ್ದೇ ಲಿಂಗ. ಬಿಂದು ನಿಷ್ಫಲವಾದದ್ದೇ ಜಂಗಮ. ನಾದ ಬಿಂದುಗಳಿಂದ ಕೂಡಿಕೊಂಡಿರುವ ಲಿಂಗ ಜಂಗಮನು ಶ್ರೇಷ್ಠ.

೫. ಮನಶ್ಚಂದಿರ ಇತ್ಯುಕ್ತಂ ಚಕ್ಷುರಾದಿತ್ಯ ಉಚ್ಯತೇ ।
ಚಂದಿರಾದಿತ್ಯಸಂಯುಕ್ತಂ ಉತ್ತಮಂ ಜಂಗಮಸ್ಥಲಂ ॥

ಅಂಥ ಜಂಗಮನ ಮನಸ್ಸು ಚಂದಿರನೆಂದು, ಕಣ್ಣು ಸೂರ್ಯನೆಂದು ಹೇಳುತ್ತಾರೆ. ಚಂದ್ರ ಮತ್ತು ಆದಿತ್ಯರಿಂದ ಕೂಡಿದವನೇ ಉತ್ತಮ ಜಂಗಮಸ್ಥಲಂ.

೬. ಮನಸ್ಥಂ ಮನೋಮಧ್ಯಸ್ಥಂ ಮನೋಮಧ್ಯಸ್ಥ ವರ್ಜಿತಾಃ ।
ಮನಸಾ ಮನ ಆಲೋಕ್ಯ ಸ್ವಯಂ ಸಿದ್ಧಾ ಸುಯೋಗಿನಃ ॥

ಜಂಗಮರು ಮನಸ್ಸಿನಲ್ಲಿ ನೆಲಸಿರುವ, ಮನಸ್ಸಿನ ಮಧ್ಯದಲ್ಲಿ ನೆಲಸಿರುವ, ಮನೋಮಧ್ಯವನ್ನು ತೊರೆದಿರುವ ಮನಸಾರೆ ತಮ್ಮ ಮನಸ್ಸನ್ನು ನೋಡಿ ಸ್ವಯಂ ಸಿದ್ಧರಾದ ಸುಯೋಗಿಗಳಾಗಿದ್ದಾರೆ.

49

೧. ಶಿವಾತ್ಮಕಪದದ್ವಂದ್ವ ಪ್ರಕ್ಷಾಲನೇ ಜಲಂ ನರಾಃ ।
ಯೇ ಪಿಬಂತಿ ಪುನಸ್ತನ್ಯಂ ನ ಪಿಬಂತಿ ಕದಾಚನ ॥

ಜಂಗಮನ ಎರಡು ಪಾದಗಳನ್ನು ತೊಳೆದ ನೀರನ್ನು ಕುಡಿಯುವ ಜನರು ಯಾರೂ ಮತ್ತೆಂದೂ ತಾಯಿಯ ಸ್ತನ್ಯಪಾನ ಮಾಡುವುದಿಲ್ಲ. ಅಂದರೆ ಅವರಿಗೆ ಪುನರ್ಜನ್ಮವಿಲ್ಲ.

60

೨. ನಿತ್ಯಂ ಲಿಂಗಾರ್ಚನಂ ಯಸ್ಯ ನಿತ್ಯಂ ಜಂಗಮಪೂಜನಂ ।
ನಿತ್ಯಂ ಗುರುಪದಧ್ಯಾನಂ ನಿತ್ಯಂ ನಿತ್ಯಂ ನ ಸಂಶಯಃ ॥

ದಿನನಿತ್ಯವೂ ಲಿಂಗಾರ್ಚನೆ, ಜಂಗಮಪೂಜೆ ಮತ್ತು ಗುರುಪಾದ ಧ್ಯಾನಾದಿಗಳಲ್ಲಿ ತೊಡಗಿಸಿಕೊಂಡವನು ಸದಾ ಶಾಶ್ವತನು (ನಿತ್ಯನು). ಇದರಲ್ಲೇನೂ ಸಂಶಯವಿಲ್ಲ.

61

೧. ನ ಮುಕ್ತಿರ್ನ ಚ ಧರ್ಮಶ್ಚ ನ ಪುಣ್ಯಂ ಚ ನ ಪಾಪಕಂ ।
ನ ಕರ್ಮಜನ್ಮ ನೇಚ್ಛಾ ವೈ ಗುರೋಃ ಪಾದನಿರೀಕ್ಷಣಾತ್ ॥

ಗುರುವಿನ ಪಾದದರ್ಶನದಿಂದ ಮುಕ್ತಿಯಾಗಲಿ, ಧರ್ಮವಾಗಲಿ, ಪುಣ್ಯವಾಗಲಿ, ಪಾಪವಾಗಲಿ, ಕರ್ಮವಾಗಲಿ, ಜನ್ಮವಾಗಲಿ, ಇಚ್ಛೆಯಾಗಲಿ ಆಗುವುದಿಲ್ಲ.

65

೧. ಲಿಂಗಂ ಪ್ರಕಾಶಮವ್ಯಕ್ತಂ ಲಿಂಗಂ ಪ್ರತ್ಯಕ್ಷಗೋಚರಂ ।
ಲಿಂಗಂ ಪ್ರಸನ್ನರೂಪಂ ಚ ತಲ್ಲಿಂಗಂ ಜ್ಯೋತಿರಾತ್ಮಕಂ ॥

ಲಿಂಗವು ಅವ್ಯಕ್ತವಾದ ಜ್ಯೋತಿಸ್ವರೂಪಿ. ಲಿಂಗವು ಕಣ್ಣಿಗೆ ಗೋಚರ ಮತ್ತು ಪ್ರಸನ್ನರೂಪಿಯಾದ್ದು. ಆ ಲಿಂಗವು ಜ್ಯೋತಿ ಸ್ವರೂಪಿಯಾದ್ದು.

81

೧. **ಓಂಕಾರ ಬಿಂದು ಸಂಯುಕ್ತಂ ನಿತ್ಯಂ ಧ್ಯಾಯಂತಿ ಯೋಗಿಯಃ।**
ಕಾಮದಂ ಮೋಕ್ಷದಂ ಚೈವ ಓಂಕಾರಾಯ ನಮೋ ನಮಃ॥

ಓಂಕಾರದ ಬಿಂದುವಿನಿಂದ ಕೂಡಿದ ಶಿವನನ್ನು ಯೋಗಿಗಳು ನಿತ್ಯವೂ ಧ್ಯಾನಿಸುತ್ತಾರೆ. ಬಯಸಿದ್ದನ್ನು ನೀಡುವ, ಮೋಕ್ಷದಾಯಕನೂ ಆದ ಓಂಕಾರನಿಗೆ ನಮಸ್ಕಾರಗಳು.

೨. **ನಮಂತಿ ಋಷಯೋ ದೇವಾ ನಮಂತ್ಯಪ್ಸರಸಾಂಗಣಾಃ।**
ನಮಂತಿ ದೇವಾ ದೇವೇಶಂ 'ನ'ಕಾರಾಯ ನಮೋ ನಮಃ॥

ಋಷಿಗಳು, ದೇವತೆಗಳು, ಅಪ್ಸರಸ್ತ್ರೀಯರು, ಎಲ್ಲರೂ ನಮಸ್ಕರಿಸುವ ದೇವದೇವರ ಒಡೆಯನಾದ 'ನ'ಕಾರನಿಗೆ ನಮಸ್ಕಾರ.

೩. **ಮಹಾದೇವಂ ಮಹಾತ್ಮಾನಂ ಮಹಾಜ್ಞಾನಪರಾಯಣಂ।**
ಮಹಾಪಾಪ ಹರಂ ನಿತ್ಯಂ 'ಮ'ಕಾರಾಯ ನಮೋ ನಮಃ॥

ಮಹಾತ್ಮನೂ, ಮಹಾದೇವನೂ, ಮಹಾಜ್ಞಾನಪರಾಯಣನೂ ಮಹಾಪಾಪಹರನೂ ನಿತ್ಯನೂ ಆದ 'ಮ' ಕಾರನಿಗೆ ನಮಸ್ಕಾರಗಳು.

೪. **ಯತ್ರ ಯತ್ರ ಸ್ಥಿತೋ ದೇವಃ ಸರ್ವವ್ಯಾಪಿ ಮಹೇಶ್ವರಃ।**
ಯೋ ಗುರುಃ ಸರ್ವದೇವಾನಾಂ 'ಯ'ಕಾರಾಯ ನಮೋ ನಮಃ॥

ಎಲ್ಲೆಲ್ಲಿಯೂ ಇರುವ ಸರ್ವವ್ಯಾಪಿಯಾದ ದೇವನೂ, ಎಲ್ಲ ದೇವತೆಗಳ ಗುರುವೂ ಆದ 'ಯ'ಕರ ಸ್ವರೂಪಿಯಾದ ಮಹೇಶ್ವರನಿಗೆ ನಮಸ್ಕಾರಗಳು.

೮. **ವೇದಮಾತಾ ಚ ಗಾಯಿತ್ರೀ ಮಂತ್ರಮಾತಾ ಷಡಕ್ಷರೀ ।**
ಸರ್ವದೇವಪಿತಾ ಶಂಭುಃ ಭರ್ಗೋ ದೇವಸ್ಯ ಧೀಮಹಿ ॥

ವೇದಮಾತೆಯಾದ ಗಾಯತ್ರಿಯೂ, ಮಂತ್ರಮಾತೆಯಾದ ಷಡಕ್ಷರೀಮಂತ್ರವೂ, ಸಕಲದೇವತೆಗಳ ಪಿತನೂ ಆದ, ಶಂಭುವೂ, ಭರ್ಗನೂ, ಆದ ದೇವನಿಗೆ ನಮಸ್ಕಾರ.

84

೧. **ಷಡಕ್ಷರಜಪಾನ್ನಾಸ್ತಿ ಸರ್ವೇಷಾಂ ಬಂಧನಂ ತಥಾ ।**
ತನ್ಮಂತ್ರಂ ಚ ಜಪತೋ ಭಕ್ತ್ಯಾ ಸದ್ಯೋ ಮೋಕ್ಷೋ ನ ಸಂಶಯಃ ॥

ಷಡಕ್ಷರ ಮಂತ್ರದ ಜಪಕ್ಕಿಂತ ಬೇರೆ ಜಪವಿಲ್ಲ. ಆ ಮಂತ್ರವನ್ನು ಭಕ್ತಿಯಿಂದ ಜಪಿಸುವವರು ಕೂಡಲೇ ಮುಕ್ತರಾಗುವರು ಅಷ್ಟೇ ಅಲ್ಲ ! ಎಲ್ಲ ಬಂಧನದಿಂದಲೂ ಮುಕ್ತಗೊಳಿಸುವುದರಲ್ಲಿ ಸಂಶಯವಿಲ್ಲ.

90

೧. **ಕರ್ಮಣಾ ಮನಸಾ ವಾಚಾ ಗುರೂಣಾಂ ಭಕ್ತವತ್ಸಲಃ।**
ಶರೀರಮರ್ಥಂ ಪ್ರಾಣಂ ಚ ಸದ್ಗುರುಭ್ಯೋ ನಿವೇದಯೇತ್॥

ಭಕ್ತವತ್ಸಲನಾದ ಗುರುವಿಗೆ ಕರ್ಮದಿಂದಲೂ ಮನಸ್ಸಿನಿಂದಲೂ ವಾಕ್ಕಿನಿಂದಲೂ ಶರೀರವನ್ನು ಅರ್ಥವನ್ನು ಮತ್ತು ಪ್ರಾಣವನ್ನು ನಿವೇದಿಸಬೇಕು.

97

೧. **ನಮೋ ಹಿರಣ್ಯಬಾಹವೇ ಸೇನಾನ್ಯೇ ದಿಶಾಂ ಚ ಪತಯೇ ನಮೋ**
ನಮೋ ವೃಕ್ಷೇಭ್ಯೋ ಹರಿಕೇಶೇಭ್ಯಃ ಪಶೂನಾಂ ಪತಯೇ ನಮೋ॥

ಹಿರಣ್ಯಬಾಹುವಿಗೆ ಸೇನೆಯ ಒಡೆಯನಿಗೆ, ದಿಕ್ಕುಗಳ ಒಡೆಯನಿಗೆ ನಮಸ್ಕಾರ. ವೃಕ್ಷರೂಪನಿಗೆ, ಹರಿಕೇಶನಿಗೆ (ಹಸಿರು ಹುಲ್ಲನ್ನು ಹೊಂದಿರುವವನಿಗೆ) ಪಶುಗಳ ಒಡೆಯನಿಗೆ ನಮಸ್ಕಾರ.

99

೧. **ಗೌರವಂ ಲೈಂಗಿಕಂ ಚಾರಂ ಪ್ರಸಾದಂ ಚರಣಾಂಬುಕಂ**
ಭಾಕ್ತಿಕಂ ಚ ಮಯಾ ಪ್ರೋಕ್ತಂ ಷಡ್ವಿಧಂ ವ್ರತಮಾಚರೇತ್ ॥

ಗುರುಸ್ವರೂಪಿಯಾದ, ಲಿಂಗಸಂಬಂಧಿಯಾದ, ಭಕ್ತಿಗೆ ಸಂಬಂಧಿಸಿದ, ಪ್ರಸಾದ ಸ್ವರೂಪಿಯಾದ ಪಾದ ತೀರ್ಥದ, ಜಂಗಮರೂಪಿಯಾದ ಎಂಬ ಆರು ವಿಧವಾದ ವ್ರತಗಳನ್ನು ಆಚರಿಸುವುದು.

೨. **ಗುರುದೇವಃ ಶಿವಃ ಸಾಕ್ಷಾತ್ ತಚ್ಛಿಷ್ಯೋ ಜ್ಞಾನಸಾರವಿತ್**
ತ್ರಿವಿಧಂ ಹೃದಿ ಸಂಭಾವ್ಯ, ಕೀರ್ತಿತಂ ಗೌರವಂ ವ್ರತಂ ॥

ಸಾಕ್ಷಾತ್ ಶಿವನೇ ಗುರುದೇವನು. ಅವನ ಶಿಷ್ಯನು ಜ್ಞಾನಸಾರವನ್ನು ತಿಳಿದವನು. ಗೌರವದ ವ್ರತವೆಂದು ಪ್ರಶಂಸಿತವಾದ ತ್ರಿವಿಧಗಳನ್ನು (ಗುರು, ಲಿಂಗ, ಜಂಗಮ) ಹೃದಯದಲ್ಲಿ ಭಾವಿಸಿಕೊಂಡು ಆಚರಿಸುವುದು.

೩. **ಗುರುಣಾ ಚಾರ್ಪಿತಂ ಲಿಂಗಂ ಪ್ರಾಣಲಿಂಗಂ ಪ್ರಕಥ್ಯತೇ ।**
ತಥೈವ ಭಾವನಾದ್ವೈತಂ ತದ್ವ್ರತಂ ಲೈಂಗಿಕಂ ಸ್ಮೃತಂ॥

ಗುರುವಿನಿಂದ ಕೊಡಲ್ಪಟ್ಟ ಲಿಂಗವು ಪ್ರಾಣಲಿಂಗವೆಂದು ಕರೆಯಲ್ಪಡುತ್ತದೆ. ಅದನ್ನೇ ಎರಡಲ್ಲ ಒಂದೇ ಎಂದು ತಿಳಿದು ಭಾವಿಸುವ ವ್ರತವು ಲಿಂಗ ಸಂಬಂಧಿಯಾದ್ದೆಂದು ಕರೆಯಲ್ಪಡುತ್ತದೆ.

೪. **ಗುರುಲಿಂಗ ಚರಾಣಾಂ ಚ ಪ್ರಸಾದಂ ಪಾದವಾರಿಣಂ**
ಪರ್ಯಾಯ ಭಜನಂ ಭಕ್ತ್ಯಾ ತದ್‌ವ್ರತಂ ಭಾಕ್ತಿಕಂ ಸ್ಮೃತಂ ॥

ಗುರುಲಿಂಗ ಜಂಗಮರ ಪ್ರಸಾದವಾದ ಪಾದಜಲವು, ಭಕ್ತಿಯಿಂದ ಗುರುಲಿಂಗನ ಪರ್ಯಾಯ ಭಜನೆಯೇ ಆದ ಭಾಕ್ತಿಕ ವ್ರತವೆಂದು (ಭಕ್ತಿಗೆ ಸಂಬಂಧಿಸಿದ) ಹೇಳಲಾಗುತ್ತದೆ.

೧೧. ಗುಣವತ್ ಪಾತ್ರ ಪೂಜಯಾಂ ವರಂ ಶಾಸನ ಪೂಜನಂ ।
ಶಾಸನಂ ಪೂಜಯೇತ್ತಸ್ಮಾದವಿಚಾರಂ ಶಿವಾಜ್ಞಯಾ ॥

ಗುಣವಂತನಾದ ಪಾತ್ರನ ಪೂಜೆಗಿಂತ ಶಾಸನ ಪೂಜೆಯೇ (ನಿಯಮ) ಶ್ರೇಷ್ಠವಾದ್ದು. ಆ ಕಾರಣ, ಶಿವನ ಆಜ್ಞೆಯಂತೆ ವಿಚಾರ ಮಾಡದೆಯೆ ಶಾಸನವನ್ನೇ ಪೂಜಿಸುವುದು.

೧೨. ಗುಣೋ ಗುಣಶ್ಚ ರೂಪಂ ಚ ಅರೂಪಂ ಚ ನವಿದ್ಯತೇ ।
ಪಶ್ಯತ್ಯ ಮೋಹಭಾವೇನ ಸ ನರಃ ಸುಖಮೇಧತೇ ॥

ಗುಣ, ಅಗುಣ, ರೂಪ, ಅರೂಪ ಎನ್ನುವುದು ಇರುವುದಿಲ್ಲ. ಯಾವುದನ್ನೂ ಮೋಹ ಭಾವದಿಂದ ನೋಡದ ವ್ಯಕ್ತಿಯು ಸುಖವನ್ನು ಹೊಂದುವನು.

೧೪. ದುಶ್ಶೀಲಃ ಶೀಲಸರ್ವಜ್ಞಂ ಮೂರ್ಖ ಭಾವೇನ ಪಶ್ಯತೇ ।
ಪಶ್ಯಂತಿ ಲಿಂಗಭಾವೇನ ಸದ್ ಭಕ್ತಾ ಮೋಕ್ಷ ಭಾವನಾ ॥

ದುಃಶೀಲನು ಶೀಲಸರ್ವಜ್ಞನಾದ ಜಂಗಮನನ್ನು ಮೂರ್ಖಭಾವನೆಯಿಂದ ದುಶ್ಶೀಲನಂತೆ ನೋಡುತ್ತಾನೆ. ಅದೇ ಸದ್‌ಭಕ್ತರಾದವರು ಮೋಕ್ಷ ಭಾವನೆಯಿಂದ ಲಿಂಗ ಭಾವನೆಯಿಂದ ಅವನನ್ನು ನೋಡುತ್ತಾರೆ.

೧೬. ಸತ್ಯಭಾವಿ ಮಹಾಸತ್ಯಂ ಸ್ಯಾಚ್ಚಿವಲಕ್ಷಣಂ ।
ಮಿಥ್ಯಭಾವೀತ್ವಹಂ ಮಿಥ್ಯಾ ಸತ್ಯಂ ಸ್ವಾಚ್ಚಿವಲಕ್ಷಣಂ ॥

ಎಲ್ಲವೂ ಸತ್ಯ ಎಂದು ಭಾವಿಸುವವನಿಗೆ ಶಿವಲಕ್ಷಣವು ಮಹಾಸತ್ಯ ವಾಗಿರುತ್ತದೆ. ಮಿಥ್ಯಾಭಾವನೆ ಉಳ್ಳವನಾದರೆ, ನಾನು (ಅಹಂ) ಎನ್ನುವುದು ಮಿಥ್ಯೆ. ಅವನ ಪಾಲಿಗೆ ಶಿವಲಕ್ಷಣವೇ ಮಹಾಸತ್ಯ

೧೭. ದಕ್ಷಿಣೇತು ಮಹಾದೇವೇ ಪದಾರ್ಥೇ ಕಿಂ ಪ್ರಯೋಜನಂ ।
ಅದಕ್ಷೇತು ಮಹಾದೇವೇ ಪದಾರ್ಥೇ ಕಿಂ ಪ್ರಯೋಜನಂ ॥

ಮಹಾದೇವನ ಬಲ (ಐಶ್ವರ್ಯ) ವಿದ್ದ ಮೇಲೆ ಇತರೆ ಐಹಿಕ ಪದಾರ್ಥಗಳಿದ್ದೇನು ಪ್ರಯೋಜನ? ಮಹಾದೇವನ ಬಲವಿಲ್ಲವಾದಲ್ಲಿ ಆಗಲೂ ಇತರೆ ಪದಾರ್ಥ ಗಳಿಂದೇನೂ ಪ್ರಯೋಜನವಿಲ್ಲ.

೧೮. ಅರಿರ್ಮಿತ್ರಂ ವಿಷಂ ಪಥ್ಯಂ ಅಧರ್ಮೋಧರ್ಮವತ್ ಭವೇತ್ ।
ಪ್ರಸನ್ನ ಏವ ದೇವೇ ತು ವಿಪರೀತಂ ಭವೇತ್ ಧ್ರುವಂ ॥

ಈ ದೇವನು ಪ್ರಸನ್ನನಾದರೆ ಶತ್ರುವು ಮಿತ್ರನಾಗುವನು. ವಿಷವೇ ಪಥ್ಯವಾಗುವುದು. ಅಧರ್ಮವು ಧರ್ಮವಾಗುವುದು. ಹೀಗೆ ಈ ದೇವನಲ್ಲಿ ವಿರುದ್ಧವಾಗುವುದು ನಿಶ್ಚಿತ.

೨೦. ನ ಮೇ ಪ್ರಿಯಶ್ಚತುರ್ವೇದೀ ಮದ್ಭಕ್ತಃ ಶ್ವಪಚೋಽಪಿ ವಾ ।
ತಸ್ಮೈ ದೇಯಂ ತತೋ ಗ್ರಾಹ್ಯಂ ಸಃ ಪೂಜ್ಯಶ್ಚಯಥಾಹ್ಯಹಂ ॥

ಚತುರ್ವೇದಗಳನ್ನು ಬಲ್ಲವನೇ ಆದರೂ ನನಗೆ ಪ್ರಿಯನಲ್ಲ. ಶ್ವಪಚನಾದರೂ ನನ್ನ ಭಕ್ತನು ನನ್ನಂತೆಯೇ ಪೂಜ್ಯನು. ಅವನಿಗೆ ಎಲ್ಲವನ್ನೂ ನೀಡುವುದು. ಅವನೇ ಗ್ರಾಹ್ಯನು.

೨೧. ಸದ್ಗುರುರ್ಭಾವಲಿಂಗಂ ಚ ತಲ್ಲಿಂಗಂ ಚಿತ್ ಸ್ವರೂಪಕಂ।
ತದ್‌ಭಾವಶುದ್ಧಿ ಸಿದ್ಧಸ್ಯ ಸದ್ಯೋನ್ಮುಕ್ತಿಃ ಸುಖಂ ಭವೇತ್ ॥

ಅವನೇ (ಭಕ್ತನೇ) ಸದ್ಗುರು. ಅವನೇ ಭಾವಲಿಂಗ. ಅವನೇ ಲಿಂಗ. ಚಿತ್ ಸ್ವರೂಪಿ ಭಾವಶುದ್ಧಿ ಸಿದ್ಧನಾದ ಅವನಿಗೆ ಸದ್ಯದಲ್ಲೇ ಮುಕ್ತಿ. ಸುಖವುಂಟಾಗುತ್ತದೆ.

೨೨. ಗುರುಃ ಪರಶಿವಶ್ಚೈವ ಜಂಗಮೋ ಲಿಂಗಮೇವ ಚ।
ತದ್ಭಾವಶುದ್ಧಿಸಿದ್ಧಸ್ಯ ಸದ್ಯೋನ್ಮುಕ್ತಿಃ ಸುಖಂ ಭವೇತ್॥

ಗುರುವೇ ಪರಶಿವನು. ಜಂಗಮವು ಲಿಂಗವೇ. ಭಾವಶುದ್ಧಿಸಿದ್ಧನಾದ ಅವನು ಸದ್ಯದಲ್ಲೇ ಮುಕ್ತಿ ಹೊಂದುವನು. ಅವನು ಸುಖಿಯಾಗುತ್ತಾನೆ.

ತತ್ತ್ವದೀಪಿಕೆಯಲ್ಲಿ

೨೪. ಪ್ರಸಾದೋ ಮುಕ್ತಿಮೂಲಂ ಚ ತತ್ ಪ್ರಸಾದಸ್ತ್ರಿಧಾ ಮತಃ।
ಶಿವಃ ಸರ್ವಾಧಿದೇವಃ ಸ್ಯಾತ್ ಸರ್ವಕರ್ಮ ಶಿವಾಜ್ಞಯಾ॥

ಪ್ರಸಾದವು ಮುಕ್ತಿಮೂಲ. ಆ ಪ್ರಸಾದವು ಮೂರು ಬಗೆ ಎಂದು ಹೇಳುತ್ತಾರೆ. ಶಿವನು ಎಲ್ಲ ದೈವಗಳ ಅಧಿದೇವ. ಎಲ್ಲ ಕರ್ಮಗಳೂ ಶಿವನ ಆಜ್ಞೆಯಿಂದಲೇ ನಡೆಯುವುವು.

೨೫. ಮಾಹೇಶ್ವರಸ್ಯ ಸಂಗಾದ್ಧಿ ಶಿವಯೋಗಂ ಲಭೇನ್ನರಃ।
ಪ್ರಸಾದಂ ತ್ರಿವಿಧಂ ಗ್ರಾಹ್ಯಂ ಮಹಾಪಾಪವಿನಾಶಕಂ॥

ಮಾಹೇಶ್ವರನ ಸಂಗದಿಂದಲೇ ಮಾನವನು ಶಿವಯೋಗವನ್ನು ಹೊಂದುತ್ತಾನೆ. ಮಹಾಪಾಪವನ್ನು ನಾಶಮಾಡುವ ಪ್ರಸಾದವು ಮೂರು ವಿಧವೆಂದು ತಿಳಿಯುವುದು.

೨೭. ಪ್ರಾಣಲಿಂಗೇತ್ವವಿಶ್ವಾಸಾತ್ ಭಕ್ತಿಮುಕ್ತಿದ್ವಯಂ ನ ಚ।
ಪ್ರಾಣಲಿಂಗಸ್ಯ ವಿಶ್ವಾಸಾತ್ ಸಿದ್ದಿಃ ಸ್ಯಾತ್ ಭಕ್ತಿಮುಕ್ತಿದಾ॥

ಪ್ರಾಣಲಿಂಗದಲ್ಲಿ ನಂಬಿಕೆಯಿಡದಿದ್ದರೆ, ಭಕ್ತಿ ಮುಕ್ತಿ ಎರಡೂ ಇಲ್ಲ. ಪ್ರಾಣಲಿಂಗದಲ್ಲಿ ನಂಬಿಕೆಯಿಟ್ಟದ್ದೇ ಆದರೆ ಭಕ್ತಿ ಮುಕ್ತಿ ಎರಡೂ ಪ್ರಾಪ್ತವಾಗುತ್ತವೆ.

೨೮. ಪ್ರಾಣಲಿಂಗಮವಿಶ್ವಸ್ಯ ತೀರ್ಥಲಿಂಗಮುಪಾಸತೇ।
ಸ ನರಃ ಸ್ವರ್ಗಮಾಪ್ನೋತಿ ಗಣತ್ವಂ ನ ಪ್ರಯುಜ್ಯತೇ॥

ಪ್ರಾಣಲಿಂಗದಲ್ಲಿ ವಿಶ್ವಾಸವಿಡದೆ, ತೀರ್ಥಲಿಂಗದ ಉಪಾಸನೆ ಮಾಡುವವನು ಸ್ವರ್ಗವನ್ನಾಗಲಿ ಗಣತ್ವವನ್ನಾಗಲಿ ಪಡೆಯುವುದಿಲ್ಲ.

೩೦. ಪ್ರಾಣಲಿಂಗಸಮಾಯುಕ್ತಃ ಪರಹಸ್ತೇ ದದಾತಿ ಚೇತ್।
ನಿಮಿಷಾರ್ಧವಿಯೋಗೇನ ವಿಶೇಷಂ ಪಾತಕಂ ಭವೇತ್ ॥

ಪ್ರಾಣಲಿಂಗವನ್ನು ಹೊಂದಿರುವನು ಬೇರೆಯವರ ಕೈಗೆ ಕೊಟ್ಟದ್ದೇ ಆದರೆ, ಅರ್ಧನಿಮಿಷ ಪ್ರಾಣಲಿಂಗವನ್ನು ಅಗಲಿದರೂ ವಿಶೇಷವಾದ ಪಾತಕವುಂಟಾಗುತ್ತದೆ.

೩೨. **ಇಷ್ಟಲಿಂಗಂ ಸಮುತ್ಸೃಜ್ಯ ಅನ್ಯಲಿಂಗಸ್ಯ ಪೂಜನಾತ್।**
ಸ್ವೇಷ್ಟಂ ನ ಲಭತೇ ಮರ್ತ್ಯ: ಪರಂ ತತ್ತ್ವಂ ನಿಹತ್ಯಸೌ॥

ಇಷ್ಟಲಿಂಗವನ್ನು ತೊರೆದು ಅನ್ಯಲಿಂಗವನ್ನು ಪೂಜಿಸಿದ್ದೇ ಆದರೆ, ಅವನ ಇಷ್ಟವು ಪೂರ್ಣವಾಗುವುದಿಲ್ಲ. ಅವನು ಪರಮವಾದ ತತ್ತ್ವವನ್ನು ನಾಶಮಾಡುತ್ತಾನೆ.

೩೬. **ಆಶಾ ಚ ನರಕಂ ಚೈವ ನಿರಾಶಾ ಮುಕ್ತಿರೇವ ಹಿ।**
ಆಶಾನಿರಾಶಯೋರ್ನಾಸ್ತಿ ತತ್ಸುಖಸ್ಯ ಸಮಂ ಪರಂ॥

ಆಸೆಯೇ ನರಕ. ನಿರಾಶೆಯೇ ಮುಕ್ತಿ. ಆಸೆ ನಿರಾಶೆಗಳಿಲ್ಲದ ಸ್ಥಿತಿಗಿಂತ ಪರಮಸುಖವಿನ್ನಿಲ್ಲ.

ಶಿವರಹಸ್ಯದಲ್ಲಿ

೩೭. **ಜಪಶ್ರಾಂತಃ ಪುನರ್ಧ್ಯಾಯೇತ್ ಧ್ಯಾನಶ್ರಾಂತಃ ಪುನರ್ಜಪೇತ್।**
ಜಪಧ್ಯಾನಾದಿಯೋಗೇನ ಶಿವಃ ಕ್ಷಿಪ್ರಂ ಪ್ರಸೀದತಿ॥

ಜಪಮಾಡಿ ಆಯಾಸವಾದರೆ ಧ್ಯಾನ ಮಾಡುವುದು. ಧ್ಯಾನ ಮಾಡಿ ಆಯಾಸವಾದರೆ ಮತ್ತೆ ಜಪ ಮಾಡುವುದು. ಜಪ, ಧ್ಯಾನಾದಿಗಳನ್ನು ಜೊತೆ ಜೊತೆಯಲ್ಲಿ ಮಾಡುವುದರಿಂದ ಶಿವನು ಶೀಘ್ರವಾಗಿ ಸಂತುಷ್ಟಗೊಳ್ಳುತ್ತಾನೆ.

೩೮. **ಗಚ್ಛನ್ ತಿಷ್ಠನ್ ಸ್ವಪನ್ ಜಾಗ್ರನ್ ಉನ್ಮಿಷನ್ ನಿಮಿಷನ್ನಪಿ।**
ಶುಚಿರ್ವಾಪ್ಯಶುಚಿರ್ವಾಪಿ ಶಿವಂ ಸರ್ವತ್ರ ಚಿಂತಯೇತ್॥

ಸಂಚರಿಸುತ್ತಿರಲಿ, ನಿಂತಿರಲಿ, ನಿದ್ರೆ ಮಾಡುತ್ತಿರಲಿ, ಎಚ್ಚೆತ್ತಿರಲಿ, ಕಣ್ಣು ತೆರೆದಿರಲಿ ಅಥವಾ ಮುಚ್ಚಿರಲಿ, ಶುಚಿಯಾಗಿರಲಿ, ಅಶುಚಿಯಾಗಿರಲಿ, ಶಿವನನ್ನು ಎಲ್ಲ ಕಾಲದಲ್ಲೂ ಚಿಂತಿಸುವುದು.

೪೦. **ದುರ್ಲಭಂ ಮಾನುಷಂ ಜನ್ಮಂ ವಿವೇಕಸ್ತು ಅತಿದುರ್ಲಭಃ।**
ದುರ್ಲಭಾ ಚ ಶಿವೇ ಭಕ್ತಿಃ ಶಿವಜ್ಞಾನಂ ತು ದುರ್ಲಭಂ॥

ಮನುಷ್ಯಜನ್ಮವು ದುರ್ಲಭ. ಅದರಲ್ಲಿ ವಿವೇಕವಿರುವುದು ಅತ್ಯಂತ ದುರ್ಲಭ. ಅದರಲ್ಲೂ ಶಿವನಲ್ಲಿ ಭಕ್ತಿ ಇರುವುದು ದುರ್ಲಭ. ಇನ್ನು ಶಿವಜ್ಞಾನವಂತೂ ಮತ್ತೂ ದುರ್ಲಭ.

೪೧. **ಇಂದ್ರಿಯ ಪ್ರೀತಿದಾತಾರಃ ಪುಮಾಂಸೋ ಬಹವಃ ಕಿಲ।**
ಶಿವಜ್ಞಾನಾರ್ಥದಾತಾರಃ ಪುಮಾಂಸೋ ಲೋಕದುರ್ಲಭಾಃ॥

ಇಂದ್ರಿಯ ಪ್ರೀತಿಯ ಸಲುವಾಗಿ ದಾತಾರರು ಬಹಳಷ್ಟು ಜನ. ಶಿವಜ್ಞಾನದ ಸಲುವಾಗಿ ದಾತರರಾದವರು ಲೋಕದಲ್ಲಿ ಅತ್ಯಂತ ದುರ್ಲಭರು.

೪೨. **ಲಿಂಗಭಕ್ತ್ಯಾ ಮನಃ ಪೂತಂ ಅಂಗಂ ಪೂತಂ ತು ದೇಶಿಕಾತ್।**
ಭಾವಸ್ತು ಜಂಗಮಾತ್ ಪೂತಸ್ತ್ರಿವಿಧಾ ಭಕ್ತಿರುತ್ತಮಾ॥

ಲಿಂಗಭಕ್ತಿಯಿಂದ ಮನವು ಪವಿತ್ರವಾಗುತ್ತದೆ. ಗುರುವಿನಿಂದ ಅಂಗವು ಪವಿತ್ರವಾಗುತ್ತದೆ. ಜಂಗಮನಿಂದ ಭಾವವು ಪವಿತ್ರವಾಗುತ್ತದೆ. ಗುರು, ಲಿಂಗ, ಜಂಗಮ ಕುರಿತಾದ ಭಕ್ತಿಯು (ತ್ರಿವಿಧಾ ಭಕ್ತಿ) ಉತ್ತಮವಾದ್ದು.

೪೫. ಮನೋ ಲೀನಂ ಮಹಾಲಿಂಗೇ ದ್ರವ್ಯಂ ಲೀನಂ ತು ಜಂಗಮೇ।
ತನುರ್ಲೀನೋ ಗುರೌ ಲಿಂಗೇ ಇತಿ ಭಕ್ತಸ್ಯ ವೈ ಧೃವಂ॥

ಭಕ್ತನಾದವನ ಮನಸ್ಸು ಲಿಂಗದಲ್ಲಿ ಲೀನವಾಗಿರಬೇಕು. ಅವನ ದ್ರವ್ಯವು (ಸಂಪತ್ತು) ಜಂಗಮ ಸೇವೆಯಲ್ಲಿ ತೊಡಗಿಸಲ್ಪಡಬೇಕು. ಅವನ ತನುವು ಗುರುಲಿಂಗದಲ್ಲಿ ಲೀನವಾಗಬೇಕು (ಸವೆಯಬೇಕು). ಇದೇ ಭಕ್ತನ ವಿಷಯದಲ್ಲಿ ನಿಶ್ಚಯ.

೪೬. ಸತ್ಕ್ರಿಯಾಂ ಪೂಜಯೇತ್ ಪ್ರಾತರ್ಮಧ್ಯಾಹ್ನೇ ಭೋಜನಾವಧಿಂ।
ಸಾಯಂಕಾಲೇ ಮಹಾಪೂಜಾಂ ತತ್ ಕ್ರಮಸ್ತು ವಿಶಿಷ್ಯತೇ॥

ಪ್ರಾತಃಕಾಲದಲ್ಲಿ ಮತ್ತು ಮಧ್ಯಾಹ್ನದ ಭೋಜನಕಾಲದಲ್ಲಿ ಸತ್ಕ್ರಿಯೆಯಿಂದ ಪೂಜಿಸಬೇಕು. ಸಾಯಂಕಾಲದ ಸಮಯದಲ್ಲಿ ಮಹಾಪೂಜೆ ಮಾಡುವುದು ಎನ್ನುವುದೇ ವಿಶೇಷ ಕ್ರಮ.

೪೭. ಅರ್ಪಯೇಚ್ಚರಲಿಂಗಾಯ ಮಧ್ಯಾಹ್ನೇ ಪೂಜನಕ್ರಮಃ।
ಗಂಧಂ ಪುಷ್ಪಂ ಚ ಕರ್ಪೂರಂ ಚಂದನಂ ಲೇಪನಂ ತಥಾ॥

ಜಂಗಮಕ್ಕೆ ಮಧ್ಯಾಹ್ನಕಾಲದಲ್ಲಿ ಗಂಧ, ಪುಷ್ಪ, ಕರ್ಪೂರ ಮತ್ತು ಲೇಪನಕ್ಕೆ ಚಂದನಗಳನ್ನು ಅರ್ಪಿಸಿ ಪೂಜಿಸುವುದು ಕ್ರಮ.

೪೮. ಅರ್ಪಯೇತ್ ಫಲತಾಂಬೂಲಂ ಸಂಧ್ಯಾಪೂಜಾರ್ಚನಾವಿಧಿಕ್ರಮಃ।
ಧೂಪಮುಷ್ಣಾಧಿಕಂ ಸರ್ವಂ ಪ್ರಾತಃಕಾಲಾರ್ಚನಾವಿಧಿಃ॥

ಸಾಯಂಕಾಲದ ಪೂಜಾಕ್ರಮವೆಂದರೆ, ಫಲ ತಾಂಬೂಲಗಳನ್ನು ಅರ್ಪಿಸು ವುದು. ಪ್ರಾತಃಕಾಲದಲ್ಲಿ ಹೆಚ್ಚು ಉಷ್ಣವಿರುವ ಧೂಪವನ್ನು ಸಮರ್ಪಿಸಬೇಕು.

೪೯. ಪೂಜೋಪಚಾರಸ್ಸರ್ವೇಷಾಂ ಶೈತ್ಯಂ ಮಧ್ಯಾಹ್ನಸಂಧಿಷು।
ತ್ರಿಸಂಧ್ಯಾ ತ್ರಿಷು ಕಾಲೇಷು ಉಷ್ಣಂ ನೈವೇದ್ಯಮುತ್ತಮಂ॥

ಪ್ರಾತಃಕಾಲ, ಮಧ್ಯಾಹ್ನ ಮತ್ತು ಸಾಯಂ ಸಂಧ್ಯಾಕಾಲಗಳಲ್ಲಿ, ಮಧ್ಯಾಹ್ನದ ಹೊತ್ತು ಶೈತ್ಯದಿಂದ ಕೂಡಿದ ನೈವೇದ್ಯ ಹಾಗೂ ಪ್ರಾತಃಕಾಲದಲ್ಲಿ ಉಷ್ಣದಿಂದ ಕೂಡಿದ ನೈವೇದ್ಯ ಉತ್ತಮ.

೫೦. ಲಿಂಗಧಾರೀ ಮಹಾಲಿಂಗಂ ನ ಭೇದೋ ತತ್ರ ಭೃಶ್ಯತೇ।
ಸದ್ವೈತ್ತೋ ಭೃತ್ಯರೂಪಶ್ಚ ಸತ್ಯಂ ಸತ್ಯಂ ಸ ಮೋ ನ ಚ॥

ಲಿಂಗಾಧಾರಿಗೂ ಮಹಾಲಿಂಗವಾದ ಪರಮೇಶ್ವರನಿಗೂ ಭೇದವೆಂಬುದಿಲ್ಲ. ಈ ಎರಡೂ ಭೃತ್ಯ ಸ್ವರೂಪನಾದ ಭಕ್ತನಿಗೆ ಸತ್ಯವಾಗಿಯೂ ಸಮವೇ.

೫೧. ಜನ್ಮಾಂತರ ಸಹಸ್ರೇಷು ತಪೋಧ್ಯಾನ ಪರಾಯಣೈಃ।
ನರಾಣಾಂ ಕ್ಷೀಣಪಾಪಾನಾಂ ಶಿವೇ ಭಕ್ತಿಃ ಪ್ರಜಾಯತೇ॥

ಸಹಸ್ರಾರು ಜನ್ಮಗಳಲ್ಲಿ ತಪೋಧ್ಯಾನ ಪರಾಯಣರಾದ ಮನುಷ್ಯರಲ್ಲಿ ಪಾಪರಹಿತರಾದವರಲ್ಲಿ ಮಾತ್ರ ಶಿವನ ವಿಷಯದಲ್ಲಿ ಭಕ್ತಿಯು ಹುಟ್ಟುತ್ತದೆ.

೫೬. ಪ್ರಸಾದಾನ್ಮುಚ್ಯತೇ ಜಂತುರ್ಮುಕ್ತಃ ಶಿವಸಮೋ ಭವೇತ್।
ಅಸಾರೇ ದಗ್ಧಸಂಸಾರೇ ಸಾರಂ ದೇವಿ ಶಿವಾರ್ಚನಂ॥

ಪ್ರಸಾದದಿಂದ ಜೀವಿಗಳು ಮುಕ್ತರಾಗಿ ಶಿವನಿಗೆ ಸಮನಾಗುತ್ತಾರೆ. ಅಸಾರವಾದ ಈ ಹಾಳು ಪ್ರಪಂಚದಲ್ಲಿ ದೇವಿ, ಶಿವಾರ್ಚನೆಯೊಂದೇ ಸಾರವತ್ತಾದ್ದು.

೫೭. ಉಪಾಧಿಃ ಸ್ಯಾನ್ಮಹಾಭಕ್ತಿರುಪಾಧಿಸ್ಯಾತ್ಪ್ರಸಾದಕಃ।
ಉಪಾಧಿಃ ಸ್ಯಾತ್ಕ್ರಿಯಾಸ್ಸರ್ವಾಶ್ಶಿವಸ್ಯಾಸ್ಯಾ ಪ್ರಸಾದತಃ॥

ಶಿವನ ಪ್ರಸಾದದಿಂದ ಮಹಾಭಕ್ತಿಯು ಆವರಣವಾಗುತ್ತದೆ. ಪ್ರಸಾದವೂ ಆವರಣವಾಗುತ್ತದೆ. ಸಕಲ ಕ್ರಿಯೆಗಳು ಆವರಣಗಳಾಗುತ್ತವೆ.

೫೮. ನಿರುಪಾಧಿಕಮದ್ಭಕ್ತಿರ್ನಿರುಪಾಧಿಕಪ್ರಸಾದತಃ।
ನಿರೂಪಾಧಿಕ್ರಿಯಾಸ್ಸರ್ವಾಃ ಶಿವಃ ಶೀಘ್ರಂ ಪ್ರಸೀದತಿ ॥

ನಿರುಪಾಧಿಕವಾದ ಶಿವನ ಪ್ರಸಾದದಿಂದ ನನ್ನ ಭಕ್ತಿಯು ನಿರುಪಾಧಿಕ ವಾಗುತ್ತದೆ. ಸಕಲ ಕ್ರಿಯೆಗಳೂ ನಿರುಪಾಧಿಕವಾಗುತ್ತವೆ. ಶಿವನು ಶೀಘ್ರವಾಗಿಯೇ ಪ್ರಸನ್ನನಾಗುತ್ತಾನೆ.

೬೩. ಸದ್ಭಕ್ತಸಂಗಸಿದ್ಧಿಃ ಸ್ಯಾತ್ ಸರ್ವಸಿದ್ಧಿರ್ನ ಸಂಶಯಃ।
ಭಕ್ತಿರ್ಜ್ಞಾನಂ ಚ ವೈರಾಗ್ಯಂ ವರ್ಧತಾಂ ಚ ದಿನೇ ದಿನೇ ॥

೬೪. ಮಹತ್ಸುಖಂ ಮಹಾತೋಷೋ ಲಿಂಗಭಕ್ತ್ಯಾ ಯಥಾ ಶಿವೇ।
ಪ್ರಾಣಲಿಂಗಪ್ರತೀಕಾರಂ ಕುರ್ವಂತೀಹ ದುರಾತ್ಮನಃ ॥

೬೫. ಪ್ರಾಣಲಿಂಗಪ್ರತೀಕಾರಂ ಕುರ್ವಂತೀಹ ದುರಾತ್ಮನಃ।
ಅತ್ಯುಗ್ರನರಕಂ ಯಾಂತಿ ಯುಗಾನಾಂ ಸಪ್ತವಿಂಶತಿ॥
ಹುತಭುಗ್ಪತಿತಾಂಭೋಜಗತಿಃ ಪಾತಕಿನಾಂ ಭವೇತ್॥

ಶಿವನಲ್ಲಿಯ ಲಿಂಗಭಕ್ತಿಯಿಂದ ದಿನದಿನವೂ ಹೇಗೆ ಮಹತ್ ಸುಖ ಮಹಾಸಂತೋಷಗಳು ಉಂಟಾಗುತ್ತವೋ ಸದ್ಭಕ್ತ ಸಂಗಸಿದ್ಧಿಯಾಗುತ್ತದೆಯೋ ಸರ್ವ ಸಿದ್ಧಿಯೂ ಉಂಟಾಗುತ್ತದೆಯೋ, ಭಕ್ತಿಜ್ಞಾನ ವೈರಾಗ್ಯಗಳು ಉಂಟಾಗುತ್ತವೆಯೋ ಹಾಗೆಯೇ ಪ್ರಾಣಲಿಂಗ ಪ್ರತೀಕಾರ ಮಾಡುತ್ತಿರುವ ದುರಾತ್ಮನು ಇಪ್ಪತ್ತೇಳು ಯುಗಗಳವರೆಗೆ ಅತ್ಯುಗ್ರ ನರಕಕ್ಕೆ ಹೋಗುತ್ತಾನೆ ಹಾಗೂ ಆ ಪಾತಕಿಗಳಿಗೆ ಬೆಂಕಿಯಲ್ಲಿ ಬಿದ್ದ ಕಮಲದ ಗತಿಯಾಗುತ್ತದೆ. (೬೩, ೬೪ ಮತ್ತು ೬೫ ರ ತಾತ್ಪರ್ಯ)

104

೪. ಯೇ ರುದ್ರಲೋಕಾದವತೀರ್ಯ ರುದ್ರಾ ಮಾನುಷ್ಯಮಾಶ್ರಿತ್ಯ ಜಗದ್ಧಿತಾಯ।
ಚರಂತಿ ನಾನಾವಿಧಚಾರುಚೇಷ್ಟಾಸ್ತೇಭ್ಯೋ ನಮಸ್ತ್ರ್ಯಂಬಕಪೂಜಕೇಭ್ಯಃ॥

ರುದ್ರಲೋಕದಿಂದ ಅವತರಿಸಿ ರುದ್ರನು ಮನುಷ್ಯ ರೂಪವನ್ನು ಧರಿಸಿ ಜಗತ್ತಿನ ಹಿತದ ಸಲುವಾಗಿ ನಾನಾ ವಿಧವಾದ ಸುಂದರ ಕ್ರಿಯೆಗಳಲ್ಲಿ ಕ್ರಿಯಾಶಾಲಿಯಾಗಿದ್ದಾನೆ. ಪೂಜ್ಯನಾದ ಆ ತ್ರಿಯಂಬಕನಿಗೆ ನಮಸ್ಕಾರ.

೫. ದಂಡಕ್ಷೀರದ್ವಯಂ ಹಸ್ತೇ ಜಂಗಮೋ ಭಕ್ತಿಮಂದಿರಂ।
ಅತಿಭಕ್ತ್ಯಾ ಲಿಂಗಸಂತುಷ್ಟಿರಪಹಾಸ್ಯಂ ಯಮದಂಡನಂ॥

ಎರಡು ಕೈಗಳಲ್ಲಿ ದಂಡ ಮತ್ತು ಕ್ಷೀರವನ್ನು ಹಿಡಿದಿರುವ ಜಂಗಮನು ಭಕ್ತಿಮಂದಿರನು. ಅತಿಭಕ್ತಿಯಿಂದ ಲಿಂಗ ಸಂತುಷ್ಟಿಯಾಗುತ್ತದೆ. ಅಪಹಾಸ್ಯದಿಂದ ಯಮದಂಡನ ಪ್ರಾಪ್ತಿಯಾಗುತ್ತದೆ.

೬. ಸೋಮಃ ಪವತೇ ಜನಿತಾ ಮತೀನಾಂ ಜದಿತಾ ದಿವೋ।
ಜನಿತಾ ಪೃಥ್ವಿವ್ಯಾ ಜನಿತಾಗ್ನೇರ್ಜನಿತಾ ಸೂರ್ಯಸ್ಯ॥

ಸೋಮವು ಅರೆಯುವುದರಿಂದ ಹುಟ್ಟಿತು. ಮತಿಯಿಂದ ಸ್ವರ್ಗ ಹುಟ್ಟಿತು. ಸೂರ್ಯನ ಬೆಂಕಿಯಿಂದ ಪೃಥ್ವಿಯು ಜನಿಸಿತು.

111

೧. ಲಿಂಗಿನಾ ಸಹ ವರ್ತಿತ್ವಂ ಲಿಂಗಿನಾ ಸಹವಾದಿತಾ ।
ಲಿಂಗಿನಾ ಸಹ ಚಿಂತಾ ಚ ಲಿಂಗಯೋಗೋ ನ ಸಂಶಯಃ ॥

ಲಿಂಗಿಯೊಂದಿಗೆ ಜೊತೆಯಲ್ಲಿ ಇರುವುದು. ಲಿಂಗಿಯೊಂದಿಗೆ ಮಾತನಾಡುವುದು. ಲಿಂಗಿಯೊಂದಿಗೆ ಚಿಂತಿಸುವುದು. ಲಿಂಗಯೋಗವೆನ್ನುವುದರಲ್ಲಿ ಸಂಶಯವಿಲ್ಲ.

115

೧. ನಿತ್ಯಂ ಲಿಂಗಾರ್ಚನಂ ಯಸ್ಯ ನಿತ್ಯಂ ಜಂಗಮಪೂಜನಂ ।
ನಿತ್ಯಂ ಗುರುಪದಧ್ಯಾನಂ ನಿತ್ಯಂ ನಿತ್ಯಂ ನ ಸಂಶಯಃ ॥

ಯಾರು ನಿತ್ಯವೂ ಲಿಂಗಾರ್ಚನೆ ಮಾಡುತ್ತಾನೋ, ನಿತ್ಯವೂ ಜಂಗಮ ಪೂಜೆ ಮಾಡುತ್ತಾನೋ, ನಿತ್ಯವೂ ಗುರುಪಾದ ಧ್ಯಾನ ಮಾಡುತ್ತಾನೋ ಅವನು ನಿಶ್ಚಯವಾಗಿ ಶಾಶ್ವತನೆಂಬುದರಲ್ಲಿ ಸಂಶಯವಿಲ್ಲ.

೨. ಲಿಂಗಾರ್ಚನ ವಿಹೀನಸ್ತು ದ್ವಿಜೋಽಪಿ ಶ್ವಪಚಾಧಮಃ ।
ಲಿಂಗಾರ್ಚನ ಪರೋನಿತ್ಯಂ ಶ್ವ ಪಚೋಽಪಿ ದ್ವಿಜೋತ್ತಮಃ ॥

ಲಿಂಗಾರ್ಚನೆ ಮಾಡದವನು ದ್ವಿಜನಾದರೂ ಶ್ವಪಚಾಧಮನು. ಅದೇ ಲಿಂಗಾರ್ಚನೆ ಮಾಡುವವನು ಶ್ವಪಚನೇ ಆದರೂ ದ್ವಿಜೋತ್ತಮನು.

119

೨. ಶಿವನಿರ್ಮಾಲ್ಯಕಂ ಶುದ್ಧಂ ಭುಂಜೀಯಾತ್ ಸರ್ವತೋದ್ವಿಜಃ ।
ಅನ್ಯದೈವಸ್ಯ ನಿರ್ಮಾಲ್ಯಂ ಭುಕ್ತ್ವಾ ಚಾಂದ್ರಾಯಣಂ ಚರೇತ್ ॥

ಶಿವನ ನಿರ್ಮಾಲ್ಯವನ್ನು ಭುಂಜಿಸುವವನು ಸದಾ ದ್ವಿಜನು. ಅನ್ಯ ದೈವದ ನಿರ್ಮಾಲ್ಯವನ್ನು ಭುಂಜಿಸಿದ್ದೇ ಆದರೆ ಚಾಂದ್ರಾಯಣದಲ್ಲಿ (ದಕ್ಷಿಣಾಯನ) ಸಂಚರಿಸುತ್ತಾನೆ.

೧. **ಪಾತಕಂತು ಮನುಷ್ಯಾಣಾಂ ತನುಭಾವೇಷು ವರ್ಧನಂ।**
ಜನ್ಮಕರ್ಮಾಮರಣಾಂತಂ ಅಜಕಲ್ಪಾವಧಿಂ ಭವೇತ್॥

ಮನುಷ್ಯರು ಮಾಡಿದ ಪಾತಕವು ತನುಭಾವದಲ್ಲಿ ವರ್ಧಿಸುತ್ತದೆ. ಅದು ಜನ್ಮ ಕರ್ಮ ಮರಣಾಂತದವರೆಗೆ ಬ್ರಹ್ಮ ಕಲ್ಪಾವಧಿಯವರೆಗೆ ಇರುತ್ತದೆ.

120

೧. **ಯಜ್ಞೇನ ಯಜ್ಞಮಯಜನ್ತದೇವಾಃ**
ತಾನಿ ಧರ್ಮಾಣಿ ಪ್ರಥಮಾನ್ಯಾಸನ್
ತೇ ಹ ನಾಕಂ ಮಹಿಮಾನಸ್ಸಚಂತೇ
ಯತ್ರ ಪೂರ್ವೇ ಸಾಧ್ಯಾಸ್ಸಂತಿ ದೇವಾಃ

ದೇವತೆಗಳು ಯಜ್ಞದಿಂದ ಯಜ್ಞವನ್ನು ಯಜ್ಞ ಮಾಡಿದರು. ಅವು ಮೊದಲ ಧರ್ಮಗಳಾಗಿದ್ದುವು. ಅವು ತಮ್ಮ ಮಹತ್ವದಿಂದ ನಾಕವನ್ನು ಸೃಷ್ಟಿಸಿದವು. ಹಿಂದೆ ಇದೇ ರೀತಿ ಸಾಧಿಸಿದ ದೇವತೆಗಳಿದ್ದಾರೆ.

122

೨. **ಲಿಂಗಸ್ಯಾರಾಧನೇ ವಿಘ್ನಂ ಯತ್ಕೃತಂ ತಂ ಸ್ವಾರ್ಥಕಾರಣಾತ್ ।**
ನಿಮೇಷಮಪಿ ತತ್ಪಾಪಂ ಕರೋತಿ ಚ ಕುಲಕ್ಷಯಂ ॥

ಸ್ವಾರ್ಥಕಾರಣದಿಂದಾಗಿ ಲಿಂಗದ ಆರಾಧನೆಯಲ್ಲಿ ವಿಘ್ನವು ಆದದ್ದೇ ಆದರೆ, ಆ ಪಾಪ ಅತ್ಯಲ್ಪ ಕಾಲದ್ದೇ ಆದರೂ ಕುಲಕ್ಷಯವನ್ನು ಉಂಟುಮಾಡುತ್ತದೆ.

೩. **ಸೂಕರಃ ಕೋಟಿ ಜನ್ಮಾನಿ ಲಭತೇ ಶತಕೋಟಿಭಿಃ ।**
ಮೃಗಶ್ಚಕೋಟಿ ಜನ್ಮಾನಿ ಶೃಗಾಲಃ ಕೋಟಿ ಜನ್ಮಭಿಃ ॥

ಅಂಥವನು ಕೋಟಿ ಜನ್ಮಗಳ ಕಾಲ ಪರ್ಯಂತ ಹಂದಿಯಾಗಿ, ಶತಕೋಟಿ ವರ್ಷಕಾಲ ಜಿಂಕೆಯಾಗಿ, ಕೋಟಿ ಜನ್ಮ ಪರ್ಯಂತ ನರಿಯಾಗಿ ಹುಟ್ಟುವನು.

೮. **ವೇದಶಾಸ್ತ್ರ ಪುರಾಣಾನಿ ಸ್ಪಷ್ಟಾವೇಶ್ಯಾಂಗನಾ ಇವ ।**
ಯಾ ಪುನಶ್ಶಾಂಕರೀ ವಿದ್ಯಾಗುಪ್ತಾ ಕುಲವಧೂರಿವ ॥

ವೇದಶಾಸ್ತ್ರ ಪುರಾಣಾದಿಗಳು ವೇಶ್ಯಾಂಗನೆಯಂತೆ ಎಂಬುದು ಸ್ಪಷ್ಟವೇ ಇದೆ. ಅಥವಾ ಶಾಂಕರೀ (ವಿದ್ಯೆಯು) ಗುಪ್ತವಾದ ಕುಲವಧುವಿನಂತೆ.

೯. **ಶಿವಾರ್ಚಕ ಪದ ದ್ವಂದ್ವಸ್ಯಾರ್ಚನಾತ್ ಸ್ಮರಣಾದಪಿ ।**
ಕೋಟಿ ಜನ್ಮಸು ಸೌಖ್ಯಂ ಸ್ಯಾತ್ ಸ ರುದ್ರೋ ನಾತ್ರ ಸಂಶಯಃ ॥

ಶಿವನ ಎರಡು ಪಾದಗಳ ಅರ್ಚನೆ ಮಾಡಿದರಾಗಲಿ, ಸ್ಮರಣೆ ಮಾಡಿದರಾಗಲಿ ಕೋಟಿ ಜನ್ಮಗಳಲ್ಲಿ ಸೌಖ್ಯವು ಉಂಟಾಗುತ್ತದೆ. ಅವನು ರುದ್ರನೇ ಎಂಬುದರಲ್ಲಿ ಸಂಶಯವಿಲ್ಲ.

೧೦. **ತತ್ಪದೇನೋಚ್ಯತೇ ಲಿಂಗಂ ತ್ವಂಪದೇನಾಂಗ ಮುಚ್ಯತೇ ।**
ಲಿಂಗಾಂಗ ಸಂಗೋಸಿಪದಂ ಪರಮಾರ್ಥ ನಿರೂಪಣೇ ॥

ಪರಮಾರ್ಥ್ ನಿರೂಪಣೆಯಲ್ಲಿ, 'ತತ್' ಪದವು ಲಿಂಗವನ್ನು, 'ತ್ವಂ' ಪದವು ಅದರ ಅಂಗವನ್ನು, ಲಿಂಗಾಂಗ ಸಾಮರಸ್ಯವನ್ನು 'ಅಸಿ' ಪದವು ಹೇಳುತ್ತದೆ.

141

೧. **ಅಗ್ನಿಹೋತ್ರಶ್ಚ ವೇದಶ್ಚ ಯಜ್ಞಶ್ಚ ಬಹುದಕ್ಷಿಣಾಂ ।**
ಶಿವಲಿಂಗಾರ್ಚನಂ ಶ್ವೇತ ಕೋಟ್ಯೋಂಸಿನಾಪಿನೋ ಸಮಃ ॥

ಅಗ್ನಿಹೋತ್ರ, ವೇದ, ಯಜ್ಞ ಮತ್ತು ಬಹುವಿಧವಾದ ದಕ್ಷಿಣೆ ಇವೆಲ್ಲ ಶಿವಲಿಂಗಾರ್ಚನೆಗೆ ಕೋಟಿಯಲ್ಲಿ ಒಂದು ಅಂಶಕ್ಕೂ ಸಮನಲ್ಲ.

೨. **ಯಂ ಯಂ ಕಾಮಯತೇ ಕಾಮಂ ತಂ ತಂ ಲಿಂಗಾರ್ಚನಾತ್ ಲಭೇತ್ ।**
ನ ಲಿಂಗೇನವಿನಾ ಸಿದ್ಧ ದುರ್ಲಭಂ ಪರಮಂ ಪದಂ ॥

ಯಾವ ಯಾವ ಬಯಕೆಗಳನ್ನು ಬಯಸಿದರೂ ಅವೆಲ್ಲ ಲಿಂಗಾರ್ಚನೆಯಿಂದ ಲಭ್ಯವಾಗುತ್ತವೆ. ಲಿಂಗವಿಲ್ಲದ ಹೊರತು ಪರಮ ಪದವಿಯು ದುರ್ಲಭವೆಂದು ಸಿದ್ಧವಾಗಿದೆ.

148

೩. **ಪರಶಿವೋ ಗುರುಮೂರ್ತಿ ಶಿಷ್ಯದೀಕ್ಷಾದಿಕಾರಣಾತ್ ।**
ಶಿಷ್ಯಾನೆತೀತಂ ಮಹಾಚೋದ್ಯಂ ಚೋದ್ಯ ರೂಪಾಯವೈ ನಮಃ ॥

ಶಿಷ್ಯನಿಗೆ ದೀಕ್ಷೆ ನೀಡುವ ಕಾರಣದಿಂದ ಗುರುಮೂರ್ತಿಯು ಪರಶಿವನು. ಶಿಷ್ಯಾತೀತನಾದ ಗುರುವು ಮಹಾಚೋದ್ಯ. ಆಶ್ಚರ್ಯಕಾರಣರೂಪನಾದ (ಚೋದ್ಯರೂಪ)ವನಿಗೆ ನಮಸ್ಕಾರ.

149

೧. **ನ ಭೂಮಿ ನ ರವಿಂದಾಪೋನವಹ್ನಿ ಪ್ರಾಣಾನಿಲಂಗ ಗನೋ ನ ಚ ವಿದ್ಯತೇ**
ನ ಯಾತ್ಮಧ್ಯಾಕ್ಷಾರಂ ಪರಮಾಕಾಶಮದೇ ಭಾತೀ ತತ್ವರಂ ಬ್ರಹ್ಮಾ ॥

ಆಗ ಭೂಮಿಯಿರಲಿಲ್ಲ, ಸೂರ್ಯನಿರಲಿಲ್ಲ, ಚಂದ್ರನಿರಲಿಲ್ಲ, ಜಲವಿರಲಿಲ್ಲ, ಅಗ್ನಿಯಿರಲಿಲ್ಲ, ಪ್ರಾಣವಾಯು ಇರಲಿಲ್ಲ, ಗಗನವಿರಲಿಲ್ಲ. ಅಕಾರವಿರಲಿಲ್ಲ. ಆ ಪರಬ್ರಹ್ಮವು ಪರಮಾಕಾಶವಂತೆ ಪ್ರಕಾಶಿಸುತ್ತಿತ್ತು.

150

೧. **ಶಕ್ತ್ಯಾಧಾರೋ ಮಹಾದೇವಃ ಶಕ್ತಿರೂಪಾಯ ವೈ ನಮೋನಮಃ ।**
ಶಕ್ತಿಃ ಕರ್ಮ ಚ ಕರ್ತಾ ಚ ಮುಕ್ತಿ ಶಕ್ತ್ಯೈಃ ನಮೋ ನಮಃ ॥

ಶಕ್ತಿಗೆ ಆಧಾರನಾದ ಶಕ್ತಿರೂಪನಾದ ಮಹಾದೇವನಿಗೆ ನನ್ನ ಸಮಸ್ಕಾರ. ಶಕ್ತಿ ಎಂದರೆ ಕರ್ಮ ಮತ್ತು ಕರ್ತನು. ಮುಕ್ತಿಶಕ್ತಿಗೆ ನಮೋ ನಮಃ

167

೧. **ಸಪ್ತಕೋಟಿ ಮಹಾಮಂತ್ರಂ ಉಪಮಂತ್ರಸ್ತನೇಕತಃ ।**
ಪಂಚಾಕ್ಷರ ಪ್ರತಿಲೀಯಂತೇ ಪುನಸ್ತಸ್ಸವರ್ಗತಃ ॥
ತಸ್ಮಿನ್ ವೇದಶ್ಚ ಶಾಸ್ತ್ರಾಣಿ ಮಂತ್ರೇ ಪಂಚಾಕ್ಷರಿ ಸ್ಥಿತಂ ।

ಸಪ್ತಕೋಟಿ ಮಹಾಮಂತ್ರಗಳು. ಅನೇಕವಾದ ಉಪಮಂತ್ರಗಳು, ಅಯಾ ವರ್ಗಕ್ಕನುಸಾರವಾಗಿ ಪಂಚಾಕ್ಷರದ ಕಡೆಗೆ ಗಮಿಸುತ್ತವೆ. ಆ ಪಂಚಾಕ್ಷರೀ ಮಂತ್ರದಲ್ಲಿ ವೇದಗಳು, ಶಾಸ್ತ್ರಗಳೆಲ್ಲವೂ ಅಡಗಿವೆ.

171

೪. **ಲಿಂಗಾಲಿಂಗೀ ಮಮ ಪ್ರಾಣೋ ಲಿಂಗಾಲಿಂಗೀ ಮಮಾತ್ಮಭೂಃ ।**
ಲಿಂಗಾಲಿಂಗೀಮಮೋಜ್ಜೀವಿ ಲಿಂಗಾಲಿಂಗೀ ಚ ರಕ್ಷಕಃ ॥

ಲಿಂಗಾಲಿಂಗಿಯೇ ನನ್ನ ಪ್ರಾಣ. ಲಿಂಗಾಲಿಂಗಿಯೇ ನನ್ನ ಆತ್ಮದಲ್ಲಿ ಹುಟ್ಟಿದವನು. ಲಿಂಗಾಲಿಂಗಿಯೇ ನನ್ನನ್ನು ಉಜ್ಜೀಸುವವನು. ಲಿಂಗಾಲಿಂಗಿಯೇ ನನ್ನ ರಕ್ಷಕ.

೫. **ನೈವೇದ್ಯಂ ಪುರತೋ ನ್ಯಸ್ತಂ ದರ್ಶನಾತ್ ಸ್ವೀಕೃತಂ ಮಯಾ ।**
ರಸಂ ಭಕ್ತಾಸ್ಯ ಜಿಹ್ವಯಾ ಅಶ್ನಾಮಿ ಕಮಲೋದ್ಭವ ॥

ನೈವೇದ್ಯವನ್ನು ಮುಂದುಗಡೆ ಇಡಲಾಯಿತು. ನೋಟದಿಂದಲೇ ಅದನ್ನು ಸ್ವೀಕರಿಸಿದೆ. ಭಕ್ತನ ಜಿಹ್ವೆಯ ಮೂಲಕ ನಾನು ರಸವನ್ನು ಸ್ವೀಕರಿಸುವೆನು ಕಮಲೋದ್ಭವನೇ.

೬. **ಅಕಾಯೋ ಭಕ್ತಕಾಯಸ್ತು ಮಮ ಕಾಯಸ್ತು ಭಕ್ತಿಮಾನ್ ।**
ಭಕ್ತ ಸಂಗ ವಿಶೇಷಣಂ ಅವಿಕಾರಂ ಶಿವಾತ್ಮನೋ ॥

ಅಕಾಯನಾದ ನನಗೆ ಭಕ್ತ ಕಾಯವೇ ನನ್ನ ಕಾಯ. ನನ್ನ ಶರೀರವು ಭಕ್ತವಂತವೇ. ಭಕ್ತಸಂಗ ವಿಶೇಷಣದಿಂದ ಶಿವಾತ್ಮನು ಅವಿಕಾರನಾಗಿದ್ದಾನೆ.

177

ಪುಣ್ಯೈರಾಪ್ನೋತಿ ದೇವತ್ವಂ ಪಾಪೈಃ ಸ್ಥಾವರಮೇವ ಚ ॥
ಪುಣ್ಯಪಾಪಸಮಾನೇಭ್ಯೋ ಮಾನುಷಂ ಲಭತೇ ನರಃ ॥

ಮನುಷ್ಯನು ಪುಣ್ಯದಿಂದ ದೇವತ್ವವನ್ನು, ಪಾಪಗಳಿಂದ ಸ್ಥಾವರತ್ವವನ್ನು, ಪುಣ್ಯ ಪಾಪಗಳು ಸಮನಾದ್ದರ ಫಲವಾಗಿ ಮನುಷ್ಯ ಜನ್ಮವನ್ನು ಪಡೆಯುತ್ತಾನೆ.

185

ಕರ್ಮಣಾ ಮನಸಾ ವಾಚಾ ಗುರುಭಕ್ತಿವಿಚಕ್ಷಣಃ ।
ಶರೀರಂ ಪ್ರಾಣಮರ್ಥಂ ಚ ಸದ್ಗುರುಭ್ಯೋ ನಿವೇದಯೇತ್ ॥

ಗುರುಭಕ್ತಿಯಲ್ಲಿ ವಿಚಕ್ಷಣನಾದವನು ಮನಸ್ಸಿನಿಂದಲೂ, ಮಾತಿನಿಂದಲೂ, ಕರ್ಮದಿಂದಲೂ ತನ್ನ ಶರೀರ, ಪ್ರಾಣ ಮತ್ತು ಧನಗಳನ್ನು ಸದ್ಗುರುವಿಗೆ ಅರ್ಪಿಸುವುದು.

186

ಸರ್ವಂ ಚ ತೃಣಕಾಷ್ಠಂ ಚ ಭಕ್ಷ್ಯಂ ಭೋಜ್ಯಾನುಲೇಪನಂ ।
ಶಿವಾರ್ಪಿತಂ ವಿನಾ ಭುಂಜೇ ಭಕ್ತಂ ಸದ್ಯೋऽಪಿ ಕಿಲ್ಬಿಷಂ ॥

ಸಕಲ ತೃಣಕಾಷ್ಠಗಳನ್ನೂ, ಭಕ್ಷ್ಯವನ್ನೂ, ಭೋಜ್ಯದ ಅನುಲೇಪನವನ್ನು ಕಿಲ್ಬಿಷವಾಗಿದ್ದರೂ ಶಿವಾರ್ಪಿತವಾದ ಹೊರತು ಭಕ್ತನು ತಿನ್ನಲಾಗದು.

192

ಲೋಕಾಚಾರನಿಬಂಧೇನ ಲೋಕಾಲೋಕವಿವರ್ಜಿತಾಃ।
ಲೋಕಾಚಾರಂ ಪರಿತ್ಯಜ್ಯ ಪ್ರಾಣಲಿಂಗ ಸ್ಥಲಂ ಭವೇತ್॥

ಪ್ರಾಣಲಿಂಗಸ್ವಾಂಯುತನಾದ ಭಕ್ತನು ಲೋಕಾಚಾರದ ಕಟ್ಟುಪಾಡಿನಿಂದ ಲೋಕಾಲೋಕಗಳನ್ನು ತ್ಯಜಿಸುವುದು. ಲೋಕಾಚಾರದ ಪರಿತ್ಯಾಗದಿಂದ ಪ್ರಾಣಲಿಂಗಸ್ಥಲವಾಗುವುದು.

206

೨. ಲಿಂಗಸಂಗಸ್ಯ ಮಾತ್ರೇಣ ಮನಃಪ್ರಾಪ್ನೋತಿ ಲಿಂಗತಾಂ ।
ಲಿಂಗಾರ್ಪಣಮಿದಂ ದೇವಿ ಪ್ರಾಣಲಿಂಗಾರ್ಚನಂ ಸದಾ ॥

ಲಿಂಗ ಸಂಬಂಧ ಹೊಂದಿದ ಮಾತ್ರದಿಂದಲೇ ಮನಸ್ಸು ಲಿಂಗತ್ವವನ್ನು ಹೊಂದುತ್ತದೆ. ಪ್ರಾಣಲಿಂಗಾರ್ಚನೆಯು ಯಾವಾಗಲೂ ಲಿಂಗಾರ್ಪಿತವೇ.

೩. ಲಿಂಗಪ್ರಸಾದಂ ಭುಂಜೀಯಾತ್ ಕೇವಲಂ ಜ್ಯೋತಿರೂಪವತ್ ।
ಅಸಂಸ್ಕಾರಿಕೃತಾ ಪೂಜಾ ಪ್ರಸಾದೋ ನಿಷ್ಫಲೋ ಭವೇತ್ ॥

ಕೇವಲ ಜ್ಯೋತಿಸ್ವರೂಪವಾದ ಲಿಂಗಪ್ರಸಾದವನ್ನು ಸ್ವೀಕರಿಸಬೆಕು. ಸಂಸ್ಕಾರಗೊಳ್ಳದ ಪೂಜಾ ಪ್ರಸಾದವು ನಿರರ್ಥಕವಾಗುತ್ತದೆ.

೫. ಆಚಾರಲಿಂಗಸಂಬಂಧಂ ಪ್ರಾಣಮೇವ ಪ್ರಕೀರ್ತಿತಂ ।
ಇದಂ ಜ್ಞಾನಂ ತು ಭುಂಜೀಯಾತ್ ಪದಮೇವ ಪದಂ ಶ್ರುಣು ॥
ದ್ವಯಮೇವಮಿದಂ ದೇವಿ ವಿಶೇಷಂ ಭಕ್ತಿಬುದ್ಧಿಮಾನ್ ।

ಆಚಾರಲಿಂಗಕ್ಕೆ ಸಂಬಂದಿಸಿದ ಇದು ಅದರ ಪ್ರಾಣವೆಂದೇ ಹೆಸರಾಗಿದೆ. ವಿಶೇಷವಾದ ಭಕ್ತಿಬುದ್ಧಿ ಇರುವವನು. ಈ ಜ್ಞಾನವನ್ನು ಅನುಭವಿಸುವುದೊಂದೇ ಇರುವ ಸ್ಥಿತಿ. ಪ್ರಾಣಲಿಂಗ ಮತ್ತು ಆಚಾರ ಲಿಂಗಗಳೆಂಬವು ಎರಡು ಮಜಲು.

209

೩. 'ಜನ್ಮನಾ ಜಾಯತೇ ಶೂದ್ರಃ ಮಾತಾ ಸಾ ಪ್ರಥಮಂ ಶೂದ್ರಾಣಿ ।
ನ ಚೋಪದೇಶಃ ಗಾಯತ್ರೀ ನ ಚೌ ಮೌಂಜೀ ನ ಚ ಕ್ರಿಯಾ' ॥

ಹುಟ್ಟುವಾಗ ಶೂದ್ರನಾಗಿ ಹುಟ್ಟುತ್ತಾನೆ. ಅವನ ತಾಯಿಯು ಮೊದಲ ಶೂದ್ರಳು. ಗಾಯತ್ರಿ ಮಂತ್ರದ ಉಪದೇಶವಾಗಿರುವುದಿಲ್ಲ.ಮುಂಜಿಯೂ ಇಲ್ಲ. ಕ್ರಿಯೆಯೂ ಇಲ್ಲ.

೪. 'ತಪಸಾ ಬ್ರಾಹ್ಮಣೋऽಭವತ್ ಸಾಂಖ್ಯಾಯನ ಮಹಾಮುನಿಃ
ತಪಸಾ ಬ್ರಾಹ್ಮಣೋऽಭವತ್ ಗೌತಮಸ್ತು ಮಹಾಮುನಿಃ
ಜಾತಿಂ ನ ಕಾರಯೇತ್ತೇಷು ಶ್ರೇಷ್ಠಾಃ ಸಮಭವಂಸ್ತತಃ ॥
ತಜ್ಜಾತಿರಭವತ್ತೇನ·

ತಪಸ್ಸಿನಿಂದ ಸಾಂಖ್ಯಾಯನ ಮಹಾಮುನಿಯು ಬ್ರಾಹ್ಮಣನಾದನು. ತಪಸ್ಸಿನಿಂದ ಗೌತಮ ಮಹಾಮುನಿಯು ಬ್ರಾಹ್ಮಣನಾದನು. ಆದ್ದರಿಂದ ಜಾತಿಯು ಅವರನ್ನು ಶ್ರೇಷ್ಠರನ್ನಾಗಿ ಮಾಡಲಿಲ್ಲ. ಅನಂತರ ಆದರು. ಅವರಿಂದ ಜಾತಿಯಾಯಿತು.

೬. ಆದೌ ರುದ್ರಾಂಗಮುತ್ಪತ್ತಿಃ ಮುಖೇ ಬ್ರಾಹ್ಮಣವೀಶ್ವರಃ ।
ವಿಷ್ಣುಂ ಕ್ಷತ್ರಿಯಮಿತ್ಯಾಹುರ್ಬಾಹುನಾ ಚ ಅವಸ್ಥಿತಃ ॥
ವೈಶ್ಯಶ್ಚ ಬ್ರಹ್ಮಾ ಇತ್ಯಾಹುಃ ಲಿಂಗಾದೇವ ಅವಸ್ಥಿತಃ ।
ಸುರಪೋ ಶೂದ್ರಯಿತ್ಯಾಹುಃ ದೇವಪಾದಾದವಸ್ಥಿತಃ ॥

ರುದ್ರನ ದೇಹದ ಅಂಗವಾದ ಮುಖದಲ್ಲಿ ಹುಟ್ಟಿದವನು ಬ್ರಾಹ್ಮಣನು. ಆ ರುದ್ರನ ಬಾಹುವಿನಿಂದ ಹುಟ್ಟಿದ. ವಿಷ್ಣು ಕ್ಷತ್ರಿಯನೆಂದು ಹೇಳುತ್ತಾರೆ. ಲಿಂಗದಿಂದ ಹುಟ್ಟಿದ ಬ್ರಹ್ಮನು ವೈಶ್ಯನೆಂದು, ರುದ್ರದೇವನ ಪಾದದಿಂದ ಹುಟ್ಟಿದ ಇಂದ್ರನು ಶೂದ್ರನೆಂದು ಹೇಳಲಾಗುತ್ತದೆ.

೭. ಶ್ವಾನಸೂಕರರೂಪೇ ಪ್ರೇತಪಿಂಡ ಪ್ರದಾನತಃ ।
ಪ್ರೇತತ್ವಂ ಚ ಸದಾ ಸ್ಯಾತ್ ತಥಾ ಧರ್ಮೇಣ ಲುಪ್ಯತೇ ॥

ನಾಯಿ ಮತ್ತು ಹಂದಿಯ ರೂಪದಲ್ಲಿ ಪ್ರೇತಪಿಂಡ ಪ್ರದಾನ ಮಾಡುವುದರಿಂದ ಪ್ರೇತತ್ವವು ಸದಾ ಇರುತ್ತದೆ. ಹಾಗೂ ಧರ್ಮದಿಂದ ಲೋಪವಾಗುತ್ತದೆ.

೧೩. 'ಗೋಪೀ ಮಲಿನಧಾರೀ ತು ಶಿವಂ ಸ್ಪೃಶತಿ ಯೋ ದ್ವಿಜಃ ।
ತದೈಕ ವಿಂಶತಿಕುಲಂ ಸಾಕ್ಷಾತ್ತು ನರಕಂ ವ್ರಜೇತ್' ॥

ಮಲಿನವಾದ ಗೋಪೀಚಂದನವನ್ನು ಧರಿಸಿ ಶಿವನನ್ನು ಸ್ಪರ್ಶಿಸುವ ದ್ವಿಜನು ತನ್ನ ಇಪ್ಪತ್ತೊಂದು ಕುಲ ಸಹಿತ ನರಕದಲ್ಲಿ ಬೀಳುವನು.

೧೪. 'ವಿಯದ್ವಿಷ್ಣುಪದಂ ಪ್ರೋಕ್ತಂ ಪುಂಸ್ಯಾಕಾಶವಿಹಾಯಸೀ
ವಿಹಾಯಸೋऽಪಿನಾಕೋऽಪಿ ದ್ಯುರಪಿ ಸ್ಯಾತ್ತಿದವ್ಯಯಂ'

ಇದು ಅಮರಕೋಶದಲ್ಲಿ ಬರುತ್ತದೆ. ಆಕಾಶಕ್ಕಿರುವ ಹೆಸರುಗಳಲ್ಲಿ 'ವಿಷ್ಣುಪಾದ' ಎಂದೂ ಇದೆ. ವಾಮನನು ತ್ರಿವಿಕ್ರಮನಾದುದು ಆಕಾಶಕ್ಕೆ ತನ್ನೊಂದು ಕಾಲನ್ನು ತಾಕಿಸಿದ್ದರಿಂದ. ಅದು 'ವಿಷ್ಣುಪಾದ' ಎಂದಾಯಿತು. ಆಗ ಗಂಗೆ ಹುಟ್ಟಿದಳು. ಹಾಗಾಗಿ ಗಂಗೆಗೆ ವಿಷ್ಣುಪಾದೋದ್ಭವೆ ಎಂದೂ ಹೆಸರಿದೆ.

೧೭ ಅಸಂಖ್ಯಕೋಟಿಬ್ರಹ್ಮಾಣಾಂ ಕೋಟಿವಿಷ್ಣುಗಣಂ ತತಃ।
ಗಂಗಾವಾಲುಕ ಸಮೌ ಹೇತೌ ಕಿಂಚಿದಜ್ಞಾಃ ನ ಮಹೇಶ್ವರಾತ್ ॥

ಅಸಂಖ್ಯ ಕೋಟಿ ಬ್ರಹ್ಮರಲ್ಲಿ ಕೋಟಿ ವಿಷ್ಣುಗಣ. ಗಂಗೆಯ ಮೇಲಿನ ಮರಳಿಗೆ ಸಮರಾದ ಅವರುಗಳು ಮಹೇಶ್ವರನಿಂದಾಗಿ ಕಿಂಚಿದಜ್ಞರಲ್ಲ.

211

'ಜ್ವಲತ್ಕಾಲಾನಲಾಭಾಸಾ ತಟಿತ್‌ಕೋಟಿಸಮಪ್ರಭಾ।
ತಸ್ಯೋರ್ಧ್ವೇ ತು ಶಿಖಾ ಸೂಕ್ಷ್ಮಾ ಚಿದ್ರೂಪಾ ಪರಮಾ ಕಲಾ ॥
ಯಾ ಕಲಾ ಪರಮಾ ಸೂಕ್ಷ್ಮಾ ತತ್ತ್ವಾನಾಂ ಬೋಧಿನೀ ಪರಾ।
ತಾಮಾಕರ್ಷ್ಯ ಯಥಾನ್ಯಾಯಂ ಲಿಂಗೇ ಸಮುಪವೇಶಯೇತ್ ॥
ಪ್ರಾಣಪ್ರತಿಷ್ಠಾಮಂತ್ರಂ ಚ ಮೂಲಮತ್ರಂ ಪಠೇದಪಿ।
ಅಥಾಸ್ಮಿನ್ ಸಂಸ್ಕೃತೇ ಲಿಂಗೇ ಸುಸ್ಥಿರೋ ಭವ ಸರ್ವದಾ ॥

ಲಿಂಗಪ್ರತಿಷ್ಠೆಮಾಡುವುದು: ಪ್ರಜ್ವಲವಾಗಿ ಉರಿಯುತ್ತಿರುವ ಪ್ರಳಯಕಾಲದ ಬೆಂಕಿಯಂತಿರುವ ಕೋಟಿ ಮಿಂಚುಗಳ ಪ್ರಭೆಗೆ ಸಮನಾಗಿರುವ ಅದರ ಅರ್ಧದಲ್ಲಿ ಸೂಕ್ಷ್ಮವಾದ ಚಿದ್ರೂಪದ ಪರಮವಾದ ಶಿಖಾಕಲೆಯಿದೆ. ಪರಮ ಸೂಕ್ಷ್ಮವಾದ ಪರಾತತ್ತ್ವ ಬೋಧಿನಿಯಾದ ಕಲೆ ಅದು. ಅದನ್ನು ಆಕರ್ಷಿಸಿ ಆಗಮನ್ಯಾಯ ತರ್ಕೋನ್ಯಾಯ ಮೊದಲಾದವುಗಳಿಗೆ ತಕ್ಕಂತೆ ಲಿಂಗದಲ್ಲಿ ಪ್ರವೇಶಗೊಳಿಸಿ, ಪ್ರಾಣಪ್ರತಿಷ್ಠೆಯ ಮಂತ್ರ ಮತ್ತು ಮೂಲಮಂತ್ರಗಳನ್ನು ಪಠಿಸುವುದು. ಈ ಸಂಸ್ಕಾರಗೊಂಡ ಲಿಂಗದಲ್ಲಿ ಸದಾಕಾಲ ಸುಸ್ಥಿರವಾಗಿರು.

214

೨. ಪಶುರ್ನಾಥಃ ಶಿವಸ್ತಸ್ಮಾತ್ ಪಶೂನಾಂ ಪತಿರಿತ್ಯಭೂತ್।
ಪಶುಪಾಶವಿನಿರ್ಮುಕ್ತ್ಯೈ ಗುರೋರಾಜ್ಞಾಂ ನಿರೀಕ್ಷಯೇತ್ ॥

ಶಿವನು ಪಶುಗಳೊಡೆಯನು. ಆದ್ದರಿಂದ ಪಶುಪತಿ ಎಂದಾದನು. ಪಶುಪಾಶದಿಂದ ಮುಕ್ತರಾಗಬೇಕೆನ್ನುವವರು ಗುರುವಿನ ಆಜ್ಞೆಯನ್ನು ನಿರೀಕ್ಷಿಸಬೇಕು.

೪. ಸ್ವಾನುಭಾವೇ ತು ಸಂಬಂಧಿ ಕ್ರಿಯಾಲಿಂಗಸ್ಯ ಪೂಜನಂ।
ನಿಷ್ಕ್ರಿಯಂ ಪ್ರಾಣಲಿಂಗಂ ತು ಕ್ರಿಯಾಲಿಂಗಸ್ಯ ಪೂಜನಂ ॥

ಕ್ರಿಯಾಲಿಂಗದ ಪೂಜೆಯ ತನ್ನ ಅನುಭಾವಸಂಬಂಧಿಯಾದ್ದು. ಕ್ರಿಯಾಲಿಂಗದ ಪೂಜೆಯು ಬಾಹ್ಯ ಲಿಂಗಾರ್ಚನೆಯಾದ ಕಾರಣ, ಕ್ರಿಯಾಲಿಂಗದ ಪೂಜೆಯಿಂದ ಪ್ರಾಣಲಿಂಗದ ಪೂಜೆಯು ನಿಷ್ಕ್ರಿಯವಾಗುತ್ತದೆ.

222

ಪ್ರೇರಣ ಪ್ರೇರಕಃ ಶ್ರೀಮಾನ್ ದ್ವಯರೂಪಿ ಸುಮಂತ್ರರಾಟ್ ।
ಅನುಗ್ರಹಂ ವಿನಾ ಸತ್ಯ ಅನುಗ್ರಾಹತಾ ಕುತಃ ॥
ಕಾರುಣ್ಯತ್ವೇನ ಯೋ ಯಸ್ಮಾದಾತ್ಮಯೋಗಸ್ಸುದುರ್ಲಭಃ

ಸುಮಂತ್ರಾಧಿಪತಿಯು (ಮಂತ್ರರಾಜ) ಪ್ರೇರಣ ಪ್ರೇರಕ ಎಂದು ದ್ವಿರೂಪಿಯಾದ್ದು. ಅನುಗ್ರಹವಿಲ್ಲದೆ ಸತ್ಯದ ಅನುಗ್ರಾಹತೆ ಎಲ್ಲಿಂದ ಬಂತು? ಕಾರುಣ್ಯದಿಂದ ಮಾತ್ರ ಲಭಿಸುವ ಆತ್ಮಯೋಗವು ದುರ್ಲಭವಾದ್ದು.

225

ಪಯೋಹಾರೀ ತು ಮಾರ್ಜಾಲೋ ನಗ್ನೋ ಮುಗ್ಧಃ ಪಿಶಾಚವತ್ ।
ನಿತ್ಯಸ್ನಾನಶ್ಚ ಕಾಕಶ್ಚ ವಾಲ್ಮೀಕಾಃ ಸರ್ಪಜಾತಯಃ ॥
ತೃಣಂ ಭಕ್ಷಂತಿ ಪಶವಃ ವನವಾಸಿಮೃಗಾಸ್ತಥಾ ।
ಮಾಸ್ತು ಚೈತಾನಿ ಕಾರ್ಯಾಣಿ ನ ಕರೋತಿ ಹಿ ಪಾರ್ವತಿ ॥

ಬೆಕ್ಕು ಹಾಲನ್ನು ಆಹಾರವಾಗುಳ್ಳದು, ಮುಗ್ಧನು ಪಿಶಾಚಿಯ ಹಾಗೆ ನಗ್ನನಾಗಿರುತ್ತಾನೆ. ಕಾಗೆಯು ದಿನವೂ ಸ್ನಾನ ಮಾಡುತ್ತದೆ. ಸರ್ಪಗಳು ಹುತ್ತದ ವಾಸಿಗಳು. ಹಸುಗಳು ಹುಲ್ಲು ತಿನ್ನುತ್ತವೆ. ಮೃಗಗಳೂ ವನವಾಸಿಗಳೇ. ಇಂಥ ಕಾರ್ಯಗಳನ್ನು ಮಾಡತಕ್ಕುದಲ್ಲ.

235

೨. ಮಾಹೇಶ್ವರಜ್ಯೋತಿರಿದಮಾ ಪಾತಾಲೇ ವ್ಯವಸ್ಥಿತಂ ।
ಅತೀತಂ ಸತ್ಯಲೋಕಾಧೀನಸನಂತಂ ದಿವ್ಯಮೀಶ್ವರಂ ॥

ಅನಂತವೂ, ದಿವ್ಯವೂ, ಈಶ್ವರವೂ ಆದ ಈ ಮಾಹೇಶ್ವರ ಜ್ಯೋತಿಯು ಪಾತಾಳದಾಳದಲ್ಲಿ ಸ್ಥಾಪಿತವಾಗಿದ್ದು ಸತ್ಯಲೋಕದಾಚೆಗೂ ವ್ಯಾಪಿಸಿದೆ.

242

೧. ಸಾಲೋಕ್ಯಂ ಚ ತು ಸಾಮಿಪ್ಯಂ ಸಾರೂಪ್ಯಂ ಚ ಸಾಯುಜ್ಯತಾ ।
ತತ್ಪದೇಭ್ಯೋ ವಿಶೇಷಶ್ಚ ಶಿವದಾಸೋಹ ಉತ್ತಮಃ ॥

ಸಾಲೋಕ್ಯ, ಸಾಮಿಪ್ಯ, ಸಾರೂಪ್ಯ ಮತ್ತು ಸಾಯುಜ್ಯತೆ ಇವುಗಳಲ್ಲಿ ಅವನ ಪಾದಗಳಲ್ಲಿ ಶಿವದಾಸೋಹವು ವಿಶೇಷವೂ ಉತ್ತಮವೂ ಆದದ್ದು.

246

೧. ಶಿವಲಿಂಗಾಂಗ ಸಂಪನ್ನೋ ಲಿಂಗಬಾಹ್ಯಸತೀಸುತಾನ್ ।
ಆಲಿಂಗ್ಯ ಚುಂಬನಂ ಕೃತ್ವಾ ರೌರವಂ ನರಕಂ ವ್ರಜೇತ್ ॥

ಶಿವಲಿಂಗಧಾರಿಯಾದವನು ಲಿಂಗಬಾಹ್ಯರಾದ ಸತೀ, ಸುತರನ್ನು ಆಲಿಂಗಿಸುವುದು, ಚುಂಬಿಸುವುದು ಮಾಡಿದರೆ, ರೌರವ ನರಕಕ್ಕೆ ಹೋಗುತ್ತಾನೆ.

250

೨. **ಅಶನೇ ಶಯನೇ ಯಾನೇ ಸಂಪರ್ಕೇ ಸಹಭೋಜನೇ ।**
ಸಂಚರಂತಿ ಮಹಾಘೋರೇ ನರಕೇ ಕಾಲಮಕ್ಷಯಂ ॥

ಶಿವಾಚಾರಸಂಪನ್ನನು ಅನ್ಯರೊಂದಿಗೆ ಭೋಜನ ಮಾಡುವುದು, ಮಲಗುವುದು, ಜೊತೆಯಲ್ಲಿ ಸಂಚರಿಸುವುದು, ಸಂಪರ್ಕ ಹೊಂದುವುದು ಇತ್ಯಾದಿ ಮಾಡಿದಲ್ಲಿ ಅನಂತಕಾಲದವರೆಗೆ ಮಹಾಘೋರವಾದ ನರಕದಲ್ಲಿ ಸಂಚರಿಸುತ್ತಾನೆ.

252

೩. **ಸರ್ವಶಕ್ತಿಮಯಃ ಪ್ರೋಕ್ತಃ ಪುರುಷ ಏಕಶ್ಶಿವಸ್ತಥಾ ।**
ಭಕ್ತಿಪ್ರಸನ್ನಸ್ಸರ್ವೇಷಾಂ ಯಥಾ ಭಕ್ತಿಸ್ತಥಾ ಶಿವಃ ॥

ಶಿವನೊಬ್ಬನೇ ಸರ್ವಶಕ್ತಿಮಯನಾದ ಪುರುಷನೆಂದು ಹೇಳಿದೆ. ಭಕ್ತಿಯಿಂದ ಎಲ್ಲರೂ ಪ್ರಸನ್ನರಾಗುವರು. ಭಕ್ತಿಯಂತೆ ಶಿವನು.

೪. **ಸಕಲಶ್ಶಕ್ತಿರೂಪಶ್ಚ ಶಿವ ಏಕೋ ನಿಷ್ಕಲಸ್ತಥಾ ।**
ಶಕ್ತ್ಯಧೀನಃ ಪ್ರಪಂಚಸ್ಸ್ಯಾದ್ಯಥಾಭಕ್ತಿಸ್ತಥಾ ಶಿವಃ ॥

ಎಲ್ಲವೂ ಶಕ್ತಿರೂಪನಾದ ಶಿವನೊಬ್ಬನೇ ನಿಷ್ಕಲನು. ಪ್ರಪಂಚವು ಶಕ್ತಿಯ ಅಧೀನ. ಭಕ್ತಿಯಂತೆ ಶಿವನು.

೭. **ಸರ್ವೇಷಾಂ ಶಕ್ತಿರೂಪಂ ಚ ಪುರುಷಾದ್ವೈತಂ ಪರಶಿವಃ ।**
ಯಥಾಶಕ್ತಿಸ್ತಥಾ ಪುರುಷ ಏಕ ರುದ್ರ ಇತಿ ಸ್ಮೃತಃ ॥

ಸಕಲಶಕ್ತಿರೂಪನಾದ ಅದ್ವೈತ ಪುರುಷ ಪರಶಿವನೊಬ್ಬನೇ. ಶಕ್ತಿಯು ಹೇಗೋ ಪುರುಷನು ಹಾಗೆ. ರುದ್ರನೊಬ್ಬನೇ ಎಂದು ಹೇಳಿದೆ.

೮. **ಯಸ್ಯ ಚಿತ್ತಂ ಶಿವೇ ಲೀನಂ ತಸ್ಯ ಜಾತ್ಯಾದಿ ನ ಸ್ಮರೇತ್ ।**
ಶಿವಲಿಂಗೇ ಶಿಲಾಬುದ್ಧಿಂ ಕುರ್ವಾಣ ಇವ ಪಾತಕೀ ॥

ಯಾರ ಮನಸ್ಸು ಶಿವನಲ್ಲಿ ಲೀನವಾಗಿರುತ್ತದೋ ಅವನ ಜಾತಿ ಇತ್ಯಾದಿಗಳನ್ನು ಎಣಿಸಬಾರದು. ಶಿವಲಿಂಗದ ವಿಷಯದಲ್ಲಿ ಮನಸ್ಸನ್ನು ಕಲ್ಲು ಮಾಡಿಕೊಂಡವನು ಪಾತಕಿ.

೯. **ಸತ್ಯಭಾವಿ ಮಹತ್ಸತ್ಯಂ ಸತ್ಯಂ ಸ್ಯಾಚ್ಛಿವಲಕ್ಷಣಂ ।**
ನಿತ್ಯಭಾವಿ ಮಹನ್ನಿತ್ಯಂ ಸತ್ಯಂ ಸ್ಯಾಚ್ಛಿವಲಕ್ಷಣಂ ॥

ಎಲ್ಲವೂ ಸತ್ಯವೆಂದು ಭಾವಿಸುವವನಿಗೆ ಸತ್ಯವು ಮಹತ್ತಾದ್ದು. ಸತ್ಯವೇ ಶಿವನ ಲಕ್ಷಣ. ಎಲ್ಲಾ ನಿತ್ಯವೆಂದು ಭಾವಿಸುವವನಿಗೆ ನಿತ್ಯವು ಮಹತ್ತಾದ್ದು. ಸತ್ಯವೇ ಶಿವಲಕ್ಷಣ.

೧೧. ವೇದಾತೀತಂ ಮನೋತೀತಮಾಗಮಾತೀತಮಾರ್ಗಿಕಂ।
ಶಾಸ್ತ್ರಾತೀತಂ ಮಹಾಶಾಸ್ತ್ರೀ ತತ್ಸ್ಯಾಜ್ಜಂಗಮಲಕ್ಷಣಂ ॥

ಜಂಗಮನ ಲಕ್ಷಣವೆಂದರೆ ಅವನು ವೇದಾತೀತನು. ಆಗಮಕ್ಕೆ ಅತೀತನು. ಮನಸ್ಸಿಗೆ ಅತೀತನು. ಮಾರ್ಗಾತೀತನು. ಶಾಸ್ತ್ರಕ್ಕೆ ಅತೀತನು. ಮಹಾಶಾಸ್ತ್ರೀ.

೧೫. ಸರ್ವಸಂಗಪರಿತ್ಯಾಗೀ ಲಿಂಗಸಂಗೀ ನಿರಂತರಂ।
ದ್ವಂದ್ವೇ ತು ಸಮದೃಷ್ಟಿಸ್ಯಾತ್ ತತ್ಸ್ಯಾಜ್ಜಂಗಮಲಕ್ಷಣಂ ॥

ಸರ್ವಸಂಗ ಪರಿತ್ಯಾಗಿಯೂ ನಿರಂತರ ಲಿಂಗಸಂಗಿಯೂ ಆದವನು. ಕಣ್ಣೆರಡಾದರೂ ಸಮದೃಷ್ಟಿ ಉಳ್ಳವನು. ಇದೇ ಜಂಗಮ ಲಕ್ಷಣ.

೧೬. ಘೃಣಾದೃಷ್ಟಿರ್ಘೃಣಾವಾಕ್ಯಂ ಘೃಣಾಮೂರ್ತಿರ್ನಿರಂತರಂ।
ಕ್ರಿಯಾಕರ್ಮಸು ವಿಜ್ಞಶ್ಚ ಶಿಕ್ಷಾಚಾರ್ಯ ಇತಿ ಸ್ಮೃತಃ ॥

ಕರುಣಾಪೂರ್ಣವಾದ ದೃಷ್ಟಿ ಉಳ್ಳವನು. ಕಾರುಣ್ಯ ತುಂಬಿದ ವಾಕ್ ಉಳ್ಳವನು. ಸದಾ ಕರುಣಾಮೂರ್ತಿ. ಕ್ರಿಯಾಕರ್ಮವನ್ನು ತಿಳಿದವನು. ಶಿಕ್ಷಾಚಾರ್ಯ ಎಂದು ಹೇಳಲಾದವನು.

೧೮. ಹನ್ಯಾತ್‌ಕ್ರುದ್ಧೋಪಿ ಚಾಕಾಶಂ ಕ್ಷುಧಾರ್ತಾ ಖಾದಯೇತ್ತುಷಂ।
ತ್ಯಕ್ತ್ವಾ ಲಿಂಗಾರ್ಚನಂ ಮೂಢೋ ಮುಕ್ತ್ಯರ್ಥೀ ತ್ರಿತಯಂ ವೃಥಾ ॥

ಲಿಂಗಾರ್ಚನೆಯನ್ನು ತ್ಯಜಿಸಿದ ಮೂಢನು ಆಕಾಶವನ್ನೇ ಪ್ರಹಾರ ಮಾಡುವಷ್ಟು ಕೋಪಗೊಳ್ಳಬಹುದು. ಹೊಟ್ಟನ್ನೇ ನುಂಗುವಷ್ಟು ಬಾಯಾರಬಹುದು. ಮೋಕ್ಷಾಪೇಕ್ಷೆಯು ಅವನಿಗೆ ವ್ಯರ್ಥ.

೧೯. ಶ್ವಪಚೋऽಪಿ ಮುನಿಶ್ರೇಷ್ಠಃ ಶಿವಭಕ್ತೋ ದ್ವಿಜಾಧಿಕಃ।
ಶಿವಭಕ್ತಿವಿಹೀನಸ್ತು ದ್ವಿಜೋऽಪಿ ಶ್ವಪಚಾಧಮಃ ॥

ಶಿವಭಕ್ತನಾದ ಮುನಿಶ್ರೇಷ್ಠನು ಜಾತಿಯಿಂದ ಶ್ವಪಚನೇ ಆದರೂ ದ್ವಿಜನಿಗಿಂತ ಹೆಚ್ಚು. ಶಿವಭಕ್ತಿಹೀನನಾದವನು ದ್ವಿಜನಾದರೂ ಶ್ವಪಚನಿಗಿಂತ ಅಧಮನು.

೨೧. ಉಪನೀತಸಹಸ್ರೇಭ್ಯೋ ಬ್ರಹ್ಮಚಾರೀ ವಿಶಿಷ್ಯತೇ।
ಬ್ರಹ್ಮಚಾರಿಸಹಸ್ರೇಭ್ಯೋ ವೇದಾಧ್ಯಾಯೀ ವಿಶಿಷ್ಯತೇ ॥
ವೇದಾಧ್ಯಾಯಿಸಹಸ್ರೇಭ್ಯಸ್ಸಾಗ್ನಿಹೋತ್ರೀ ವಿಶಿಷ್ಯತೇ।
ಅಗ್ನಿಹೋತ್ರಿಸಹಸ್ರೇಭ್ಯೋ ಯಜ್ಞಯಾಜೀ ವಿಶಿಷ್ಯತೇ ॥
ಯಜ್ಞಯಾಜಿ ಸಹಸ್ರೇಭ್ಯಃ ಸತ್ರಯಾಜೀ ವಿಶಿಷ್ಯತೇ।
ಸತ್ರಯಾಜಿಸಹಸ್ರೇಭ್ಯಃ ಸರ್ವವಿದ್ಯಾರ್ಥಪಾರಗಃ ॥
ಸರ್ವವಿದ್ಯಾರ್ಥವಿತ್ಕೋಟ್ಯಾ ಶಿವಭಕ್ತೋ ವಿಶಿಷ್ಯತೇ।

ಉಪನಯನವಾದ ಸಾವಿರ ಜನರಲ್ಲಿ ಬ್ರಹ್ಮಚಾರಿ ಶ್ರೇಷ್ಠನು. ಸಹಸ್ರ ಬ್ರಹ್ಮಚಾರಿಗಳಲ್ಲಿ ವೇದಾಧ್ಯಯನ ಮಾಡಿದವನು ಶ್ರೇಷ್ಠನು. ಸಹಸ್ರ ವೇದಾಧ್ಯಯಿಗಳಲ್ಲಿ ಅಗ್ನಿಹೋತ್ರಿಯು ಶ್ರೇಷ್ಠನು. ಸಹಸ್ರ ಅಗ್ನಿಹೋತ್ರಿಗಳಲ್ಲಿ ಯಜ್ಞಮಾಡಿಸುವವನು ಶ್ರೇಷ್ಠನು. ಸಹಸ್ರ ಯಜ್ಞಯಾಜಿಗಳಲ್ಲಿ ಸತ್ರಯಾಜಿ ಶ್ರೇಷ್ಠನು. ಸಹಸ್ರ ಸತ್ರಯಾಜಿಗಳಲ್ಲಿ ಸರ್ವ ವಿದ್ಯಾಪಾರಂಗತನು ಶ್ರೇಷ್ಠನು. ಕೋಟಿ ಸರ್ವವಿದ್ಯಾಪಾರಂಗತರಲ್ಲಿ ಶಿವಭಕ್ತನು ಶ್ರೇಷ್ಠನು.

೨೧ಎ. ನಿಕೃಷ್ಟಾಚಾರಜನ್ಮಾನೋ ವಿರುದ್ಧಾಲೋಕವೃತ್ತಿಷು ।
ಕೋಟಿಭ್ಯೋ ವೇದವಿದುಷಾಂ ಶ್ರೇಷ್ಠಾ ಮದ್ಭಾವಭಾವಿತಾಃ ॥

ಕೋಟ್ಯಂತರ ವೇದ ವಿದ್ವಾಂಸರಲ್ಲಿ, ನಿಕೃಷ್ಟವಾದ ಆಚಾರದಲ್ಲಿ ಹುಟ್ಟಿದವರು ಲೋಕವರ್ತನೆಗೆ ವಿರುದ್ಧವಾಗಿದ್ದರೂ, ನನ್ನನ್ನು ಭಾವಿಸುವವರು ಶ್ರೇಷ್ಠರು.

೨೨. **ಕ್ರಿಮಿಕೀಟಪತಂಗೇಭ್ಯಃ ಪಶವಃ ಪ್ರಜ್ಞಯಾಧಿಕಾಃ ।**
ಪಶುಭ್ಯೋಽಪಿ ನರಾಶ್ರೇಷ್ಠಾಸ್ತೇಷು ಶ್ರೇಷ್ಠಾ ದ್ವಿಜಾತಯಃ ॥
ದ್ವಿಜಾತಿಷ್ವಧಿಕಾ ವಿಪ್ರಾ ವಿಪ್ರೇಷು ಕ್ರತುಬುದ್ಧಯಃ ॥
ಕ್ರತುಬುದ್ಧಿಷು ಕರ್ತಾರಸ್ತೇಭ್ಯಃ ಸನ್ಯಾಸಿನೋಽಧಿಕಾಃ ॥
ತೇಭ್ಯೋ ವಿಜ್ಞಾನಿನಃ ಶ್ರೇಷ್ಠಾಸ್ತೇಷು ಶಂಕರಪೂಜಕಾಃ ।
ತೇಷು ಶ್ರೇಷ್ಠಾ ಮಹಾಭಾಗಾ ಮಮ ಲಿಂಗಾಂಗಸಂಗಿನಃ ॥
ಲಿಂಗಾಂಗಸಂಗಿಷ್ವಧಿಕಃ ಷಟ್‌ಸ್ಥಲಜ್ಞಾನವಾನ್ಪುಮಾನ್ ।
ತಸ್ಮಾದಪ್ಯಧಿಕೋ ನಾಸ್ತಿ ತ್ರಿಷು ಲೋಕೇಷು ಸರ್ವದಾ ॥

ಕ್ರಿಮಿಕೀಟ ಪತಂಗಗಳಲ್ಲಿ ಪಶುಗಳು ಪ್ರಜ್ಞೆಯಿಂದ ಶ್ರೇಷ್ಠ. ಪಶುಗಳಲ್ಲಿ ಮನುಷ್ಯನು ಶ್ರೇಷ್ಠ ಆ ಮನುಷ್ಯರಲ್ಲಿ ದ್ವಿಜರು ಶ್ರೇಷ್ಠ. ದ್ವಿಜರಲ್ಲಿ ವಿಪ್ರರು ಶ್ರೇಷ್ಠ. ವಿಪ್ರರಲ್ಲಿ ಕ್ರತುಬುದ್ಧಿಯವರು ಶ್ರೇಷ್ಠ. ಕ್ರತುಬುದ್ಧಿಯವರಲ್ಲಿ ಕರ್ತಾರರು ಶ್ರೇಷ್ಠರು. ಕರ್ತಾರರಲ್ಲಿ ಸನ್ಯಾಸಿಗಳು ಶ್ರೇಷ್ಠರು. ಸನ್ಯಾಸಿಗಳಲ್ಲಿ ವಿಜ್ಞಾನಿಗಳು ಶ್ರೇಷ್ಠರು. ವಿಜ್ಞಾನಿಗಳಲ್ಲಿ ಶಂಕರ ಪೂಜಕರು ಶ್ರೇಷ್ಠರು. ಶಂಕರ ಪೂಜಕರಲ್ಲಿ ನನ್ನ ಲಿಂಗಾಂಗಿಗಳು ಶ್ರೇಷ್ಠರು. ಲಿಂಗಾಂಗಿಗಳಲ್ಲಿ ಷಟ್‌ಸ್ಥಲಜ್ಞಾನಿಗಳಾದ ನರರು ಶ್ರೇಷ್ಠರು. ಅವರಿಗಿಂತ ಎಲ್ಲ ಕಾಲದಲ್ಲೂ ಶ್ರೇಷ್ಠರಾದವರು ಮೂರು ಲೋಕದಲ್ಲೂ ಇಲ್ಲ.

೨೭ **ಮಹಾಲಿಂಗಸಮಾಯುಕ್ತಂ ಶಿವಲಿಂಗಸ್ಯ ಲಕ್ಷಣಂ ॥**
ಜ್ಞಾನಾಚಾರೋ ಮಹಾಲಿಂಗಂ ಶಿವಲಿಂಗಂ ಚ ಜಂಗಮಃ

ಮಹಾಲಿಂಗದಿಂದ ಕೂಡಿಕೊಂಡಿರುವುದೇ ಶಿವಲಿಂಗದ ಲಕ್ಷಣ. ಜ್ಞಾನಾಚಾರವೇ ಮಹಾಲಿಂಗ, ಶಿವಲಿಂಗ ಮತ್ತು ಜಂಗಮ.

೨೮. **ಅಂಗಮಾಚಾರಮಾಶ್ರಿತ್ಯ ಆಚಾರಃ ಪ್ರಾಣಮಾಶ್ರಿತಃ ।**
ತತ್ಪ್ರಾಣೋ ಶಿವಲಿಂಗ ಚ ತಲ್ಲಿಂಗಂ ಜಂಗಮಾಶ್ರಿತಂ ॥

ಅಂಗವು ಆಚಾರವನ್ನು ಆಶ್ರಯಿಸಿದೆ. ಆಚಾರವು ಪ್ರಾಣವನ್ನು ಆಶ್ರಯಿಸಿದೆ. ಆ ಪ್ರಾಣವು ಶಿವಲಿಂಗವನ್ನು ಮತ್ತು ಆ ಲಿಂಗವು ಜಂಗಮವನ್ನು ಆಶ್ರಯಿಸಿದೆ.

260

೧. **ಅಖಿಲಾರ್ಣವಲಯಾನಾಂ ಲಿಂಗಂ ಮಖ್ಯಂ ಪರಂ ತಥಾ ।**
ಪರಂ ಗೂಢಂ ಶರೀರಸ್ಥಂ ಲಿಂಗಕ್ಷೇತ್ರಮನಾದಿವತ್ ॥
ಯದಾದ್ಯಮೈಶ್ವರಂ ತೇಜಸ್ತಲ್ಲಿಂಗಂ ಪಂಚಸಂಜ್ಞಕಂ ।

ಸಕಲ ಸಾಗರಗಳು ಹೋಗಿ ಸೇರುವ ಲಿಂಗವೇ ಮುಖ್ಯ ಮತ್ತು ಪರಮ. ಶರೀರಸ್ಥವಾದ ಲಿಂಗವು ಅತ್ಯಂತ ಗೂಢವಾದ್ದು. ಲಿಂಗಕ್ಷೇತ್ರವು ಅನಾದಿಯಿಂದೆಂಬಂತೆ ಶರೀರವೇ ಆಗಿದೆ. ಈಶ್ವರವು ಆದಿಯೂ ತೇಜೋಲಿಂಗವೂ, ಪಂಚ ಸಂಜ್ಞೆ ಉಳ್ಳದ್ದೂ ಆಗಿದೆ.

264

೧. **ಸದ್ಗುರೋರ್ಭಾವಲಿಂಗಂ ತು ಸರ್ವಬ್ರಹ್ಮಾಂಡಗಂ ಶಿವಂ ।**
ಸರ್ವಲೋಕಸ್ಯ ತ್ರಾಣತ್ವಾತ್ ಮುಕ್ತಿಕ್ಷೇತ್ರಂ ತಮುಚ್ಯತೇ ॥

ಸದ್ಗುರುವಿನ ಭಾವಲಿಂಗವು ಸರ್ವಬ್ರಹ್ಮಾಂಡವನ್ನೂ ಆವರಿಸಿರುವಂಥದು. ಸಕಲ ಲೋಕಗಳನ್ನೂ ರಕ್ಷಿಸುವ ಕಾರಣದಿಂದಾಗಿ ಅದನ್ನು ಮುಕ್ತಿಕ್ಷೇತ್ರವೆಂದು ಹೇಳಲಾಗುತ್ತದೆ.

೪. **ಬ್ರಹ್ಮಾ ವಿಷ್ಣುಶ್ಚ ರುದ್ರಶ್ಚ ಈಶ್ವರಶ್ಚ ಸದಾಶಿವಃ ।**
ಸರ್ವೇ ಲಿಂಗಾರ್ಚನಂ ಕೃತ್ವಾ ಜಾತಾಸ್ತೇ ಲಿಂಗಪೂಜಕಾಃ ॥

ಬ್ರಹ್ಮ, ವಿಷ್ಣು, ರುದ್ರ, ಈಶ್ವರ, ಸದಾಶಿವ ಎಲ್ಲರೂ ಲಿಂಗಾರ್ಚನೆ ಮಾಡಿ ಜನಿಸಿದವರು. ಎಲ್ಲರೂ ಲಿಂಗಪೂಜಕರು.

266

೧. **ಯೇ ರುದ್ರಲೋಕಾದವತೀರ್ಯ ರುದ್ರಾ ಮಾನುಷ್ಯಮಾಶ್ರಿತ್ಯ ಜಗದ್ಧಿತಾಯ।**
ಚರಂತಿ ನಾನಾವಿಧಚಾರುಚೇಷ್ಟಾಸ್ತೇಭ್ಯೋ ನಮಸ್ತ್ರ್ಯಂಬಕಪೂಜಕೇಭ್ಯಃ ॥

ಯಾವ ರುದ್ರನು ರುದ್ರಲೋಕದಿಂದ ಅವತರಿಸಿ ಮನುಷ್ಯರೂಪವನ್ನು ತಾಳಿ ಜಗತ್ತಿನ ಕಲ್ಯಾಣಕ್ಕೋಸ್ಕರ ನಾನಾ ವಿಧವಾದ ಸುಂದರ ಲೀಲೆಗಳಲ್ಲಿ ಚಲಿಸುತ್ತಿದ್ದಾನೋ ಆ ತ್ರಿಯಂಬಕಪೂಜಕನಿಗೆ ನಮಸ್ಕಾರ.

೨. **ಉಪಪಾತಕಕೋಟೀನಾಂ ಬ್ರಹ್ಮಹತ್ಯಶತಾನಿ ಚ ।**
ದಹಂತ್ಯಶೇಷಪಾಪಾನಿ ಶಿವಭಕ್ತಸ್ಯ ದರ್ಶನಾತ್ ॥

ಕೋಟಿಗಟ್ಟಲೆ ಸಣ್ಣ ಪಾತಕಗಳು, ನೂರು ಬ್ರಹ್ಮಹತ್ಯೆಗಳನ್ನು ಮಾಡಿದ ಪಾಪಗಳು ಹಾಗೂ ಸಕಲ ಪಾಪಗಳೂ ಶಿವಭಕ್ತನ ದರ್ಶನದಿಂದ ಸುಟ್ಟು ಹೋಗುತ್ತವೆ.

೩. ಮಹಾಪಾತಕಕೋಟಿಘ್ನಃ ಶ್ವಪಚೋಽಪಿ ಲಿಂಗಪೂಜಕಃ।
ತತ್ಸಂಭಾಷಣಾನ್ಮುಕ್ತಿರ್ಗಣಮುಖ್ಯಗಣೇಶ್ವರಃ ॥

ಶ್ವಪಚನಾದರೂ ಲಿಂಗಪೂಜಕನಾದವನು, ಕೋಟಿ ಮಹಾಪಾತಕಗಳನ್ನು ನಾಶಮಾಡಬಲ್ಲನು. ಗಣಮುಖ್ಯಗಣೇಶ್ವರನಾದ ಅವನೊಂದಿಗೆ ಮಾತನಾಡುವುದ ರಿಂದ ಮುಕ್ತಿ ಲಭಿಸುತ್ತದೆ. ಕೋಟಿ ಜನರನ್ನು ಕೊಂದ ಮಹಾಪಾಪದಿಂದ ಮುಕ್ತಿ ದೊರಕುವುದು.

271

೪. ತಿಲಷೋಡಶಭಾಗಂ ತು ತೃಣಾಗ್ರಾಂಬುಕಣೋಪಮಂ।
ಪಾದೋದಕಪ್ರಸಾದಾನಾಂ ಸೇವನಾನ್ ಮೋಕ್ಷಮಾಪ್ನುಯಾತ್ ॥

ಎಳ್ಳುಕಾಳಿನ ಹದಿನಾರನೇ ಒಂದು ಭಾಗದಷ್ಟು ಪ್ರಸಾದವನ್ನು ಸೇವಿಸಿದವನು ಮತ್ತು ಹುಲ್ಲಿನ ಮೇಲಿನ ಹನಿಯಷ್ಟು ಪಾದೋದಕವನ್ನು ಸೇವಿಸಿದವನು ಮೋಕ್ಷವನ್ನು ಹೊಂದುವನು.

೫. ಮರ್ತ್ಯವನ್ಮನುತೇ ಯಸ್ತು ಶಿವನಿಷ್ಠಂ ದ್ವಿಜಂ ನರಃ।
ಕುಂಭೀಪಾಕೇ ತು ಪತತಿ ನರಕೇ ಕಾಲಮಕ್ಷಯಂ ॥

ಶಿವನಲ್ಲಿ ನಿಷ್ಠೆಯುಳ್ಳ ದ್ವಿಜನನ್ನು ಮರ್ತ್ಯನೆಂದು ಭಾವಿಸಿದರೆ, ಅನಂತಕಾಲದವರೆಗೆ ಕುಂಭೀಪಾಕ ನರಕದಲ್ಲಿ ಬಿದ್ದಿರುವನು.

272

೧. ವಿತ್ತಂ ಚ ರಾಜವಿತ್ತಂ ಚ ಕಾಮಿನೀ ಕಾಮಕಾವಶಾ।
ಪೃಥಿವೀ ವೀರಭೋಜ್ಯಾ ಚ ಸ್ವಧನಂ ಧರ್ಮ ಏವ ಚ ॥

ಐಶ್ವರ್ಯವೇನಿದ್ದರೂ, ರಾಜನ ಐಶ್ವರ್ಯ, ಕಾಮಿನಿಯೇನಿದ್ದರೂ, ಕಾಮುಕನ ವಶವರ್ತಿ, ಪೃಥ್ವಿಯು ಸದಾ ವೀರ ಭೋಗ್ಯಳು. ಆದರೆ ತನ್ನ ಧನವು ಧರ್ಮಕ್ಕೆ ಮಾತ್ರ ಮೀಸಲು.

೨. ಅಧರ್ಮಾತ್ ಜಾಯತೇ ಕಾಮಃ ಕ್ರೋಧೋಽ ಧರ್ಮಾಚ್ಚ ಜಾಯತೇ।
ಧರ್ಮಾತ್ ಸಂಜಾಯತೇ ಮೋಕ್ಷಃ ತಸ್ಮಾದ್ಧರ್ಮಂ ಸಮಾಚರೇತ್ ॥

ಅಧರ್ಮದಿಂದ ಕಾಮ ಹುಟ್ಟುತ್ತದೆ. ಕ್ರೋಧವೂ ಅಧರ್ಮದಿಂದಲೇ ಹುಟ್ಟುತ್ತದೆ. ಧರ್ಮದಿಂದ ಮೋಕ್ಷ ಹುಟ್ಟುತ್ತದೆ. ಆದ್ದರಿಂದ ಧರ್ಮವನ್ನು ಸರಿಯಾಗಿ ಆಚರಿಸಬೇಕು.

೪. ನ ಮೇ ಪ್ರಿಯಶ್ಚತುರ್ವೇದೀ ಮದ್ಭಕ್ತ ಶ್ವಪಚೋಽಪಿ ವಾ।
ತಸ್ಮೈ ದೇಯಂ ತತೋ ಗ್ರಾಹ್ಯಂ ಯಥಾ ಪೂಜ್ಯಸ್ತಥಾಹಿ ಸಃ ॥

ನಾಲ್ಕು ವೇದಗಳನ್ನು ಓದಿದವನಾದರೂ ನನಗೆ ಪ್ರಿಯನಲ್ಲ. ನನ್ನ ಭಕ್ತನು ಶ್ವಪಚನಾದರೂ ಅವನಿಗೆ ಪೂಜ್ಯವಾದ್ದೆಲ್ಲವನ್ನು ಕೊಡುವುದು. ಅವನೇ ಗ್ರಾಹ್ಯಯೋಗ್ಯನು.

೫. ಚತುರ್ವೇದಧರೋ ವಿಪ್ರಃ ಶಿವಭಕ್ತಿವಿವರ್ಜಿತಃ ।
ದುಷ್ಟಚಾಂಡಾಲಭಾಂಡಸ್ಥಂ ಯಥಾ ಭಾಗೀರಥೀಜಲಂ ॥

ಶಿವಭಕ್ತಿವಿವರ್ಜಿನಾದ, ಚತುರ್ವೇದಗಳನ್ನು ಅಧ್ಯಯನ ಮಾಡಿದ ವಿಪ್ರನು ದುಷ್ಟನೂ ಚಾಂಡಾಲನೂ ಆದವನ ಪಾತ್ರೆಯಲ್ಲಿ ಗಂಗಾಜಲ ಇರುವಂತೆ.

೭ ಚಮುರ್ವೇದಧರೋ ವಿಪ್ರಃ ಸರ್ವಶಾಸ್ತ್ರವಿಶಾರದಃ ।
ಶಿವಜ್ಞಾನಂ ಜಾನಾತಿ ದರ್ವೀ ಪಾಕರಸಂ ಯಥಾ ॥

ಸರ್ವಶಾಸ್ತ್ರವಿಶಾರದನಾದ, ಚತುರ್ವೇದ ಪಾರಂಗತನಾದ, ಆದರೆ ಶಿವಜ್ಞಾನವಿಲ್ಲದ ವಿಪ್ರನು ಭೋಜನದಲ್ಲೇ ಮುಳುಗಿದ್ದರೂ ಭೋಜನದ ರಸವನ್ನು ಅರಿಯದ ಸೌಟಿನಂತೆ.

೧೦. ಸಾಲೋಕ್ಯಾದಪಿ ಸಾಮೀಪ್ಯಾತ್ ಸಾರೂಪ್ಯಾಚ್ಚ ಸಾಯುಜ್ಯಕಾತ್ ।
ಶಿವತತ್ತ್ವಾದಿಶೇಷಶ್ಚ ಸ್ವಯಂ ದಾಸೋಹ ಉತ್ತಮಃ ॥

ಸಾಲೋಕ್ಯದಿಂದ ಸಾಮೀಪ್ಯದಿಂದ ಸಾರೂಪ್ಯದಿಂದ, ಸಾಯುಜ್ಯದಿಂದ, ಶಿವತತ್ತ್ವಾದಿ ಶೇಷವು ಪ್ರಾಪ್ತವಾಗುತ್ತದೆ. ಸ್ವಯಂ ದಾಸೋಹವು ಉತ್ತಮ.

೧೩. ಸಕೃಲ್ಲಿಂಗಾರ್ಚಕೇ ದತ್ವಾ ಸುವರ್ಣಂ ಚಾಣುಮಾತ್ರಕಂ ।
ದೇವೈಶ್ಚ ಪೂಜ್ಯಮಾನಸ್ತುಗಣಮುಖ್ಯೋ ಗಣೇಶ್ವರಃ ॥

ಚೆನ್ನಾಗಿ ಲಿಂಗಪೂಜೆ ಮಾಡುವವನಿಗೆ ಅಣುಮಾತ್ರದಷ್ಟು ಸುವರ್ಣದಾನ ಮಾಡಿದರೂ ಅವನು ದೇವತೆಗಳಿಂದ ಪೂಜಿಸಲ್ಪಡುವ ಗಣಮುಖ್ಯನಾದ ಗಣೇಶ್ವರನಾಗುತ್ತಾನೆ.

೧೫. ಸತ್ಪಾತ್ರದತ್ತವಿತ್ತಂ ಚ ತದ್ದಾನಾದ್ ಸುಖಂ ಭವೇತ್ ।
ಅಪಾತ್ರದತ್ತವಿತ್ತಂ ಚ ತದ್ದಾನಾದಸುಖಂ ಭವೇತ್ ॥

ಸತ್ಪಾತ್ರರಿಗೆ ನೀಡಿದ ಐಶ್ವರ್ಯದ ದಾನದಿಂದ ಸುಖವಾಗುತ್ತದೆ. ಅಪಾತ್ರನಿಗೆ ನೀಡಿದ ಐಶ್ವರ್ಯದ ದಾನದಿಂದ ಅಸುಖವಾಗುತ್ತದೆ.

೧೬. ಕಿಂಚಿದ್ವೇದಮಯಂ ಪಾತ್ರಂ ಕಿಂಚಿತ್ಪಾತ್ರಂ ತಪೋಮಯಂ ॥
ಆಗಮಿಷ್ಯತಿ ಯತ್ಪಾತ್ರಂ ತತ್ಪಾತ್ರಂ ತಾರಯಿಷ್ಯತಿ ।

ಸ್ವಲ್ಪಮಟ್ಟಿಗೆ ವೇದಮಯವಾದ ಪಾತ್ರ ಕಿಂಚಿತ್ ತಪೋಮಯವಾದ ಪಾತ್ರ ಇವುಗಳಲ್ಲಿ ಯಾವ ಪಾತ್ರವು ಬರುತ್ತದೋ ಅದು ಪಾರು ಮಾಡುತ್ತದೆ.

೧೭ ನಿತ್ಯಂ ಲಿಂಗಾರ್ಚನಂ ಯಸ್ಯ ನಿತ್ಯಂ ಜಂಗಮಪೂಜನಂ ।
ನಿತ್ಯಂ ಗುರುಪದಧ್ಯಾನಂ ನಿತ್ಯಂ ನಿತ್ಯಂ ಸಂಶಯಃ ॥

ಯಾರು ನಿತ್ಯವೂ ಲಿಂಗಾರ್ಚನಾಪರನೋ, ಯಾರು ನಿತ್ಯವೂ ಜಂಗಮಪೂಜೆಯಲ್ಲಿ, ಗುರುವಿನ ಪಾದಧ್ಯಾನದಲ್ಲಿ ನಿರತನೋ ಅವನು ಶಾಶ್ವತನೆಂಬುದು ನಿತ್ಯ. ಅದರಲ್ಲೇನೂ ಸಂದೇಹವಿಲ್ಲ.

274

೨. 'ಓಂ ಜಯತತ್ವಾನಾಂ ಪುರುಷಮೇರು ಕಾಮ್ಯಾನಾಂ
ಪುಣ್ಯಜಪಧ್ಯಾನಾನಾಂ ಸರ್ವಜನ್ಮವಿನಾಶಿನಾಂ
ಆದಿ ಅನಾದಿ ಪಿತ್ರೂಣಾಂ ಅಜಕೋಟಿಸಹಸ್ರವಂದ್ಯಾನಾಂ
ದೇವಕೋಟಿ ಚರಣ ಕಮಲಾನಾಂ'

ತತ್ತ್ವಗಳಿಗೆ ಜಯವಾಗಲಿ. ಪುರುಷಶ್ರೇಷ್ಠನ ಬಯಕೆಗಳಿಗೆ ಜಯವಾಗಲಿ. ಪುಣ್ಯ ಜಪಧ್ಯಾನಗಳಿಗೆ ಜಯವಾಗಲಿ. ಸಕಲ ಜನ್ಮನಾಶಕನಿಗೆ ಜಯವಾಗಲಿ. ಆದಿ ಅನಾದಿ ಪಿತೃಗಳಿಗೆ, ಅಜಕೋಟಿ ಸಹಸ್ರ ವಂದ್ಯರಿಗೆ, ದೇವಕೋಟಿ ಚರಣ ಕಮಲಗಳಿಗೆ ಜಯವಾಗಲಿ.

275

೩. ಲೋಕಾಚಾರನಿಬಂಧೇನ ಲೋಕಾಲೋಕವಿವರ್ಜಿತಾಃ।
ಲೋಕಾಚಾರಂ ಪರಿತ್ಯಜ್ಯ ಪ್ರಾಣಲಿಂಗಪ್ರಸಾದಿನಃ॥

ಪ್ರಾಣಲಿಂಗಿಪ್ರಸಾದಿಗಳು ಲೋಕಾಚಾರದ ನಿಯಮದಿಂದ ಲೋಕಾಲೋಕ'ಗಳನ್ನು ಬಿಟ್ಟವರೂ, ಲೋಕಾಚಾರವನ್ನು ಪರಿತ್ಯಜಿಸಿದವರೂ ಆಗಿರುತ್ತಾರೆ.

283

೨. ಸಕೃತ್ ಲಿಂಗಾರ್ಚಕೇ ದತ್ವಾ ಸುವರ್ಣಂ ಚಾಣುಮಾತ್ರಕಂ।
ದೇವಸಂಪೂಜ್ಯಮಾನೇಷು ಗಣಮುಖ್ಯೋ ಗಣೇಶ್ವರಃ ॥

ಸರಿಯಾಗಿ ಲಿಂಗಪೂಜೆ ಮಾಡಿದವನಿಗೆ ಅಣುಮಾತ್ರದಷ್ಟು ಸುವರ್ಣ ದಾನ ಮಾಡಿದರೂ ಭೂಲೋಕದ ಒಡೆಯನಾಗಿ ಶಿವಸಾಯುಜ್ಯವನ್ನು ಹೊಂದುವನು.

292

೨. 'ವಾಚೋತೀತಂ ಮನೋತೀತಂ ಭಾವಾತೀತಂ ಪರಂ ಶಿವಂ
ಸರ್ವಶೂನ್ಯಂ ನಿರಾಕಾರಂ ನಿತ್ಯತ್ವಂ ಪರಮಂ ಪದಂ'

ಪರಶಿವನು ಮಾತಿಗೆ ಅತೀತನೂ, ಮನಕ್ಕೆ ಅತೀತನೂ, ಭಾವಕ್ಕೆ ಅತೀತನೂ ಆಗಿದ್ದಾನೆ. ಆ ಪರಮ ಪದನು ಸರ್ವಶೂನ್ಯನೂ ನಿರಾಕಾರನೂ ನಿತ್ಯನೂ ಆಗಿದ್ದಾನೆ.

೩. ದರ್ಶನಾತ್ ಶಿವಭಕ್ತನಾಂ ಸಕೃತ್ಸಂಭಾಷಣಾದಪಿ।
ಅತಿರಾತ್ರಸ್ಯ ಯಜ್ಞಸ್ಯ ಫಲಂ ಭವತಿ ನಾರದ ॥

ಶಿವಭಕ್ತರ ದರ್ಶನದಿಂದ, ಅವರೊಂದಿಗೆ ಒಳ್ಳೆಯ ಸಂವಾದ ಮಾಡುವುದರಿಂದ ಅತಿ ರಾತ್ರ ಯಜ್ಞದ ಫಲವುಂಟಾಗುತ್ತದೆ. (ಅತಿ ರಾತ್ರ ಯಜ್ಞವೆಂದರೆ ೧೧೧ ಜನ ೧೧೧ ಸಲ ಮಂತ್ರ ಹೇಳಿ ಮಾಡುವ ಯಜ್ಞ)

296

೧. ಉಪಪಾತಕಕೋಟೀನಾಂ ಬ್ರಹ್ಮಹತ್ಯಶತಾನಿ ಚ ।
ದಹಂತ್ಯಶೇಷಪಾಪಾನಿ ಶಿವಭಕ್ತಸ್ಯ ದರ್ಶನಾತ್ ॥

ಶಿವಭಕ್ತನ ದರ್ಶನವು ಕೋಟ್ಯಂತರ ಉಪಪಾತಕಗಳನ್ನು ನೂರು ಬ್ರಹ್ಮಹತ್ಯೆಗಳನ್ನೂ ಸಕಲ ಪಾಪಗಳನ್ನೂ ಸುಟ್ಟು ಹಾಕುತ್ತದೆ.

298

೧. ಸದ್ಗುರೋರ್ದೀಯತೇ ಲಿಂಗಂ ಸದ್ಗುರೋರ್ದೀಯತೇ ಕ್ರಿಯಾ ।
ಸದ್ಗುರೋರ್ದೀಯತೇ ಮಂತ್ರಂ ಸದ್ಗುರುಸ್ಸರ್ವಕಾರಣಂ ॥

ಸದ್ಗುರುವು ಲಿಂಗವನ್ನು, ಕ್ರಿಯೆಯನ್ನು ಹಾಗೂ ಮಂತ್ರವನ್ನು ನೀಡುತ್ತಾನೆ. ಸದ್ಗುರುವೇ ಎಲ್ಲಕ್ಕೂ ಕಾರಣ.

೩. ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ ।
ನಾದಬಿಂದುಕಲಾತೀತಂ ಗುರುಣಾ ಲಿಂಗಮುದ್ಭವಂ ॥

ಯಾವುದರಿಂದ ಮಾತುಗಳು ಮನಸ್ಸಿನೊಡನೆ ಅದನ್ನು ಮುಟ್ಟಲಾರದೆ ಹಿಂತಿರುಗುವುವೋ ಆ ಲಿಂಗವು ಗುರುವಿನಿಂದ ಉದ್ಭವಿಸುತ್ತದೆ.

304

೩. ಮದ್ಭಕ್ತಜನಮಾಹಾತ್ಮ್ಯಂ ಕೋ ವಾ ಜಾನಾತಿ ತತ್ತ್ವತಃ ।
ಜಾನೇಽಹಂ ತ್ವಂ ತು ಜಾನಾಸಿ ನಂದೀ ಜಾನಾತಿ ವಾ ಗುಹಃ ॥

ನನ್ನ ಭಕ್ತರ ಮಹಿಮೆಯನ್ನು ತತ್ತ್ವಶಃ ಯಾರು ತಾನೆ ತಿಳಿದಿದ್ದಾರೆ? ನನಗೆ ಗೊತ್ತು. ನಿನಗೆ ಗೊತ್ತು. ನಂದಿಗೆ ಗೊತ್ತು ಮತ್ತು ಗುಹನಿಗೆ ಗೊತ್ತು

307

೨. ವಿಪ್ರಸ್ಯ ದರ್ಶನಂ ಚೈವ ಪಾಪಪಂಜರಮೇವ ಚ ।
ವಿಪ್ರಸ್ಯ ವಂದನಂ ಚೈವ ಕೋಟಿಜನ್ಮಸು ಸೂಕರಃ ॥

ವಿಪ್ರನ ದರ್ಶನವೆಂದರೆ ಪಾಪಪಂಜರವೆಂದೇ. ವಿಪ್ರನಿಗೆ ನಮಸ್ಕರಿಸಿದರೆ ಕೋಟಿ ಜನ್ಮಗಳಲ್ಲಿ ಹಂದಿಯಾಗಿ ಹುಟ್ಟುವನು.

309

೧. ಯೋ ವಾಪ್ಯುತ್ಪಾಟಯೇಜ್ಜಿಹ್ವಾಂ ಶಿವನಿಂದಾರಕಸ್ಯ ತು ।
ತ್ರಿಸಪ್ತಕುಲಮುದ್ಧರೇತ್ ಶಿವಲೋಕೇ ಮಹೀಯತೇ ॥

ಶಿವನಿಂದೆ ಮಾಡುವವನ ನಾಲಿಗೆಯನ್ನು ಯಾರು ಕಿತ್ತು ಹಾಕುತ್ತಾರೋ ಅವನ ಇಪ್ಪತ್ತೊಂದು ಕುಲಗಳು ಉದ್ಧಾರವಾಗುತ್ತವೆ. ಶಿವಲೋಕದಲ್ಲಿ ಶ್ರೇಷ್ಠನೆನಿಸುತ್ತಾನೆ.

೨. ಶ್ರುತ್ವಾ ನಿಂದಾಂ ಶಿವಸ್ಯಾಥ ತತ್‌ಕ್ಷಣಾದ್ದೇಹಮುತ್ಸೃಜೇತ್ ।
ತಸ್ಯ ದೇಹನಿಹಂತಾ ಚೇತ್ ರುದ್ರಲೋಕಂ ಸ ಗಚ್ಛತಿ ॥

ಶಿವನಿಂದೆಯನ್ನು ಕೇಳಿದ್ದೇ ಆದರೆ ಆ ದೇಹವನ್ನು ತಕ್ಷಣ ಕೊಲ್ಲುವುದು. ಅವನ ದೇಹವನ್ನು ಕೊಂದದ್ದೇ ಆದರೆ ಅಂಥವನು ರುದ್ರಲೋಕಕ್ಕೆ ಹೋಗುವನು.

314

೧. ನಗರೀನಿರ್ಜರಾದ್ಯಂಬು ಗಂಗಾಂ ಪ್ರಾಪ್ಯ ಯಥಾ ತಥಾ ।
ದೀಕ್ಷಾಯೋಗಾತ್ತಥಾ ಶಿಷ್ಯಃ ಶೂದ್ರೋಽಪಿ ಶಿವತಾಂ ವ್ರಜೇತ್ ॥

ಕಾಶೀನಗರ ಮತ್ತು ನಿರ್ಜರಲೋಕದ ನೀರು ಗಂಗೆಯನ್ನು ಸೇರಿ ಗಂಗೆಯೇ ಆಗುವಂತೆ ದೀಕ್ಷಾಯೋಗದಿಂದ ಶೂದ್ರನಾದರೂ ಶಿಷ್ಯನು ಶಿವಸ್ಥಿತಿಯನ್ನು ಪಡೆಯುತ್ತಾನೆ.

320

೧. ಇದಂ ವಸ್ತು ಶಿವಸ್ಸಾಕ್ಷಾತ್ ಶಿವನಾಮ್ನಾ ವಿಧೀಯತೇ ।
ಸರ್ವವಸ್ತುಮಯೋ ದೇವಃ ಸಕಲೋ ನಿಷ್ಕಲೋ ಭವೇತ್ ॥

ಈ ವಸ್ತುವು ಶಿವನೆದುರಿನಲ್ಲಿ ಶಿವನ ಹೆಸರಿನಿಂದ ಇರುತ್ತದೆ. ದೇವನು ಸರ್ವವಸ್ತುಮಯನು. ಕಲಾಸಹಿತವಾದ್ದು ನಿಷ್ಕಲವಾಗುತ್ತದೆ.

೪. ದಗ್ಧಸ್ಯ ದಹನಂ ನಾಸ್ತಿ ಪಾಕಸ್ಯ ಪಚನಂ ಯಥಾ ।
ಜ್ಞಾನಾಗ್ನಿದಹನಂ ನಾಸ್ತಿ ನ ಚ ತತ್ರ ಕ್ರಿಯಾಧಿಕಾ ॥

ಈಗಾಗಲೇ ದಗ್ಧವಾದದ್ದಕ್ಕೆ ಮತ್ತೆ ದಹನವಿಲ್ಲ. ಪಾಕಕ್ಕೆ ಹೇಗೆ ಪಚನವಿಲ್ಲವೋ ಹಾಗೆ. ಜ್ಞಾನಗ್ನಿಗೆ ದಹನವಿಲ್ಲ. ಅಲ್ಲಿ ಕ್ರಿಯಾಧಿಕ್ಯವೂ ಇರುವುದಿಲ್ಲ.

326

೨. ಪಿಂಡಬ್ರಹ್ಮಾಂಡಯೋರೈಕ್ಯಂ ಲಿಂಗಸೂತ್ರಾತ್ಮನೋಽರಪಿ ।
ಸ ಬಾಹ್ಯಾಂತರಯೋರೈಕ್ಯಂ ಕ್ಷೇತ್ರಜ್ಞಪರಮಾತ್ಮನೋಃ ॥

ಲಿಂಗಸೂತ್ರಾತ್ಮನಾದರೂ ಪಿಂಡಬ್ರಹ್ಮಾಂಡಗಳ ನಡುವೆ ಐಕ್ಯವುಂಟು. ಕ್ಷೇತ್ರಜ್ಞ ಪರಮಾತ್ಮನೇ ಆದರೂ ಬಾಹ್ಯ ಮತ್ತು ಆಂತರ್ಯದಲ್ಲಿ ಐಕ್ಯವುಂಟು.

೪. ಮಹಾಲಿಂಗಮಿದಂ ದೇವಿ ಮನೋಽತೀತಮಗೋಚರಂ ।
ನಿರ್ನಾಮಂ ನಿರ್ಗುಣಂ ನಿತ್ಯಂ ನಿರಂಜನಂ ನಿರಾಮಯಂ ॥

ಈ ಮಹಾಲಿಂಗವು ಮನಸ್ಸಿಗೆ ಅತೀತವಾದ್ದು ಮತ್ತು ಅಗೋಚರವಾದ್ದು. ಅಲ್ಲದೆ ನಾಮ, ಗುಣ ರಹಿತವಾದ್ದು ಶಾಶ್ವತವಾದ್ದು. ನಿರಾಮಯವೂ (ರೋಗವಿಲ್ಲದ) ನಿರಂಜನವೂ (ದೋಷರಹಿತ) ಆದದ್ದು.

೫. ಆದ್ಯಂತಶೂನ್ಯಮಮಲಂ ಪರಿಪೂರ್ಣಮೇಕಂ
ಸೂಕ್ಷ್ಮಂ ಪರಾತ್ಪರಮನಾಮಯಮಪ್ರಮೇಯಂ
ಚಿಚ್ಛಕ್ತಿಸಂಸ್ಫುರಣರೂಥ ಮಹಾತ್ಮಲಿಂಗಂ।
ಭಾವೈಕಗಮ್ಯಮಜಡಂ ಶಿವತತ್ತ್ವಮಾಹುಃ ॥

ಆದಿಯಿಂದ ಅಂತ್ಯದವರೆಗೂ ಶೂನ್ಯವೂ, ಮಲರಹಿತವೂ ಪರಿಪೂರ್ಣವೂ, ಸೂಕ್ಷ್ಮವೂ, ಪರಾತ್ಪರವೂ ಆಮಯರಹಿತವೂ ಅಪ್ರಮೇಯವೂ (ಅಳೆಯಲಾಗದ, ಸಹನ) ಆದದ್ದು. ಶಿವತತ್ತ್ವವು ಚಿತ್ ಶಕ್ತಿಯನ್ನು ಸಂಸ್ಫುರಣಗೊಳಿಸುವಂಥ ಮಹಾಲಿಂಗವು. ಭಾವಕ್ಕೆ ಮಾತ್ರ ನಿಲುಕುವಂಥದ್ದು. ಚೈತನ್ಯರೂಪಿ (ಅಜಡಂ) ಎಂದು ಹೇಳಲಾಗುತ್ತದೆ.

೬. ಶಿವಂ ಪರಾತ್ಪರಂ ಸೂಕ್ಷ್ಮಂ ನಿತ್ಯಂ ಸರ್ವಗತಾವ್ಯಯಂ।
ಅನಿಂದಿತಮನೌಪಮ್ಯಮಪ್ರಮಾಣಮನಾಮಯಮ್ ॥

ಶಿವನು ಪರಾತ್ಪರನೂ, ಸೂಕ್ಷ್ಮನೂ, ಶಾಶ್ವತನೂ, ಎಲ್ಲೆಲ್ಲಿಯೂ ಇರುವವನೂ ನಾಶರಹಿತನೂ, ಅನಿಂದಿತನೂ, ಉಪಮೆಯಿಲ್ಲದವನೂ ಪ್ರಮಾಣಕ್ಕೆ (ಅಳತೆಗೆ) ಸಿಕ್ಕದವನೂ ಅನಾಮಯನೂ (ರೋಗರಹಿತನೂ) ಆದವನು.

೮. ಅನಂತಮವ್ಯಕ್ತಮಚಿಂತ್ಯಮೇಕಂ
ಹರಂ ತಮಾಶಾಂಬರಮಪ್ರಮೇಯಂ।
ಲೋಕೈಕನಾಥಂ ಭುಜಗೇಂದ್ರಹಾರಂ
ಅಜಂ ಪುರಾಣಂ ಪ್ರಣಮಾಮಿ ನಿತ್ಯಂ।

ಅಂತ್ಯವಿಲ್ಲದವನು, ಅವ್ಯಕ್ತನು, ಚಿಂತನೆಗೆ ನಿಲುಕದವನು (ಅಚಿಂತ್ಯ)) ಒಬ್ಬನೇ. ದಿಕ್ಕನ್ನೇ ಅಂಬರವಾಗುಳ್ಳ, ಅಳತೆಗೆ ಸಿಗದ (ಅಪ್ರಮೇಯ), ಲೋಕಕ್ಕೆಲ್ಲಾ ಒಬ್ಬನೇ ಒಡೆಯನೆನಿಸಿದ ಸರ್ಪಭೂಷಣನಾದ ಅನಾದಿಯಾದ (ಪುರಾಣಂ) ಬ್ರಹ್ಮನಿಗೆ ನಿತ್ಯವೂ ನಮಸ್ಕರಿಸುತ್ತೇನೆ.

೯. ಆಕಾಶಂ ಲಿಂಗಮಿತ್ಯಾಹುಃ ಪೃಥ್ವೀ ತಸ್ಯಾದಿಪೀಠಿಕಾ।
ಆಲಯಸ್ಸರ್ವಭೂತಾನಾಂ ಲಯನಾಲ್ಲಿಂಗಮುಚ್ಯತೇ ॥

ಆಕಾಶಕ್ಕೆ ಲಿಂಗವೆಂದು ಹೇಳಲಾಗುತ್ತದೆ. ಭೂಮಿಯು ಅದರ ಆದಿಪೀಠ. ಸಕಲ ಪ್ರಾಣಿಗಳ ಆಲಯ. 'ಲಯ' (ಗಮನ)ದಿಂದಾಗಿ ಲಿಂಗವೆಂದು ಹೇಳಿದೆ.

೧೦. ವಿಶ್ವತಶ್ಚಕ್ಷುರುತ ವಿಶ್ವತೋಮುಖೋ ವಿಶ್ವತೋಬಾಹುರುತ ವಿಶ್ವತಸ್ಪಾತ್
ಸಂಬಾಹುಭ್ಯಾಂ ಧಮತಿ ಸಂಪತತ್ರೈರ್ದ್ಯಾವಾಭೂಮೀ ಜನಯನ್ ದೇವ ಏಕಃ

ವಿಶ್ವತೋ ಚಕ್ಷು, ವಿಶ್ವತೋ ಮುಖ, ವಿಶ್ವತೋ ಬಾಹು ವಿಶ್ವತೋ ಪಾದನಾದ, ಬಾಹುಗಳಿಂದ ಜಗತ್ತನ್ನು ಹಿಡಿದಿಟ್ಟಿರುವ ಆಕಾಶ, ಪೃಥ್ವಿಗಳನ್ನು ಸೃಷ್ಟಿಸಿದ ದೇವನೊಬ್ಬನೇ.

೧೧. ಲಕಾರಂ ಲಯಸಂಪ್ರೋಕ್ತಂ ಗಕಾರಂ ಸೃಷ್ಟಿರುಚ್ಯತೇ ।
ಲಯಸಾದ್ಗಮಸಾಚ್ಚೈವ ಲಿಂಗಶಬ್ದಮಿಹೋಚ್ಯತೇ ॥

ಲಕಾರವು ಲಯವನ್ನು ಸೂಚಿಸುತ್ತದೆ. ಗಕಾರವು ಸೃಷ್ಟಿಯನ್ನು ಹೇಳುತ್ತದೆ. ಲಯನವೆಂದರೆ ಗಮನವೇ. ಹಾಗಾಗಿ ಲಿಂಗವೆಂದು ಹೇಳಿದೆ.

೧೪. ವಾಚಾತೀತಂ ಮನೋತೀತಂ ಭಾವಾತೀತಂ ನಿರಂಜನಂ ।
ಅವರ್ಣಮಕ್ಷರಂ ಬ್ರಹ್ಮ ನಿತ್ಯಂ ಧ್ಯಾಯಂತಿ ಯೋಗಿನಃ ॥

ವಾಕ್ಕಿಗೆ ಅತೀತನೂ, ಮನಸ್ಸಿಗೆ ಅತೀತನೂ ಭಾವಕ್ಕೆ ಅತೀತನೂ ನಿರಂಜನನೂ, ವರ್ಣರಹಿತನೂ ನಾಶರಹಿತನೂ ಆದ ಬ್ರಹ್ಮನನ್ನು ನಿತ್ಯವೂ ಯೋಗಿಗಳು ಧ್ಯಾನಿಸುವರು.

೧೫. ಆಯಂ ಮೇ ಹಸ್ತೋ ಭಗವಾನ್ ಅಯಂ ಮೇ ಭಗವತ್ತರಃ ।
ಅಯಂ ಮೇ ವಿಶ್ವಭೇಷಜೋಽಯಂ ಶಿವಾಭಿಮರ್ಶನಃ ॥
ಅಯಂ ಮಾತಾ ಅಯಂ ಪಿತಾ ಅಯಂ ಜೀವಾತುರಾಗಮ್ ॥

ಅಂಗೈಯಲ್ಲಿ ಲಿಂಗವನ್ನು ಇರಿಸಿಕೊಂಡಾಗ ಹೇಳುವ ಮಂತ್ರ – "ಈ ನನ್ನ ಹಸ್ತದಲ್ಲಿ ಭಗವತ್ತರನಾದ ಭಗವಂತನು ಸನ್ನಿಹಿತನಾಗಿದ್ದಾನೆ. ಲೌಕಿಕದ ರೋಗಪೀಡಿತನಾದ ನನ್ನ ಪಾಲಿಗೆ ಶಿವನ ಸ್ಪರ್ಶವು ವಿಶ್ವಭೇಷಜ (ಔಷಧಿ). ಇದೇ ನನ್ನ ಮಾತೆ, ಇದೇ ನನ್ನ ತಂದೆ.

೧೬. ಸ ಬಾಹ್ಯಾಭ್ಯಂತರಂ ಸಾಕ್ಷಾಲ್ಲಿಂಗ ಜ್ಯೋತಿಃ ಪರಂ ಸ್ವಕಂ ।
ತಿಲೇ ತೈಲಮಿವಾಭಾತಿ ಅರಣ್ಯಾಮಿವ ಪಾವಕಃ ॥

ಎಳ್ಳಿನಲ್ಲಿ ಎಣ್ಣೆ ಇರುವಂತೆ ಕಾಡಿನಲ್ಲಿ ಬೆಂಕಿಯಿರುವಂತೆ ಅವನು ಅಂತರಂಗದಲ್ಲಿ ಬಹಿರಂಗದಲ್ಲಿ ಸಾಕ್ಷಾತ್ ಲಿಂಗ ಜ್ಯೋತಿ ರೂಪದಲ್ಲಿದ್ದಾನೆ.

೧೭. ಕ್ಷೀರೇ ಸರ್ಪಿರಿವ ಸ್ರೋತಸ್ಯಂಬುವತ್ ಸ್ಥಿತಮಾತ್ಮನಿ ।
ಏಕೋಽಯಂ ಪುರುಷೋ ವಿಶ್ವತೈಜಸಪ್ರಾಜ್ಞರೂಪತಃ ॥

ಕ್ಷೀರದಲ್ಲಿ ಕೊಬ್ಬು ಇರುವಂತೆ ನದಿಯಲ್ಲಿ ನೀರು ಇರುವಂತೆ ಆತ್ಮದಲ್ಲಿ ವಿಶ್ವ ತೇಜಸ್ಸಿನ ಪ್ರಾಜ್ಞರೂಪವಾಗಿ ಇರುವ ಈ ಒಬ್ಬ ಪುರುಷನು ಇವನೊಬ್ಬನೇ.

೦. ಹಸ್ತಮಸ್ತಕಸಂಯೋಗಾತ್ಕಲಾ ವೇಧೇತಿ ಗೀಯತೇ ।
ಗುರುಣೋದೀರಿತಾ ಕರ್ಣೇ ಸಾ ಮಂತ್ರೇತಿ ಕಥ್ಯತೇ ॥
ಶಿಷ್ಯಣೆತಲೇವತ್ತಾ ಸಾ ದೀಕ್ಷಾ ತು ಕ್ರಿಯೋಚ್ಯತೇ ॥

ಗುರುವು ಶಿಷ್ಯನ ಮಸ್ತಕದ ಮೇಲೆ ಹಸ್ತವನ್ನಿಟ್ಟು, ಇಷ್ಟಲಿಂಗ ಪ್ರದಾನಮಾಡುವುದರಿಂದ 'ಕಲಾ' ಎನ್ನಲಾಗುತ್ತದೆ. ಶಿಷ್ಯನ ಕಿವಿಯಲ್ಲಿ ಗುರುವು ಉಚ್ಚರಿಸುವ ಕಾರಣ 'ಮಂತ್ರ' ಎಂದು ಹೇಳಿದೆ. ಶಿಷ್ಯನ ಅಂಗೈಮೇಲೆ ಲಿಂಗವನ್ನು ನೀಡುವ ಕಾರಣ ಲಿಂಗದೀಕ್ಷಾಕ್ರಿಯೆ ಎಂದು ಹೇಳಿದೆ.

೨೧. ಅಂಗಂ ಚ ಲಿಂಗಂ ಚ ಮುಖಂ ಚ ಹಸ್ತಂ ಶಕ್ತಿಶ್ಚ ಭಕ್ತಶ್ಚ ತಥಾರ್ಪಣಂ ಚ ।
ಆನಂದಮೇವ ಸ್ವಯಮರ್ಪಣಂ ಚ ಪ್ರಸಾದರೂಪೇಣ ಭವೇತ್ರಿತತ್ತ್ವಂ ॥

ಅಂಗ, ಲಿಂಗ ಮತ್ತು ಮುಖ ಹಾಗೂ ಹಸ್ತ, ಶಕ್ತಿ, ಭಕ್ತ ಮತ್ತು ಅರ್ಪಣೆಯೂ ಸಹ ಆನಂದವೇ. ಸ್ವಯಂ ಅರ್ಪಣ ಹಾಗೂ ಮೂರು ತತ್ತ್ವಗಳು, ಪ್ರಸಾದ ರೂಪದಿಂದ ಆಗುತ್ತವೆ.

೨೨. ತದೇವ ಹಸ್ತಾಂಬುಜಪೀಠಮಧ್ಯೇ ನಿಧಾಯ ಲಿಂಗಂ ಪರಮಾತ್ಮಚಿಹ್ನಂ।
ಸಮರ್ಚಯೇದೇಕಧಿಯೋಪಚಾರರೈರ್ನರಶ್ಚ ಬಾಹ್ಯಾಂತರಭೇದಭಿನ್ನಂ ॥

ಪರಮಾತ್ಮ ಚಿಹ್ನವಾದ ಲಿಂಗವನ್ನು ಕರಕಮಲ ಪೀಠದ ಮಧ್ಯದಲ್ಲಿ ಇಟ್ಟು, ಬಾಹ್ಯಾಭ್ಯಂತರ ಭೇದರಹಿತನಾದ ಲಿಂಗವನ್ನು ಮನುಷ್ಯನು ಒಂದೇ ಮನಸ್ಸಿನಿಂದ ಪೂಜಿಸುವುದು.

೨೩. ಭಾವಪ್ರಾಣಶರೀರೇಷು ಲಿಂಗಂ ಸಂಸಾರಮೋಚಕಂ ।
ಧಾರಯೇದವಧಾನೇನ ಭಕ್ತಿನಿಷ್ಠಸ್ಸುಬುದ್ಧಿಮಾನ್ ॥

ನಿಷ್ಠನೂ ವಿವೇಕಿಯೂ ಆದ ಭಕ್ತನು ಸಂಸಾರ ಬಂಧನದಿಂದ ಮುಕ್ತಗೊಳಿಸುವ ಲಿಂಗವನ್ನು ಚಿತ್ತಾವಧಾನದಿಂದ, ಭಾವದಲ್ಲಿ ಪ್ರಾಣದಲ್ಲಿ ಮತ್ತು ಶರೀರದಲ್ಲಿ ಧರಿಸುವುದು.

328

೧. ಉಪಮನ್ಯುಃ ಪುರಾ ಯೋಗೀ ಮಂತ್ರೇಣಾನೇನ ಸಿದ್ಧಿಮಾನ್ ।
ಲಬ್ಧವಾನ್ಪರಮೇಶತ್ವಂ ಶೈವಶಾಸ್ತ್ರ ಪ್ರವಕ್ತೃತಾಂ ॥

ಶೈವಶಾಸ್ತ್ರದ ಪ್ರಸಿದ್ಧ ವಕ್ತೃವಾದ ಯೋಗಿ ಉಪಮನ್ಯುವು ಇದೇ ಮಂತ್ರದಿಂದ ಪರಮೇಶತ್ವವನ್ನು ಸಾಧಿಸಿದನು.

೨. ವಸಿಷ್ಠವಾಮದೇವಾದ್ಯಾ ಮುನಯೋ ಮುಕ್ತಕಿಲ್ಬಿಷಾಃ ।
ಮಂತ್ರೇಣಾನೇನ ಸಂಸಿದ್ಧಾ ಮಹಾತೇಜಸ್ವಿನೋಽಭವನ್ ॥

ವಸಿಷ್ಠ ವಾಮದೇವಾದಿ ಮುನಿಗಳು ಇದೇ ಮಂತ್ರದಿಂದ ಕಿಲ್ಬಿಷಗಳನ್ನು ಕಳೆದುಕೊಂಡು ಸಿದ್ಧಿಯನ್ನು ಪಡೆದು ಮಹಾತೇಜಸ್ವಿಗಳಾದರು.

೩. ಬ್ರಹ್ಮಾದೀನಾಂ ಚ ದೇವಾನಾಂ ಜಗತ್ಸೃಷ್ಟ್ಯರ್ಥಕಾರಣಂ ।
ಮಂತ್ರಸ್ಯಾಸ್ಯೈವ ಮಹಾತ್ಮ್ಯಾತ್ಸಾಮರ್ಥ್ಯಮುಪಜಾಯತೇ ॥

ಬ್ರಹ್ಮನೇ ಮೊದಲಾದ ದೇವತೆಗಳ ಜಗತ್‌ಸೃಷ್ಟಿಗೆ ಕಾರಣವಾದ ಈ ಮಂತ್ರದ ಮಹಾತ್ಮೆ ಮತ್ತು ಸಾಮರ್ಥ್ಯಗಳು ವೇದ್ಯ.

337

೧. ಶ್ರೂಯತಾಂ ಧರ್ಮಸರ್ವಸ್ವಂ ಶ್ರುತ್ವಾ ಚೈವಾವಧಾರ್ಯತಾಂ ।
ಆತ್ಮನಃ ಪ್ರತಿಕೂಲಂ ಚ ಪರೇಷಾಂ ನ ಸಮಾಚರೇತ್॥

ಧರ್ಮ ಸರ್ವಸ್ವವನ್ನು ಕೇಳಿಸಿಕೊಳ್ಳುವುದು. ಕೇಳಿಸಿಕೊಂಡು ಅವಧರಿಸುವುದು. ತನಗಾಗಲಿ, ಪರರಿಗಾಗಲಿ ಪ್ರತಿಕೂಲವನ್ನು ಮಾಡಕೂಡದು.

೨. **ಶಿವೋ ದಾತಾ ಶಿವೋ ಭೋಕ್ತಾ ಶಿವಸ್ಸರ್ವಮಿದಂ ಜಗತ್ ।**
ಶಿವೋ ಯಜತಿ ಸರ್ವತ್ರ ಯಶ್ಶಿವಸ್ಸೋಽಹಮೇವ ಚ॥

ಶಿವನೇ ದಾತೃ. ಶಿವನೇ ಭೋಕ್ತೃ. ಜಗತ್ತೆಲ್ಲವೂ ಶಿವಮಯ. ಶಿವನೇ ಯಾಗ ಮಾಡುವವನು. ಆ ಶಿವನು ನಾನೇ ಆಗಿರುವೆ

348

೧. **ಋತಂ ಸತ್ಯಂ ಪರಂ ಬ್ರಹ್ಮ ಪುರುಷಂ ಕೃಷ್ಣ ಪಿಂಗಲಂ ।**
ಊರ್ಧ್ವರೇತಂ ವಿರೂಪಾಕ್ಷಂ ವಿಶ್ವರೂಪಾಯ ವೈ ನಮಃ ॥

ಋತರೂಪಿಯೂ, ಸತ್ಯರೂಪಿಯೂ, ಪರಬ್ರಹ್ಮ ಪುರುಷನೂ ಆದವನು, ಊರ್ಧ್ವರೇತಸ್ಕನಾದ ವಿರೂಪಾಕ್ಷನು. ವಿಶ್ವರೂಪನಾದ ಅವನಿಗೆ ನಮಸ್ಕಾರ.

೨. **ಈಶಾನಸ್ಸರ್ವವಿದ್ಯಾನಾಮೀಶ್ವರಸ್ಸರ್ವಭೂತಾನಾಂ ಬ್ರಹ್ಮಾಧಿಪತಿ**
ಬ್ರಹ್ಮಣೋಽಧಿಪತಿರ್ಬ್ರಹ್ಮಾ ಶಿವೋ ಮೇಽಸ್ತು ಸದಾಶಿವೋಂ

ಸಕಲ ವಿದ್ಯೆಗಳಿಗೆ ಈಶಾನನೂ ಸರ್ವಭೂತಗಳ ಒಡೆಯನೂ ಬ್ರಹ್ಮಾಧಿಪತಿಯೂ, ಬ್ರಹ್ಮಣಾಧಿಪತಿಯೂ, ಆದ ಶಿವನು ನನಗೆ ಸದಾಶಿವನು.

೩. **ಪರಬ್ರಹ್ಮಾ ಚ ಈಶಾನ ಏಕೋ ರುದ್ರಸ್ಸ ಏವ ಚ ।**
ಭಗವಾನ್ ಮಹೇಶ್ವರಸ್ಸಾಕ್ಷಾನ್ಮಹಾದೇವೋ ನ ಸಂಶಯಃ ॥

ಪರಬ್ರಹ್ಮನೂ ಈಶಾನನೂ ಒಬ್ಬರೇ. ಅವನೇ ರುದ್ರನು. ಅವನೇ ಭಗವಾನ್ ಮಹೇಶ್ವರನೂ, ಸಾಕ್ಷಾತ್ ಮಹಾದೇವನೂ ಆಗಿದ್ದಾನೆ. ಅದರಲ್ಲಿ ಸಂದೇಹವೇ ಇಲ್ಲ.

೪. **ಯಸ್ಯಾಂತಸ್ಥಾನಿ ಭೂತಾನಿ ಯೇನೇದಂ ಧಾರ್ಯತೇ ಜಗತ್ ।**
ಬ್ರಹ್ಮೇತಿ ಯಂ ಜಹುರ್ವೇದಾಃ ಸರ್ವೇ ತಂ ಶರಣಂ ವ್ರಜೇತ್ ॥

ಯಾರ ಅಂತರಂಗದಲ್ಲಿ ಸಕಲ ಭೂತಗಳೂ (ಜೀವಿಗಳೂ) ಇವೆಯೋ, ಯಾರು ಈ ಜಗತ್ತನ್ನು ಧರಿಸಿದ್ದಾರೋ, ಯಾರನ್ನು ವೇದಗಳು ಬ್ರಹ್ಮ ಎಂದು ಹೇಳುತ್ತಿವೆಯೋ, ಎಲ್ಲರೂ ಅವನಿಗೆ ಶರಣು ಹೋಗುವುದು.

೫. **ವಿಶ್ವರೂಪಂ ವಿರೂಪಾಕ್ಷಂ ಚಂದ್ರಮೌಳಿಂ ಘೃಣಾನಿಧಿಂ ।**
ಹಿರಣ್ಯಬಾಹುಮದ್ವಂದ್ವಂ ಹಿರಣ್ಯಪತಿಮೀಶ್ವರಂ ॥

ವಿಶ್ವರೂಪನು, ವಿರೂಪಾಕ್ಷನು, ಚಂದ್ರಮೌಳಿ, ಕರುಣಾನಿಧಿ, ಹಿರಣ್ಯಬಾಹು. ದ್ವಂದ್ವವಿಲ್ಲದ ಹಿರಣ್ಯಪತಿ ಈಶ್ವರನು.

356

೨. ಜ್ಯೋತಿರ್ಲಿಂಗತ್ವಮೇವಾರ್ಯೇ ಲಿಂಗೀ ಚಾಪಂ ಮಹೇಶ್ವರಿ ।
ತದೇತದವಿಮುಕ್ತಾಖ್ಯಂ ಜ್ಯೋತಿರಾಲೋಕ್ಯತಾಂ ಪ್ರಿಯೇ॥

ಆರ್ಯೆಯಾದ ಮಹೇಶ್ವರಿಯೇ, ನಾನು ಜ್ಯೋತಿರ್ಲಿಂಗಸ್ವರೂಪಿಯಾದ ಲಿಂಗಿಯೇ ಆಗಿದ್ದೇನೆ. ಆ ಕಾರಣದಿಂದ ಅವಿಮುಕ್ತ ಎಂಬ ಹೆಸರಿನ ಈ ಜ್ಯೋತಿಯನ್ನು ನೋಡು ಪ್ರಿಯೇ.

362

ಮಾತರಃ ಪಿತರಶ್ಚೈವ ಸ್ವಪತ್ನೀ ಬಾಲಕಾಸ್ತಥಾ ।
ಹೇಮ ಭೂಮಿರ್ನಬಂಧಕಾಃ ಪ್ರಾಜ್ಞಾನಂ ಬ್ರಮ್ಹಚಾರಿಣಾಂ ॥

ಪ್ರಾಜ್ಞರಾದ ಬ್ರಮ್ಹಚಾರಿಗಳಿಗೆ ತಂದೆ, ತಾಯಿ, ಹೆಂಡತಿ, ಮಗ, ಸಂಪತ್ತು, ಭೂಮಿ ಇವಾವೂ ಬಂಧಕಗಳಲ್ಲ.

ಅಭ್ಯಾಸ ಸೂಚಿ

೧. ಸಂಕೀರ್ಣ ವಚನ ಸಂಪುಟ–೧

೨. ಭೈರವೇಶ್ವರ ಕಾವ್ಯದ ಕಥಾ ಸೂತ್ರ ರತ್ನಾಕರ– ಶಾಂತಲಿಂಗದೇಶಿಕ

೩. ಪ್ರೌಢದೇವರಾಯ ಕಾವ್ಯ– ಅದೃಶ್ಯ ಕವಿ

೪. ಉರಿಲಿಂಗಪೆದ್ದಿಯ ವಚನಗಳು: ಸಂ: ಡಾ. ಎಚ್. ಪಿ. ಮಲ್ಲೇದೇವರು, ಕರ್ನಾಟಕ ವಿಶ್ವವಿದ್ಯಾಲಯ.

೫. ಬಸವೇಶ್ವರರ ಸಮಕಾಲೀನರು: ಬಸವ ಸಮಿತಿ, ಬೆಂಗಳೂರು.

೬. ವಚನಕಾರರು – ವ್ಯಕ್ತಿ ಹಾಗೂ ಅಭಿವ್ಯಕ್ತಿ: ಬಸವಸಮಿತಿ, ಬೆಂಗಳೂರು.

೭. ಉರಿಲಿಂಗಪೆದ್ದಿ– ಕಾಳವ್ವೆ: ಡಾ. ಪಿ.ವಿ. ನಾರಾಯಣ

೮. ವಚನ ಸಾಹಿತ್ಯ – ಒಂದು ಸಾಂಸ್ಕೃತಿಕ ಅಧ್ಯಯನ, ಡಾ. ಪಿ.ವಿ. ನಾರಾಯಣ

೯. ವೀರಶೈವ ಸಾಹಿತ್ಯಚರಿತ್ರೆ–ಭಾಗ ೧: ಡಾ. ಎಸ್. ವಿದ್ಯಾಶಂಕರ್

೧೦. ಸಂಸ್ಕೃತಿ : ಶ್ರಮ ಮತ್ತು ಸೃಜನಶೀಲತೆ – ಡಾ. ಬರಗೂರು ರಾಮಚಂದ್ರಪ್ಪ

ಬಸವಣ್ಣನವರ ನಾಯಕತ್ವದಲ್ಲಿ ನಡೆದ ವಚನ ಚಳವಳಿಯ ಸಹಜ ಶಕ್ತಿಯೆಂದರೆ ದಲಿತರು, ಮಹಿಳೆಯರು ಮತ್ತು ಹಿಂದುಳಿದ ವರ್ಗದವರೆಂಬುದು ನನ್ನ ಗ್ರಹಿಕೆ. ಈ ಸಾಮಾಜಿಕ ಸಮುದಾಯಗಳಿಂದಲೇ ವಚನ ಚಳವಳಿಗೆ ಇನ್ನಿಲ್ಲದ ಅನನ್ಯತೆ ಮತ್ತು ಸೋಪಜ್ಞತೆ ಲಭ್ಯವಾಯಿತು. ಆದರೆ, ಬೆರಳೆಣಿಕೆಯ ವಚನಕಾರರನ್ನು ಹೊರತುಪಡಿಸಿ ಉಳಿದವರ ವಚನಾಭಿವ್ಯಕ್ತಿ ಕುರಿತಂತೆ ವಿಶೇಷ ವಿಶ್ಲೇಷಣೆ ನಡೆದಿಲ್ಲ. ಇವರ ಜೀವನ ವೃತ್ತಾಂತದ ಬಗ್ಗೆ ನಡೆದಿರುವ ಸಂಶೋಧನೆಗಳು ಇಲ್ಲವೆನ್ನುವಷ್ಟು ಕಡಿಮೆ. ಯಾರು ವಚನ ಚಳವಳಿಗೆ ಸಾಮಾಜಿಕ ಶಕ್ತಿಯನ್ನು ತುಂಬಿ ಸಾಂಸ್ಕೃತಿಕ ಅನನ್ಯತೆಗೆ ಕಾರಣರಾದರೋ ಅವರ ಅಭಿವ್ಯಕ್ತಿಯನ್ನು ಕುರಿತು ಆದ್ಯತೆಯ ಮೇಲೆ ಚರ್ಚಿಸದೇ ಇರುವುದು ಬಸವಣ್ಣನವರ ಆಶಯ ಮತ್ತು ಆದರ್ಶಕ್ಕೆ ಅನುಗುಣವಾದ ಅಂಶವಲ್ಲ ಎನ್ನುವುದು ನನ್ನ ನಮ್ರ ತಿಳುವಳಿಕೆ. ಈ ಹಿನ್ನೆಲೆಯಲ್ಲಿ ಬಸವಣ್ಣ, ಅಕ್ಕ, ಅಲ್ಲಮರಾದಿಯಾಗಿ ವಿವಿಧ ಸಾಮಾಜಿಕ ಮೂಲದ ವಚನಕಾರರ ಲಭ್ಯ ಜೀವನಮಾಹಿತಿ ಮತ್ತು ವಚನಗಳ ವಿಸ್ತೃತ ವಿಶ್ಲೇಷಣೆ ಮಾಡಿಸುವುದು ವಚನ ಚಳವಳಿಯ ಪ್ರಜಾಸತ್ತಾತ್ಮಕ ಮೌಲ್ಯಕ್ಕೆ ಮರ್ಯಾದೆ ತರುವ ಕೆಲಸವೆಂದು ಭಾವಿಸಿ ಈ ಪುಸ್ತಕ ಮಾಲೆಯನ್ನು ಸಾಕಾರಗೊಳಿಸಲಾಗಿದೆ. ವಚನ ಚಳವಳಿಯ ಸಾಮಾಜಿಕ ಸ್ವರೂಪವನ್ನೇ ಆದರ್ಶವಾಗಿಟ್ಟುಕೊಂಡು ವಿವಿಧ ಸಾಮಾಜಿಕ ಮೂಲದ ಬರಹಗಾರರಿಗೆ ಪುಸ್ತಕ ರಚನೆಯ ಕೆಲಸವನ್ನು ವಹಿಸಲಾಗಿದೆ. ಈ ಎಲ್ಲ ಸಹಕಾರವನ್ನು ಮನಸಾರೆ ನೆನೆಯುವುದು ನನ್ನ ಜವಾಬ್ದಾರಿ. ಸಾಕಷ್ಟು ಅಧ್ಯಯನಮಾಡಿ, ಪುಸ್ತಕಗಳನ್ನು ಬರೆದುಕೊಟ್ಟಿರುವ ಸಮಸ್ತ ಲೇಖಕ–ಲೇಖಕಿಯರಿಗೂ ನನ್ನ ವಿಶ್ವಾಸಪೂರ್ವಕ ವಂದನೆಗಳು. 'ವಚನ ಚಿಂತನ ಮಾಲೆ'ಯ ಪುಸ್ತಕಗಳ ಪ್ರಕಟಣೆಗೆ ಆರ್ಥಿಕ ಮತ್ತು ನೈತಿಕ ಬೆಂಬಲ ನೀಡಿದ ಕುಲಪತಿಗಳಾದ ಪ್ರೊ. ಕೆ.ಎಸ್. ರಂಗಪ್ಪನವರಿಗೆ ತುಂಬು ಧನ್ಯವಾದಗಳು, ಜೊತೆಗೆ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಸಮಸ್ತರ ಸಹಕಾರವೂ ಸ್ಮರಣೀಯ.

– ಪ್ರೊ. ಬರಗೂರು ರಾಮಚಂದ್ರಪ್ಪ

ಶ್ರೀ ಬಸವ ಅಧ್ಯಯನ ಪೀಠ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು